CC-O. In Public Domain. Digitized by eGangotri

॥ ಓಂ ॥

ಶ್ರೀಶಾಂಕರತತ್ತ್ವಜ್ಞಾನಾಮೃತಭೃಂಗಾರಃ

(ಶ್ರೀಮಚ್ಛಂಕರಭಗವತ್ಪಾದರವರ ಉಪದೇಶಾಮೃತ
ತುಂಬಿರುವ ಚಿನ್ನದ ಬಟ್ಟಲು)

೧. ಸಾಧನಪಂಚಕಂ

೨. ಆನಂದಲಹರೀ (ದೇವೀಸ್ತುತಿಃ)

೩. ದಶಶ್ಲೋಕೀ

ಅನುವಾದಕರು

ಶ್ರೀಶೃಂಗಗಿರಿ ಕವಿ ನರಸಿಂಹಶರ್ಮಾ

೧೯೪೮

ಸಂಪುಟ : ಒಂದು

ಸಮ್ಯಗ್ದರ್ಶನಗ್ರಂಥಮಾಲಾಪ್ರಕಾಶನ

ಬೆಂಗಳೂರು

Sri Vidyabharathi Book Centre, Sringeri

ಬೆಲೆ : 10 ರೂ.

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಸ್ತಾವನೆ

ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾಗಿ ಸರ್ವಜ್ಞನೂ, ಸರ್ವಶಕ್ತನೂ ಆಗಿರುವ ಶ್ರೀಪರಮೇಶ್ವರಾನುಗ್ರಹ ಪಡೆದಲ್ಲದೆ ಯಾರಿಗೂ ಸುಖಶಾಂತಿಗಳು ದೊರೆಯದು. ಅದನ್ನು ಪಡೆಯಬೇಕಾದರೆ ಪರಮೇಶ್ವರಾಜ್ಞೆಗಳಾಗಿರುವ ಶ್ರುತಿಸ್ಮೃತೀತಿಹಾಸ ಪುರಾಣಗಳಲ್ಲಿ ಉಕ್ತವಾಗಿರುವ ಸ್ವಧರ್ಮಾನುಷ್ಠಾನವೇ ಏಕೈಕಸಾಧನ. ಈ ಎಲ್ಲ ಶಾಸ್ತ್ರಗಳ ಸಾರವನ್ನೂ ಜಗದೇಕಗುರುಗಳಾದಶ್ರೀ ಮಚ್ಛಂಕರಭಗವತ್ಪಾದರು ತಮ್ಮ ಪ್ರಸ್ಥಾನತ್ರಯಭಾಷ್ಯಗಳಲ್ಲಿಯೂ, ಅನೇಕಪ್ರಕರಣಗ್ರಂಥಗಳಲ್ಲಿಯೂ, ಅನೇಕಸ್ತೋತ್ರಗಳಲ್ಲಿಯೂ ಲೋಕಾನುಗ್ರಹಕ್ಕಾಗಿ ನಿರೂಪಿಸಿದ್ದಾರೆ. ವಿದ್ವದ್ವರೇಣ್ಯರಾದ ವೇ॥ ಬ್ರ॥ ಶ್ರೀ॥ ಶೃಂಗಗಿರಿಕವಿನರಸಿಂಹಭಟ್ಟರು ಶ್ರೀಭಗವತ್ಪಾದರ ಅನೇಕ ಕೃತಿಗಳನ್ನು ಕನ್ನಡದಲ್ಲಿ ಅನುವಾದ ಮಾಡಿದ್ದಾರೆ. ಈ ಮಹನೀಯರ ಉಪಕಾರವನ್ನು ಆಸ್ತಿಕ ಜನರು ಮರೆಯುವಂತಿಲ್ಲ. ಸಾಧ್ಯವಾದಮಟ್ಟಿಗೆ ಶುದ್ಧವಾಗಿ ಈ ಎಲ್ಲ ಪುಸ್ತಕಗಳನ್ನೂ ಮುದ್ರಿಸಿ ಶ್ರದ್ಧಾವಂತರಿಗೆ ದೊರಕಿಸಿಕೊಡಬೇಕೆಂದು "ಸಮ್ಯಗ್ದರ್ಶನಗ್ರಂಥಮಾಲಾ ಪ್ರಕಾಶನ" ಸಂಕಲ್ಪಿಸಿದೆ. ಇದರ ಸಫಲತೆಗಾಗಿ ಎಲ್ಲ ಶ್ರೀಗುರುಭಕ್ತ ಶಿಖಾಮಣಿಗಳ ಸಹಕಾರವನ್ನೂ ನಮ್ರತೆಯಿಂದ ಪ್ರಾರ್ಥಿಸುತ್ತೇವೆ.

—ಪ್ರಕಾಶಕರು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಬ್ರಹ್ಮೈವ ಸತ್ಯಂ ॥



ಶ್ರುತಿಪ್ರಮಾಣೈಕಮತೇಃ ಸ್ವಕರ್ಮನಿಷ್ಠಾತಯೈವಾತ್ಮವಿಶುದ್ಧಿರಸ್ಯ ॥
ವಿಶುದ್ಧಬುದ್ಧೇಃ ಪರಮಾತ್ಮವೇದನಂ ತೇನೈವ ಸಂಸಾರಸಮೂಲನಾಶಃ ॥

(ವಿವೇಕ ಚೂಡಾಮಣಿಃ ೧೫೦)

ಶ್ರುತಿಯೇ ಪರಮಪ್ರಮಾಣವು ; ಇದನ್ನು ಬಲ್ಲವನು ಶ್ರುತಿವಿಹಿತಸ್ವಧರ್ಮ ನಿಷ್ಠನಾಗುವನು; ನಿಷ್ಠಾಮಸ್ವಧರ್ಮಾನುಷ್ಠಾನದಿಂದಲೇ ಚಿತ್ತಶುದ್ಧಿಯು ; ಇದರಿಂದಲೇ ಶ್ರೀಗುರುಮೂಲಕ ವೇದಾಂತಶ್ರವಣಾದಿಗಳಿಂದ ಪರಮಾತ್ಮತತ್ತ್ವಾನುಭವವು; ಈ ಅನುಭವದಿಂದಲೇ ಸಂಸಾರಮೂಲವಾದ ಅಜ್ಞಾನವು ಪೂರ್ಣನಾಶವಾಗಿ, ನಿತ್ಯನಿರತಿಶಯಾನಂದರೂಪಮೋಕ್ಷವು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಓಂ ॥

ಶ್ರೀಶಾಂಕರತತ್ತ್ವಜ್ಞಾನಾಮೃತಭೃಂಗಾರಃ

(ಶ್ರೀಮಚ್ಛಂಕರಭಗವತ್ಪಾದರವರ ಉಪದೇಶಾಮೃತ ತುಂಬಿರುವ ಚಿನ್ನದ ಬಟ್ಟಲು)

೧. ಸಾಧನ ಪಂಚಕಂ

೨. ಆನಂದ ಲಹರೀ (ದೇವೀಸ್ತುತಿಃ)

೩. ದಶಶ್ಲೋಕೀ

ಅನುವಾದಕರು

ಶ್ರೀಶೃಂಗಗಿರಿ ಕವಿ ನರಸಿಂಹಶರ್ಮಾ

೧೯೮೮

ಸಮ್ಯಗ್ದರ್ಶನಗ್ರಂಥಮಾಲಾ ಪ್ರಕಾಶನ

ಬೆಂಗಳೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ಇದು ೧ನೆಯ ಮುದ್ರಣ
೨೦೦೦ ಪ್ರತಿಗಳು

ಪ್ರಕಾಶಕರು :

ಸಮ್ಯಗ್ದರ್ಶನಗ್ರಂಥಮಾಲಾ ಪ್ರಕಾಶನ
ನಂ. ೧೨೮, ವೇದಪಾಠಶಾಲಾ, ೬ನೇ ಮುಖ್ಯರಸ್ತೆ, ೧೫ನೇ ಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು-೫೬೦ ೦೦೩

ಮುದ್ರಕರು :

ಶ್ರೀ ವಿಶಾಲ ಪ್ರಿಂಟರ್ಸ್
೪ನೇ ಅಡ್ಡರಸ್ತೆ, ೪ನೇ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಗಣೇಶಾಯ ನಮಃ ॥ ಶ್ರೀಗುರುಭ್ಯೋ ನಮಃ ॥ ಶ್ರೀಶಾರದಾಯೈ ನಮಃ ॥
॥ ಓಂ ನಮಃ ಶಿವಾಯ ॥

ಶ್ರೀಮಚ್ಛಂಕರಭಗವತ್ಪಾದವಿರಚಿತಂ

ಸಾಧನಪಂಚಕಂ

(ಕನ್ನಡವಿವರಣೆಸಹಿತ)

ಉಪೋದ್ಘಾತ

ಭಗವತ್ಪಾದಪಾದಾಬ್ಜದ್ವಂದ್ವಮದ್ವಂದ್ವತಾಸ್ಪದಂ ।
ಚಿಂತಯೇ ಚಿಂತನೀಯಾನಾಂ ಪರಮಂ ಚಿಂತ್ಯಮವ್ಯಯಂ ॥

ಶ್ರೀಭಗವಂತನು ಹೇಳಿರುವಂತೆ, ಲೋಕದಲ್ಲಿ ಯಾರೊಬ್ಬರೂ ಯಾವಾಗಲೂ ಕ್ಷಣಕಾಲವೂ ಯಾವ ಕರ್ಮವನ್ನೂ ಮಾಡದೇ ಇರುವುದು ಸಾಧ್ಯವೇ ಇಲ್ಲ; ಪ್ರತಿಯೊಬ್ಬನೂ ಅವನವನ ಸ್ವಭಾವಕ್ಕೆ ಅಧೀನವಾಗಿ ಕರ್ಮವನ್ನು ಮಾಡುತ್ತಲೇ ಇರಬೇಕಾಗಿದೆ—

ನ ಹಿ ಕಶ್ಚಿತ್ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।
ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ॥

ಕರ್ಮವನ್ನು ಮಾಡಿದಮೇಲೆ, ಅದರ ಫಲವನ್ನು ಅವಶ್ಯ ಅನುಭವಿಸಲೇಬೇಕು; ಈ ಫಲವು—

ಅನಿಷ್ಟಮಿಷ್ಟಂ ಮಿಶ್ರಂ ಚ ತ್ರಿವಿಧಂ ಕರ್ಮಣಃ ಫಲಂ ।—

ಎಂಬಂತೆ ಇಷ್ಟ, ಅನಿಷ್ಟ ಮತ್ತು ಮಿಶ್ರ—ಎಂದು ಮೂರು ವಿಧವಾಗಿದೆ.

ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ ॥

'ಏನನ್ನು ಮಾಡಬೇಕು, ಯಾವುದನ್ನು ಮಾಡಬಾರದು'—ಎಂಬ ವಿಷಯದಲ್ಲಿ ಶಾಸ್ತ್ರವೊಂದೇ ಪ್ರಮಾಣವೆಂದು ಶ್ರೀಭಗವಂತನು ಉಪದೇಶಿಸಿರುತ್ತಾನೆ. ಶಾಸ್ತ್ರವೆಂದರೆ ಶ್ರುತಿ (ವೇದ), ಸ್ಮೃತಿ (ಧರ್ಮಶಾಸ್ತ್ರ), ಇತಿಹಾಸ

Sri Vidyabharathi Book Centre, Sringeri

CC-O. In Public Domain. Digitized by eGangotri

(ಶ್ರೀಮದ್ರಾಮಾಯಣ ಮತ್ತು ಶ್ರೀಮನ್ಮಹಾಭಾರತ) ಮತ್ತು ಪುರಾಣಗಳು. ಇವುಗಳಲ್ಲಿ ಶ್ರುತಿಸ್ಮೃತಿಗಳು ಮೂಲಪ್ರಮಾಣಗಳು; ಇತಿಹಾಸ ಪುರಾಣಗಳು ಶ್ರುತಿಸ್ಮೃತಿಗಳ ಅರ್ಥವನ್ನು ವಿವರಿಸುತ್ತವೆ. ಶಾಸ್ತ್ರದಲ್ಲಿ ವಿಹಿತವಾಗಿರುವ ಕರ್ಮವು ಸುಕೃತ, ಪುಣ್ಯ ಅಥವಾ ಧರ್ಮವೆನ್ನಲ್ಪಡುವುದು; ನಿಷಿದ್ಧವಾದುದು ದುಷ್ಕೃತ, ಪಾಪ ಅಥವಾ ಅಧರ್ಮವೆನಿಸುವುದು. ನಿಷಿದ್ಧವಾದುದು ಹೇಗೆ ಪಾಪವೋ, ಹಾಗೆಯೇ ಶಾಸ್ತ್ರವಿಹಿತವಾದ ಕರ್ಮವನ್ನು ಮಾಡದಿರುವುದೂ, ಶಾಸ್ತ್ರದ ಅನುಮತಿಯಿಲ್ಲದ ವಿಷಯಾಸಕ್ತಿಯೂ ಸಹ ಪಾಪವೆನಿಸಿ, ಅನಿಷ್ಟವನ್ನು ಉಂಟುಮಾಡುತ್ತದೆ. ಶಾಸ್ತ್ರವಿಹಿತವಾದ ಧರ್ಮಾನುಷ್ಠಾನದಿಂದ ಸುಖವೂ; ವಿಹಿತಧರ್ಮವನ್ನು ಮಾಡದೇ ಇರುವುದರಿಂದಲೂ, ನಿಷಿದ್ಧವಾದುದನ್ನು ಮಾಡುವುದರಿಂದಲೂ, ವಿಷಯಾಸಕ್ತಿಯಿಂದಲೂ, ನರಕಾದಿದುಃಖವೂ, ಅನಂತರ ಮತ್ತೆ ಈ ಭೂಲೋಕದಲ್ಲಿ ಸುಖದುಃಖಮಿಶ್ರವಾದ ಫಲವೂ ತಪ್ಪದೆ ಉಂಟಾಗುತ್ತದೆ—

ಅಕುರ್ವನ್ ವಿಹಿತಂ ಕರ್ಮ ನಿಂದಿತಂ ಚ ಸಮಾಚರನ್ ।
ಪ್ರಸಜ್ಜಂಶ್ಚೇಂದ್ರಿಯಾರ್ಥೇಷು ನರಃ ಪತನಮೃಚ್ಛತಿ ॥

"ಶಾಸ್ತ್ರದಲ್ಲಿ ವಿಹಿತವಾದುದನ್ನು ಮಾಡದಿರುವಿಕೆಯಿಂದಲೂ, ನಿಷಿದ್ಧವಾದುದನ್ನು ಮಾಡುವಿಕೆಯಿಂದಲೂ, ಇಂದ್ರಿಯ ವಿಷಯಗಳಲ್ಲಿ ಆಸಕ್ತಿಯಿಂದಿರುವಿಕೆಯಿಂದಲೂ ಮನುಷ್ಯನು ಪಾಪಕ್ಕೆ ಗುರಿಯಾಗುತ್ತಾನೆ."

ಪ್ರಪಂಚದಲ್ಲಿ ಮನುಷ್ಯ, ದೇವ, ಪಶು, ಪಕ್ಷಿ, ಕ್ರಿಮಿ, ಕೀಟ ಮುಂತಾಗಿ ಎಂಭತ್ತುನಾಲ್ಕು ಲಕ್ಷ ವಿಧ ಪ್ರಾಣಿಗಳಿವೆಯೆಂದು ಶಾಸ್ತ್ರವು ತಿಳಿಸುತ್ತದೆ. ಇವುಗಳೆಲ್ಲೆಲ್ಲಾ ಮನುಷ್ಯಜನ್ಮವೇ ಶ್ರೇಷ್ಠವಾದುದು. ಏಕೆಂದರೆ, ಪುಣ್ಯಪಾಪಗಳ ಸಂಬಂಧವು ಮನುಷ್ಯನಿಗೆ ಮಾತ್ರವೇ ಇರುವುದು. ಮನುಷ್ಯನಾಗಿದ್ದು ಮಾಡಿದ ಪುಣ್ಯಪಾಪಗಳ ಸುಖದುಃಖಗಳನ್ನು ಸ್ವರ್ಗನರಕಾದಿಗಳಲ್ಲಿ ಅನುಭವಿಸಿ, ಉಳಿದ ಮಿಶ್ರಕರ್ಮಗಳ ಫಲವನ್ನು ಅನುಭವಿಸುವುದಕ್ಕಾಗಿ ಮತ್ತೆ ಮನುಷ್ಯ ಜನ್ಮವನ್ನು ಹೊಂದುತ್ತಾನೆ; ಇಲ್ಲಿ ಮತ್ತೆ ಪುಣ್ಯಪಾಪಗಳನ್ನು ಸಂಪಾದಿಸಿ, ಅವುಗಳ ಫಲವನ್ನು ಅನುಭವಿಸುವುದಕ್ಕಾಗಿ ಮತ್ತೆ ಮತ್ತೆ ನಾನಾ ವಿಧಗಳಾದ ಜನ್ಮಗಳನ್ನು ಎತ್ತುತ್ತಿರುತ್ತಾನೆ. ಇದೇ ಸಂಸಾರವು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ ।
ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ ॥—

"ಮಾಡಿದ ಕರ್ಮವು ಫಲವನ್ನು ಕೊಡದೆ ಎಂದಿಗೂ ನಾಶವಾಗುವುದಿಲ್ಲ; ಶುಭವೋ, ಅಶುಭವೋ ಮಾಡಿದ ಕರ್ಮದ ಫಲವನ್ನು ಅನುಭವಿಸದೇ ತೀರದು."

ಸಾಮಾನ್ಯವಾಗಿ ಪ್ರತಿಯೊಬ್ಬರೂ ಪಾಪವನ್ನೇ ಹೆಚ್ಚಾಗಿ ಮಾಡುವುದು ಸಹಜವಾದ್ದರಿಂದಲೂ, ಪಾಪಕರ್ಮದ ದುಃಖಫಲವು ಅನೇಕವಿಧವಾಗಿದ್ದು, ದೀರ್ಘಕಾಲ ಅನುಭವಿಸಬೇಕಾದ್ದರಿಂದಲೂ, ಈಗ ದೊರಕಿರುವ ಮನುಷ್ಯ ಜನ್ಮವು ಕಳೆದ ಅನಂತರ ಆ ಕರ್ಮಗಳ ಫಲಗಳನ್ನೆಲ್ಲಾ ಅನುಭವಿಸಿ ಮತ್ತೆ ಮನುಷ್ಯಜನ್ಮವು ಲಭಿಸುವುದು ಯಾವಾಗ—ಎಂದು ಊಹಿಸುವುದಕ್ಕೂ ಬರದಂತಿದೆ! ಆದಕಾರಣ ದುರ್ಲಭವೂ, ಶ್ರೇಯಃಸಾಧನೆಗೆ ಒಂದೇ ಉಪಾಯವೂ ಆಗಿರುವ ಮನುಷ್ಯಜನ್ಮವು ಲಭಿಸಿರುವಾಗಲೇ, ಇದು ವ್ಯರ್ಥವಾಗದಂತೆ ಜಾಗರೂಕರಾಗಿದ್ದು, ಜನ್ಮಮರಣ ಪರಂಪರಾರೂಪವಾದ ಸಂಸಾರ ದುಃಖಸಾಗರದಿಂದ ಉದ್ಧಾರವಾಗುವ ಪ್ರಯತ್ನವನ್ನು ಮಾಡುವುದು ವಿವೇಕತನವು.

ಸಂಸಾರಸಮುದ್ರವನ್ನು ದಾಟಿ, ಪುರುಷಾರ್ಥವನ್ನು ಪಡೆದು ಕೃತಕೃತ್ಯರಾಗಬೇಕೆಂಬ ವಿವೇಕಿಗಳಿಗೆ ಅವಶ್ಯವಾದ ಸಾಧನೆಗಳನ್ನು ಬೋಧಿಸುವುದಕ್ಕಾಗಿ "ಸಾಧನಪಂಚಕ"—ಎಂಬ ಚಿಕ್ಕಪ್ರಕರಣಗ್ರಂಥವನ್ನು ಶ್ರೀಮಚ್ಛಂಕರ ಭಗವತ್ಪಾದರವರು ಅನುಗ್ರಹಿಸಿರುತ್ತಾರೆ. ಇದರಲ್ಲಿ ಸಕಲಶಾಸ್ತ್ರಗಳ ಸಿದ್ಧಾಂತವನ್ನೂ ದೃಷ್ಟಿಯಲ್ಲಿಟ್ಟು, ಶ್ರೇಯಃಸಿದ್ಧಿಗೆ ಬೇಕಾದ ಮುಖ್ಯವಾದ ಸಾಧನೆಗಳನ್ನು ಅಭ್ಯಾಸಮಾಡಿದರೆ, ಒಂದೊಂದು ಮೆಟ್ಟಲನ್ನೂ ಕ್ರಮವಾಗಿ ಹತ್ತುತ್ತಾ ಹೋದರೆ ಮೇಲಿರುವ ಮಹಡಿಯನ್ನು ಪಡೆಯುವಂತೆ, ಅನಾಯಾಸವಾಗಿ ಪರಮಫಲವಾದ ಪುರುಷಾರ್ಥವು ಕೈಗೂಡುವುದು. ಈ ಕಾರಣದಿಂದ ಈ ಗ್ರಂಥವು 'ಸೋಪಾನಪಂಚಕ' (ಸೋಪಾನ = ಮೆಟ್ಟಲು) ಎಂದೂ ಉಪದೇಶ ಪಂಚಕವೆಂದೂ ಪ್ರಸಿದ್ಧವಾಗಿದೆ.

ಶುದ್ಧವಾದ ಆಹಾರ, ನೀರು, ಗಾಳಿ, ಬೆಳಕು—ಇವು ಪ್ರತಿಯೊಬ್ಬರಿಗೂ ಸುಖಜೀವನಕ್ಕೆ ಅವಶ್ಯವಾಗಿರುತ್ತವೆ; ಇದರಂತೆ ಪುರುಷಾರ್ಥ (ಸಂಸಾರ

Sri Vidyabharathi Book Centre, Sringeri

 CC-O. In Public Domain. Digitized by eGangotri

ದುಃಖವನ್ನು ಕಳೆದುಕೊಂಡು ನಿತ್ಯಸುಖವನ್ನು ಪಡೆದು ಕೃತಕೃತ್ಯರಾಗುವಿಕೆ) ಸಾಧನೆಗೆ ಸಾಧನಪಂಚಕದ ತಿಳಿವಳಿಕೆಯು ಪ್ರತಿಯೊಬ್ಬರಿಗೂ ಆತ್ಯವಶ್ಯವಾಗಿದೆ. ದೇವಭಾಷೆಯ ಪರಿಚಯವಿಲ್ಲದ ಕನ್ನಡಿಗರ ಉಪಯೋಗಕ್ಕಾಗಿ, ಈ ಗ್ರಂಥವನ್ನು ಕನ್ನಡ ಭಾಷೆಯಲ್ಲಿ ಸಂಗ್ರಹವಾಗಿ ವಿವರಿಸುವ ಪ್ರಯತ್ನ ಮಾಡಲಾಗಿದೆ. ಇದರ ಪೂರ್ಣವಾದ ಅರ್ಥವನ್ನು ಬಲ್ಲ ವಿದ್ವಾಂಸರಿಂದ ತಿಳಿಯತಕ್ಕದ್ದು.

ಕಲ್ಯಾಣಕಾರಿಷು ವರಾತ್ಮಮನೀಯರೂಪಾ
ತ್ಕಾರುಣ್ಯಪೂರ್ಣಹೃದಯಾತ್ಕಲಿಕಲ್ಮಷಘ್ನಾತ್ ।
ಕಾಮಾರಿಸೇವನರತಾತ್ಕಲಿತಾಶ್ರಿತಾ ಶ್ರೀ
ಶ್ಚ್ರೀಸದ್ಗುರೋರಿತರದೈವಮಹಂ ನ ಜಾನೇ ॥

"ಲೋಕಕ್ಕೆ ಮಂಗಳವನ್ನುಂಟುಮಾಡುವವರಲ್ಲಿ ಶ್ರೇಷ್ಠರಾಗಿರುವ ; ಆನಂದಕರವಾದದರ್ಶನವನ್ನುಳ್ಳ ; ದಯಾಪೂರ್ಣಹೃದಯರಾಗಿರುವ ; ಕಲಿದೋಷಗಳನ್ನು ಪರಿಹರಿಸುವ ; ನಿರಂತರವೂ ಜಿತಕಾಮನಾದ ಶ್ರೀಪರಮೇಶ್ವರಾರಾಧಕರಾಗಿರುತ್ತ ಆಶ್ರಿತರಾದವರ ರಕ್ಷಕರಾಗಿರುವ ಶ್ರೀಸದ್ಗುರುವರ್ಯರಿಗಿಂತಲೂ ಮಿಗಿಲಾದ ದೇವತೆಯನ್ನು ನಾನು ಕಾಣೆನು ॥"

ಶೃಂಗಗಿರಿ ಕವಿ ನರಸಿಂಹಶರ್ಮಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಧನ(ಸೋಪಾನ)ಪಂಚಕಂ

ವೇದೋ ನಿತ್ಯಮಧೀಯತಾಂ ತದುದಿತಂ ಕರ್ಮ ಸ್ವನುಷ್ಠೀಯತಾಂ
ತೇನೇಶಸ್ಯ ವಿಧೀಯತಾಮಪಚಿತಿಃ ಕಾಮ್ಯೇ ಮತಿಸ್ತ್ಯಜ್ಯತಾಂ ।
ಪಾಪೌಘಃ ಪರಿಧೂಯತಾಂ ಭವಸುಖೇ ದೋಷೋಽನುಸಂಧೀಯತಾಂ
ಆತ್ಮೇಚ್ಛಾ ವ್ಯವಸೀಯತಾಂ ನಿಜಗೃಹಾತ್ತೂರ್ಣಂ ವಿನಿರ್ಗಮ್ಯತಾಂ ॥೧॥

ಪರಮಪುರುಷಾರ್ಥವಾದ ಮೋಕ್ಷವನ್ನು ಪಡೆಯುವುದಕ್ಕೆ ನಲವತ್ತು ಸಾಧನೆಗಳಿವೆ. ನಲವತ್ತು ಮೆಟ್ಟಿಲುಗಳ ಮೇಲಿರುವ ಮಹಡಿಯನ್ನು ಹತ್ತಲು ಪ್ರತಿಯೊಂದು ಮೆಟ್ಟಿಲನ್ನೂ ಹತ್ತಬೇಕು. ಇದರಂತೆ ಈ ನಲವತ್ತು ಸಾಧನೆಗಳನ್ನೂ ಅಭ್ಯಾಸಮಾಡುವುದರಿಂದ. ಅನಾಯಾಸವಾಗಿ ಪುರುಷಾರ್ಥಸಿದ್ಧಿಯಾಗಿ ಧನ್ಯರಾಗುವರು. ಆದ್ದರಿಂದ ಈ ನಲವತ್ತು ಸಾಧನೆಗಳನ್ನೂ ಸರಿಯಾಗಿ ತಿಳಿದುಕೊಂಡು, ಒಟ್ಟಿಗೆ ಅಭ್ಯಾಸಮಾಡುತ್ತ ಬರಬೇಕು.

ಇದರಲ್ಲಿ ಮೊದಲನೆಯ ಸಾಧನೆಯನ್ನು ತಿಳಿಸುತ್ತಾರೆ—

ವೇದೋ ನಿತ್ಯಮಧೀಯತಾಂ ।
ವೇದವು ನಿತ್ಯವಾಗಿ ಅಧ್ಯಯನಮಾಡಲ್ಪಡಲಿ—(ಮಾಡಲ್ಪಡಬೇಕು.)

ವೇದವೆಂದರೇನು, ವೇದಾಧ್ಯಯನವನ್ನು ನಿತ್ಯವಾಗಿ ಮಾಡುವುದೆಂದರೇನು ?

ಶ್ರೀಪರಮೇಶ್ವರನು ಜಗತ್ತನ್ನು ಸೃಷ್ಟಿಮಾಡಿ, ಇದರ ಯೋಗಕ್ಷೇಮಕ್ಕೂ, ಪ್ರಾಣಿಗಳ ಶ್ರೇಯಸ್ಸಿಗೂ ಬೇಕಾದ ಸಾಧನೆಗಳನ್ನು ಬೋಧಿಸುವ ಋಗ್ಯಜುಸ್ಸಾಮಾಥರ್ವಗಳೆಂಬ ನಾಲ್ಕು ವೇದಗಳನ್ನು ಶ್ರೀ ಹಿರಣ್ಯಗರ್ಭಬ್ರಹ್ಮನ ಮೂಲಕ ಲೋಕದಲ್ಲಿ ಪ್ರಚಾರಮಾಡುತ್ತಾನೆ. ಹಗಲಿರುಳುಗಳಂತೆ ತುದಿಮೊದಲಿಲ್ಲದೆ ಒಂದಾದಮೇಲೊಂದು ನಡೆಯುತ್ತಿರುವ ಜಗತ್ತಿನ ಸೃಷ್ಟಿಸ್ಥಿತಿಲಯಗಳಲ್ಲಿ ಪ್ರತಿಸೃಷ್ಟಿಯಲ್ಲಿಯೂ ಇದೇ ವೇದವು ಪ್ರಚಾರವಾಗುತ್ತದೆ. ಎಲ್ಲ ದೇಶಕಾಲಗಳಲ್ಲಿಯೂ ಒಂದೇ ವಿಧವಾಗಿದ್ದು ನಿತ್ಯವಾಗಿರುವ ಗ್ರಂಥರಾಶಿಯು ವೇದವು.

CC-O. In Public Domain. Digitized by eGangotri

ಸರ್ವಜ್ಞನೂ, ಸರ್ವಶಕ್ತನೂ, ಸರ್ವೇಶ್ವರನೂ ಆಗಿರುವ ಶ್ರೀಪರಮೇಶ್ವರನೇ ವೇದವನ್ನು ಲೋಕಕ್ಷೇಮಕ್ಕಾಗಿ ಪ್ರಚಾರಮಾಡಿರುವುದರಿಂದ ವೇದವು ಪರಮಪ್ರಮಾಣವಾಗಿದೆ. ಇದಲ್ಲದೆ,—

ಶ್ರುತಿಸ್ಮೃತೀ ಮಮೈವಾಜ್ಞಾ ಯಸ್ತಾಮುಲ್ಲಂಘ್ಯ ವರ್ತತೇ ।
ಆಜ್ಞಾಚ್ಛೇದೀ ಮಮ ದ್ವೇಷ್ಯಃ ಸ ಮೇ ವಧ್ಯಶ್ಚ ಜಾಯತೇ ॥

"ಶ್ರುತಿಸ್ಮೃತಿರೂಪವಾದ ಶಾಸ್ತ್ರವು ನನ್ನ ಆಜ್ಞೆಯು; ಈ ಆಜ್ಞೆಯನ್ನು ಮೀರಿ ನಡೆಯುವವನು ನನ್ನ ದ್ವೇಷಕ್ಕೆ ಗುರಿಯಾಗಿ ವಧ್ಯನಾಗುವನು"—ಎಂದು ಶ್ರೀಪರಮೇಶ್ವರನ ವಚನವಿರುವುದು. ಆದಕಾರಣ, ವೇದದ ಅರ್ಥವನ್ನು ತಿಳಿದುಕೊಂಡು ಅದನ್ನು ಅನುಸರಿಸುವುದು ಎಲ್ಲರ ಕ್ಷೇಮಕ್ಕೆ ಅತ್ಯವಶ್ಯವು.

ವೇದವನ್ನು ಅಧ್ಯಯನ ಮಾಡಬೇಕೆಂಬುದನ್ನು—'ಸ್ವಾಧ್ಯಾಯೋऽಧ್ಯೇತವ್ಯಃ'—ಎಂದು ವೇದವೇ ವಿಧಿಸುತ್ತದೆ. ಪ್ರತಿವೇದದಲ್ಲಿಯೂ ಅನೇಕ ಶಾಖೆಗಳಿವೆ; ಅನಾದಿ ಪರಂಪರೆಯಿಂದ ಯಾವ ಯಾವ ವೇದದ ಯಾವ ಶಾಖೆಗೆ ಸೇರಿರುವ ವಂಶದಲ್ಲಿ ಹುಟ್ಟಿರುತ್ತಾರೋ, ಅವರು ಆ ಶಾಖೆಯನ್ನು ಅಧ್ಯಯನಮಾಡಬೇಕೆಂದು ಈ ವಿಧಿವಾಕ್ಯದ ಅರ್ಥ. ಅಧ್ಯಯನವೆಂದರೆ ಗುರುಗಳಿಂದ ಹೇಳಿಸಿಕೊಂಡು, ಅವರು ಹೇಳಿಕೊಡುವ ರೀತಿಯಲ್ಲಿಯೇ ವೇದ ಶಬ್ದಗಳನ್ನು ಉಚ್ಚರಿಸುವುದು. ವೇದವನ್ನು ಸ್ವಂತವಾಗಿ ಕಲಿಯಲು ಯಾರಿಗೂ ಅಧಿಕಾರವಿಲ್ಲ. ಹೀಗೆ ವೇದವು ಅನಾದಿ ಗುರುಶಿಷ್ಯಪರಂಪರೆಯಿಂದಲೇ ಬಂದಿರುತ್ತದೆ. ಮತ್ತು–ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ ಮತ್ತು ಕಲ್ಪ ಎಂಬ ಆರು ಅಂಗಗಳೊಡನೆಯೇ ವೇದಾಧ್ಯಯನವನ್ನು ಮಾಡಬೇಕೆಂದು ನಿಯಮವುಂಟು. ಇದರಂತೆ, ಇಲ್ಲಿ ಹೇಳಿರುವ ನಲವತ್ತು ಸಾಧನೆಗಳನ್ನೂ ವೇದದಲ್ಲಿ ವಿಹಿತವಾದವುಗಳೆಂದೇ ತಿಳಿಯಬೇಕು.

ವೇದಾಧ್ಯಯನವು ನಿತ್ಯವು. ವೇದದಲ್ಲಿ ವಿಹಿತವಾಗಿರುವ ಕರ್ಮವು ನಿತ್ಯ, ನೈಮಿತ್ತಿಕ, ಕಾಮ್ಯ, ನಿಷಿದ್ಧ ಮತ್ತು ಪ್ರಾಯಶ್ಚಿತ್ತ—ಎಂದು ಐದು ವಿಧವಾಗಿದೆ. ಆಯಾಕರ್ಮಗಳ ಫಲಗಳಲ್ಲಿ ಆಸೆಯಿಲ್ಲದೆ ಮಾಡುವ ಕರ್ಮಗಳು ನಿತ್ಯಕರ್ಮಗಳು. ಗ್ರಹಣ, ಸಂಕ್ರಮಣ–ಮುಂತಾದ ನಿಮಿತ್ತಗಳು ಉಂಟಾದಾಗ ಮಾಡಬೇಕೆಂದು ಶಾಸ್ತ್ರಗಳಲ್ಲಿ ವಿಧಿಸಿರುವ ಕರ್ಮಗಳು ನೈಮಿತ್ತಿಕಗಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಯಾಕರ್ಮಗಳಿಗೆ ಹೇಳಿರುವ ಫಲಗಳನ್ನು ಅಪೇಕ್ಷಿಸಿ ಮಾಡುವ ಕರ್ಮಗಳು ಕಾಮ್ಯಕರ್ಮಗಳು. ಶಾಸ್ತ್ರದಲ್ಲಿ ಮಾಡಬಾರದ್ದೆಂದು ಹೇಳಿರುವವುಗಳು ನಿಷಿದ್ಧಕರ್ಮಗಳು. ಪಾಪವು ಸಂಭವಿಸಿದಾಗ, ಅದರ ಪರಿಹಾರಕ್ಕಾಗಿ ವಿಹಿತವಾದ ಕರ್ಮಗಳು ಪ್ರಾಯಶ್ಚಿತ್ತ ಕರ್ಮಗಳು. ಇವುಗಳಲ್ಲಿ ವೇದಾಧ್ಯಯನವು ನಿತ್ಯಕರ್ಮವಾಗಿರುತ್ತದೆ. ಎಂದರೆ–"ಏತಕ್ಕೆ, ಏನು"–ಎಂದು ಕಾರಣವನ್ನಾಗಲಿ ಫಲವನ್ನಾಗಲಿ ಅಪೇಕ್ಷಿಸದೆಯೇ ವೇದದ ಅಧ್ಯಯನವನ್ನು ಮಾಡಬೇಕೆಂದು ತಾತ್ಪರ್ಯವು.

ವೇದದ ಅಧ್ಯಯನವನ್ನು ನಿತ್ಯವಾಗಿ ಮಾಡಬೇಕು; ಇದು ಮೊದಲನೆಯ ಸಾಧನೆ.

ಈಗ ಎರಡನೆಯ ಸಾಧನೆಯನ್ನು ಹೇಳುತ್ತಾರೆ—

ತದುದಿತಂ ಕರ್ಮ ಸ್ವನುಷ್ಠೀಯತಾಂ ।

ಆದರಲ್ಲಿ (ವೇದದಲ್ಲಿ) ಹೇಳಿರುವ (ವಿಹಿತವಾಗಿರುವ) **ಕರ್ಮವು ಚೆನ್ನಾಗಿ ಅನುಷ್ಠಿಸಲ್ಪಡಲಿ**—(ಅನುಷ್ಠಿಸಲ್ಪಡಬೇಕು.)

ವೇದವನ್ನು ಮೊದಲು ಗುರುಮೂಲಕವಾಗಿ ಅಧ್ಯಯನಮಾಡಬೇಕು; ಅದರಂತೆ ವೇದದ ಅರ್ಥವನ್ನೂ ಗುರುಮೂಲಕವಾಗಿಯೇ ವಿಚಾರಪೂರ್ವಕವಾಗಿ ತಿಳಿಯಬೇಕು ವೇದದ ಅರ್ಥವನ್ನು ತಿಳಿದುಕೊಂಡು, ಅದರಲ್ಲಿ ಹೇಳಿರುವ ಕರ್ಮಗಳನ್ನು ಚೆನ್ನಾಗಿ ಮಾಡಬೇಕು. ಇವುಗಳನ್ನು–'ಚೆನ್ನಾಗಿ ಮಾಡುವುದೆಂದರೆ'—ಇಂಥ ಇಂಥ ಅಧಿಕಾರಿಗಳು, ಇಂಥಿಂಥ ಕರ್ಮಗಳನ್ನು ಈ ದೇಶ ಕಾಲಗಳಲ್ಲಿ ಹೀಗೆ ಹೀಗೆ ಮಾಡಬೇಕೆಂದು ವೇದವು ವಿಧಿಸುತ್ತದೆ; ಈ ವಿಧಿಗೆ ಅನುಸಾರವಾಗಿ ಅನುಷ್ಠಿಸುವುದು 'ಸ್ವನುಷ್ಠಾನವು'–'ಚೆನ್ನಾಗಿ ಮಾಡುವುದೇ'. 'ಅವಿಧಿನಾ ಕೃತಂ ಅಕೃತಂ.'–ಶಾಸ್ತ್ರದ ವಿಧಿಯನ್ನು ಬಿಟ್ಟು–ಎಂದರೆ, ಅಧಿಕಾರವಿಲ್ಲದವರು, ಅಕಾಲದಲ್ಲಿ, ಅದೇಶದಲ್ಲಿ, ಅಕ್ರಮವಾಗಿ ಮಾಡುವುದು–ಅಕೃತಪಡಿಸುವುದು—ಎಂದರೆ. ಅದರಿಂದ ಫಲವು ಲಭಿಸದೆ, ಅನರ್ಥವೂ ಉಂಟಾಗುತ್ತದೆ. ಆದುದರಿಂದ ಯಥಾವಿಧಿಯಾಗಿ ಶಾಸ್ತ್ರೀಯ ಕರ್ಮಗಳನ್ನು ತಿಳಿದುಕೊಂಡು ಅದರಂತೆ ಅನುಷ್ಠಿಸಬೇಕು.

ಈಗ ಮೂರನೆಯ ಸಾಧನೆಯು—

Sri Vidyabharathi Book Centre, Sringeri

 CC-O. In Public Domain. Digitized by eGangotri

ತೇನೇಶಸ್ಯ ವಿಧೀಯತಾಮಪಚಿತಿಃ ॥

ಆದರಿಂದ (ವೇದವಿಹಿತಕರ್ಮಾನುಷ್ಠಾನದಿಂದ) ಈಶ್ವರನ ಪೂಜೆಯು ಮಾಡಲ್ಪಡಲಿ (ಮಾಡಲ್ಪಡಬೇಕು.)

ಈಶ್ವರನ ಪೂಜೆಯೆಂದರೆ—ಪ್ರಮಾಣವೂ, ಈಶ್ವರನ ಆಜ್ಞೆಯೂ ಆಗಿರುವ ವೇದದಲ್ಲಿ ವಿಹಿತವಾಗಿರುವಂತೆ ಅವರವರ ಕರ್ಮಗಳನ್ನು ಮಾಡುವುದೇ ಹೊರತು ಬೇರೆಯಲ್ಲ. ಶ್ರೀಪರಮೇಶ್ವರನು ಸರ್ವಜಗತ್ತಿಗೂ ಅಧಿಪತಿಯಾದ್ದರಿಂದ, ಎಲ್ಲರೂ ಆತನ ಆಜ್ಞೆಗೆ ಬದ್ಧರೇ ಆಗಿರುತ್ತಾರೆ. ವೇದದಲ್ಲಿ ವಿಹಿತವಾಗಿರುವ, ಅವರವರು ಅವಶ್ಯಮಾಡಬೇಕಾದ, ಕರ್ಮಗಳನ್ನು ಮಾಡದಿದ್ದರೆ ಈಶ್ವರನ ಕೋಪಕ್ಕೆ ಗುರಿಯಾಗಿ ಹಾನಿಯು ತಪ್ಪದು. ಶ್ರೀ ಪರಮೇಶ್ವರನ ಅನುಗ್ರಹಕ್ಕೆ ಪಾತ್ರರಾಗಿ ಇಹಪರಗಳಲ್ಲಿ ನೆಮ್ಮದಿಯುಂಟಾಗುವುದಕ್ಕೆ ಎಲ್ಲರೂ ವೇದವಿಹಿತವಾಗಿರುವ ಸ್ವಧರ್ಮವನ್ನು ಅನುಷ್ಠಿಸಬೇಕು.

ವೇದೋಕ್ತವಾದ ಸ್ವಧರ್ಮಾನುಷ್ಠಾನವನ್ನು ಯಾವ ರೀತಿಯಲ್ಲಿ ಮಾಡಿದರೆ ಪುರುಷಾರ್ಥಪ್ರಾಪ್ತಿಗೆ ಸಾಧನವಾಗುವುದೋ ಆ ರೀತಿಯನ್ನು ತಿಳಿಸುತ್ತಾರೆ—

ಕಾಮ್ಯೇ ಮತಿಸ್ತ್ಯಜ್ಯತಾಂ ।

ಕಾಮ್ಯ ಕರ್ಮಗಳಲ್ಲಿ ಆಸಕ್ತಿಯು ಬಿಡಲ್ಪಡಲಿ (ಬೇಕು).

ಕಾಮನೆ—ಎಂದರೆ ಇಚ್ಛೆ; 'ಕರ್ಮದ ಫಲವು ದೊರೆಯಲಿ'—ಎಂಬ ಆಸೆಯಿಂದ ಕರ್ಮವನ್ನು ಮಾಡಿದರೆ, ಅಂಥ ಕರ್ಮವು ಕಾಮ್ಯಕರ್ಮವೆನಿಸುತ್ತದೆ; ಫಲದಲ್ಲಿ ಆಸೆಯಿಡದೆ ಯಥಾವತ್ತಾಗಿ ಮಾಡುವ ಕರ್ಮವು ನಿತ್ಯಕರ್ಮವಾಗುವುದು. ಕಾಮ್ಯಕರ್ಮದಿಂದ ಅದರ ಫಲವು ತಪ್ಪದೆ ಉಂಟಾಗುವುದರಿಂದ, ಆ ಫಲವನ್ನು ಅನುಭವಿಸುವುದಕ್ಕಾಗಿ ಜನ್ಮಾಂತರಗಳನ್ನು ಹೊಂದಲೇಬೇಕಾಗಿ, ಸಂಸಾರವನ್ನು ತಪ್ಪಿಸಿಕೊಳ್ಳಲಾರದಾಗುವುದು. ಹಾಗೆಂದು ಕರ್ಮವನ್ನು ಮಾಡದೇ ಇದ್ದರೆ, ಆಗಲೂ ಅವಶ್ಯಮಾಡಬೇಕಾದುದನ್ನು ಬಿಟ್ಟ ಅಪರಾಧಕ್ಕೆ ಗುರಿಯಾಗಿ ಅನರ್ಥವೇ ಉಂಟಾಗುವುದು. ಆದುದರಿಂದ ಬಂಧಕವಾಗದಂತೆ ವಿಹಿತಕರ್ಮಗಳನ್ನು ಮಾಡುವುದು ಆಗತ್ಯ. ಅವಶ್ಯಕರ್ತವ್ಯಕರ್ಮಗಳನ್ನು ನಿತ್ಯವಾಗಿ—ಎಂದರೆ, ಆವುಗಳ ಫಲಗಳಲ್ಲಿ ಆಸೆಯಿಡದೆ—ಕೇವಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಮೇಶ್ವರನ ಪ್ರೀತ್ಯರ್ಥವಾಗಿ ಮಾಡುವುದರಿಂದ ಕರ್ಮಗಳು ಬಂಧಕಗಳಾಗುವುದಿಲ್ಲ.

ಹೀಗೆ ನಿತ್ಯವಾಗಿ ಸ್ವಧರ್ಮಗಳನ್ನು ಮಾಡುತ್ತಾ ಬರುವಲ್ಲಿ, ಮುಂದಿನ ಸಾಧನೆಯು ಸಿದ್ಧಿಸುತ್ತದೆ—

ಪಾಪೌಘಃ ಪರಿಧೂಯತಾಂ ।

ಪಾಪಗಳ ರಾಶಿಯು ಪೂರ್ಣವಾಗಿ ತ್ಯಜಿಸಲ್ಪಡಲಿ (ಹುತ್ತದೆ.)

ಅನಾದಿಕಾಲದಿಂದ ಅಸಂಖ್ಯಾತಜನ್ಮಗಳಲ್ಲಿ ಅಪಾರವಾದ ಪಾಪರಾಶಿಗಳನ್ನು ಕೂಡಿಹಾಕಿಕೊಂಡಿರುತ್ತೇವೆ; ಈಗಲೂ ಎಷ್ಟೋ ಪಾಪಗಳನ್ನು ಮಾಡುತ್ತಿರುತ್ತೇವೆ: ಇವುಗಳನ್ನೆಲ್ಲಾ ಕಳೆದುಕೊಂಡಲ್ಲದೆ ಜನ್ಮಾಂತರಗಳು ತಪ್ಪುವ ಹಾಗಿಲ್ಲ. ಈ ಪಾಪಗಳನ್ನು ಕಳೆದುಕೊಳ್ಳುವುದಕ್ಕೆ, ಸ್ವಧರ್ಮಗಳನ್ನು ನಿತ್ಯವಾಗಿ ಮಾಡುವುದೊಂದೇ ಉಪಾಯವು. ನಿತ್ಯವಾದ ಸ್ವಧರ್ಮಾನುಷ್ಠಾನದಿಂದ ಶ್ರೀಪರಮೇಶ್ವರನ ಅನುಗ್ರಹವು ಲಭಿಸಿ, ಮನಸ್ಸಿನಲ್ಲಿರುವ ಪಾಪಗಳೆಲ್ಲಾ ತೊಲಗುತ್ತವೆ; ಮನಸ್ಸು ಶುದ್ಧವಾಗುತ್ತದೆ. ಮನಸ್ಸು ಶುದ್ಧವಾಗದೆ ಶ್ರೇಯಸ್ಸು ದೊರೆಯಲಾರದು. ಆದುದರಿಂದ ಚಿತ್ತಶುದ್ಧಿಗಾಗಿ ನಿಷ್ಕಾಮ ಕರ್ಮಾನುಷ್ಠಾನವನ್ನು ಆಚರಿಸಬೇಕು.

ಇಲ್ಲಿ ಒಂದು ವಿಷಯವನ್ನು ಗಮನದಲ್ಲಿಡಬೇಕಾಗಿದೆ. ಕರ್ಮವೆಂದರೆ ಆಯಾ ಅಧಿಕಾರಿಗಳನ್ನು ಕುರಿತು ಶಾಸ್ತ್ರದಲ್ಲಿ ವಿಹಿತವಾಗಿರುವ ಕರ್ಮವೆಂದು ಮೊದಲೇ ತಿಳಿಸಿರುತ್ತದೆ. ಇವೇ ವರ್ಣಾಶ್ರಮಧರ್ಮಗಳು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂದು ನಾಲ್ಕು ವರ್ಣಗಳು; ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ್ಯ, ಸಂನ್ಯಾಸ—ಎಂದು ನಾಲ್ಕು ಆಶ್ರಮಗಳು. ವೇದದಲ್ಲಿ ಹೇಳಿರುವ ಕರ್ಮಗಳೆಲ್ಲಾ ಈ ನಾಲ್ಕು ವರ್ಣ ಮತ್ತು ಆಶ್ರಮಗಳಿಗೆ ಸೇರಿರುತ್ತವೆ. ಈ ವರ್ಣ ಮತ್ತು ಆಶ್ರಮಧರ್ಮಗಳಲ್ಲಿ ಪರಸ್ಪರವಾಗಿ ಒಂದಕ್ಕಿಂತ ಮತ್ತೊಂದು ಮೇಲುಕೀಳೆಂಬುದೇನೂ ಇಲ್ಲ. ಒಂದು ಶಾಲೆಯಲ್ಲಿರುವ ಅನೇಕ ತರಗತಿಗಳಲ್ಲಿ, ಆಯಾ ತರಗತಿಗಳಲ್ಲಿರುವವರಿಗೆ ಆಯಾ ಪಾಠಾಭ್ಯಾಸಗಳು ಮುಖ್ಯವಾಗಿರುವಂತೆ, ಆಯಾ ವರ್ಣ ಮತ್ತು ಆಶ್ರಮಗಳಲ್ಲಿ ಇರುವವರಿಗೆ, ಅವರವರನ್ನು ಕುರಿತು ಶಾಸ್ತ್ರದಲ್ಲಿ ವಿಹಿತವಾಗಿರುವ ಸ್ವಧರ್ಮಗಳೇ ಮುಖ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದವು. ಶ್ರೀ ಭಗವಂತನು ಈ ಅರ್ಥವನ್ನು ಸ್ಪಷ್ಟವಾಗಿ ಬೋಧಿಸಿದ್ದಾನೆ—

ಸ್ವಧರ್ಮೋ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ।
ಶ್ರೇಯಾನ್ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್ ॥—

"ಸ್ವಧರ್ಮದಲ್ಲಿಯೇ ಇದ್ದು ನಾಶವಾದರೂ ಅದೇ ಶ್ರೇಯಸ್ಕರವು; ಏಕೆಂದರೆ, ಪರಧರ್ಮವು ನರಕಾದಿಭಯವನ್ನುಂಟುಮಾಡುವಂಥದ್ದು. ಶಾಸ್ತ್ರದಲ್ಲಿ ಹೇಳಿರುವ ಎಲ್ಲ ನಿಯಮಗಳನ್ನೂ ಪೂರ್ಣವಾಗಿ ಮಾಡುವುದಕ್ಕೆ ಸಾಧ್ಯವಾಗದೇ ಹೋದರೂ, ಹಾಗೆ ಮಾಡುವುದಕ್ಕೆ ಸಾಧ್ಯವಿದ್ದ ಪರಧರ್ಮಕ್ಕಿಂತ ಸ್ವಧರ್ಮಾನುಷ್ಠಾನವೇ ಶ್ರೇಯಸ್ಕರವು." ಹಿಂದಿನ ಜನ್ಮಗಳಲ್ಲಿ ಮಾಡಿದ ಕರ್ಮಗಳ ಪರಿಪಾಕಕ್ಕೆ ಅನುಸಾರವಾಗಿ ಶ್ರೀ ಪರಮೇಶ್ವರನು ಅವರವರಿಗೆ ಉಚಿತವಾದ ವರ್ಣದಲ್ಲಿ ಜನ್ಮವನ್ನು ಕೊಡುತ್ತಾನೆ: ಆದ್ದರಿಂದ ಜನ್ಮದಿಂದಲೇ ವರ್ಣಗಳ ನಿರ್ಣಯವು. ಹೀಗಲ್ಲದಿದ್ದರೆ, ಹುಟ್ಟಿದ ಶಿಶುವಿನ ಗುಣಕರ್ಮವನ್ನು ತಿಳಿಯದೆ ಜಾತಕರ್ಮಾದಿಗಳನ್ನು ಮಾಡುವುದು ಸಾಧ್ಯವಾಗದೆ ಹೋಗುವುದು.

ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ।—

"ಅವರವರ ಹಿಂದಿನ ಜನ್ಮಗಳ ಗುಣ ಮತ್ತು ಕರ್ಮಗಳನ್ನು ಅನುಸರಿಸಿ ಬ್ರಾಹ್ಮಣ—ಮುಂತಾದ ನಾಲ್ಕು ವರ್ಣಗಳು ನನ್ನಿಂದ ಸೃಜಿಸಲ್ಪಡುತ್ತವೆ"—ಎಂದು ಶ್ರೀ ಭಗವಂತನು ಕಂಠೋಕ್ತವಾಗಿ ತಿಳಿಸಿದ್ದಾನೆ.

ಸತ್ವ, ರಜಸ್ಸು, ತಮಸ್ಸು—ಎಂಬ ಮೂರು ಗುಣಗಳ ಸ್ವರೂಪವಾದ ಪ್ರಕೃತಿಯ ಕಾರ್ಯವಾದ ಜಗತ್ತೆಲ್ಲವೂ ತ್ರಿಗುಣಾತ್ಮಕವೇ ಆಗಿದೆ—

ನ ತದಸ್ತಿ ಪೃಥಿವ್ಯಾಂ ವಾ ದಿವಿ ದೇವೇಷು ವಾ ಪುನಃ ।
ಸತ್ತ್ವಂ ಪ್ರಕೃತಿಜೈರ್ಮುಕ್ತಂ ಯದೇಭಿಃ ಸ್ಯಾತ್ತ್ರಿಭಿರ್ಗುಣೈಃ ।

"ಭೂಮಿಯಲ್ಲಾಗಲಿ, ಅಂತರಿಕ್ಷದಲ್ಲಾಗಲಿ, ದೇವತೆಗಳಲ್ಲಾಗಲಿ, ಪ್ರಕೃತಿಯಿಂದುಂಟಾದ ಮೂರು ಗುಣಗಳಿಲ್ಲದ ವಸ್ತುವು ಯಾವುದೊಂದೂ ಇರುವುದಿಲ್ಲ."

ಎಲ್ಲವೂ ಮೂರು ಗುಣಗಳಿಂದ ಆದುದಾದರೂ, ಆಯಾ ಗುಣಗಳ ಹೆಚ್ಚಿಕೆಯಿಂದ ವಸ್ತುಗಳು ಸಾತ್ವಿಕ, ರಾಜಸ, ತಾಮಸವೆಂದು ಭಿನ್ನವಾಗುತ್ತವೆ.

Sri Vidyabharathi Book Centre, Shringeri

CC-O. In Public Domain. Digitized by eGangotri

ಇವುಗಳಲ್ಲಿ ಸಾತ್ವಿಕವಸ್ತುಗಳೇ ಉತ್ಕೃಷ್ಟಗಳಿಂದೂ, ರಾಜಸತಾಮಸ ವಸ್ತುಗಳನ್ನು ತ್ಯಜಿಸಬೇಕೆಂದೂ ಶಾಸ್ತ್ರವು ಉಪದೇಶಿಸುತ್ತದೆ. ಚೇತನರಾದ ಪ್ರಾಣಿಗಳಲ್ಲಿಯೂ ಈ ಗುಣಗಳ ಭೇದವು ಇರುತ್ತದೆ. "ಸಾತ್ವಿಕವು ಯಾವುದು, ರಾಜಸತಾಮಸಗಳು ಯಾವುವು"—ಎಂಬುದನ್ನು ಶಾಸ್ತ್ರದಿಂದಲೇ ತಿಳಿಯಬೇಕಲ್ಲದೆ, ಬೇರೆ ಉಪಾಯವಿಲ್ಲ. ಮನುಷ್ಯರಲ್ಲಿ ಅವರವರಿಗಿರುವ ಶ್ರದ್ಧೆಯಿಂದ ಸಾತ್ವಿಕರು ಯಾರು—ಎಂಬುದನ್ನು ತಿಳಿಯಬೇಕು. ಸಾತ್ವಿಕ ಶ್ರದ್ಧೆಯುಳ್ಳವರು ಸಾತ್ವಿಕರು; ರಾಜಸತಾಮಸಶ್ರದ್ಧೆಯುಳ್ಳವರು ರಾಜಸತಾಮಸರು. ಸಾತ್ವಿಕ ಶ್ರದ್ಧೆಯೆಂದರೆ, ಯಾರು ಯಾವ ವರ್ಣದಲ್ಲಿ ಹುಟ್ಟಿ, ಯಾವ ಆಶ್ರಮದಲ್ಲಿರುವರೊ, ಅವರಿಗೆ ತಮ್ಮ ವರ್ಣ ಮತ್ತು ಆಶ್ರಮಗಳ ಶಾಸ್ತ್ರೋಕ್ತಧರ್ಮಗಳಲ್ಲಿ ಭಕ್ತಿಪೂರ್ವಕವಾದ ವಿಶ್ವಾಸವಿದ್ದರೆ, ಆವರ ಆ ಶ್ರದ್ಧೆಯು ಸಾತ್ವಿಕಶ್ರದ್ಧೆಯೆನಿಸುವುದು; ಅಂಥವರು ಸಾತ್ವಿಕರು—ಉತ್ಕೃಷ್ಟರು. ತನ್ನ ವರ್ಣಾಶ್ರಮಧರ್ಮಗಳಲ್ಲಿ ಶ್ರದ್ಧೆಯಿಲ್ಲದವರೂ, ಇತರ ಧರ್ಮಗಳಲ್ಲಿ ಆಸಕ್ತರಾದವರೂ, ರಾಜಸರೋ ತಾಮಸರೋ ಆಗುವರು. ಆದಕಾರಣ ತಮ್ಮ ತಮ್ಮ ವರ್ಣಾಶ್ರಮ ಧರ್ಮಗಳಲ್ಲಿ ಶ್ರದ್ಧೆಯುಳ್ಳವರೇ ಸಾತ್ವಿಕರು, ಉತ್ಕೃಷ್ಟರು, ಶ್ರೇಯೋಭಾಗಿಗಳಾಗುವವರು. ಸಾತ್ವಿಕ ಶ್ರದ್ಧೆಯಿಂದ, ತಮತಮಗೆ ವಿಹಿತವಾಗಿರುವ ಸ್ವಧರ್ಮಗಳನ್ನು, ನಿತ್ಯವಾಗಿ—ಎಂದರೆ ನಿಷ್ಕಾಮವಾಗಿ, ಶ್ರೀ ಪರಮೇಶ್ವರನ ಪ್ರೀತ್ಯರ್ಥವಾಗಿ, ಅನುಷ್ಠಿಸಬೇಕು. ಇದರಿಂದ ಹಿಂದಿನ ಪಾಪಗಳೆಲ್ಲ ಹೋಗಿ, ಚಿತ್ತವು ಶುದ್ಧವಾಗುವುದು. ಶ್ರೀ ಪರಮೇಶ್ವರನ ಅನುಗ್ರಹದ ಫಲವೇ ಚಿತ್ತ ಶುದ್ಧಿಯು.

ಚಿತ್ತವು ಶುದ್ಧವಾದರೆ, ಮುಂದಿನ ಸಾಧನೆಯು ಕೈಗೂಡುವುದು—

ಭವಸುಖೇ ದೋಷೋऽನುಸಂಧೀಯತಾಂ ।

ಸಂಸಾರಸುಖದಲ್ಲಿ ದೋಷವು ಚಿಂತಿಸಲ್ಪಡಲಿ (ಬೇಕು)

"ಅನಿತ್ಯಮಸುಖಂ ಲೋಕಂ"—ಎಂಬ ಶ್ರೀ ಭಗವದುಪದೇಶದಂತೆ ಈ ಸಂಸಾರವೆಲ್ಲವೂ ವಸ್ತುತಃ ಅನಿತ್ಯವೂ, ಎಂದರೆ ನಶ್ವರವೂ, ಮತ್ತು ಅಸುಖಂ—ಸುಖವಿಲ್ಲದುದೂ ಆಗಿರುತ್ತದೆ. ಆದರೂ, ಪಾಪದ ಬಲದಿಂದ ಸುಖವಿಲ್ಲದ ಪ್ರಪಂಚವು ಸುಖಮಯವಾಗಿ, ಭ್ರಾಂತಿಯಿಂದ ತೋರಿಬರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾಪವೆಲ್ಲ ತೊಳೆದು ಚಿತ್ತವು ನಿರ್ಮಲವಾದರೆ, ಆಗ ಈ ಸಂಸಾರದ ವಾಸ್ತವ ಸ್ವರೂಪವು ಗೋಚರಿಸುವುದು—ಸಂಸಾರವೆಲ್ಲ ದುಃಖಮಯವೂ, ಅನರ್ಥಕರವೂ—ಎಂಬುದು ಆಗ ಅನುಭವಕ್ಕೆ ಬರುತ್ತದೆ. ಹೀಗೆ ಸಂಸಾರದ ವಾಸ್ತವ ಸ್ವರೂಪವನ್ನು ತಿಳಿಯುವ ಯೋಗ್ಯತೆಯನ್ನು ಸಂಪಾದಿಸಬೇಕು. ಚಿತ್ತಶುದ್ಧಿಯಾದರೆ ಈ ಯೋಗ್ಯತೆಯು ಉಂಟಾಗುವುದರಿಂದ, ಚಿತ್ತಶುದ್ಧಿಯಾಗುವ ವರಿವಿಗೂ ನಿಷ್ಕಾಮಕರ್ಮಾನುಷ್ಠಾನಮಾಡಬೇಕೆಂದು ತಾತ್ಪರ್ಯವು. ಇದನ್ನೇ ಸಿದ್ಧಿಯೆಂದೂ ಹೇಳುತ್ತಾರೆ. ಅನೇಕ ಜನ್ಮಗಳ ಪಾಪಗಳು ಕಳೆಯುವಂಥ ಈ ಸಿದ್ಧಿಯು ಒಂದು ಜನ್ಮದಲ್ಲಿ ದೊರೆಯಲಾರದು. ಆದುದರಿಂದಲೇ—

ಅನೇಕಜನ್ಮಸಂಸಿದ್ಧ : ತತೋ ಯಾತಿ ಪರಾಂ ಗತಿ ।–

ಎಂದು ಶ್ರೀ ಭಗವಂತನು ಅನೇಕ ಜನ್ಮಗಳಲ್ಲಿ ನಿಷ್ಕಾಮಕರ್ಮಗಳನ್ನು ಆಚರಿಸಿ ಸಂಸಿದ್ಧನಾಗುವನು—ಚಿತ್ತಶುದ್ಧಿಯನ್ನು ಹೊಂದುವನು–ಎಂದು ಹೇಳಿರುತ್ತಾನೆ.

ಆಗ—

ಆತ್ಮೇಚ್ಛಾ ವ್ಯವಸೀಯತಾಂ

ಆತ್ಮನ ವಾಸ್ತವವಾದ ಸ್ವರೂಪವನ್ನು ತಿಳಿಯಬೇಕೆಂಬ ನಿಶ್ಚಯವಾದ ಇಚ್ಛೆಯು ಮಾಡಿಕೊಳ್ಳಲ್ಪಡಲಿ (ಡುವುದು)

ಎಂಬ ಏಳನೆಯ ಸಾಧನೆಯು ಕೈಗೂಡುವುದು.

ಅನೇಕ ಜನ್ಮಗಳಲ್ಲಿ ನಿಷ್ಕಾಮಕರ್ಮಾನುಷ್ಠಾನಮಾಡಿ ಸರ್ವಪಾಪಗಳೂ ನಾಶವಾಗಿ ಚಿತ್ತವು ಅತ್ಯಂತ ನಿರ್ಮಲವಾಗಲು, ಸರ್ವಪ್ರಪಂಚ ಸಂಸಾರವೂ ದುಃಖಮಯವೆಂಬುದು ಅನುಭವಕ್ಕೆ ಬರುವುದು; ಮತ್ತು ಆತ್ಮನ ವಾಸ್ತವವಾದ ಸ್ವರೂಪವನ್ನು ತಿಳಿದುಕೊಳ್ಳಬೇಕೆಂಬ ಇಚ್ಛೆಯೂ ಹುಟ್ಟುವುದು ಸಂಸಾರದಲ್ಲಿ ವಿರಕ್ತಿಯುಂಟಾಗಿ ಆತ್ಮಜ್ಞಾನದಲ್ಲಿ ಆಸಕ್ತಿಯು ಬರುವುದು. ಶಿಕ್ಷಾದಿ ಅಂಗಗಳೊಡನೆ ವೇದಾಧ್ಯಯನವನ್ನು ಮಾಡಿ, ಅದರ ಅರ್ಥವನ್ನು ಮೂದಲೇ ತಿಳಿದಿರುವುದರಿಂದ,–'ಸಂಸಾರವೆಲ್ಲ ದುಃಖಮಯ: ಅದನ್ನು ತ್ಯಜಿಸಬೇಕು; ಆತ್ಮಜ್ಞಾನವೇ ಶ್ರೇಯಸಿದ್ಧಿಗೆ ಸಾಧನವು, ಅದನ್ನು ಸಂಪಾದಿಸಬೇಕು'–

SRI Vidyashanathi Book Centre, Sringeri

CC-O. In Public Domain. Digitized by eGangotri

ಎಂಬ ಅರ್ಥವೂ ತಿಳಿದೇ ಇರುತ್ತದೆ. ಆದರೆ ಇದು, ನಮಗೆಲ್ಲರಿಗೂ ಈಗ ಇರುವ ಈ ತಿಳಿವಳಿಕೆಯಂತೆ, ಉಪಯೋಗಕ್ಕೆ ಬರದ ತಿಳಿವಳಿಕೆ ಮಾತ್ರ. ನಿಷ್ಕಾಮಕರ್ಮಾನುಷ್ಠಾನದಿಂದ ಚಿತ್ತಶುದ್ಧಿಯಾದ ಮೇಲೆ, ಈ ಎರಡು ತಿಳಿವಳಿಕೆಗಳೂ ಅನುಭವಸಿದ್ಧವಾಗುತ್ತವೆ; ಕೂಡಲೇ ಸಂಸಾರದಲ್ಲಿ ವಿರಕ್ತಿಯನ್ನು ಹೊಂದಿ, ಆತ್ಮತತ್ತ್ವಜ್ಞಾನವನ್ನೇ ಸಂಪಾದಿಸಲು ಉದ್ಯುಕ್ತನಾಗುತ್ತಾನೆ.

ಈ ಸ್ಥಿತಿಯನ್ನು ಹೊಂದಿರುವವನಿಗೆ ಎಂಟನೆಯ ಸಾಧನೆಯನ್ನು ತಿಳಿಸುತ್ತಾರೆ—

ನಿಜಗೃಹಾತ್ತೂರ್ಣಂ ವಿನಿರ್ಗಮ್ಯತಾಂ ।
ತನ್ನ ಮನೆಯಿಂದ ಕೂಡಲೆ ಹೊರಹೊರಡಲ್ಪಡಲಿ (ಬೇಕು)

ಇಲ್ಲಿ ಮನೆ (ಗೃಹ) ಎಂದರೆ–'ನನ್ನದು'–ಎಂಬ ಭಾವನೆಗೆ ವಿಷಯವಾದುದು—ಎಂದರ್ಥ; ಇದರಿಂದ ಹೊರಹೊರಡುವುದು ಎಂದರೆ, ಸರ್ವ ಸಂಸಾರ ಪ್ರಪಂಚದಲ್ಲಿ ಮಮತೆ(ನನ್ನದೆಂಬ ಅಭಿಮಾನ)ಯನ್ನು ತ್ಯಾಗಮಾಡಬೇಕೆಂದು ಅಭಿಪ್ರಾಯವು. ಎಂದರೆ, ಸರ್ವಪ್ರಪಂಚದಿಂದಲೂ ವಿರಕ್ತನಾಗಿ, ಆತ್ಮಜ್ಞಾನದಲ್ಲಿ ಮಾತ್ರವೇ ಆಸಕ್ತಿಯು ದೃಢವಾಗಲು, ಶಾಸ್ತ್ರದಲ್ಲಿ ಹೇಳಿರುವ ವಿಧಿಗನುಸಾರವಾಗಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಬೇಕೆಂದು ತಾತ್ಪರ್ಯವು. ಸಂನ್ಯಾಸವನ್ನು ಹೊಂದಿದವನಿಗೇ ಮುಂದಿನ ಸಾಧನೆಗಳು ಸಾಧ್ಯವಾಗುತ್ತವೆ.

॥೧॥

ಸಂಗಃ ಸತ್ಸು ವಿಧೀಯತಾಂ ಭಗವತೋ ಭಕ್ತಿರ್ದೃಢಾಧೀಯತಾಂ
ಶಾಂತ್ಯಾದಿಃ ಪರಿಚೀಯತಾಂ ದೃಢತರಂ ಕರ್ಮಾಶು ಸಂತ್ಯಜ್ಯತಾಂ ।
ಸದ್ವಿದ್ವಾನುಪಸರ್ಪ್ಯತಾಂ ಪ್ರತಿದಿನಂ ತತ್ಪಾದುಕಾ ಸೇವ್ಯತಾಂ
ಬ್ರಹ್ಮೈಕಾಕ್ಷರಮರ್ಥ್ಯತಾಂ ಶ್ರುತಿಶಿರೋವಾಕ್ಯಂ ಸಮಾಕರ್ಣ್ಯತಾಂ ॥

॥ ೨ ॥

ಮೇಲೆ ಹೇಳಿದಂತೆ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ ಮೇಲೆ, ಸಂನ್ಯಾಸಿಯು ಮಾಡಬೇಕಾದ ಸಾಧನೆಗಳನ್ನು ಕ್ರಮವಾಗಿ ಬೋಧಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಗಃ ಸತ್ಸು ವಿಧೀಯತಾಂ ।

ಸತ್ಪುರುಷರಲ್ಲಿ ಸಹವಾಸವು ಮಾಡಲ್ಪಡಲಿ (ಬೇಕು)

'ಅಸನ್ನೇವ ಸ ಭವತಿ ಅಸದ್ಬ್ರಹ್ಮೇತಿ ವೇದ ಚೇತ್ । ಅಸ್ತಿ ಬ್ರಹ್ಮೇತಿ ಚೇದ್ವೇದ ಸಂತಮೇನಂ ತತೋ ವಿದುಃ';—ಎಂದು ಶ್ರುತಿಯು ಹೇಳುತ್ತದೆ. ಎಂದರೆ—'ಬ್ರಹ್ಮವನ್ನು ತಿಳಿಯದವನು ಅಸತ್ಪುರುಷನು, ಬ್ರಹ್ಮವನ್ನು ತಿಳಿದವನೇ ಸತ್ಪುರುಷನು'—ಎಂದರ್ಥ. ಆದುದರಿಂದ ಸಂನ್ಯಾಸಿಯಾದಮೇಲೆ ಬ್ರಹ್ಮಜ್ಞಾನಸಂಪನ್ನರಾದ ಸತ್ಪುರುಷರ ಸಹವಾಸವನ್ನು ಮಾಡಬೇಕು. ಸಹವಾಸ, ಸಂಗ ಎಂದರೆ, ಅಂಥ ಜ್ಞಾನಿಗಳಲ್ಲಿ ಗುರುಭಕ್ತಿಯಿಂದ, ನೆರಳಿನಂತೆ ಎಡಬಿಡದೆ ಅವರನ್ನು ಸೇವೆಮಾಡುತ್ತಾ, ಅವರ ಪ್ರೀತಿಯನ್ನು ಸಂಪಾದಿಸಬೇಕೆಂದರ್ಥ. ಸುಪ್ರೀತರಾದ ಗುರುಗಳ ಉಪದೇಶದಿಂದಲ್ಲದೆ ಆತ್ಮಜ್ಞಾನವು ದೊರೆಯದು.

ಭಗವತೋ ಭಕ್ತಿರ್ದೃಢಾಧೀಯತಾಂ ।

ಶ್ರೀಪರಮೇಶ್ವರನಲ್ಲಿ ದೃಢವಾದ ಭಕ್ತಿಯು ಇಡಲ್ಪಡಲಿ (ಬೇಕು)

ಶ್ರೀಪರಮೇಶ್ವರನ ಅನುಗ್ರಹವಿಲ್ಲದೆ ಯಾವ ಶ್ರೇಯಸ್ಸೂ, ಯಾವ ಸಾಧನೆಯೂ ಸಿದ್ಧಿಸುವುದಿಲ್ಲ. ಭಗವದ್ಭಕ್ತಿಯು ಮೊದಲಿನಿಂದಲೂ, ಪರಮ ಪುರುಷಾರ್ಥವು ಕೈಗೂಡುವವರಿವಿಗೂ ದೃಢವಾಗಿರಲೇಬೇಕು ಭಗವದ್ಭಕ್ತಿಯ ಮಾಹಾತ್ಮ್ಯಯಿಂದಲೇ ಪ್ರತಿಯೊಂದು ಸಾಧನೆಯೂ ಪೂರ್ಣತೆಯನ್ನು ಹೊಂದಿ ಫಲಕಾರಿಯಾಗುತ್ತದೆ. ಒಂದೊಂದು ಸಾಧನೆಯು ಸಿದ್ಧಿಸಿದಾಗಲೂ, ಇದು ಶ್ರೀಭಗವತ್ಕೃಪೆಯಿಂದಲೇ ಸಿದ್ಧಿಸಿತೆಂದೂ, ಮುಂದಿನ ಸಾಧನೆಗಳೂ ಹೀಗೆಯೇ ಕೈಗೂಡಲೆಂದೂ ಪ್ರತಿಕ್ಷಣವೂ ಭಗವದ್ಭಕ್ತಿಯನ್ನು ಮತ್ತಷ್ಟು ದೃಢಪಡಿಸಿಕೊಳ್ಳುತ್ತಿರಬೇಕೆಂದು ತಾತ್ಪರ್ಯವು. ಭಕ್ತಿಯೆಂದರೆ ಭಜನೆ—ಸೇವೆ; ಪ್ರತಿಯೊಂದು ಸಾಧನೆಯನ್ನೂ ಶ್ರೀ ಭಗವಂತನ ಸೇವೆಯೆಂಬ ಭಾವನೆಯಿಂದ ಯಥಾವತ್ತಾಗಿ ನೆರವೇರಿಸುವುದರಿಂದ ಸಾಧನೆಯು ಪುಷ್ಕಲವಾಗಿ, ಫಲಕಾರಿಯಾಗುತ್ತದೆಂದು ಭಾವವು.

ಮತ್ತು—

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಂತ್ಯಾದಿಃ ಪರಿಚೀಯತಾಂ ।

ಶಾಂತಿಮೊದಲಾದವುಗಳು ವೃದ್ಧಿಮಾಡಿಕೊಳ್ಳಲ್ಪಡಲಿ (ಬೇಕು)

ಶಾಂತಿಮೊದಲಾದವುಗಳೆಂದರೆ, ಶ್ರಮ, ದಮ, ಉಪರತಿ, ತಿತಿಕ್ಷಾ, ಸಮಾಧಾನ, ಶ್ರದ್ಧೆಗಳೆಂಬ ಆರು ಗುಣಗಳು. ಶ್ರಮವೆಂದರೆ ಮನಸ್ಸಿನ ನಿಗ್ರಹ—ಆತ್ಮಜ್ಞಾನಕ್ಕೆ ಉಪಯೋಗವಿಲ್ಲದ ಮತ್ತು ವಿರೋಧಿಯಾದ ವಿಷಯಗಳಿಗೆ ಹೋಗದಂತೆ ಮನಸ್ಸನ್ನು ತಡೆಯುವಿಕೆ. ಇದರಂತೆ ಅಂಥ ವಿಷಯಗಳಿಗೆ ಹೋಗದಂತೆ ಇತರ ಇಂದ್ರಿಯಗಳನ್ನು ತಡೆಯುವಿಕೆಯು ದಮನವೆನಿಸುವುದು. ಉಪರತಿಯೆಂದರೆ ಸಂನ್ಯಾಸಾಶ್ರಮದ ಧರ್ಮಗಳಲ್ಲಿಯೇ ದೃಢವಾಗಿ ನಿರತವಾಗಿರುವಿಕೆ. ಹೀಗಿರುವಾಗ ಕಾಲದೇಶನಿಮಿತ್ತಗಳಿಂದಲೂ, ಪ್ರಾರಬ್ಧ ಕರ್ಮ ವಶದಿಂದಲೂ ಸಂಭವಿಸಬಹುದಾದ ಗಾಳಿ, ಮಳೆ, ಛಳಿ, ತಾಪ, ದೇಹಾಲಸ್ಯ–ಮುಂತಾದ ಸುಖದುಃಖಗಳಿಗೆ ಸೋಲದೆ, ಅವುಗಳನ್ನೆಲ್ಲಾ ಸಹಿಸಿಕೊಂಡು, ತನ್ನ ಕರ್ತವ್ಯದಲ್ಲಿಯೇ ನಿರತವಾಗಿರುವಿಕೆಯು ತಿತಿಕ್ಷೆಯು. ತನ್ನ ಕರ್ತವ್ಯದಲ್ಲಿಯೂ, ಶ್ರೀಗುರುಗಳ ಸೇವೆ ಮತ್ತು ಆಜ್ಞಾಪರಿಪಾಲನೆಗಳಲ್ಲಿಯೂ, ಶ್ರೀಗುರುಗಳ ಉಪದೇಶದಲ್ಲಿಯೂ ಜಾಗರೂಕತೆಯಿಂದಿರುವಿಕೆಯು ಸಮಾಧಾನವು. ಶ್ರೀಗುರುಗಳಲ್ಲಿಯೂ ಮತ್ತು ಅವರು ಉಪದೇಶ ಮಾಡುವ ಶಾಸ್ತ್ರಾರ್ಥಗಳಲ್ಲಿಯೂ—'ಇದು ಯಥಾರ್ಥವಾದುದು'–ಎಂಬ ದೃಢವಾದ ವಿಶ್ವಾಸ–ನಂಬಿಕೆಯು-ಶ್ರದ್ಧೆಯು. ಈ ಆರು ಗುಣಗಳನ್ನೂ ಯಾವಾಗಲೂ ಅಭ್ಯಾಸಮಾಡುತ್ತಾ ದೃಢಪಡಿಸಿಕೊಳ್ಳಬೇಕು.

ಮತ್ತು—

ದೃಢತರಂ ಕರ್ಮಾಶು ಸಂತ್ಯಜ್ಯತಾಂ ।

ಬಲವತ್ತರವಾದ ಕರ್ಮಬಂಧವು ತ್ಯಜಿಸಲ್ಪಡಲಿ (ಬೇಕು)

ಕರ್ಮಬಂಧವು ಪ್ರಬಲವಾದುದು. ಜನ್ಮಜನ್ಮಾಂತರಗಳಲ್ಲಿ ಮಾಡಿದ ಕರ್ಮಗಳ ವಾಸನೆಯು ಮನಸ್ಸಿನಲ್ಲಿ ಸೂಕ್ಷ್ಮವಾಗಿದ್ದು, ಯಾವುದಾದರೂ ನಿಮಿತ್ತವು ಒದಗಿದಾಗ, ಅದರಲ್ಲಿ ಆಸಕ್ತಿಯನ್ನು ಉಂಟುಮಾಡಿ, ಮನಸ್ಸನ್ನು ಬಹಿರ್ಮುಖವಾಗುವಂತೆಯೂ, ತನ್ನ ಸಂನ್ಯಾಸಧರ್ಮ, ಶ್ರೀಗುರುಶುಶ್ರೂಷೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರೂಪದೇಶ–ಮುಂತಾವುಗದಳಿಂದ ತಪ್ಪುವಂತೆಯೂ ಮಾಡಿಬಿಡುತ್ತದೆ. ಇದಕ್ಕೆ ಅವಕಾಶಕೊಡದಂತೆ ಎಚ್ಚರಿಕೆಯಿಂದ ಕರ್ಮವಾಸನೆಗಳನ್ನೆಲ್ಲಾ ದೂರ ಮಾಡಬೇಕು.

ಮತ್ತು—

ಸದ್ವಿದ್ವಾನುಪಸರ್ಪ್ಯತಾಂ ।

ವಿದ್ವಾಂಸರಾದ ಸದ್ಗುರುಗಳ ಉಪಸರ್ಪಣೆಮಾಡಲ್ಪಡಲಿ (ಬೇಕು)

ಮೇಲೆ ಹೇಳಿದ ಎಲ್ಲ ಗುಣಗಳನ್ನೂ ನಿತ್ಯವೂ ಅಭ್ಯಾಸದಿಂದ ದೃಢ ಪಡಿಸಿಕೊಂಡು, ಪ್ರಸನ್ನರಾದ ಬ್ರಹ್ಮವಿದ್ಯಾಗುರುಗಳ ಉಪಸರ್ಪಣೆ ಮಾಡ ಬೇಕು:

ಚಿತ್ತಶುದ್ಧಿಯಾಗಿ ವಿರಕ್ತನಾಗಿ ಸಂನ್ಯಾಸವನ್ನು ಪರಿಗ್ರಹಿಸಿದಾಗಲೇ ಶಮಾದಿಗಳೂ ಸಿದ್ಧವಾಗಿರುತ್ತವೆ; ಆದರೂ ಅವು ಇನ್ನೂ ದೃಢವಾಗಿರುವು ದಿಲ್ಲ. ಸಂನ್ಯಾಸವನ್ನು ಸ್ವೀಕರಿಸಿ, ಶ್ರೀಗುರುಗಳ ಸೇವೆಮಾಡುತ್ತಾ, ಈ ಗುಣ ಗಳನ್ನು ದೃಢಪಡಿಸಿಕೊಳ್ಳಬೇಕು. ಮೊದಲು ಪ್ರಯತ್ನಪೂರ್ವಕವಾಗಿ ಈ ಗುಣಗಳನ್ನು ಕಾಪಾಡಿಕೊಳ್ಳಬೇಕಾಗುವುದು; ಅಭ್ಯಾಸದ ಬಲದಿಂದ ಈ ಗುಣ ಗಳು ಪ್ರಯತ್ನದ ಅಪೇಕ್ಷೆಯಿಲ್ಲದೆಯೇ, ತಾವಾಗಿಯೇ, ಪುನಃ ಚ್ಯುತವಾಗ ದಂತೆ ಸಿದ್ಧಿಸುತ್ತವೆ; ಇದೇ ಇವುಗಳ ದಾರ್ಢ್ಯವು. ಹೀಗೆ ಈ ಗುಣಗಳು ಪ್ರಯತ್ನದ ಅವಶ್ಯಕತೆಯಿಲ್ಲದೆ ಸ್ಥಿರವಾದ ಅನಂತರ, ಬ್ರಹ್ಮವೇತ್ತರಾದ ಗುರುಗಳನ್ನು ಉಪಸರ್ಪಣೆಮಾಡಬೇಕು. ಉಪಸರ್ಪಣೆಯೆಂದರೆ, ಶಾಸ್ತ್ರದಲ್ಲಿ ಹೇಳಿರುವ ನಿಯಮಪೂರ್ವಕವಾಗಿ, ವಿದ್ಯೋಪದೇಶವನ್ನು ಪಡೆಯಲು ಶ್ರೀಗುರುಗಳನ್ನು ಆಶ್ರಯಿಸುವಿಕೆ.

ಶಾಸ್ತ್ರದಲ್ಲಿರುವ ಪದಗಳಿಗೆ ಶಾಸ್ತ್ರೀಯವಾದ ಅರ್ಥವಿದೆ; ಕೇವಲ ಶಬ್ದ ದಿಂದ ತೋರುವ ಅರ್ಥವು ಶಾಸ್ತ್ರೀಯ ಪದಗಳ ಅರ್ಥವಲ್ಲ. ಸ್ನಾನ,ಭೋಜನ-ಮುಂತಾದ ಪದಗಳಿಗೆ ಮೈತೊಳೆಯುವುದು, ಆಹಾರ ಸೇವನೆಮಾಡುವುದು— ಎಂದು ಅರ್ಥವಲ್ಲ. ಸ್ನಾನವನ್ನು ಹೀಗೆ ಹೀಗೆ ಮಾಡಬೇಕೆಂದು ಶಾಸ್ತ್ರದಲ್ಲಿ ನಿಯಮಗಳಿವೆ; ಈ ನಿಯಮಗಳಿಗನುಸಾರವಾಗಿ ಮಾಡುವುದೇ ಸ್ನಾನವೆನಿಸು ವುದು. ಹಾಗೆಯೇ ಶಾಸ್ತ್ರನಿಯಮಾನುಸಾರವಾಗಿ ಆಹಾರವನ್ನು ಸ್ವೀಕರಿಸು

Sri Vidyabharathi Book Centre, Sringeri

CC-O. In Public Domain. Digitized by eGangotri

ವುದೇ ಭೋಜನವು; ಅದಿಲ್ಲದಿದ್ದರೆ ಕೇವಲ ನಾಯಿನರಿಗಳಂತೆ ಹೊಟ್ಟೆ ಹೊರೆದುಕೊಳ್ಳುವಿಕೆ ಮಾತ್ರವಾಗುತ್ತದೆ. ಇದರಿಂದ, ಶಾಸ್ತ್ರಕ್ರಮವನ್ನು ಬಿಟ್ಟು ಮತ್ತು ಶಾಸ್ತ್ರನಿಷಿದ್ಧವಾದ ಕ್ರಮವನ್ನು ಅನುಸರಿಸಿದ ಪಾತಕವೇ ಉಂಟಾಗುವುದು. ಆದುದರಿಂದ ಶಾಸ್ತ್ರೀಯಪದಗಳಿಗೆ ಸಂಪ್ರದಾಯಾನುಸಾರವಾಗಿ ಸಿದ್ಧವಾಗಿರುವ ಶಾಸ್ತ್ರೀಯವಾದ ಅರ್ಥಗಳನ್ನೇ ಸ್ವೀಕರಿಸಬೇಕು. ಇದರಂತೆ ಪ್ರಕೃತದಲ್ಲಿ ಉಪಸರ್ಪಣೆ, ಗುರೂಪಸದನೆ–ಎಂದರೆ, ಶಾಸ್ತ್ರದಲ್ಲಿ ಹೇಳಿರುವ ನಿಯಮಾನುಸಾರವಾಗಿ ವಿದ್ಯೋಪದೇಶಗ್ರಹಣಕ್ಕಾಗಿ ಶ್ರೀಗುರುಗಳನ್ನು ಆಶ್ರಯಿಸುವಿಕೆಯೆಂದರ್ಥ—'ಗುರುಗಳ ಹತ್ತಿರ ಹೋಗುವುದು'-ಎಂದಿಷ್ಟೇ ಅರ್ಥವಲ್ಲ.

ಪ್ರತಿದಿನಂ ತತ್ಪಾದುಕಾ ಸೇವ್ಯತಾಂ ।

ಯಾವಾಗಲೂ ಶ್ರೀಗುರುಗಳ ಪಾದಸೇವೆಯು ಮಾಡಲ್ಪಡಲಿ (ಬೇಕು)

ವಿದ್ಯಾಗ್ರಹಣಕ್ಕೆ ಮೊದಲೂ, ವಿದ್ಯಾಗ್ರಹಣಕಾಲದಲ್ಲಿಯೂ, ಅನಂತರವೂ ಸಹ ನಿರಂತರವೂ, ಪ್ರತ್ಯಕ್ಷದಲ್ಲಿಯೂ ಪರೋಕ್ಷದಲ್ಲಿಯೂ, ಬಾಹ್ಯದಲ್ಲಿಯೂ ಆಂತರ್ಯ(ಮನಸ್ಸು)ದಲ್ಲಿಯೂ ಶ್ರೀಗುರುಸೇವೆಯೇ ಶ್ರೇಯಃಸಿದ್ಧಿಗೆ ಪರಮಸಾಧನವು. ಆದುದರಿಂದ ಶ್ರೀಗುರುಸೇವೆಯನ್ನು ಎಂದಿಗೂ ಬಿಡದೆ, ಯಾವಾಗಲೂ ಮಾಡುತ್ತಿರಬೇಕು. ಪಾದುಕಾಶಬ್ದವು ಶ್ರೀಗುರುಗಳ ಪಾದಗಳಿಗೆ ಆಧಾರವಾದುದನ್ನು ಹೇಳುವುದಾದರೂ, ಇಲ್ಲಿ ಶ್ರೀಗುರುಗಳ ಪಾದಪದ್ಮಗಳನ್ನೇ ಹೇಳಿದೆಯೆಂದು ತಿಳಿಯಬೇಕು; ಮತ್ತು -'ಪಾದಾರವಿಂದಗಳ ಸೇವೆ'-ಎಂಬುದಕ್ಕೂ ಕೂಡ ಶ್ರೀಗುರುಗಳ ಸೇವೆಯೆಂದೇ ಅರ್ಥವು.

ಇದುವರೆವಿಗೂ ವರ್ಣಿಸಿದಂತೆ, ಶ್ರೀಪರಮೇಶ್ವರನಲ್ಲಿ ಭಕ್ತಿಪೂರ್ವಕವಾಗಿ ಅನೇಕಜನ್ಮಗಳಲ್ಲಿ ಶ್ರೀಪರಮೇಶ್ವರಪ್ರೀತ್ಯರ್ಥವಾಗಿ ನಿಷ್ಕಾಮದಿಂದ ಸ್ವಧರ್ಮಗಳನ್ನು ಯಥಾವತ್ತಾಗಿ ಅನುಷ್ಠಿಸಿ, ಆದರಿಂದ ಸರ್ವಪಾಪಗಳನ್ನೂ ಕಳೆದುಕೊಂಡು, ಅತ್ಯಂತಶುದ್ಧವಾದ ಚಿತ್ತವನ್ನು ಹೊಂದಿ, ಪ್ರಪಂಚವೆಲ್ಲ ದುಃಖಿಮಯವೆಂದು ಮನಗಂಡು; ಆತ್ಮಜ್ಞಾನವೇ ಸಂಸಾರದುಃಖಿವನ್ನು ಕಳೆದುಕೊಳ್ಳುವುದಕ್ಕೆ ಸಾಧನವೆಂದು ನಿಶ್ಚಯಿಸಿ, ಸರ್ವಕರ್ಮಸಂನ್ಯಾಸಮಾಡಿ;

Sri Vidyabharathi Book Centre, Sringeri

CC-O. In Public Domain. Digitized by eGangotri

ಶಮದಮಾದಿಸಾಧನಗಳಿಂದ ಸಂಪನ್ನನಾಗಿ, ಶ್ರೀಸದ್ಗುರುಗಳನ್ನಾಶ್ರಯಿಸಿ, ನಿಯಮಪೂರ್ವಕವಾದ ಶ್ರೀಗುರುಶುಶ್ರೂಷೆಯಿಂದ ಅವರ ಅನುಗ್ರಹಕ್ಕೆ ಪಾತ್ರನಾದ ಮೇಲೆ, ಅಧಿಕಾರಿಯಾದ ಸಂನ್ಯಾಸಿಯು ಮುಂದೆ ಮಾಡ ಬೇಕಾದುದನ್ನು ಉಪದೇಶಿಸುತ್ತಾರೆ—

ಬ್ರಹ್ಮೈಕಾಕ್ಷರಮರ್ಥ್ಯತಾಂ ।

(ಏಕ) ಅದ್ವಿತೀಯವೂ (ಅಕ್ಷರ) ನಿತ್ಯವೂ ಆದ ಬ್ರಹ್ಮವು ಪ್ರಾರ್ಥಿಸಲ್ಪಡಲಿ (ಬೇಕು)

ಹೀಗೆ ಸುಪ್ರಸನ್ನರಾದ ಗುರುಗಳಿಂದ ಅಪೇಕ್ಷಿತವಾದುದನ್ನೆಲ್ಲಾ ಪಡೆಯ ಬಹುದು. ಆದರೆ, ಸಂಸಾರವೆಲ್ಲ ದುಃಖಮಯವೆಂದು ನಿಶ್ಚಯವಿರುವುದರಿಂದ, ಅದನ್ನೆಲ್ಲಾ ಬಿಟ್ಟು, ಪರಮಪುರುಷಾರ್ಥರೂಪವಾದ ಬ್ರಹ್ಮದ ಉಪದೇಶ ವನ್ನೇ ಪ್ರಾರ್ಥಿಸುತ್ತಾನೆಂದು ಭಾವವು.

ಇದಕ್ಕಾಗಿ,—

ಶ್ರುತಿಶಿರೋವಾಕ್ಯಂ ಸಮಾಕರ್ಣ್ಯತಾಂ ।

ವೇದಾಂತವಾಕ್ಯಗಳ ತಾತ್ಪರ್ಯವು ಶ್ರವಣಮಾಡಲ್ಪಡಲಿ (ಬೇಕು)

ಶ್ರುತಿಯೆಂದರೆ ವೇದವು. ಕರ್ಮಕಾಂಡವೆಂದೂ ಜ್ಞಾನಕಾಂಡವೆಂದೂ ವೇದವು ಮುಖ್ಯವಾಗಿ ಎರಡು ಭಾಗವಾಗಿದೆ. ಕರ್ಮಕಾಂಡದಲ್ಲಿ ಆಯಾ ವರ್ಣಾಶ್ರಮದವರು ಅವಶ್ಯಮಾಡಬೇಕಾದ ಕರ್ಮಗಳನ್ನು ಹೇಳಿರುತ್ತದೆ. ಜ್ಞಾನಕಾಂಡವಾದ ಉಪನಿಷತ್ತುಗಳಲ್ಲಿ, ಪರಮಪುರುಷಾರ್ಥಕ್ಕೆ ಸಾಧನವಾದ ಆತ್ಮತತ್ತ್ವಜ್ಞಾನವನ್ನು ಹೇಳಿದೆ. ಕರ್ಮಕಾಂಡದಲ್ಲಿ ಹೇಳಿರುವ ಕರ್ಮಗಳೆಲ್ಲ ಮುಖ್ಯವಾಗಿ ಚಿತ್ತಶುದ್ಧಿಗಾಗಿಯೇ ಇರುವುವು. ಚಿತ್ತಶುದ್ಧಿಯನ್ನು ಹೊಂದಿ, ಸಂಸಾರದಲ್ಲಿ ವಿರಕ್ತನಾಗಿ ಕರ್ಮಗಳ ಪ್ರಯೋಜನವು ಸಿದ್ಧಿಸಿರುವುದ ರಿಂದ ಸರ್ವಕರ್ಮಗಳನ್ನೂ ವಿಧಿವತ್ತಾಗಿ ತ್ಯಜಿಸಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿರುವ ಮುಮುಕ್ಷುವಿಗೆ, ಮೋಕ್ಷಸಾಧನವಾದ ಆತ್ಮತತ್ತ್ವಜ್ಞಾನ ವೊಂದೇ ಅಪೇಕ್ಷಿತವಾಗಿರುತ್ತದೆ. ಆತ್ಮತತ್ತ್ವವು ಜ್ಞಾನಕಾಂಡವಾದ ಉಪ ನಿಷತ್ತುಗಳಲ್ಲಿಯೇ ಪ್ರತಿಪಾದಿತವಾಗಿರುತ್ತದೆ. ಸಂಸಾರದಲ್ಲಿ ದುಃಖಪಡುತ್ತಿರುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾಣಿಗಳಿಗೆ, ಅದರಿಂದ ಪಾರಾಗುವ ಸಾಧನೆಯನ್ನು ಬೋಧಿಸುವುದಕ್ಕಾಗಿಯೇ ಪ್ರಚಾರವಾಗಿರುವ ವೇದಕ್ಕೆ, ಆತ್ಮತತ್ತ್ವವನ್ನು ಬೋಧಿಸುವುದೇ ಮುಖ್ಯ ತಾತ್ಪರ್ಯವು. ಆದುದರಿಂದ ಇಂಥ ತತ್ತ್ವವನ್ನು ತಿಳಿಸುವ ಉಪನಿಷತ್ತುಗಳೇ ವೇದದಲ್ಲಿ, ಶಿರಸ್ಸಿನಂತೆ, ಶ್ರೇಷ್ಠವಾಗಿರುತ್ತವೆ. ಈ ಕಾರಣದಿಂದ ಉಪನಿಷತ್ತುಗಳು ವೇದಾಂತಗಳು, ಎಂದರೆ, ವೇದಗಳ ನಿಶ್ಚಯವಾದ ಅರ್ಥವನ್ನು ತಿಳಿಸುವವುಗಳು ಎಂದು ಪ್ರಸಿದ್ಧವಾಗಿವೆ.

ಆದುದರಿಂದ ಆತ್ಮತತ್ತ್ವವನ್ನು ತಿಳಿಯಬೇಕಾದರೆ, ಅದನ್ನು ಪ್ರತಿಪಾದಿಸುವ ವೇದಾಂತವಾಕ್ಯಗಳನ್ನು ಶ್ರವಣಮಾಡಬೇಕು. "ಶ್ರವಣ"—ಎಂದರೆ ಬರೀ ಕೇಳುವುದೆಂದರ್ಥವಲ್ಲ; ಎಲ್ಲ ವೇದಾಂತವಾಕ್ಯಗಳನ್ನೂ ಸಂಪೂರ್ಣವಾಗಿ ಮೊದಲಿನಿಂದ ಕಡೆಯವರೆವಿಗೂ ವಿಚಾರಮಾಡಿ, ಅವುಗಳ ಮುಖ್ಯವಾದ ತಾತ್ಪರ್ಯವನ್ನು ನಿಶ್ಚಯಿಸುವಿಕೆಗೆ—"ಶ್ರವಣ"ವೆಂದು ಹೆಸರು. ಇದನ್ನೂ ಶ್ರೀಗುರೂಪದೇಶದ ಮೂಲಕವೇ ಮಾಡಬೇಕು ॥೨॥

ವಾಕ್ಯಾರ್ಥಶ್ಚ ವಿಚಾರ್ಯತಾಂ ಶ್ರುತಿಶಿರಃಪಕ್ಷಃ ಸಮಾಶ್ರೀಯತಾಂ
ದುಸ್ತರ್ಕಾತ್ಸುವಿರಮ್ಯತಾಂ ಶ್ರುತಿಮತಸ್ತರ್ಕೋऽನುಸಂಧೀಯತಾಂ ।
ಬ್ರಹ್ಮಾಸ್ಮೀತಿ ವಿಭಾವ್ಯತಾಮಹರಹರ್ಗರ್ವಃ ಪರಿತ್ಯಜ್ಯತಾಂ
ದೇಹೇऽಹಂಮತಿರುಜ್ಝ್ಯತಾಂ ಬುಧಜನೈರ್ವಾದಃ
ಪರಮುತ್ಸೃಜ್ಯತಾಂ ॥೩॥

ಆತ್ಮತತ್ತ್ವಜ್ಞಾನವೇ ಪುರುಷಾರ್ಥಕ್ಕೆ ಸಾಧನವು. "ಆತ್ಮತತ್ತ್ವ ಜ್ಞಾನ"—ವೆಂದರೆ ಆತ್ಮನ ವಾಸ್ತವವಾದ ಸ್ವರೂಪದ ತಿಳಿವಳಿಕೆ. ವೇದಾಂತ ವಾಕ್ಯಗಳಿಂದ ಆತ್ಮನು ಇಂಥ ಸ್ವರೂಪನು ಎಂದು ತಿಳಿದುಬಂದರೂ, ಇಷ್ಟು ಮಾತ್ರದಿಂದ—ಎಂದರೆ, ಬರೀ ಶಬ್ದದಿಂದ ಉಂಟಾದ ಜ್ಞಾನವು, ಮೋಕ್ಷವನ್ನು ಉಂಟುಮಾಡುವುದಿಲ್ಲ. ಆತ್ಮನು ನಿತ್ಯಮುಕ್ತ—ಅದ್ವೀತಿಯಚಿನ್ಮಾತ್ರಸ್ವರೂಪನೆಂದು ವೇದಾಂತಗಳು ಆತ್ಮನ ತತ್ತ್ವವನ್ನು ತಿಳಿಸುತ್ತವೆ. ವೇದಾಂತ ವಾಕ್ಯಗಳಿಂದ ಇದನ್ನು ತಿಳಿದ ಮಾತ್ರದಿಂದ ನಮಗೆ ಯಾವ ಪ್ರಯೋಜನವೂ ಸಿದ್ಧಿಸುವುದಿಲ್ಲ; ನಾವು ಇಂಥವರೇ ಆಗಿದ್ದೇವೆಂಬುದು ಅನುಭವಕ್ಕೆ ಬರಬೇಕು. ಇಂಥ ಅನುಭವವು ಬರುವುದಕ್ಕೆ ಶ್ರವಣ, ಮನನ ಮತ್ತು ನಿದಿಧ್ಯಾಸಗಳೆಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂರು ಸಾಧನೆಗಳು ಬೇಕೆಂದು ವೇದಾಂತಗಳು ತಿಳಿಸುತ್ತವೆ. ಎಲ್ಲ ವೇದಾಂತ ವಾಕ್ಯಗಳನ್ನೂ ಗುರುಮೂಲಕವಾಗಿ ವಿಚಾರಮಾಡಿ, ಅವುಗಳ ಮುಖ್ಯವಾದ ತಾತ್ಪರ್ಯಾರ್ಥವನ್ನು ನಿಶ್ಚಯಿಸಿಕೊಳ್ಳುವುದು ಶ್ರವಣವೆಂದು ತಿಳಿಸಿದ್ದಾಗಿದೆ. ಹೀಗೆ ಶ್ರವಣವಾದ ಮೇಲೆ ಮನನಮಾಡಬೇಕು, ಮತ್ತು ಆಮೇಲೆ ನಿದಿಧ್ಯಾಸನಮಾಡಬೇಕು. ಈ ಎರಡು ಸಾಧನೆಗಳನ್ನೂ ಈ ಶ್ಲೋಕದಲ್ಲಿ ತಿಳಿಸುತ್ತಾರೆ :—

ವಾಕ್ಯಾರ್ಥಶ್ಚ ವಿಚಾರ್ಯತಾಂ।
ವೇದಾಂತವಾಕ್ಯಗಳ ಅರ್ಥವು ವಿಚಾರಮಾಡಲ್ಪಡಲಿ (ಬೇಕು)

ಗುರುಮೂಲಕವಾದ 'ಶ್ರವಣ'ದಿಂದ ವೇದಾಂತವಾಕ್ಯಗಳ ತಾತ್ಪರ್ಯಾರ್ಥವು ನಿಶ್ಚಿತವಾಗಿದೆಯಷ್ಟೆ ! ವೇದಾಂತಗಳು ಪ್ರಮಾಣಗಳಾದ್ದರಿಂದ, ಈ ನಿಶ್ಚಿತವಾದ ತಾತ್ಪರ್ಯಾರ್ಥವೂ ಪ್ರಾಮಾಣಿಕವೇ ಎಂದೂ ಸಿದ್ಧವಾಗುತ್ತದೆ. ಆದರೂ—ಅನುಭವದಲ್ಲಿ, ಪ್ರಪಂಚವೆಲ್ಲಾ ಕಾಣಬರುತ್ತಿರುವಾಗ, ಆತ್ಮನು ಅದ್ವಿತೀಯನೆಂಬುದು ಹೇಗೆ ? ನಾನಾವಿಧಗಳಾದ ಸುಖದುಃಖಗಳ ಅನುಭವವು ನಿತ್ಯವೂ ಉಂಟಾಗುತ್ತಿರುವಾಗ, ಆತ್ಮನು ನಿತ್ಯಮುಕ್ತನೆಂಬುದು ಹೇಗೆ ಸಮಂಜಸವಾಗುವುದು ?—ಎಂದು ಮುಂತಾದಸಂದೇಹಗಳು ಬಾಧಿಸುತ್ತಿರುತ್ತವೆ. ಆದ್ದರಿಂದ, ವೇದಾಂತವಾಕ್ಯಗಳ ಈ ತಾತ್ಪರ್ಯಾರ್ಥವು ಸಮಂಜಸವಾಗಿದೆಯೆಂಬ ದೃಢನಿಶ್ಚಯವು ಉಂಟಾಗುವುದಕ್ಕಾಗಿ, ಈ ಅರ್ಥವನ್ನು ವಿಚಾರಮಾಡಬೇಕು. ವಿಚಾರವೆಂದರೆ—"ಈ ಅರ್ಥಕ್ಕೆ ಸಾಧಕವೇನು, ಬಾಧಕವೇನು ?"—ಎಂದು ಯುಕ್ತಿಯಿಂದ ಚಿಂತನೆಮಾಡುವಿಕೆ. "ಶ್ರವಣದಿಂದ ನಿಶ್ಚಿತವಾದ ವೇದಾಂತದ ತಾತ್ಪರ್ಯಾರ್ಥಕ್ಕೆ ಸಾಧಕವಾದ ಯುಕ್ತಿಗಳಿವೆ : ಬಾಧಕವಾದ ಯುಕ್ತಿಯು ಯಾವುದೂ ಇಲ್ಲ"—ಎಂದು ನಿಶ್ಚಯಮಾಡಿಕೊಳ್ಳುವಿಕೆಯೇ ಮನನವೆನಿಸುವುದು. ಇದನ್ನು ಸಾಧಕನು ತಾನೇ ಮಾಡಿಕೊಳ್ಳಬೇಕಾದ್ದು.

ಮನನಮಾಡುವ ಕ್ರಮವನ್ನು ಬೋಧಿಸುತ್ತಾರೆ—

ಶ್ರುತಿಶಿರಃಪಕ್ಷಃ ಸಮಾಶ್ರೀಯತಾಂ। ದುಸ್ತರ್ಕಾತ್ಸುವಿರಮ್ಯತಾಂ।
ಶ್ರುತಿಮತಸ್ತರ್ಕೋಽನುಸಂಧೀಯತಾಂ॥

Sri Vidyabharathi Book Centre, Sringeri

CC-O. In Public Domain. Digitized by eGangotri

ವೇದಾಂತಪಕ್ಷವು ಆಶ್ರಯಿಸಲ್ಪಡಲಿ (ಬೇಕು); ದುಸ್ತರ್ಕವು ಸಂಪೂರ್ಣವಾಗಿ ಬಿಡಲ್ಪಡಲಿ (ಬೇಕು); ಶ್ರುತಿಸಮ್ಮತವಾದ ತರ್ಕವು ಅನುಸರಿಸಲ್ಪಡಲಿ (ಬೇಕು).

ಅದ್ವಿತೀಯವೂ, ನಿತ್ಯಮುಕ್ತವೂ ಸಚ್ಚಿದಾನಂದರೂಪವೂ, ಆದ ಬ್ರಹ್ಮವೇ ಆತ್ಮನ ವಾಸ್ತವವಾದ ಸ್ವರೂಪವೆಂಬುದು ವೇದಾಂತಗಳ ತಾತ್ಪರ್ಯಾರ್ಥವು. ಈ ವಿಷಯದಲ್ಲಿ ಅನೇಕವಾದಿಗಳಿಗೆ ಭಿನ್ನಭಿನ್ನಾಭಿಪ್ರಾಯಗಳಿವೆ. ವೇದಾಂತಾರ್ಥವು ಸಮಂಜಸವಲ್ಲವೆಂದು ಈ ವಾದಿಗಳೆಲ್ಲರೂ ಈ ಸಿದ್ಧಾಂತದ ಮೇಲೆ ಅನೇಕ ಆಕ್ಷೇಪಗಳನ್ನು ಮಾಡುತ್ತಾರೆ. ಹೀಗಿರುವಲ್ಲಿ ಮುಮುಕ್ಷುವು ವಿಚಾರಮಾಡಬೇಕು :—

ಆತ್ಮತತ್ತ್ವದ ವಿಷಯದಲ್ಲಿ ವಾದಿಗಳಿಗೆ ಪರಸ್ಪರವಿರುದ್ಧಾಭಿಪ್ರಾಯಗಳಿವೆ; ಇವುಗಳಲ್ಲಿ ಇದೇ ಸರಿಯೆಂದು ನಿರ್ಣಯವು ಅಶಕ್ಯವೇ ಸರಿ. ಆದ್ದರಿಂದ ಆತ್ಮತತ್ತ್ವವು ಅತೀಂದ್ರಿಯವೆಂದು ನಿಶ್ಚಿತವಾಗುವುದು. ಅತೀಂದ್ರಿಯವಾದ ವಿಷಯದಲ್ಲಿ ನಿತ್ಯವಾದ ವೇದವನ್ನು ಬಿಟ್ಟರೆ, ಮತ್ತಾವ ಪ್ರಮಾಣವೂ ಇರುವುದಿಲ್ಲ. ಪರಮಪ್ರಮಾಣವಾದ ವೇದದಿಂದ ನಿಶ್ಚಿತವಾದ ಈ ಅರ್ಥವು ಯಥಾರ್ಥವೆಂಬಲ್ಲಿ ಯಾವ ಸಂದೇಹಕ್ಕೂ ಅವಕಾಶವಿಲ್ಲ. ಈ ಪ್ರಕಾರವಾಗಿ ವಿಚಾರಮಾಡಿಕೊಂಡು, ವೇದಾಂತಪಕ್ಷವನ್ನೇ ಯಥಾರ್ಥವೆಂದು ಅವಲಂಬಿಸಬೇಕು.

ಇತರವಾದಿಗಳು ವೇದಾಂತಸಿದ್ಧಾಂತದ ಮೇಲೆ ಯುಕ್ತಿಯಿಂದ ವಿರೋಧವನ್ನು ಶಂಕಿಸಿದರೆ, ಆಗ ದುಸ್ತರ್ಕವನ್ನು ಬಿಟ್ಟು, ಶ್ರುತಿಸಮ್ಮತವಾದ ತರ್ಕವನ್ನು ಆಶ್ರಯಿಸಿಕೊಂಡು, ವೇದಾಂತಸಿದ್ಧಾಂತವನ್ನೇ ಸ್ಥಿರಪಡಿಸಿಕೊಳ್ಳಬೇಕು. ಏಕೆಂದರೆ, ಯುಕ್ತಿಯು ಕೇವಲ ಲೌಕಾನುಭವವನ್ನು ಅವಲಂಬಿಸಿರುತ್ತದೆ. ಅನುಭವವೆಲ್ಲ ಯಥಾರ್ಥವಾಗುವುದಿಲ್ಲ; ಪ್ರಮಾಣಾನುಸಾರವಾದ ಅನುಭವವೇ ಯಥಾರ್ಥವೆನಿಸುವುದು: ಪ್ರಮಾಣಕ್ಕೆ ವಿರುದ್ಧವಾದ ಅನುಭವವು ಭ್ರಾಂತಿಯೇ ಸರಿ. ಆದಕಾರಣ ಪ್ರಮಾಣಕ್ಕೆ ಅನುಸಾರವಾದ ಯುಕ್ತಿಯೇ ಯಥಾರ್ಥವು. ಆತ್ಮತತ್ತ್ವದ ವಿಷಯದಲ್ಲಿ ವೇದಾಂತವೊಂದೇ ಪ್ರಮಾಣವಾಗಿರುವುದರಿಂದ, ಇದಕ್ಕೆ ಅನುಗುಣವಾದ ಯುಕ್ತಿಗಳನ್ನೇ ಆಶ್ರಯಿಸಿಕೊಂಡು, ತತ್ತ್ವದಲ್ಲಿ ದೃಢವಾದ ವಿಶ್ವಾಸವನ್ನು ಹೊಂದಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ವೇದಾಂತಸಿದ್ಧಾಂತಕ್ಕೆ ವಿರುದ್ಧಗಳಾದ ಯುಕ್ತಿಗಳನ್ನೆಲ್ಲಾ ಅಪ್ರಮಾಣ ಗಳೆಂದು ತಿಳಿಯಬೇಕು. ಎಂದರೆ, ವೇದಾಂತದ ಸಿದ್ಧಾಂತಾರ್ಥಕ್ಕೆ ಅನುಗುಣ ವಾದ ಯುಕ್ತಿಗಳಿವೆಯೆಂಬುದನ್ನೂ, ವಿರುದ್ಧವಾದ ಯುಕ್ತಿಗಳಾವುವೂ ಇಲ್ಲ ವೆಂಬುದನ್ನೂ ವಿಚಾರಮಾಡಿ ದೃಢಪಡಿಸಿಕೊಳ್ಳಬೇಕು. ಇದೇ ಮನನವು.

ಇಂಥ ಶ್ರವಣಮನನಗಳಿಂದ ವೇದಾಂತಸಿದ್ಧಾಂತವೇ ಯಥಾರ್ಥವೆಂದು ದೃಢವಾದ ಮೇಲೆ, ನಿಶ್ಚಿತವಾದ ಈ ಅರ್ಥವನ್ನು ನಿದಿಧ್ಯಾಸನಮಾಡಬೇಕೆಂದು ಮುಂದಿನ ಸಾಧನೆಯನ್ನು ಹೇಳುತ್ತಾರೆ—

ಬ್ರಹ್ಮಾಸ್ಮೀತಿ ವಿಭಾವ್ಯತಾಂ ।

"ಶಾಸ್ತ್ರಪ್ರತಿಪಾದ್ಯವಾದ ಅದ್ವಿತೀಯನಿತ್ಯಮುಕ್ತಸಚ್ಚಿದಾನಂದಬ್ರಹ್ಮವೇ ನಾನು"—ಎಂದು ಭಾವನೆಮಾಡಲ್ಪಡಲಿ—ಎಂದರೆ ನಿದಿಧ್ಯಾಸನೆಮಾಡಲ್ಪಡಲಿ (ಬೇಕು)

ನಿದಿಧ್ಯಾಸನವೆಂದರೆ, ಶ್ರವಣಮನನಗಳಿಂದ ದೃಢಪಟ್ಟ ತತ್ತ್ವಾರ್ಥ ವನ್ನೇ, ಎಡಬಿಡದೆ, ಮಧ್ಯೇ ಮಧ್ಯೇ ಬೇರೆ ಚಿಂತೆಗಳು ಬರದಂತೆ, ಅಖಂಡ ವಾಗಿ, ದೀರ್ಘಕಾಲ,–'ನಿತ್ಯಮುಕ್ತಾದ್ವಿತೀಯಬ್ರಹ್ಮಸ್ವರೂಪನೇ ನಾನು'- ಎಂಬುದಾಗಿ ಏಕಾಗ್ರತೆಯಿಂದ ಚಿಂತಿಸುತ್ತಿರುವಿಕೆ. ಈಗ ಈ ಸಿದ್ಧಾಂತದಲ್ಲಿ ಯಾವಸಂಶಯವೂ ಇಲ್ಲದಿರುವ ಕಾರಣ, ಏಕಾಗ್ರಚಿತ್ತದಿಂದ ಈ ತತ್ತ್ವಾರ್ಥ ವನ್ನು ಚಿಂತಿಸುತ್ತಾ ಬಂದರೆ, ಅದರ ಪರಿಪಾಕದಿಂದ ಆತ್ಮತತ್ತ್ವದ ಸಾಕ್ಷಾತ್ಕಾರವುಂಟಾಗುವುದು ; ಎಂದರೆ,–ನಾನು ಇಂಥ ಅದ್ವಿತೀಯಬ್ರಹ್ಮ ಸ್ವರೂಪನೇ–ಎಂಬುದು ಅನುಭವಸಿದ್ಧವಾಗುವುದು. ತತ್ತ್ವವು ಹೀಗೆ ಅನುಭವಸಿದ್ಧವಾದ ಕ್ಷಣದಲ್ಲಿಯೇ ಸರ್ವಸಂಸಾರಬಂಧನದಿಂದ ವಿನಿರ್ಮುಕ್ತ ನಾಗಿ, ನಿರಂತರನಿರತಿಶಯಾನಂದಸ್ವರೂಪದಿಂದ ಕೃತಕೃತ್ಯನಾಗುವನು, ನಿತ್ಯಮುಕ್ತನಾಗುವನು.

ಸಂನ್ಯಾಸಾಶ್ರಮವನ್ನು ಸ್ವೀಕರಿಸಿ, ಗುರೂಪಸದನಪೂರ್ವಕವಾಗಿ ವೇದಾಂತಮಹಾತತ್ತ್ವದ ಶ್ರವಣಮನನನಿದಿಧ್ಯಾಸನಗಳನ್ನು ಬಹುಕಾಲ ಅಭ್ಯಾಸಮಾಡುತ್ತಾ ಬಂದರೇನೆ, ಈ ಸಾಧನೆಗಳು ಪರಿಪಕ್ವವಾಗಿ ಆತ್ಮತತ್ತ್ವದ ಸಾಕ್ಷಾತ್ಕಾರವು ಲಭಿಸುತ್ತದೆ. ಆತ್ಮಸಾಕ್ಷಾತ್ಕಾರಕ್ಕೆ ಇವೇ ಸಾಧನವು. ಈ ಸಾಧನೆಗಳನ್ನು ಅಭ್ಯಾಸಮಾಡುವ ಕಾಲದಲ್ಲಿ ಸಾಧಕನು ಅವಶ್ಯವಾಗಿ

SGDF Vidyabharathi Book Centre, Srinagar

CC-O. In Public Domain. Digitized by eGangotri

ಅನುಸರಿಸಬೇಕಾದ ನಿಯಮಗಳನ್ನು ಈಗ ತಿಳಿಸುತ್ತಾರೆ. ಶಮದಮಾದಿಸಹಿತ ನಾಗಿ ಈ ನಿಯಮಗಳನ್ನು ಅನುಸರಿಸುತ್ತಾ ಶ್ರವಣಾದಿಗಳನ್ನು ಅಭ್ಯಾಸ ಮಾಡಬೇಕು.

ಅಹರಹರ್ಗರ್ವಃ ಪರಿತ್ಯಜ್ಯತಾಂ ।

ದಿನದಿನವೂ ಅಹಂಕಾರವು ಬಿಡಲ್ಪಡಲಿ (ತಕ್ಕದ್ದು)

ಗರ್ವವೆಂದರೆ ಅಹಂಭಾವವು, ಅಹಂಕಾರವು; 'ನಾನು ಇಂಥವನು-ಎಂಬ ತನ್ನ ಉತ್ಕರ್ಷದ ಭಾವನೆ. ಉನ್ನತಪದದಲ್ಲಿರುವವನಿಗೂ ಅಹಂಕಾರದಿಂದ ಚ್ಯುತಿಯುಂಟಾಗುವುದು ; ಮತ್ತು ಅಹಂಕಾರವುಳ್ಳವನಿಗೆ ಅವನು ಮಾಡುವ ಸಾಧನೆಯು ಪುಷ್ಕಳವಾಗದೆ ಶಿಥಿಲವಾಗುವುದು. ಆದುದರಿಂದ ಕ್ರಮಕ್ರಮ ವಾಗಿ ದಿನದಿನವೂ ಅಹಂಕಾರವನ್ನು ಕಡಿಮೆಮಾಡಿಕೊಳ್ಳುತ್ತಾ ಸಂಪೂರ್ಣ ವಾಗಿ ತ್ಯಜಿಸಬೇಕು. ಅಹಂಕಾರವಿರುವವರೆವಿಗೂ ಆತ್ಮತತ್ತ್ವಸಾಕ್ಷಾತ್ಕಾರವು ದುರ್ಲಭವು.

ಮತ್ತು—

ದೇಹೇऽಪಂಮತಿರುಜ್ಝ್ಯತಾಂ ।

ದೇಹದಲ್ಲಿ 'ನಾನು' ಎಂಬ ಬುದ್ಧಿಯು ತ್ಯಜಿಸಲ್ಪಡಲಿ (ಬೇಕು).

ಸ್ಥೂಲ, ಸೂಕ್ಷ್ಮ ಮತ್ತು ಕಾರಣ–ಎಂದು ದೇಹವು ಮೂರುವಿಧ ವಾಗಿದೆ. ತಲೆ, ಕೈ, ಕಾಲು–ಮುಂತಾದ ಆಕಾರವುಳ್ಳದ್ದಾಗಿ ಕಾಣಬರುತ್ತಿರುವ, ಪಾಂಚಭೌತಿಕ (ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ ಎಂಬ ಪಂಚಭೂತ ಗಳಿಂದ ಆಗಿರುವ)ವಾದ ಈ ದೇಹವು ಸ್ಥೂಲದೇಹವು. ಐದು ಜ್ಞಾನೇಂದ್ರಿಯ ಗಳು (ಚಕ್ಷುಸ್ಸು, ಶ್ರೋತ್ರ, ಜಿಹ್ವಾ, ಘ್ರಾಣ, ತ್ವಕ್ ಇವು ಜ್ಞಾನೇಂದ್ರಿಯ ಗಳು ; ಇವುಗಳಿಂದ ಕ್ರಮವಾಗಿ ರೂಪ, ಶಬ್ದ, ರುಚಿ, ಗಂಧ, ಸ್ಪರ್ಶಗಳು ತಿಳಿದುಬರುತ್ತವೆ; ಐದು ಕರ್ಮೇಂದ್ರಿಯಗಳು ; (ವಾಕ್, ಪಾಣಿ, ಪಾದ, ಪಾಯು, ಉಪಸ್ಥ ಎಂದು ಕರ್ಮೇಂದ್ರಿಯಗಳು) ; ಇವುಗಳಿಂದ ಕ್ರಮವಾಗಿ ಮಾತನಾಡುವಿಕೆ, ತೆಗೆದುಕೊಳ್ಳುವಿಕೆ, ನಡಿಗೆ, ಮಲವಿಸರ್ಜನೆ, ಮೂತ್ರ ವಿಸರ್ಜನೆ–ಎಂಬ ಕರ್ಮಗಳು ಆಗುತ್ತವೆ ; ಐದು ವಾಯುಗಳು (ಪ್ರಾಣ,

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪಾನ, ವ್ಯಾನ, ಉದಾನ ಮತ್ತು ಸಮಾನವೆಂದು ವಾಯುಗಳು ಐದು); ಇವುಗಳಿಂದ ಉಚ್ಛ್ವಾಸ. ನಿಶ್ವಾಸ, ಕಷ್ಟವಾದ ಕೆಲಸ, ಉತ್ಕ್ರಾಂತಿ, ಆಹಾರಪಚನ ಕಾರ್ಯಗಳಾಗುವುವು ; ಮನಸ್ಸು ಮತ್ತು ಬುದ್ಧಿ (ಆಲೋಚನೆ ಮಾಡುವ ಅಂತಃಕರಣವು ಮನಸ್ಸೆನ್ನಲ್ಪಡುವುದು ; ನಿಶ್ಚಯರೂಪವಾದ ಅಂತಃಕರಣವು ಬುದ್ಧಿಯು); ಈ ಹದಿನೇಳೂ ಸೇರಿ ಸೂಕ್ಷ್ಮಶರೀರವು. ಸೂಕ್ಷ್ಮಶರೀರವೂ ಪಂಚಭೂತಗಳಿಂದಲೇ ಆಗಿರುವುದು. ಸೂಕ್ಷ್ಮಶರೀರದ ಒಂದೊಂದು ಅವಯವವೂ ಒಂದೊಂದು ಭೂತದ ಕಾರ್ಯವಾಗಿದೆ ; ಹೇಗೆಂದರೆ, ಚಕ್ಷರಿಂದ್ರಿಯವೂ, ಪಾದೇಂದ್ರಿಯವೂ ತೇಜಸ್ಸಿನಿಂದಾಗಿವೆ ; ಶ್ರೋತ್ರ ಮತ್ತು ವಾಗಿಂದ್ರಿಯಗಳು ಆಕಾಶದ ಕಾರ್ಯಗಳು ಎಂದು ಮುಂತಾಗಿ. ಸ್ಥೂಲದೇಹವು ಎಲ್ಲ ಭೂತಗಳ ಕಾರ್ಯವಾಗಿರುತ್ತದೆ. ಸ್ಥೂಲ ಮತ್ತು ಸೂಕ್ಷ್ಮದೇಹಗಳಿಗೆ ಕಾರಣಗಳಾದ ಪಂಚಭೂತಗಳು ಮೂಲಪ್ರಕೃತಿಯಿಂದ ಉಂಟಾಗಿರುತ್ತವೆ ; ಈ ಪ್ರಕೃತಿಯೇ ಕಾರಣಶರೀರವು.

ಸಂಸಾರದ ಸ್ಥಿತಿಯಲ್ಲಿ ಎಲ್ಲರಿಗೂ ಈ ಮೂರು ದೇಹಗಳಲ್ಲಿ–"ನಾನು, ನನ್ನದು"–ಎಂಬ ಭಾವನೆಯು ಇರುತ್ತದೆ. "ನಾನು ಹುಟ್ಟಿದ್ದೇನೆ, ಸಾಯುತ್ತೇನೆ ; ನಾನು ಹುಡುಗ, ಯುವಕ ; ನಾನು ತೆಳ್ಳಗಿದ್ದೇನೆ, ಬೆಳ್ಳಗಿದ್ದೇನೆ"–ಮುಂತಾದ ತಿಳಿವಳಿಕೆಯು ಸ್ಥೂಲದೇಹದಲ್ಲಿನ ಅಹಂಭಾವನೆಯಾಗಿದೆ ; ಹುಟ್ಟುವುದು, ಬೆಳೆಯುವುದು, ನಾಶವಾಗುವುದು, ತೆಳ್ಳಗೆ, ಬೆಳ್ಳಗೆ–ಎಂಬುದೆಲ್ಲಾ ಈ ಸ್ಥೂಲದೇಹದ ಸ್ವರೂಪವು. ಹಾಗೆಯೇ–"ನಾನು ನೋಡುತ್ತೇನೆ, ಕೇಳುತ್ತೇನೆ, ತಿಳಿಯುತ್ತೇನೆ, ಹಸಿದಿದ್ದೇನೆ"—ಮುಂತಾದುದು ಸೂಕ್ಷ್ಮದೇಹದ ಅಭಿಮಾನವು. "ನನಗೇನೂ ತಿಳಿಯದು"–ಎಂಬುದು ಕಾರಣದೇಹದ ಅಹಂಭಾವವು. ಜೀವಿಸಿರುವವರೆಗೂ ದೇಹೇಂದ್ರಿಯಾದಿಗಳ ಮೂಲಕ ವ್ಯವಹರಿಸುತ್ತಲೇ ಇರಬೇಕಾಗಿದೆ. ಆದರೂ, ಸಾಧಕನು ಪ್ರತಿಯೊಂದು ವ್ಯವಹಾರದಲ್ಲಿಯೂ,–'ಇದೆಲ್ಲಾ ಈ ಮೂರು ದೇಹಗಳ ವ್ಯವಹಾರವೇ ಆಗಿರುತ್ತದೆ ; ನಾನು ಇವುಗಳನ್ನು ಮಾಡುತ್ತಿಲ್ಲ. ಇವುಗಳ ಸಂಬಂಧವೂ ನನಗಿರುವುದಿಲ್ಲ'–ಎಂದು ಮತ್ತೆ ಮತ್ತೆ ಭಾವನೆಮಾಡುತ್ತಾ, ಈ ಮೂರು ದೇಹಗಳಲ್ಲಿಯೂ, ಇವುಗಳ ವ್ಯವಹಾರಗಳಲ್ಲಿಯೂ-'ನಾನು ಮಾಡುತ್ತೇನೆ, ಇವು ನನ್ನವು–ಎಂಬ ಭಾವನೆಯನ್ನು ಸಂಪೂರ್ಣವಾಗಿ ಬಿಡಲು ಅಭ್ಯಾಸ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಬೇಕು. ಈ ದೇಹಗಳ ಅಭಿಮಾನವೇ ಸಂಸಾರಕ್ಕೆ ಮೂಲಕಾರಣವೂ, ಶ್ರೇಯಸ್ಸಿದ್ಧಿಗೆ ಪ್ರಬಲವಾದ ಪ್ರತಿಬಂಧಕವೂ ಆಗಿರುತ್ತದೆ. "ಈ ಸ್ಥೂಲ ದೇಹವು ನಾನಲ್ಲವೆಂದು"–ಇಷ್ಟು ಮಾತ್ರ ತಿಳಿದರೆ, ಪ್ರಾಪಂಚಿಕವ್ಯವಹಾರವೆಲ್ಲಾ ಎಷ್ಟೋ ಬದಲಾಯಿಸುತ್ತದೆ: ಸ್ಥೂಲದೇಹದ ಅಭಿಮಾನದಿಂದಲೇ ಸರ್ವವ್ಯವಹಾರವೂ ಶಾಸ್ತ್ರಕ್ಕೆ ವಿರುದ್ಧವಾಗಿ ಬೆಳೆಯುತ್ತಿದೆ.

ಮತ್ತು—

ಬುಧಜನೈರ್ವಾದಃ ಪರಿತ್ಯಜ್ಯತಾಂ ।
ವಿದ್ವಾಂಸರೊಡನೆ ವಾದವು ತ್ಯಜಿಸಲ್ಪಡಲಿ(ಬೇಕು)

ಸರ್ವಸಂಗವನ್ನು ತ್ಯಜಿಸಿ, ಸಂನ್ಯಾಸಿಯಾಗಿ, ಶ್ರೀಗುರುಶುಶ್ರೂಷೆ ಮತ್ತು ಶ್ರವಣಾದಿಗಳನ್ನು ಅಭ್ಯಾಸಮಾಡುವವನಿಗೆ ಇತರ ಸಾಮಾನ್ಯಜನಗಳ ಸಹವಾಸಕ್ಕೆ ಅವಕಾಶವೇ ಇಲ್ಲ. ವಿದ್ವಾಂಸರುಗಳ ಸಮಾಗಮವಾದಾಗ, ಅವರೊಡನೆ ವಾದಮಾಡುವುದನ್ನು ಬಿಡಬೇಕು. ತನಗೆ ಯಾವ ವಿಷಯದಲ್ಲಾದರೂ (ಶಾಸ್ತ್ರ ವಿಷಯದಲ್ಲಿಯೋ., ಆಚಾರದ ಅಥವಾ ಸಾಧನೆಯ ವಿಷಯದಲ್ಲಿಯೋ) ಏನಾದರೂ ಸಂದೇಹಾದಿಗಳಿದ್ದರೆ, ಅದನ್ನು ವಿನಯಪೂರ್ವಕವಾಗಿ ವಿಜ್ಞಾಪಿಸಿ, ತಕ್ಕ ಸಮಾಧಾನಗಳನ್ನು ಅವರಿಂದ ಕೇಳಿ ತಿಳಿದುಕೊಳ್ಳಬೇಕು. ಕೇಳುವುದರಲ್ಲಿಯೂ ಜಿಜ್ಞಾಸೆಯಿಂದ (ತಿಳಿದುಕೊಳ್ಳಬೇಕೆಂಬ ಅಭಿಪ್ರಾಯದಿಂದ) ಕೇಳಬೇಕೇ ಏನಾ, ಆಕ್ಷೇಪಮಾಡುವ ರೀತಿಯಲ್ಲಿ ಕೇಳಬಾರದು. ಇದಲ್ಲದೆ, ವಿದ್ವಾಂಸರು ಶಾಸ್ತ್ರದ ಅರ್ಥವನ್ನೇ ಹೇಳುತ್ತಿರುತ್ತಾರೆ, ಪ್ರತಿಯೊಬ್ಬರಿಗೂ ಅನೇಕಜನ್ಮಾಂತರಗಳ ಸಂಸ್ಕಾರವು ಇರುತ್ತಾದ್ದರಿಂದ, ಶಾಸ್ತ್ರೀಯವಾದ ಅರ್ಥಗಳಲ್ಲಿ ಕೆಲವು ತನಗೇ ತಿಳಿದಿರಬಹುದು; ಇನ್ನು ಕೆಲವು ತನಗೆ ಸಮಂಜಸವೆಂದು ತೋರಬಹುದು; ಇನ್ನು ಕೆಲವು ಹೊಸದಾಗಿರಬಹುದು; ಮತ್ತೆ ಕೆಲವು ವಿರುದ್ಧವಾಗಿ ತೋರಬಹುದು. ಇಂಥ ಸಂದರ್ಭದಲ್ಲಿ, ಶಾಸ್ತ್ರವೇ ಪ್ರಮಾಣವಾದ್ದರಿಂದ, ಶಾಸ್ತ್ರದಿಂದಾಗಲಿ, ವಿದ್ವಾಂಸರ ಮಾತಿನಿಂದಾಗಲಿ, ತನಗೆ ಮೊದಲೇ ತಿಳಿದಿದ್ದ ವಿಷಯವು ಈಗ ತಿಳಿದುಬಂದರೆ.–'ತಾನು ತಿಳಿದಿರುವುದು ಸರಿಯಾದುದೇ'–ಎಂದು ದೃಢಪಡಿಸಿಕೊಳ್ಳಬೇಕು. ಹಾಗೆಯೇ ಸಮಂಜಸವೆಂದು ತೋರಿಬಂದುದನ್ನೂ ದೃಢ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿಕೊಳ್ಳಬೇಕು. ಹೊಸವಿಷಯಗಳಿದ್ದರೆ, ಅವುಗಳನ್ನು ಸಂಗ್ರಹಿಸಿಕೊಳ್ಳಬೇಕು; ಶಾಸ್ತ್ರೀಯವಿಷಯವು ವಿರುದ್ಧವಾಗಿ ತೋರಿಬಂದರೆ, ಆಗ ಶಾಸ್ತ್ರೀಯ ವಿಷಯವನ್ನು ತಪ್ಪೆಂದು ತಿಳಿಯದೆ, ತನ್ನ ತಿಳಿವಳಿಕೆಯನ್ನು ಶಾಸ್ತ್ರಾನುಸಾರವಾಗಿ ತಿದ್ದಿಕೊಳ್ಳಬೇಕೆಂದು ತಾತ್ಪರ್ಯವು. ॥ ೩ ॥

ತನ್ನ ವೈಯುಕ್ತಿಕವಾದ ದೈನಂದಿನವ್ಯವಹಾರದಲ್ಲಿ ಹೇಗಿರಬೇಕೆಂಬುದನ್ನು ಈಗ ಉಪದೇಶಿಸುತ್ತಾರೆ:—

ಕ್ಷುದ್ವ್ಯಾಧಿಶ್ಚ ಚಿಕಿತ್ಸ್ಯತಾಂ ಪ್ರತಿದಿನಂ ಭಿಕ್ಷೌಷಧಂ ಭುಜ್ಯತಾಂ
ಸ್ವಾದ್ವನ್ನಂ ನ ತು ಯಾಚ್ಯತಾಂ ವಿಧಿವಶಾತ್ಪ್ರಾಪ್ತೇನ ಸಂತುಷ್ಯತಾಂ ।
ಶೀತೋಷ್ಣಾದಿ ವಿಷಹ್ಯತಾಂ ನ ತು ವೃಥಾವಾಕ್ಯಂ ಸಮುಚ್ಚಾರ್ಯತಾಂ
ಔದಾಸೀನ್ಯಮುಭೀಪ್ಸ್ಯತಾಂ ಜನಕೃಪಾನೈಷ್ಠುರ್ಯಮುತ್ಸೃಜ್ಯತಾಂ
॥ ೪ ॥

ಕ್ಷುದ್ವ್ಯಾಧಿಶ್ಚ ಚಿಕಿತ್ಸ್ಯತಾಂ ।
ಹಸಿವೆಂಬ ರೋಗವು ಚಿಕಿತ್ಸೆಮಾಡಲ್ಪಡಲಿ (ಬೇಕು)

ಮೂರು ದೇಹಗಳಲ್ಲಿಯೂ–'ನಾನು ನನ್ನದು' ಎಂಬ ಅಭಿಮಾನವನ್ನು ಬಿಡಬೇಕೆಂದು ಹಿಂದೆಯೇ ಹೇಳಿದೆ. ಹಾಗೂ ಸಾಧಕನಾದ ಸಂನ್ಯಾಸಿಯು ಆತ್ಮಜ್ಞಾನಕ್ಕೆ ಅವಶ್ಯವಾದ ಗುರುಶುಶ್ರೂಷಾಶ್ರವಣಾದಿಗಳನ್ನು ಪುಷ್ಕಳವಾಗಿ ಮಾಡಬೇಕು. ದೇಹೇಂದ್ರಿಯಮನೋಬುದ್ಧಿಗಳು ದುರ್ಬಲಗಳಾದರೆ ಸಾಧನೆಯು ಪೂರ್ಣವಾಗಿ ಸಿದ್ಧಿಸುವುದಿಲ್ಲ. ಆದಕಾರಣ ಪುಷ್ಕಳವಾದ ಸಾಧನೆಯನ್ನು ಮಾಡುವುದಕ್ಕೆ ದೇಹೇಂದ್ರಿಯಾದಿಗಳನ್ನು ಆರೋಗ್ಯಸ್ಥಿತಿಯಲ್ಲಿಯೂ ಪಟುವಾಗಿ ಇರುವಂತೆಯೂ ಇಟ್ಟುಕೊಳ್ಳುವುದು ಆಗತ್ಯವು.

ಈ ವಿಷಯದಲ್ಲಿ ಆಹಾರದ ದೃಷ್ಟಾಂತವೊಂದನ್ನು ತೋರಿಸುತ್ತಾರೆ: ಇದರಂತೆ ಇತರವಿಷಯಗಳಲ್ಲಿಯೂ ತಿಳಿಯತಕ್ಕದ್ದು.

ಹಸಿವು ಎಂಬುದೊಂದು ರೋಗ. ಯಾವುದು ಬಂದಾಗ ಚಿಕಿತ್ಸೆಮಾಡದಿದ್ದರೆ ಮಾರಕವಾಗವುದೋ, ಅದು ರೋಗವೆನ್ನಲ್ಪಡುತ್ತದೆ. ಹಸಿವು ಉಂಟಾದಾಗ ಚಿಕಿತ್ಸೆ (ಆಹಾರಸೇವನೆ) ಮಾಡದಿದ್ದರೆ ಮರಣವು ಪ್ರಾಪ್ತವಾಗುವುದ

Sri Vidyabharathi Book Centre, Shringeri

CC-O. In Public Domain. Digitized by eGangotri

ರಿಂದ, ಹಸಿವು ದೇಹದ ಒಂದು ರೋಗವು. ಈ ರೋಗವು ಬಂದಾಗ ಅದಕ್ಕೆ ತಕ್ಕ ಚಿಕಿತ್ಸೆ ಮಾಡಬೇಕು. ಒಂದುವೇಳೆ ಚಿಕಿತ್ಸೆ ಮಾಡದಿದ್ದರೂ ಮರಣವು ಸಂಭವಿಸದೇ ಇರಬಹುದು ; ಆದರೆ ಹಸಿವಿನ ಬಾಧೆಯಿಂದ ದೇಹೇಂದ್ರಿಯಾದಿಗಳು ದುರ್ಬಲಗಳಾಗುವುದರಿಂದ, ಶ್ರವಣಾದಿಸಾಧನೆಗಳು ನಡೆಯದೇ ಹೋಗುವವು. ಆದ್ದರಿಂದ ಹಸಿವಿಗೆ ಪರಿಹಾರವನ್ನು ಮಾಡಿಕೊಳ್ಳಬೇಕು.

ಅದು ಹೇಗೆ ? ಎಂದರೆ—

ಭಿಕ್ಷೌಷಧಂ ಭುಜ್ಯತಾಂ ।
ಭಿಕ್ಷೆಯೆಂಬ ಔಷಧವು ಸೇವಿಸಲ್ಪಡಲಿ (ಬೇಕು).

ಸಂನ್ಯಾಸಿಯು ಭಿಕ್ಷೆಯಿಂದಲೇ ಜೀವಿಸಬೇಕೆಂದು ಶಾಸ್ತ್ರದ ನಿಯಮವಿದೆ. ಮತ್ತು ವೇದೋಕ್ತಕರ್ಮನಿಷ್ಠರಾದ ಶ್ರೋತ್ರಿಯರ ಮನೆಗಳಿಂದಲೇ, ಆದೂ ದಿನವೂ ಏಳು ಮನೆಗಳಿಗಿಂತಲೂ ಹೆಚ್ಚಿಲ್ಲದಂತೆ, ಮಧ್ಯಾಹ್ನವಾದ ಮೇಲೆ, ಒಂದು ಹೊತ್ತು ಮಾತ್ರವೇ, ಭಿಕ್ಷೆಯನ್ನು ಕೇಳಿ ತರಬೇಕು. ಈ ಭಿಕ್ಷೆಯನ್ನು ಸಹ ಔಷಧದಂತೆ ಸೇವಿಸಬೇಕು. ಔಷಧಿಯನ್ನು ರೋಗವು ಹೋಗುವುದಕ್ಕೆ ಎಷ್ಟು ಅವಶ್ಯಕವೋ ಅಷ್ಟು ಮಾತ್ರವನ್ನೇ ಸೇವಿಸುವಂತೆ, ಹಸಿವಿನ ಬಾಧೆಯು ಕಳೆದು, ತನ್ನ ಶ್ರವಣಾದಿಕಾರ್ಯಗಳಿಗೆ ಬೇಕಾಗುವಷ್ಟನ್ನು ಮಾತ್ರವೇ ಭಿಕ್ಷೆಯನ್ನು ಸೇವಿಸಬೇಕು.

ಮತ್ತು—

ಸ್ವಾದ್ವನ್ನಂ ನ ತು ಯಾಚ್ಯತಾಂ ।
ವಿಧಿವಶಾತ್ಪ್ರಾಪ್ತೇನ ಸಂತುಷ್ಯತಾಂ ॥
ರುಚಿಯಾದ ಆಥವಾ ಒಳ್ಳೆಯ ಆಹಾರವು ಯಾಚಿಸಲ್ಪಡದಿರಲಿ (ಬೇಕು);
ತಾನಾಗಿಯೇ ಲಭಿಸಿದುದರಲ್ಲಿ ತೃಪ್ತಿಪಡಲ್ಪಡಲಿ (ಬೇಕು),

ಇದರ ಅರ್ಥವು ಸ್ಪಷ್ಟವೇ ಇದೆ. ವಿಶೇಷಪ್ರಯತ್ನದಿಂದ ಯಾವುದನ್ನೂ ಪಡೆಯಲು ಉದ್ಯುಕ್ತನಾಗಬಾರದು ; ತಾನಾಗಿ ಬಂದದ್ದರಲ್ಲಿ ತೃಪ್ತಿಹೊಂದಿ, ತನ್ನ ಶ್ರವಣಾದಿಸಾಧನೆಗಳಲ್ಲಿ ತತ್ಪರನಾಗಿರಬೇಕು. ಒಂದು ವೇಳೆ ತನಗೆ ಅವಶ್ಯಬೇಕಾದುದು ದೊರೆಯದಿದ್ದರೆ, ಅದಕ್ಕೂ ಖೇದಪಡದೆ, ತೃಪ್ತಿಯಿಂದಿರ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಕು. ಆಹಾರವಿಷಯದಲ್ಲಿ ಹೇಳಿದ ಈ ನಿಯಮಗಳು ಇತರ ಎಲ್ಲ ವಿಷಯ ಗಳಿಗೂ ಸಂಬಂಧಿಸುತ್ತವೆಂದು ತಿಳಿಯತಕ್ಕದ್ದು.

ಮತ್ತು—

ತ್ರಿದಾಸೀನ್ಯಮಭೀಪ್ಸ್ಯತಾಂ ।

ಉದಾಸೀನಭಾವವು ಅಪೇಕ್ಷಿಸಲ್ಪಡಲಿ (ಬೇಕು)

ತನಗೆ ಮುಖ್ಯವಾಗಿರುವ ಶ್ರವಣಾದಿಸಾಧನೆಗಳಲ್ಲಿ ವಿಶೇಷವಾದ ಶ್ರದ್ಧಾಭಕ್ತಿಗಳಿಂದ ಆದರವನ್ನಿಟ್ಟಿರಬೇಕಾದ್ದು ಅವಶ್ಯಕವೇ. ಇತರ ವಿಷಯ ಗಳಲ್ಲಿ ರಾಗದ್ವೇಷಗಳನ್ನು ಮಾಡದೆ ಉದಾಸೀನವಾಗಿರುವುದನ್ನೇ ಅಭ್ಯಾಸ ಮಾಡುತ್ತಿರಬೇಕು. ಇಲ್ಲವಾದರೆ ತನ್ನ ಸಾಧನೆಗೆ ವಿಘ್ನವುಂಟಾಗುವುದು.

ಹಾಗೆಯೇ—

ಜನಕೃಪಾನೈಷ್ಕರ್ಮ್ಯಮುತ್ಸೃಜ್ಯತಾಂ ।

ಜನಗಳ ದಯೆ ಮತ್ತು ಕ್ರಿಯಾರ್ಯಗಳು ಬಿಡಲ್ಪಡಲಿ (ಬೇಕು)

'ಅಯ್ಯೋ ಪಾಪ; ಇವರುಗಳು ಸರಿಯಾದ ತಿಳಿವಳಿಕೆಯಿಲ್ಲದೆ ಸನ್ಮಾರ್ಗ ವನ್ನು ಬಿಟ್ಟು, ಅಸನ್ಮಾರ್ಗನಿರತರಾಗಿ ಕೆಡುತ್ತಿದ್ದಾರಲ್ಲ'—ಎಂದು ಜನಗಳಲ್ಲಿ ದಯೆಯನ್ನು ಮಾಡುವುದಾದರೆ, ಆಗ ಜನಗಳಿಗೆ ಸದ್ಬೋಧೆಯನ್ನು ಮಾಡುವು ದಕ್ಕೆ ಪ್ರವೃತ್ತನಾಗುವನು ; ಅಥವಾ—'ಇವರು ದುಷ್ಟರಾಗಿ ದುರ್ಮಾರ್ಗದಲ್ಲಿ ದ್ದಾರೆ : ಇವರಿಗೆ ತಕ್ಕ ಶಿಕ್ಷೆಮಾಡಬೇಕು'—ಎಂದು ಅವರಲ್ಲಿ ಕ್ರಿಯಾರ್ಯವನ್ನು ಹೊಂದಿದರೆ, ಆಗಲೂ ತನ್ನ ಸಾಧನೆಯು ತಪ್ಪಿ ಹೋಗುವುದು. ಲೋಕವನ್ನು ನಿಗ್ರಹಿಸುವುದೂ ಅನುಗ್ರಹಿಸುವುದೂ ಸಿದ್ಧನಾದವನಿಗೆ ಸಾಧ್ಯವಾದ ಕಾರ್ಯ. ತಾನೇ ಇನ್ನೂ ಸಾಧನಾವಸ್ಥೆಯಲ್ಲಿರುವಾಗ ಲೋಕೋದ್ಧಾರಕ್ಕೆಂದು ಹೊರಟರೆ—"ಸ್ವಯಂ ತೀರ್ಣಃ ಪರಾಂಸ್ತಾರಯತಿ"—(ತಾನು ಉದ್ಧಾರ ಹೊಂದಿ ಇತರರನ್ನು ಉದ್ಧರಿಸುವನು)—ಎಂಬುದಕ್ಕೆ ಬದಲಾಗಿ, "ಸ್ವಯಂ ಮಗ್ನಃ ಪರಾನ್ಮಜ್ಜಯತಿ"—(ತಾನೂ ಮುಳುಗಿ, ಇತರರನ್ನೂ ಮುಳುಗಿಸು ವನು)—ಎಂಬ ನ್ಯಾಯವು ಉಂಟಾಗುವುದು. ಆದ್ದರಿಂದ ಜನಗಳ ವಿಷಯ

Sri Vidyabharathi Book Centre, Sringeri

CC-O. In Public Domain. Digitized by eGangotri

ದಲ್ಲಿ ಉದಾಸೀನವಾಗಿದ್ದುಕೊಂಡು ತನ್ನ ಸಾಧನೆಗಳ ಅಭ್ಯಾಸದಲ್ಲಿರಬೇಕು. ಮತ್ತು ಜನಗಳು ತನ್ನ ವಿಷಯದಲ್ಲಿ ದಯೆಯನ್ನು ತೋರಿಸಲಿ ಅಥವಾ ನಿಷ್ಠುರರಾಗಿರಲಿ, ಅದನ್ನೂ ಗಮನಿಸದೆ ಉದಾಸೀನವಾಗಿರಬೇಕೆಂದೂ ಅರ್ಥವು.

ಶೀತೋಷ್ಣಾದಿ ವಿಷಹ್ಯತಾಂ ।
ಛಳಿ, ಬೇಗೆ, ಸುಖ, ದುಃಖ–ಮುಂತಾದ ದ್ವಂದ್ವಗಳು ಸಹಿಸಲ್ಪಡಲಿ (ಬೇಕು)

ಹಸಿವು ಮುಂತಾದವುಗಳಿಗೆ ಅವಶ್ಯಕವಾದ ಪರಿಹಾರವನ್ನು ಶಾಸ್ತ್ರದ ನಿಯಮಗಳನ್ನನುಸರಿಸಿ ಮಾಡಿಕೊಳ್ಳಬೇಕೆಂದು ಹೇಳಿದ್ದಾಗಿದೆ. ಛಳಿ, ಬಿಸಿಲು ಮುಂತಾದವುಗಳು ಪ್ರಾಪ್ತವಾದರೆ, ಅವುಗಳನ್ನು ಪರಿಹರಿಸಿಕೊಳ್ಳುವ ಪ್ರಯತ್ನವನ್ನೇ ಬಿಟ್ಟು, ಸಹಿಸಿಕೊಂಡು, ಸಾಧನೆಗಳಲ್ಲಿ ನಿರತನಾಗಿರತಕ್ಕದ್ದು.

ನ ತು ವೃಥಾವಾಕ್ಯಂ ಸಮುಚ್ಚಾರ್ಯತಾಂ ।
ವ್ಯರ್ಥವಾದ ಮಾತು ಆಡಲ್ಪಡದಿರಲಿ (ಬೇಕು)

ಸರ್ವಸಂಸಾರವನ್ನೂ ತ್ಯಾಗಮಾಡಿ, ಆತ್ಮಜ್ಞಾನಸಂಪಾದನೆಗೆಂದೇ ಪ್ರಯತ್ನಮಾಡುತ್ತಿರುವ ಸಂನ್ಯಾಸಿಗೆ,–ಆತ್ಮತತ್ತ್ವ, ಅದಕ್ಕೆ ಬೇಕಾದ ಸಾಧನೆಗಳು–ಇವನ್ನು ಬಿಟ್ಟು, ಇತರ ವಿಷಯಗಳೆಲ್ಲಾ ವ್ಯರ್ಥಗಳೇ ಸರಿ. ಆದುದರಿಂದ ಅಂಥ ವಿಷಯಗಳ ಮಾತನ್ನೂ ಸಹ ಬಿಡಬೇಕು ॥ ೪ ॥

ಇದುವರೆವಿಗೆ ವಿವರಿಸಿದ ಸಾಧನೆಗಳೆಲ್ಲವೂ ಅನೇಕಜನ್ಮಗಳ ಅಭ್ಯಾಸದ ಬಲದಿಂದ ಸ್ವಾಧೀನಕ್ಕೆ ಬಂದು, ಪ್ರಯತ್ನವಿಲ್ಲದೆಯೇ ಈ ರೀತಿಯಲ್ಲಿ ತಾನಾಗಿಯೇ ಇರುವ ಸ್ಥಿತಿಯು ಸಿದ್ಧವಾಗುವುದು ; ಆಗ ಆತ್ಮಸಾಕ್ಷಾತ್ಕಾರಕ್ಕಾಗಿ ಮಾಡಬೇಕಾದ ಮುಖ್ಯಸಾಧನೆಯನ್ನು ಹೇಳುತ್ತಾರೆ :—

ಏಕಾಂತೇ ಸುಖಮಾಸ್ಯತಾಂ ಪರತರೇ ಚೇತಃ ಸಮಾಧೀಯತಾಂ
ಪೂರ್ಣಾತ್ಮಾ ಸುಸಮೀಕ್ಷ್ಯತಾಂ ಜಗದಿದಂ ತದ್ಬಾಧಿತಂ ದೃಶ್ಯತಾಂ ।
ಪ್ರಾಕ್ಕರ್ಮ ಪ್ರವಿಲಾಪ್ಯತಾಂ ಚಿತಿಬಲಾನ್ನಾಪ್ಯುತ್ತರೈಃ ಶ್ಲಿಷ್ಯತಾಂ
ಪ್ರಾರಬ್ಧಂ ತ್ವಿಹ ಭುಜ್ಯತಾಮಥ ಪರಬ್ರಹ್ಮಾತ್ಮನಾ ಸ್ಥೀಯತಾಂ ॥ ೫ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಕಾಂತೇ ಸುಖಮಾಸ್ಯತಾಂ ।

ವಿಜನವಾದ ಸ್ಥಳದಲ್ಲಿ, ಸುಖಾಸನದಲ್ಲಿ ಕುಳಿತುಕೊಳ್ಳಲ್ಪಡಲಿ (ಬೇಕು)

ವಿಜನವಾದ ಸ್ಥಳವೆಂದರೆ ಪವಿತ್ರವೂ, ಈತಿಬಾಧೆಗಳಿಲ್ಲದೆ ಚಿತ್ತ ಸಮಾಧಾನಕ್ಕೆ ಅನುಕೂಲವೂ ಆದ ಸ್ಥಳ. ಸುಖಾಸನವೆಂದರೆ ಶಾಸ್ತ್ರದಲ್ಲಿ ಹೇಳಿರುವ ಸ್ವಸ್ತಿಕ—ಪದ್ಮ—ಸಿದ್ಧ–ಮುಂತಾದ ಆಸನ (ದೇಹದ ಸ್ಥಿತಿ)ಗಳಲ್ಲಿ ಯಾವ ಸ್ಥಿತಿಯಲ್ಲಿ ದೀರ್ಘಕಾಲದವರೆವಿಗೂ ಕ್ಲೇಶವಿಲ್ಲದೆ ಕುಳಿತಿರಲು ತನಗೆ ಸೌಕರ್ಯವಾಗಿರುವುದೋ, ಆದು. ಇಂಥ ಸ್ಥಳದಲ್ಲಿ, ಇಂಥ ಆಸನದಲ್ಲಿ ಕುಳಿತುಕೊಳ್ಳಬೇಕು.

ಅನಂತರ—

ಪರತರೇ ಚೇತಃ ಸಮಾಧೀಯತಾಂ ।

ಸರ್ವೋತ್ಕೃಷ್ಟನಾದ ಪರಮಾತ್ಮನಲ್ಲಿ ಮನಸ್ಸು ಸಮಾಧಾನಮಾಡಲ್ಪಡಲಿ (ಬೇಕು)

ಪರಮಾತ್ಮನು ಸರ್ವೋತ್ಕೃಷ್ಟನು—ಎಲ್ಲವನ್ನೂ ಮೀರಿ, ಯಾವುದರ ಸಂಬಂಧವೂ ಇಲ್ಲದೆ ಸ್ವಸ್ವರೂಪದಲ್ಲಿರುವವನು. ಇಂಥ ಆತ್ಮನಲ್ಲಿ ಮನಸ್ಸನ್ನು ಸಮಾಧಾನಮಾಡಬೇಕು. ಎಂದರೆ, ಇದುವರೆವಿಗೂ ಶ್ರವಣಾದಿಗಳಿಂದ ನಿಶ್ಚಿತವಾಗಿರುವಂತೆ 'ನಿತ್ಯಮುಕ್ತಾದ್ವಿತೀಯಪರಬ್ರಹ್ಮಸ್ವರೂಪನೇ ನಾನು'–ಎಂಬ ಜ್ಞಾನದಲ್ಲಿಯೇ ಮನಸ್ಸನ್ನು ಸ್ಥಿರವಾಗಿ ಇರಿಸಬೇಕು. ಇದೇ ನಿದಿಧ್ಯಾಸನದ ಪರಾಕಾಷ್ಠಸ್ಥಿತಿ.

ಇದು ಸಿದ್ಧಿಸಿದ ಕೂಡಲೆ ಆತ್ಮಸಾಕ್ಷಾತ್ಕಾರವಾಗುವುದು—

ಪೂರ್ಣಾತ್ಮಾ ಸುಸಮೀಕ್ಷ್ಯತಾಂ ।

ಪರಿಪೂರ್ಣನಾದ ಆತ್ಮನು ಸಾಕ್ಷಾತ್ಕರಿಸಲ್ಪಡಲಿ (ಹುವನು)

ಬೇರೆ ವಸ್ತುವಿದ್ದರೆ ಆತ್ಮನು ಪೂರ್ಣನಾಗುವುದಿಲ್ಲ; ಪರಿಚ್ಛಿನ್ನನೇ ಆಗುವನು. ಆತ್ಮನು ವಸ್ತುತಃ ಪೂರ್ಣನೇ ಆಗಿರುವನು—ಅದ್ವಿತೀಯನೇ ಆಗಿರುತ್ತಾನೆ. ನಿದಿಧ್ಯಾಸನದ ಪರಿಪಾಕದಿಂದ ಏಕಾಗ್ರವಾಗಿ ನಿಶ್ಚಲವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂತಃಕರಣಕ್ಕೆ ಈ ಅದ್ವಿತೀಯಾತ್ಮಸ್ವರೂಪವು ಗೋಚರವಾಗುವುದು; ಇದೇ ಆತ್ಮಸಾಕ್ಷಾತ್ಕಾರವು.

ಇದಾದ ಕೂಡಲೆ—

ಜಗದಿದಂ ತದ್ಬಾಧಿತಂ ದೃಶ್ಯತಾಂ ।

ಈ ಜಗತ್ತೆಲ್ಲವೂ ಆದರಿಂದ (ಅದ್ವಿತೀಯಾತ್ಮಜ್ಞಾನದಿಂದ) ಬಾಧಿತವಾಗಿ ಕಾಣಲ್ಪಡಲಿ (ಡುವುದು)

ಹಗ್ಗದಲ್ಲಿ ಭ್ರಾಂತಿಯಿಂದ ತೋರಿಬಂದ ಹಾವು, ಹಗ್ಗವು ಗೋಚರವಾದಾಗ ಬಾಧಿತವಾಗುವಂತೆ, ಅದ್ವಿತೀಯಾತ್ಮತತ್ತ್ವವು ಗೋಚರವಾಗಲಾಗಿ ಅದರಲ್ಲಿ ತೋರಿಬಂದ ಜಗದ್ಭ್ರಾಂತಿಯೆಲ್ಲವೂ ಬಾಧಿತವಾಗಿಬಿಡುವುದು. ಬಾಧೆಯೆಂದರೆ, ಮೂರು ಕಾಲದಲ್ಲಿಯೂ ಇರುವಂಥದ್ದಲ್ಲವೆಂಬ ನಿಶ್ಚಿತವಾದ ತಿಳಿವು. ಆಗ ಅದ್ವಿತೀಯಾತ್ಮನು ನಿರತಿಶಯಪರಮಾನಂದಸ್ವರೂಪದಲ್ಲಿರುವನು; ಪರಮಪುರುಷಾರ್ಥವು ಕೈಗೂಡಿ ಕೃತಕೃತ್ಯನಾಗುವನು—ನಿತ್ಯಮುಕ್ತನಾಗುವನು.

"ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ"—ಕರ್ಮಗಳ ಫಲವನ್ನು ಅನುಭವಿಸಲೇಬೇಕೆಂದು ಹಿಂದೆ ಹೇಳಿರುತ್ತದೆ. ಅನಾದಿಕಾಲದಿಂದಲೂ ಅನೇಕ ಕರ್ಮಗಳನ್ನು ಮಾಡಿರುವುದರಿಂದ, ಅವುಗಳ ಫಲಗಳನ್ನೆಲ್ಲಾ ಅನುಭವಿಸದೆಯೇ, ಈಗ ಉಂಟಾಗುವ ಆತ್ಮತತ್ತ್ವಸಾಕ್ಷಾತ್ಕಾರ ಮಾತ್ರದಿಂದ ಮುಕ್ತಿಯು ಸಿದ್ಧಿಸುವುದು ಹೇಗೆ?—" ಎಂದು ಸಂದೇಹವು ಬರಬಹುದು. ಇದಕ್ಕೆ ಸಮಾಧಾನವನ್ನು ಹೇಳುತ್ತಾರೆ—

ಪ್ರಾಕ್ಕರ್ಮ ಪ್ರವಿಲಾಪ್ಯತಾಂ ಚಿತಿಬಲಾನ್ನಾಪ್ಯುತ್ತರೈಃ ಶ್ಲಿಷ್ಯತಾಂ ।

ಚೈತನ್ಯದ ಬಲದಿಂದ ಹಿಂದಿನ ಕರ್ಮವು ಲಯಮಾಡಲ್ಪಡಲಿ (ಡುತ್ತದೆ)
ಮತ್ತು ಮುಂದಿನ ಕರ್ಮಗಳಿಂದ ಸಂಬಂಧಿಸದಿರಲಿ (ರುವನು)

ಕರ್ಮಗಳು ಸಂಚಿತ, ಆಗಾಮಿ, ಪ್ರಾರಬ್ಧ—ಎಂದು ಮೂರು ವಿಧವಾಗಿವೆ. ಹಿಂದಿನ ಜನ್ಮಗಳಲ್ಲಿ ಮಾಡಿ, ಇದುವರೆವಿಗೂ ಫಲವನ್ನು ಅನುಭವಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸದೇ ಇರುವ, ಕರ್ಮಗಳು ಸಂಚಿತಕರ್ಮಗಳೆನಿಸುತ್ತವೆ. ಈ ಜನ್ಮದಲ್ಲಿಯೂ ಮತ್ತು ಮುಂದಿನ ಜನ್ಮಗಳಲ್ಲಿಯೂ ಮಾಡುವ ಕರ್ಮಗಳು ಆಗಾಮಿಕರ್ಮಗಳು. ಯಾವ ಕರ್ಮಗಳಿಂದ ಈಗಿನ ಜನ್ಮವು ಉಂಟಾಗಿರುವುದೋ, ಅವು ಪ್ರಾರಬ್ಧ ಕರ್ಮಗಳೆನಿಸುವುವು ; ಎಂದರೆ, ಫಲವನ್ನು ಕೊಡುವುದಕ್ಕೆ ಆರಂಭವಾಗಿರುವ ಕರ್ಮಗಳೆಂದರ್ಥ.

ಆತ್ಮಸಾಕ್ಷಾತ್ಕಾರವಾಗಲಾಗಿ, – "ಆತ್ಮನು ಯಾವಾಗಲೂ ಅದ್ವಿತೀಯ ಚಿನ್ಮಾತ್ರಸ್ವರೂಪನೇ ಹೊರತು, ಯಾವಾಗಲೂ ಕರ್ತೃತ್ವಾದಿಸ್ವರೂಪನಲ್ಲ"– ಎಂದು ನಿಶ್ಚಿತವಾಗಿ ತಿಳಿದುಬರುವುದರಿಂದ, 'ನಾನು ಹಿಂದೆ ಕರ್ಮಮಾಡಿದ್ದೆ, ಈಗ ಮಾಡುತ್ತೇನೆ, ಮುಂದೆ ಮಾಡುವೆನು'–ಎಂಬುದು ಬಾಧಿತವಾಗಿ ಬಿಡುತ್ತದೆ. ಆದುದರಿಂದ ಅವನ ಕರ್ಮಗಳೆಲ್ಲಾ ಹಗ್ಗದಹಾವಿನಂತೆ ತೊಲಗುತ್ತವೆ.

ಇಲ್ಲೊಂದು ವಿಶೇಷವುಂಟು. ಆತ್ಮಸಾಕ್ಷಾತ್ಕಾರವನ್ನು ಪಡೆದವನ ಅನುಭವವು ಹೀಗೆಯೇ ಇರುವುದಾದರೂ, ಎಂದರೆ ಅವನ ದೃಷ್ಟಿಯಿಂದ ಸಂಚಿತ, ಆಗಾಮಿ, ಪ್ರಾರಬ್ಧ–ಎಂಬ ಭೇದವೇನೂ ಇಲ್ಲವಾದರೂ, ಜನಗಳ ದೃಷ್ಟಿಯಿಂದ ಈ ಕರ್ಮಗಳ ತಾರತಮ್ಯವು ಪ್ರಸಿದ್ಧವಾಗಿರುತ್ತದೆ. ಅವರ ದೃಷ್ಟಿಯಿಂದ ಹೇಳುವುದಾದರೆ–ಆತ್ಮಸಾಕ್ಷಾತ್ಕಾರವಾದವನಿಗೆ ಅದ್ವಿತೀಯಾತ್ಮ ಜ್ಞಾನದ ಬಲದಿಂದ ಸಂಚಿತಕರ್ಮವೆಲ್ಲಾ ನಾಶವಾಗುತ್ತದೆ ; ಮತ್ತು ಮುಂದಿನ ಕರ್ಮಗಳ ಸಂಬಂಧವೇ ಅವನಿಗೆ ಆಗುವುದಿಲ್ಲ, ಪ್ರಾರಬ್ಧಕರ್ಮಗಳು ಫಲವನ್ನು ಕೊಡಲು ಆರಂಭಿಸಿರುವುದರಿಂದ, ಆ ಫಲವೆಲ್ಲವೂ ಉಂಟಾಗುವ ವರೆವಿಗೂ ಪ್ರವರ್ತಿಸುತ್ತಿರುತ್ತವೆ ; ಆಮೇಲೆ ನಿಃಶೇಷವಾಗುತ್ತವೆ. ದೇಹೇಂದ್ರಿಯಾದಿಗಳಿಲ್ಲದೆ ಕರ್ಮದ ಫಲವು ಉಂಟಾಗಲಾರದುದರಿಂದ, ಅಷ್ಟು ಕಾಲವೂ ಮುಕ್ತನ ದೇಹವೂ ಇರುತ್ತದೆ : ಆದರಲ್ಲಿ ನಾನಾವಿಧವಾದ ವ್ಯವಹಾರಗಳೂ ನಡೆಯುತ್ತಿರುತ್ತವೆ ; ಆದರೆ, ಅವುಗಳಲ್ಲಿ ಅವನಿಗೆ ಅಭಿಮಾನಭ್ರಾಂತಿಯಿರುವುದಿಲ್ಲ. ಇಂಥ ಸ್ಥಿತಿಯಲ್ಲಿರುವವನು ಜೀವನ್ಮುಕ್ತನೆನಿಸುವನು,

ಈ ಜೀವನ್ಮುಕ್ತಾವಸ್ಥೆಯಲ್ಲಿ—

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾರಬ್ಧಂ ತ್ವಿಹ ಭುಜ್ಯತಾಂ ।

ಪ್ರಾರಬ್ಧಕರ್ಮಗಳ ಫಲವು, ಈ ದೇಹದಲ್ಲಿ (ಅಭಿಮಾನರಹಿತವಾಗಿ) ಅನುಭವಿಸಲ್ಪಡಲಿ (ಡುವುದು)

ಪ್ರಾರಬ್ಧಕರ್ಮದ ಅನಂತರ, ದೇಹದ ಬಿಡುಗಡೆಯಾಗಲು,

ಅಥ ಪರಬ್ರಹ್ಮಾತ್ಮನಾ ಸ್ಥೀಯತಾಂ

ಸಾಕ್ಷಾತ್ಪರಬ್ರಹ್ಮಸ್ವರೂಪದಲ್ಲಿರುವನು.

ಇದೇ ವಿದೇಹಮುಕ್ತಿಯು. ಹೀಗೆ ಆತ್ಮಸಾಕ್ಷಾತ್ಕಾರದಿಂದ ಪ್ರಾರಬ್ಧ ಕರ್ಮವು ಕಳೆಯುವವರೆವಿಗೂ ಜೀವನ್ಮುಕ್ತಿಯೂ, ಆಮೇಲೆ ವಿದೇಹ ಮುಕ್ತಿಯೂ ಫಲಿಸುವುದು. ॥ ೫ ॥

ಈ ಸಾಧನ (ಸೋಪಾನ) ಪಂಚಕವು ಅದ್ವೈತಪಂಚರತ್ನವೆಂದೂ ಉಪದೇಶಪಂಚಕವೆಂದೂ ಪ್ರಸಿದ್ಧವಾಗಿರುತ್ತದೆ. ಇಲ್ಲಿ ಹೇಳಿರುವ ಉಪದೇಶದ ಸಾರವನ್ನು ಸಂಗ್ರಹವಾಗಿ ಹೀಗೆ ತಿಳಿಯಬೇಕು—

"ಆತ್ಮನು ವಸ್ತುತಃ ಅದ್ವಿತೀಯನಿತ್ಯಮುಕ್ತಪರಬ್ರಹ್ಮಸ್ವರೂಪನು"—ಎಂದು ಪರಮಪ್ರಮಾಣವಾದ ವೇದವು ಪ್ರತಿಪಾದಿಸುತ್ತಿದೆ. ಆದರೂ, ಈಗ ಯಾರಿಗೂ ಈ ಅನುಭವವಿರುವುದಿಲ್ಲ. ವಸ್ತುಸ್ಥಿತಿಯು ಇದಾದರೂ, ಇದು ಅನುಭವಕ್ಕೆ ಬಂದಲ್ಲದೆ ಪ್ರಯೋಜನವು ಸಿದ್ಧಿಸುವುದಿಲ್ಲ. ಈ ಅನುಭವವು ಉಂಟಾಗುವುದಕ್ಕೆ ವೇದಾಂತವಾಕ್ಯಾರ್ಥದ ಶ್ರವಣ, ಮನನ ಮತ್ತು ನಿದಿಧ್ಯಾಸನಗಳನ್ನು ಮಾಡಬೇಕು. ವೇದಾಂತವಾಕ್ಯಗಳ ಶ್ರವಣಾದಿಗಳನ್ನು ಮಾಡುವುದಕ್ಕೆ ಸಂನ್ಯಾಸಿಗೇ ಅಧಿಕಾರವು. ಸಂಸಾರದಲ್ಲಿ ತೀವ್ರವಾದ ಮತ್ತು ಶುದ್ಧವಾದ ವಿರಕ್ತಿಯಿಲ್ಲದವರಿಗೆ ಸಂನ್ಯಾಸಕ್ಕೆ ಅಧಿಕಾರವಿರುವುದಿಲ್ಲ. ಇಂಥ ತೀವ್ರವೂ ಶುದ್ಧವೂ ಆದ ವಿರಕ್ತಿಯು ಲಭಿಸಬೇಕಾದರೆ ಚಿತ್ತಶುದ್ಧಿಯು ಅವಶ್ಯಕವು. ಶಾಸ್ತ್ರೋಕ್ತವಾದ ವರ್ಣಾಶ್ರಮಧರ್ಮಗಳನ್ನು ಅವರವರ ಅಧಿಕಾರಕ್ಕೆ ತಕ್ಕಂತೆ ನಿಷ್ಕಾಮವಾಗಿ, ಶ್ರೀಪರಮೇಶ್ವರನ ಪ್ರೀತ್ಯರ್ಥವಾಗಿ, ಅನುಷ್ಠಿಸಿದರೇನೇ ಚಿತ್ತಶುದ್ಧಿಯುಂಟಾಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿತ್ತಶುದ್ಧಿಯಾಗದೆ ವಿರಕ್ತಿಯಿಲ್ಲ ; ವಿರಕ್ತಿಯಿಲ್ಲದೆ ಸಂನ್ಯಾಸವಿಲ್ಲ ; ಸಂನ್ಯಾಸವಿಲ್ಲದೆ ಶ್ರವಣಾದಿಗಳಿಲ್ಲ ; ಅವುಗಳಿಲ್ಲದೆ ಆತ್ಮಸಾಕ್ಷಾತ್ಕಾರವಿಲ್ಲ ; ಅದಿಲ್ಲದೆ ಸಂಸಾರಬಂಧನದ ನಿವೃತ್ತಿಯಿಲ್ಲ, ಮೋಕ್ಷವಿಲ್ಲ. ಆದ್ದರಿಂದ ಸಂಸಾರ ಬಂಧನದಿಂದ ವಿಮುಕ್ತರಾಗಿ ಕೃತಕೃತ್ಯರಾಗಬೇಕೆಂಬ ವಿವೇಕಿಗಳು, ಇವೆಲ್ಲಕ್ಕೂ ಮೂಲಭೂತವಾದ, ಅವಶ್ಯವಾದ ಚಿತ್ತಶುದ್ಧಿಗೆ ಆಗತ್ಯವಾಗಿರುವ, ವರ್ಣಾಶ್ರಮಧರ್ಮಗಳಲ್ಲಿ ಶ್ರದ್ಧಾಭಕ್ತಿಪುರಸ್ಸರವಾಗಿ ನಿರತರಾಗಬೇಕು.

ಹೀಗಾದರೆ, ಮೋಕ್ಷವು ಬೇಕೆಂಬುವವರು ಮಾತ್ರವೇ ಶಾಸ್ತ್ರೀಯ ವರ್ಣಾಶ್ರಮಧರ್ಮಗಳನ್ನು ಆಚರಿಸಬೇಕೆಂದು ಭ್ರಮಿಸಬಾರದು.

"ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ"— ಪ್ರಪಂಚದ ಎಲ್ಲ ಜನರೂ ನನ್ನ ಮಾರ್ಗವನ್ನೇ (ಶಾಸ್ತ್ರನಿಯಮವನ್ನೇ) ಅನುಸರಿಸುತ್ತಾರೆ ; ಎಂದರೆ, ನನ್ನ ಶಾಸ್ತ್ರದ ನಿಯಮಗಳಿಗೇ ಬದ್ಧರಾಗಿದ್ದಾರೆ —ಎಂದು ಶ್ರೀಭಗವಂತನು ಉಪದೇಶಿಸಿದ್ದಾನೆ. ಸರ್ವಜಗತ್ತಿಗೂ ಒಬ್ಬನೇ ಸರ್ವೇಶ್ವರನು ; ವೇದಶಾಸ್ತ್ರವು ಅವನಿಂದಲೇ ಲೋಕಕ್ಷೇಮಕ್ಕಾಗಿ ಪ್ರಚಾರಿತವಾದ ನಿಯಮವು. ಆದನ್ನು ಅನುಸರಿಸಿದರೇನೇ ಎಲ್ಲರಿಗೂ ಇಹಪರಗಳಲ್ಲಿ ಒಳ್ಳೆಯದಾಗುವುದು ; ಇಲ್ಲದಿದ್ದರೆ ಹಾನಿಯೇ ತಟ್ಟುವುದು. ವಸ್ತುಸ್ಥಿತಿಯು ಹೀಗಿರುವುದರಿಂದ, ಮೋಕ್ಷವನ್ನು ಅಪೇಕ್ಷಿಸದಿರಲಿ ; ಅಥವಾ ಪರಲೋಕದ ಸ್ವರ್ಗಾದಿಸುಖಗಳನ್ನೂ ಅಪೇಕ್ಷಿಸದಿರಲಿ ; ಆದರೂ, ಪರದಲ್ಲಿ ನರಕಾದಿದುಃಖಗಳು ಯಾರಿಗೂ ಬೇಕಾಗಿಲ್ಲವಷ್ಟೆ ; ಅದನ್ನು ತಪ್ಪಿಸಿಕೊಳ್ಳುವುದಕ್ಕಾದರೂ ಶಾಸ್ತ್ರದ ನಿಯಮಗಳನ್ನು ಅನುಸರಿಸುವುದು ಸರ್ವರಿಗೂ ಅತ್ಯಗತ್ಯವಾಗಿದೆ. ಈ ವಿಷಯದಲ್ಲಿ ಜನಗಳಿಗೆ ನಂಬಿಕೆಯಿಲ್ಲದಿರಬಹುದು ; ಆದ ಮಾತ್ರಕ್ಕೆ ವಸ್ತುಸ್ಥಿತಿಯೇನೂ ಬದಲಾಗುವುದಿಲ್ಲ. ತನಗೆ ರೋಗಬಂದಿರುವುದೆಂದೂ, ಅದಕ್ಕೆ ಚಿಕಿತ್ಸೆಮಾಡಿಕೊಳ್ಳಬೇಕೆಂದೂ ಶಿಶುವಿಗೆ ತಿಳಿವಳಿಕೆಯಿಲ್ಲದ ಮಾತ್ರಕ್ಕೆ ಚಿಕಿತ್ಸೆಯ ಆವಶ್ಯಕತೆ ಅದಕ್ಕಿಲ್ಲವೆ ? ಅದಿಲ್ಲದಿದ್ದರೆ ಅದಕ್ಕೆ ಹಾನಿ ತಪ್ಪುತ್ತದೆಯೆ ? ಹಿಂದೆಯೇ ವಿವರಿಸಿರುವಂತೆ, ಶಾಸ್ತ್ರವಿಹಿತವಾದ ತನ್ನ ತನ್ನ ವರ್ಣಾಶ್ರಮಧರ್ಮಗಳನ್ನು ಮಾಡದಿರುವುದರಿಂದಲೂ, ಶಾಸ್ತ್ರನಿಷಿದ್ಧವಾದುದನ್ನು ಮಾಡುವುದರಿಂದಲೂ, ವಿಷಯಾಸಕ್ತಿಯಿಂದಲೂ, ಪಾಪವು ಉಂಟಾಗಿ, ಮಹಾ ಅನರ್ಥವೇ ಪ್ರಾಪ್ತವಾಗುತ್ತದೆ. ಆ ಅನರ್ಥವನ್ನು ತಪ್ಪಿಸಿಕೊಳ್ಳು

Sri Vidyaratna Pustaka Bhandara Book Centre, Sringeri

CC-O. In Public Domain. Digitized by eGangotri

ವುದಕ್ಕಾಗಿ ವಿಷಯಲಂಪಟತೆಯನ್ನು ಬಿಟ್ಟು, ಶಾಸ್ತ್ರನಿಷಿದ್ಧ ಕರ್ಮಗಳನ್ನು ತ್ಯಜಿಸಿ, ಶಾಸ್ತ್ರವಿಹಿತವಾದ ಸ್ವಧರ್ಮಗಳನ್ನು ಆಚರಿಸುವುದು ಸರ್ವರಿಗೂ ಅತ್ಯವಶ್ಯವು. ಇದನ್ನು ವಿಚಾರಪೂರ್ವಕವಾಗಿ ತಿಳಿದುಕೊಂಡು, ಸರ್ವರೂ ಸ್ವಧರ್ಮನಿಷ್ಠರಾಗಬೇಕು ; ತಿಳಿವಳಿಕೆಯಿಲ್ಲದ ಇತರರಿಗೆ ಸರಿಯಾದ ತಿಳಿವಳಿಕೆಯನ್ನು ಕೊಡಬೇಕು ; ಇಂಥ ತಿಳಿವಳಿಕೆಯನ್ನು ಕೇಳದಂಥ ದುಷ್ಟರನ್ನೂ ಮೂರ್ಖರನ್ನೂ ಶಿಕ್ಷಿಸಿ ಶಾಸ್ತ್ರೀಯಸನ್ಮಾರ್ಗದಲ್ಲಿ ನಡೆಯುವಂತೆ ಅವರನ್ನು ಬಲಾತ್ಕಾರದಿಂದಲಾದರೂ ನಿಗ್ರಹಿಸಬೇಕು ; ಇದೇ ಬಲ್ಲವರ, ಶಕ್ತರ ಕರ್ತವ್ಯ.

ಮೇಲೆ ಹೇಳಿದಂತೆ–"ಪಾಪಕ್ಕೆ ಅವಕಾಶಕೊಡದೆ, ವಿಹಿತಸ್ವಧರ್ಮದಲ್ಲಿ ನಿರತರಾದವರಿಗೆ ಪರದಲ್ಲಿ ಅಭ್ಯುದಯವು ಉಂಟಾಗುತ್ತದೆ ; ಮೋಕ್ಷಾಪೇಕ್ಷೆಯುಳ್ಳವರು ಸ್ವಧರ್ಮವನ್ನು ನಿಷ್ಕಾಮದಿಂದ ಆಚರಿಸಬೇಕು–" ಎಂಬುದು ವಿಶೇಷ. ಇದೇ ಸರ್ವಶಾಸ್ತ್ರಗಳ ಉಪದೇಶಸಾರ.

ಈಗಿನ ಕಾಲದಲ್ಲಿ ಎಲ್ಲೆಲ್ಲಿಯೂ ಭಕ್ತಿಮಾರ್ಗವೆಂಬುದೊಂದು ಮಾರ್ಗವು ಪ್ರಚಾರವಾಗುತ್ತಿರುವುದು ಕಂಡುಬರುತ್ತಿದೆ. ಇದರಲ್ಲಿ ಯಾವ ನಿಯಮವೂ ಬೇಕಿಲ್ಲವೆಂದು ಪ್ರಚಾರಮಾಡುತ್ತಿರುವುದರಿಂದ, ಈ ಮಾರ್ಗವು ಕಾಡ್ಗಿಚ್ಚಿನಂತೆ ಎಲ್ಲೆಲ್ಲಿಯೂ ಸ್ವೇಚ್ಛೆಯಾಗಿ ಹರಡುತ್ತಿದೆ. ಆದರೆ ಇಂಥ ಮಾರ್ಗದಲ್ಲಿ ಯಾವ ಪ್ರಮಾಣವೂ ಇರುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ವಿಚಾರಪರರಾದ ವಿವೇಕಿಗಳು ಅತ್ಯಂತ ಎಚ್ಚರಿಕೆಯಿಂದ ಇರತಕ್ಕದ್ದೆಂದು ಸೂಚಿಸಬೇಕಾಗಿದೆ.

ಭದ್ರಂ ಶುಭಂ ಮಂಗಳಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮಚ್ಛಂಕರಭಗವತ್ಪಾದವಿರಚಿತಾ

ಆನಂದಲಹರೀ

ಪ್ರಸ್ತಾವನೆ

ಸಂಸಾರವೆಂಬ ಗೊಂಡಾರಣ್ಯದಲ್ಲಿ, ಅಜ್ಞಾನವೆಂಬ ಗಾಢಾಂಧಕಾರದಲ್ಲಿ ಬಿದ್ದು, ಸರ್ವಸೌಖ್ಯದಿಂದ ತುಂಬಿರುವ ತಮ್ಮ ಮನೆಯನ್ನು ಕಾಣದೆ, ದಿಕ್ಕು ಕೆಟ್ಟು ಅಲೆಯುತ್ತಿರುವ ಜೀವಸಮುದಾಯಕ್ಕೆ, ಕಣ್ತೆರೆಯಿಸಿ ತಮ್ಮ ಮನೆಯನ್ನು ಹೊಂದುವ ದಾರಿಯನ್ನು ತೋರಿಸಿಕೊಟ್ಟು, ಶ್ರೀಮಚ್ಛಂಕರ ಭಗವತ್ಪಾದರು ನಿಜವಾಗಿಯೂ ಜಗದೇಕಗುರುಗಳಾಗಿರುತ್ತಾರೆ. ಶ್ರುತಿ ಸ್ಮೃತೀತಿಹಾಸಪುರಾಣರೂಪವಾದ ಪ್ರಮಾಣಗಳಿಗನುಸಾರವಾಗಿ, ಯುಕ್ತಿ ಯುಕ್ತವಾಗಿಯೂ ವಿದ್ವದನುಭವಸಿದ್ಧವಾಗಿಯೂ ಪ್ರಸ್ಥಾನತ್ರಯ ಭಾಷ್ಯಗಳನ್ನು ವಿರಚಿಸಿ ಲೋಕಾನುಗ್ರಹವನ್ನು ಮಾಡಿದ್ದಾರೆ.

ಆದರೆ, ಶ್ರೀಪರಮೇಶ್ವರನ ಅನುಗ್ರಹಕ್ಕೆ ಪಾತ್ರರಾಗಿ ಶಾಸ್ತ್ರಪರಿಶ್ರಮವುಳ್ಳವರಿಗೆ ಮಾತ್ರವೇ ಈ ಪ್ರಸ್ಥಾನತ್ರಯವು ಉಪಯುಕ್ತವಾಗಿರುತ್ತದೆ. ಇಂಥವರು ಲೋಕದಲ್ಲಿ ಅತಿವಿರಳರು. ಇತರ ಸಾಮಾನ್ಯಜನಗಳ ಪ್ರಯೋಜನಕ್ಕಾಗಿ ಶ್ರೀಭಗವತ್ಪಾದರು ಅನೇಕ ಪ್ರಕರಣಗ್ರಂಥಗಳನ್ನೂ, ದೇವತಾಸ್ತೋತ್ರಗಳನ್ನೂ ರಚಿಸಿ ಅನುಗ್ರಹಿಸಿದ್ದಾರೆ. ಪ್ರಕರಣಗ್ರಂಥಗಳ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳುವುದಕ್ಕೂ, ಅದರಲ್ಲಿ ಹೇಳಿರುವ ಸಾಧನೆಗಳನ್ನು ಅನುಸರಿಸುವುದಕ್ಕೂ, ಅತ್ಯಂತ ಅವಶ್ಯವಾಗಿರುವ ದೇವತಾನುಗ್ರಹವನ್ನು ಸಂಪಾದಿಸಿಕೊಳ್ಳುವುದಕ್ಕೆ ದೇವತಾಸ್ತೋತ್ರಗಳು ವಿಶೇಷವಾಗಿ ಪ್ರಯೋಜನಕರಗಳಾಗಿವೆ. ಸ್ವತಃಸಿದ್ಧರೇ ಆಗಿರುವ ಶ್ರೀಭಗವತ್ಪಾದರಿಗೆ ದೇವತಾಸ್ತುತಿಗಳಿಂದ ಆಗಬೇಕಾದ ಪ್ರಯೋಜನವೇನೂ ಇಲ್ಲವಾದರೂ,—"ದೇವತೆಗಳ ಅನುಗ್ರಹವನ್ನು ಪಡೆಯಬೇಕಾದರೆ ಅವರನ್ನು ಸ್ತುತಿಮಾಡುವುದು ಹೇಗೆ ?" —ಎಂಬುದನ್ನು ಜನರಿಗೆ ತಿಳಿಯಿಸಿಕೊಡುವುದಕ್ಕಾಗಿಯೇ ಸ್ತೋತ್ರಗಳನ್ನು ಇವರು ರಚಿಸಿಕೊಟ್ಟಿರುತ್ತಾರೆ. ಲೋಕದಲ್ಲಿ ಅವರವರ ಸಂಸ್ಕಾರಗಳಿಗೆ

SRI Vidyabharathi Book Centre, Sringeri

CC-O. In Public Domain. Digitized by eGangotri

ಅನುಸಾರವಾಗಿ ಒಬ್ಬೊಬ್ಬರಿಗೆ ಒಂದೊಂದು ದೇವತೆಯಲ್ಲಿ ವಿಶೇಷವಾದ ಭಕ್ತಿಯು ಇರುವುದು ಸಹಜವು; ಇದಕ್ಕನುಗುಣವಾಗಿ, ಎಲ್ಲರಿಗೂ ಉಪಯೋಗವಾಗುವಂತೆ ಶ್ರೀಭಗವತ್ಪಾದರು ಎಲ್ಲ ದೇವತೆಗಳ ವಿಷಯದಲ್ಲಿಯೂ ಸ್ತೋತ್ರಗಳನ್ನು ರಚಿಸಿಕೊಟ್ಟಿರುತ್ತಾರೆ. ಇದರಂತೆ ತಮ್ಮ ತಮ್ಮ ಇಷ್ಟದೇವತೆಯನ್ನು ಸ್ತುತಿಸಿ, ಸೇವಿಸಿ, ಎಲ್ಲರೂ ಶ್ರೇಯೋಭಾಗಿಗಳಾಗಬಹುದು.

"ಈ ದೇವತೆಗಳು ಯಾರು?; ಇವರ ತತ್ತ್ವವೇನು?"—ಎಂಬುದನ್ನು ತಿಳಿಯುವುದು ಆವಶ್ಯಕವಾಗಿದೆ. ಸಚ್ಚಿದಾನಂದಸ್ವರೂಪನಾದ ಪರಮಾತ್ಮನು ಅದ್ವಿತೀಯನಾಗಿದ್ದಾನೆ. ಇದೇ ಪಾರಮಾರ್ಥಿಕತತ್ತ್ವವು. ಅನಾದಿಯೂ, ಅನಿರ್ವಚನೀಯವೂ, ಸತ್ತ್ವರಜಸ್ತಮೋಗುಣರೂಪವೂ ಆಗಿರುವ ಮಾಯೆಯ ಸಂಬಂಧದಿಂದ ಅದ್ವಿತೀಯನಾದ ಪರಮಾತ್ಮನು ಪರಮೇಶ್ವರನೆನಿಸುವನು. ಗುಣಗಳ ವಿಭಾಗವಿಲ್ಲದ ಅಖಂಡವಾದ ಮಾಯೆಯ ಉಪಾಧಿಯನ್ನುಳ್ಳ ಈ ಪರಮೇಶ್ವರನು ಒಬ್ಬನೂ, ಸರ್ವಜ್ಞನೂ, ಸರ್ವಶಕ್ತನೂ, ಸರ್ವವ್ಯಾಪಕನೂ ಆಗಿರುತ್ತಾನೆ. ಅದ್ವಿತೀಯನಾದ ಮಾಯಾಸಂಬಂಧವಿಲ್ಲದ ಪರಮಾತ್ಮನನ್ನು ನಿರ್ಗುಣ ಪರಬ್ರಹ್ಮವೆಂದೂ, ಮಾಯೆಯ ಉಪಾಧಿಯನ್ನುಳ್ಳ ಪರಮೇಶ್ವರನನ್ನು ಸಗುಣಬ್ರಹ್ಮವೆಂದೂ ಹೇಳುವರು. ಸಗುಣಬ್ರಹ್ಮರೂಪನಾದ ಪರಮೇಶ್ವರನು ಜಗತ್ತಿನಲ್ಲಿ ಸರ್ವೋತ್ಕೃಷ್ಟನೆನಿಸಿರುವನು. ಇವನೇ ಸಕಲಜಗತ್ತಿಗೂ ಮೂಲ ಕಾರಣನು? ನಿರ್ಗುಣಸ್ವರೂಪವು ಅದ್ವಿತೀಯವಾದ್ದರಿಂದ ಇದರಲ್ಲಿ ಉತ್ಕೃಷ್ಟ–ನಿಕೃಷ್ಟ ಎಂಬ ವಿಭಾಗವೇ ಇರುವುದಿಲ್ಲ.

ಮಾಯೆಯ ಸತ್ತ್ವ–ಮುಂತಾದ ಗುಣಗಳಲ್ಲಿ ಒಂದೊಂದು ಗುಣವು ಪ್ರಧಾನವಾಗಲಾಗಿ, ರಜಃಪ್ರಧಾನವಾದ ಮಾಯೆಯ ಉಪಾಧಿಯಿಂದ ಪರಮೇಶ್ವರನು ಬ್ರಹ್ಮನೆನಿಸಿ ಜಗತ್ತಿನ ಸೃಷ್ಟಿಯನ್ನು ಮಾಡುವನು; ಸತ್ತ್ವಗುಣಪ್ರಧಾನವಾದ ಮಾಯೆಯ ಉಪಾಧಿಯಿಂದ ವಿಷ್ಣುವೆನಿಸಿ ಜಗತ್ತಿನ ಸ್ಥಿತಿಯನ್ನೂ, ತಮೋಗುಣಪ್ರಧಾನ–ಮಾಯಾ–ಉಪಾಧಿಯಿಂದ ಮಹೇಶ್ವರನಾಗಿ ಪ್ರಳಯವನ್ನೂ ಮಾಡುತ್ತಾನೆ. ಹೀಗೆ ಮಾಯೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಗುಣಗಳ ಉಪಾಧಿಯಿಂದ ಬ್ರಹ್ಮಾ, ವಿಷ್ಣು, ಮಹೇಶ್ವರರೆಂಬ ತ್ರಿಮೂರ್ತಿಗಳು ಆಗಿರುತ್ತಾರೆ. ಇವರು ಗುಣಮೂರ್ತಿಗಳು. ಇವರುಗಳಿಗೆ ಮೂಲರೂಪನಾಗಿರುವ ಶ್ರೀಪರಮೇಶ್ವರನು ಸರ್ವೇಶ್ವರನಾಗಿದ್ದಾನೆ.

ಇದರಂತೆಯೇ, ಪ್ರಾಣಿಗಳ ಪುಣ್ಯಪಾಪರೂಪಗಳಾದ ಕರ್ಮಗಳಿಗೆ ಅಧೀನವಾಗಿ ಈ ಮಾಯೆಯು ಅನೇಕವಿಧವಾಗುತ್ತದೆ; ಈ ಮಾಯಾ ರೂಪಗಳ ಉಪಾಧಿಯಿಂದ ದೇವತೆಗಳು, ಮನುಷ್ಯರು, ಪಶು, ಪಕ್ಷಿ, ಕ್ರಿಮಿ, ಕೀಟಗಳು—ಮುಂತಾದ ಹಲವಾರು ವಿಧಗಳಾದ ಪ್ರಾಣಿಗಳು ಆಗಿರುತ್ತಾರೆ. ಮಾಯೆಯ ಈ ರೂಪಗಳು ಅನೇಕ ಪ್ರಕಾರಗಳಾಗಿದ್ದರೂ, ಇವುಗಳಲ್ಲಿ ಇರುವ ಪರಬ್ರಹ್ಮಸ್ವರೂಪವು ಯಾವ ವ್ಯತ್ಯಾಸವನ್ನೂ ಹೊಂದದೆ, ಒಂದೇ ವಿಧವಾಗಿ, ಎಂದರೆ, ತನ್ನ ನಿತ್ಯಮುಕ್ತಸಚ್ಚಿದಾನಂದ ರೂಪದಲ್ಲಿಯೇ ಯಾವಾಗಲೂ ಇರುತ್ತದೆ.

ಹೀಗೆ ಎಲ್ಲ ಪ್ರಾಣಿಗಳೂ ವಸ್ತುತಃ ನಿತ್ಯಮುಕ್ತಪರಬ್ರಹ್ಮಸ್ವರೂಪರೇ ಆಗಿದ್ದರೂ, ಈ ಅನುಭವವು ಯಾರಿಗೂ ಈಗ ಇಲ್ಲವಾಗಿದೆ. ಇದಕ್ಕೆ ಬದಲಾಗಿ, ನಾನಾವಿಧಗಳಾದ ಜನ್ಮ, ಜರಾ, ರೋಗ, ಮರಣ, ಸುಖ, ದುಃಖ—ಇವೇ ಮೊದಲಾದವುಗಳೇ ಎಲ್ಲರಿಗೂ ನಿತ್ಯವೂ ಅನುಭವಸಿದ್ಧವಾಗಿರುತ್ತವೆ. ಇವುಗಳನ್ನು ಕಳೆದುಕೊಂಡು ನಮ್ಮ ನಿಜವಾದ ಸ್ಥಿತಿಯನ್ನು ಪಡೆಯುವುದೇ ಪುರುಷಾರ್ಥವು. ಇದು ಪುರುಷನಿಂದಲೇ ಸಾಧ್ಯವಾಗಿರುವುದರಿಂದ ಇದನ್ನು ಪುರುಷಾರ್ಥವೆನ್ನುತ್ತಾರೆ. ಪುರುಷನಾಗಿ ಜನಿಸಿರುವವನು ಇದನ್ನು ಸಾಧಿಸಿಕೊಂಡರೇನೇ ಅವನು ಪುರುಷನಾಗಿ ಜನಿಸಿದುದು ಸಾರ್ಥಕವೆನಿಸುವುದು.

ಮೇಲೆ ಹೇಳಿದಂತೆ ಮೂಲರೂಪನಾದ ಸಗುಣನಾದ ಶ್ರೀಪರಮೇಶ್ವರನು ಮಾಯೋಪಾಧಿಕರೂಪನು. ಎಂದರೆ, ಮಾಯೆ ಮತ್ತು ನಿರ್ಗುಣ ಬ್ರಹ್ಮಚೈತನ್ಯ—ಇವೆರಡರ ಮಿಶ್ರವಾದ ರೂಪನಾಗಿದ್ದಾನೆ. ಇಲ್ಲಿ ಮಾಯೆಯನ್ನು ಬಿಟ್ಟು ಚೈತನ್ಯವಿಲ್ಲ, ಚೈತನ್ಯವನ್ನು ಬಿಟ್ಟು ಮಾಯೆಯಿಲ್ಲ. ಈ ಮಾಯೆಯೇ ಪ್ರಕೃತಿಯೆಂದೂ ಹೇಳಲ್ಪಡುತ್ತದೆ.

CC-O. Sri Vijayendra Saraswathi Book Centre, Sringeri

CC-O. In Public Domain. Digitized by eGangotri

ಆದ್ದರಿಂದ ದೇವಿಯನ್ನು ಬಿಟ್ಟು ಈಶ್ವರನಿಲ್ಲ, ಈಶ್ವರನನ್ನು ಬಿಟ್ಟು ದೇವಿಯಿಲ್ಲ. ಈ ಕಾರಣದಿಂದಲೇ ಶ್ರೀಪರಮೇಶ್ವರನನ್ನು ಅರ್ಧನಾರೀಶ್ವರನೆಂದು ವರ್ಣಿಸುತ್ತಾರೆ. ಇದರಲ್ಲಿ ಮಾಯೆಯ ಪ್ರಾಧಾನ್ಯವನ್ನು ಇಟ್ಟುಕೊಂಡು ದೇವಿಯೆಂದೂ, ಚೈತನ್ಯದ ಪ್ರಾಧಾನ್ಯವನ್ನು ಇಟ್ಟುಕೊಂಡು ಪರಮೇಶ್ವರನೆಂದೂ ಶಾಸ್ತ್ರಗಳಲ್ಲಿ ವ್ಯವಹರಿಸುತ್ತಾರೆ. ಆದ್ದರಿಂದ ದೇವಿಯೂ ಈಶ್ವರನೂ ಒಂದೇ ವಸ್ತುವೇ ಹೊರತು, ಬೇರೆ ಬೇರೆ ವಸ್ತುಗಳಲ್ಲ. ಈಶ್ವರನನ್ನು ಆರಾಧಿಸಿದರೂ, ದೇವಿಯನ್ನು ಆರಾಧಿಸಿದರೂ, ಎರಡು ವಿಧದಿಂದಲೂ ಸರ್ವೋತ್ಕೃಷ್ಟನಾದ ಶ್ರೀಪರಮೇಶ್ವರನನ್ನೇ ಆರಾಧಿಸಿದಂತಾಗುವುದು. ಇದರಂತೆಯೇ ಎಲ್ಲ ದೇವತೆಗಳನ್ನೂ ಸಹ ಸಗುಣಸ್ವರೂಪರಾಗಿ, ಮಾಯಾಶಕ್ತಿ ಮತ್ತು ಪರಮಾತ್ಮಚೈತನ್ಯಗಳ ಮಿಳಿತರೂಪಗಳಾಗಿದ್ದಾರೆಂದು ತಿಳಿಯಬೇಕು. ಶ್ರೀಪರಮೇಶ್ವರನ ಆರಾಧನೆಯು ಶ್ರೇಷ್ಠವಾದುದು.

ಪರಬ್ರಹ್ಮವಸ್ತುವು ವಸ್ತುತಃ ನಿರ್ಗುಣವಾದುದು. ಸ್ತೋತ್ರವೆಂದರೆ ಗುಣವುಳ್ಳ ವಸ್ತುವಿನಲ್ಲಿರುವ ಗುಣಗಳನ್ನು ಹೊಗಳುವಿಕೆಯು. ಆದ್ದರಿಂದ ನಿರ್ಗುಣವಾದ ಪರಬ್ರಹ್ಮವಸ್ತುವು ಸ್ತುತಿಗೆ ಬರುವುದಿಲ್ಲ. ಸ್ತೋತ್ರಗಳೆಲ್ಲ ಸಗುಣನಾದ ಶ್ರೀಪರಮೇಶ್ವರನನ್ನೂ ಮತ್ತು ಇತರ ದೇವತೆಗಳನ್ನೂ ಕುರಿತವೇ ಆಗುತ್ತವೆ. ನಿರ್ಗುಣಸ್ವರೂಪದ ಧ್ಯಾನದಿಂದಲೇ ಪರಮಾತ್ಮ ಸಾಕ್ಷಾತ್ಕಾರವು ಲಭಿಸಿ ಶ್ರೇಯಸ್ಸು ಸಿದ್ಧಿಸಬೇಕಾಗಿದೆ. ಆದರೂ ನಿರ್ಗುಣಸ್ವರೂಪವನ್ನು ಧ್ಯಾನಮಾಡುವ ಸಾಮರ್ಥ್ಯವು ಎಲ್ಲರಿಗೂ ಮೊದಲೇ ಇರುವುದಿಲ್ಲ. ಇಷ್ಟವಾದ ಸಗುಣಸ್ವರೂಪವನ್ನು ಪೂಜೆ, ಸ್ತೋತ್ರ, ಭಜನೆ—ಮುಂತಾದ ರೀತಿಗಳಿಂದ ಸೇವಿಸಿ, ದೇವತಾನುಗ್ರಹವನ್ನು ಪಡೆದರೆ, ಅನಂತರ ಕ್ರಮವಾಗಿ ನಿರ್ಗುಣಧ್ಯಾನಕ್ಕೆ ಯೋಗ್ಯತೆಯು ಉಂಟಾಗುವುದು. ಇದಕ್ಕಾಗಿಯೇ ನಾನಾ ದೇವತೆಗಳ ವ್ರತ, ಪೂಜೆ, ಕ್ಷೇತ್ರಯಾತ್ರೆ, ಪುರಾಣಶ್ರವಣ—ಮುಂತಾದ ಸೇವೆಗಳು ಶಾಸ್ತ್ರಗಳಲ್ಲಿ ವಿಹಿತವಾಗಿವೆ. ಇವುಗಳನ್ನು ಆಯಾ ದೇಶಕಾಲಗಳಲ್ಲಿ ನಿಯಮಪೂರ್ವಕವಾಗಿ ಆಚರಿಸುವುದು ಶ್ರೇಯಸ್ಕರವು.

ಪ್ರಕೃತದ ಈ ಆನಂದಲಹರೀಸ್ತೋತ್ರವು ಶ್ರೀಪರಮೇಶ್ವರನ

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಧಾಂಗಿಯಾಗಿ ಪರಾದೇವತೆಯಾಗಿರುವ ಶ್ರೀಭವಾನೀದೇವಿಯ ಸ್ತುತಿಯಾಗಿರುತ್ತದೆ. ಶ್ರೀಭಗವತ್ಪಾದರವರ ವಚನಗಳು ಅಮೋಘಗಳೂ, ಶಬ್ದಸೌಂದರ್ಯ, ಅರ್ಥಗಾಂಭೀರ್ಯಗಳಿಂದ ಶೋಭಿತಗಳೂ ಆಗಿ, ಕೇಳುವವರಿಗೂ ವಿಚಾರಪರರಿಗೂ ಮನೋಹರಗಳೂ ಶ್ರೇಯಸ್ಕರಗಳೂ ಆಗಿ ಬೆಳಗುತ್ತಿವೆ.

ಶ್ರೀಭಗವತ್ಪಾದರ ಈ ದೇವೀಸ್ತೋತ್ರದ ತಾತ್ಪರ್ಯವನ್ನು ತಿಳಿಯುವವರ ಉಪಯೋಗಕ್ಕಾಗಿ ಇದನ್ನು ಕನ್ನಡನುಡಿಯಲ್ಲಿ ಯಥಾಮತಿ ವಿವರಿಸಿದ್ದೇನೆ.

ಶೃಂಗಗಿರಿ ಕವಿ ನರಸಿಂಹಶರ್ಮಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಜಗದಂಬಿಕಾಯೈ ನಮಃ

ಶ್ರೀಮಚ್ಛಂಕರಭಗವತ್ಪಾದವಿರಚಿತಾ

ಆನಂದಲಹರೀ

ಭವಾನೀಸ್ತುತಿಃ

ಭವಾನಿ ! ಸ್ತೋತುಂ ತ್ವಾಂ ಪ್ರಭವತಿ ಚತುರ್ಭಿರ್ನ ವದನೈಃ
ಪ್ರಜಾನಾಮೀಶಾನಃ ತ್ರಿಪುರಮಥನಃ ಪಂಚಭಿರಪಿ ।
ನ ಷಡ್ಭಿಃ ಸೇನಾನೀಃ ದಶಶತಮುಖೈರಪ್ಯಹಿಪತಿಃ
ತದಾನ್ಯೇಷಾ ಕೇಷಾಂ ಕಥಯ ಕಥಮಸ್ಮಿನ್ನವಸರಃ ॥೧॥

ಹೇ **ಭವಾನಿ**=ಸಮಸ್ತಲೋಕಕ್ಕೂ ಏಕಾಧಿಪತಿಯಾಗಿರುವ ಶ್ರೀ ಪರಮೇಶ್ವರನ ಪ್ರಿಯೆಯಾಗಿರುವ ಶ್ರೀಪಾರ್ವತೀದೇವಿಯೇ ; **ತ್ವಾಂ**= ನಿನ್ನನ್ನು–ಎಂದರೆ, ನಿನ್ನ ರೂಪವನ್ನಾಗಲಿ, ಮಹಿಮೆಯನ್ನಾಗಲಿ ; **ಸ್ತೋತುಂ**=ಹೊಗಳಲು, ಪೂರ್ಣವಾಗಿ ವರ್ಣಿಸಲು ; **ಚತುರ್ಭಿಃ ವದನೈಃ**=ನಾಲ್ಕು ಮುಖಗಳನ್ನುಳ್ಳ ; **ಪ್ರಜಾನಾಂ ಈಶಾನಃ**= ಎಲ್ಲ ಪ್ರಜೆಗಳನ್ನೂ ಸೃಷ್ಟಿಮಾಡುತ್ತ, ಅವರಿಗೆ ಅಧಿಪತಿಯಾಗಿ, ಸರ್ವಜ್ಞನೂ ಸರ್ವಶಕ್ತನೂ ಆಗಿರುವ ಬ್ರಹ್ಮದೇವನೂ ; **ನ ಪ್ರಭವತಿ**= ಸಮರ್ಥನಾಗಿಲ್ಲ. **ಪಂಚಭಿಃ (ವದನೈಃ)**=ಐದು ಮುಖಗಳನ್ನುಳ್ಳ ; **ತ್ರಿಪುರಮಥನಃ ಅಪಿ**=ತ್ರಿಪುರಸಂಹಾರವನ್ನು ಮಾಡಿರುವ ಮಹಾ ಬಲಪರಾಕ್ರಮಿಯಾದ ಶಿವನೂ ಸಹ ; **(ನ ಪ್ರಭವತಿ)**. **ಷಡ್ಭಿಃ (ವದನೈಃ)**=ಆರು ಮುಖಗಳನ್ನುಳ್ಳ ; **ಸೇನಾನೀಃ**=ದೇವತೆಗಳ ಸೇನಾಧಿಪತಿಯಾಗಿರುವ ಷಣ್ಮುಖಸ್ವಾಮಿಯೂ ; **(ನ ಪ್ರಭವತಿ)**.

Sri Vidyabharathi Book Centre, Sringeri

CC-O. In Public Domain. Digitized by eGangotri

ದಶಶತಮುಖೈಃ=ಹತ್ತು ನೂರು–ಎಂದರೆ ಸಹಸ್ರ ಮುಖಿಗಳನ್ನುಳ್ಳ; **ಅಹಿಪತಿಃ ಅಪಿ**=ಆದಿಶೇಷನೂ ಸಹ; **(ನ ಪ್ರಭವತಿ)**. **ತದಾ**=ಹೀಗೆ, ಒಂದೇ ಕಾಲದಲ್ಲಿ ಅನೇಕಮುಖಿಗಳಿಂದ ನಿನ್ನ ಅನೇಕಮಹಿಮೆಗಳನ್ನು ಹೊಗಳಲು ಅನುಕೂಲವಿರುವ ಆದಿಶೇಷನೇ ಮೊದಲಾದವರೂ ಸಹ ನಿನ್ನ ಮಹಿಮೆಯನ್ನು ಪೂರ್ಣವಾಗಿ ಹೊಗಳಲು ಸಮರ್ಥರಾಗಿಲ್ಲವೆಂದು ನಿಶ್ಚಿತವಾಗಿರುವಾಗ: **ಅನ್ಯೇಷಾಂ ಕೇಷಾಂ**=ಬೇರೆ ಯಾರಿಗೆ ತಾನೆ; **ಅಸ್ಮಿನ್**=ಇದರಲ್ಲಿ–ನಿನ್ನನ್ನು ಹೊಗಳುವುದರಲ್ಲಿ; **ಅವಸರಃ**=ಅವಕಾಶವು; **ಕಥಂ**=ಹೇಗೆ ತಾನೆ ಇದ್ದೀತು? **ಕಥಯ**=ನೀನೇ ಹೇಳು!

ಶ್ರೀಮಹಾದೇವಿಯ ಮಹಿಮೆಯ ಕೀರ್ತನೆಯು, ಶ್ರೇಯಸ್ಸಿಗೆ ಕಾರಣವಾಗಿರುವುದರಿಂದ, ಎಲ್ಲರಿಗೂ ಅತ್ಯವಶ್ಯವಾಗಿದೆ. ಆ ಮಹಿಮೆಯನ್ನು ಸಂಪೂರ್ಣವಾಗಿ ಯಾರಿಂದಲೂ ಹೇಳುವುದು ಸಾಧ್ಯವಿಲ್ಲವೆಂದಮೇಲೆ, ಅವರವರ ಯೋಗ್ಯತೆಗೆ ತಕ್ಕಂತೆ ಅದನ್ನು ಕೀರ್ತನೆಮಾಡುವುದು ದೋಷವಾಗುವುದಿಲ್ಲ. ಆದಕಾರಣ ನಾವೂ ಯಥಾಶಕ್ತಿ ದೇವಿಯನ್ನು ಸ್ತೋತ್ರ ಮಾಡುವುದು ಯುಕ್ತವೇ—ಎಂದು ತಾತ್ಪರ್ಯವು.—೧.

ಪರಮಾತ್ಮನ ಪಾರಮಾರ್ಥಿಕವಾದ ನಿರ್ಗುಣಸ್ವರೂಪವು ಮನಸ್ಸಿಗಾಗಲಿ ಮಾತಿಗಾಗಲಿ ನಿಲುಕಲಾರದೆ, ಮನೋವಾಗ್ಗೋಚರವಾಗಿದೆ. ಸಗುಣವಾದ ಶ್ರೀಪರಮೇಶ್ವರನ ಸ್ವರೂಪವೂ ಸಹ, ಅಸಂಖ್ಯಾತವೂ ಅಪಾರವೂ ಆದ ಮಹಿಮೆಯುಳ್ಳದ್ದಾಗಿ, ಮನೋವಾಚಾಮಗೋಚರವು—ಎಂದರೆ, ಪೂರ್ಣವಾಗಿ ತಿಳಿಯಲೂ ಹೇಳಲೂ ಅಶಕ್ಯವಾದುದೇ ಆಗಿದೆ ಇದಲ್ಲದೆ, ಲೋಕದಲ್ಲಿಯೇ ನಮಗೆ ಅನುಭವಕ್ಕೆ ಬರುತ್ತಿದ್ದರೂ ಎಷ್ಟೋ ವಿಷಯಗಳನ್ನು ಶಬ್ದಗಳಿಂದ ಹೇಳುವುದು ಸಾಧ್ಯವಾಗುತ್ತಿಲ್ಲ. ಹೀಗಿರುವಾಗ, ಹೇ ದೇವಿ, ನಿನ್ನನ್ನು ಅಲ್ಪಜ್ಞರಾದ ನಾವು ಏನೆಂದು ವರ್ಣಿಸೋಣ? ಎಂದು ವಿನಯವನ್ನು ತೋರಿಸುತ್ತಾರೆ—

ಘೃತಕ್ಷೀರದ್ರಾಕ್ಷಾಮಧುಮಧುರಿಮಾ ಕೈರಪಿ ಪದೈಃ
Digitized by eGangotri

CC-O. In Public Domain. Digitized by eGangotri

ತಥಾ ತೇ ಸೌಂದರ್ಯಂ ಪರಮಶಿವದೃಙ್ಮಾತ್ರವಿಷಯಃ
ಕಥಂಕಾರಂ ಬ್ರೂಮಃ ಸಕಲನಿಗಮಾಗೋಚರಗುಣೇ ॥ ೨ ॥

ಘೃತಕ್ಷೀರದ್ರಾಕ್ಷಾಮಧುಮಧುರಿಮಾ — ಘೃತ = ಹಸುವಿನ ತುಪ್ಪ ; ಕ್ಷೀರ = ಹಸುವಿನ ಹಾಲು ; ದ್ರಾಕ್ಷಾ = ದ್ರಾಕ್ಷಿಯ ಹಣ್ಣು ; ಮಧು = ಜೇನುತುಪ್ಪ ; ಇವುಗಳ ಮಧುರಿಮಾ = ಮಾಧುರ್ಯದ ರುಚಿಯು ; ರಸನಾಮಾತ್ರವಿಷಯಃ = ರಸನೇಂದ್ರಿಯಕ್ಕೆ ಮಾತ್ರವೇ ಗೋಚರವಾದುದು. ಘೃತಕ್ಕಿಂತಲೂ ಹಾಲು, ಹಾಲಿಗಿಂತಲೂ ದ್ರಾಕ್ಷಿ, ಅದಕ್ಕಿಂತಲೂ ಜೇನು ಹೆಚ್ಚು ಹೆಚ್ಚು ರುಚಿಯಾಗಿರುವುದು ಎಲ್ಲರಿಗೂ ಅನುಭವಸಿದ್ಧವೇ ಆಗಿರುವುದಾದರೂ ; ವಿಶಿಷ್ಯ = ಸ್ಪಷ್ಟವಾಗಿ ಎಂದರೆ, "ಹಾಲಿನ ರುಚಿ ಇಷ್ಟು, ಜೇನಿನ ರುಚಿ ಇಂಥದ್ದು "—ಎಂದು ಬೇರೆ ಬೇರೆಯಾಗಿ ; ಕೈಃಪದ್ಯೈಃಅಪಿ = ಎಂಥ ಮತ್ತು ಎಷ್ಟು ಶಬ್ದಗಳಿಂದಲೂ ; ಅನಾಖ್ಯೇಯಃ ಭವತಿ — ಆಖ್ಯೇಯಃ ನ ಭವತಿ = ಹೇಳಲು ಬರುವುದಿಲ್ಲ.

ತಥಾ = ಹಾಗೆಯೇ ; ತೇ = ನಿನ್ನ ; ಸೌಂದರ್ಯಂ = ಸೌಂದರ್ಯವು ; ಹೇ ಸಕಲನಿಗಮಾಗೋಚರಗುಣೇ — ಸಕಲ = ನಿನ್ನ ವಿಷಯದಲ್ಲಿ ಪ್ರಮಾಣವಾಗಿರುವ ಎಲ್ಲ ; ನಿಗಮ = ಶಾಸ್ತ್ರಗಳಿಗೂ ; ಅಗೋಚರ = ಗೋಚರಗಳಾಗದ ; ಗುಣೇ = ಅನಂತಕಲ್ಯಾಣಗುಣಗಣಪರಿಪೂರ್ಣಳಾಗಿರುವ ಮಹಾದೇವಿಯೇ, ಪರಮಶಿವದೃಙ್ಮಾತ್ರವಿಷಯಃ — ಪರಮಶಿವ = ಶ್ರೀಪರಮೇಶ್ವರನ ; ದೃಙ್ಮಾತ್ರ = ದೃಷ್ಟಿಗೆ ಮಾತ್ರವೇ ; ವಿಷಯಃ = ತಿಳಿದುಬರುವಂಥದ್ದು ; ಇದನ್ನು ಕಥಂಕಾರಂ = ಯಾವ ರೀತಿಯಿಂದ ತಾನೆ ; ಬ್ರೂಮಃ = ನಾವು ಹೇಳಿಯೇವು?

ಘೃತಕ್ಷೀರಾದಿಗಳ ರುಚಿಯು ಎಲ್ಲರಿಗೂ ರಸನೇಂದ್ರಿಯಕ್ಕೆ ಗೋಚರವಾಗಿ ಅನುಭವಕ್ಕೆ ಬರುತ್ತಿದ್ದರೂ, ಅದನ್ನು ಹೇಳುವುದಕ್ಕೆ ಮಾತ್ರ ಸಾಧ್ಯವಾಗುತ್ತಿಲ್ಲ. ಹೀಗಿರುವಾಗ ನಮ್ಮ ಅನುಭವಕ್ಕೇ ಬರದ ನಿನ್ನ ಮಹಿಮೆಯನ್ನು ಪಾಮರರಾದ ನಾವು ತಿಳಿಯುವುದೆಂತು, ಹೊಗಳುವುದೆಂತು ? —ಎಂದು. ಇದರಿಂದ ಅಪಾರಮಹಿಮಳಾಗಿದ್ದಾಳೆಂದು ಶ್ರೀಮಹಾದೇವಿಯನ್ನು ಸ್ತುತಿಸಿದ್ದಾರೆ. — ೨.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನ ಮಹಿಮೆಯಲ್ಲಿ ಶಾಸ್ತ್ರವೊಂದೇ ಪ್ರಮಾಣವಾಗಿರುತ್ತದೆ. ನಿನ್ನ ಮಹಿಮೆಯು ಶಬ್ದಕ್ಕೆ ವಿಷಯವಲ್ಲವಾದರೂ, ಶಾಸ್ತ್ರವು ನಿನ್ನ ಮಹಿಮೆಯನ್ನು ಹೇಗೋ ವರ್ಣಿಸಿರುತ್ತದೆ. ಅದನ್ನು ಅನುಸರಿಸಿ, ನಮ್ಮ ಬುದ್ಧಿ ಶಕ್ತಿಯನ್ನೂ ಉಪಯೋಗಿಸಿಕೊಂಡು ನಿನ್ನ ಸೌಂದರ್ಯವನ್ನು ಹೊಗಳಬೇಕೆಂದು ನಮಗೆ ವಿಶೇಷವಾದ ಉತ್ಸಾಹವು ಉಂಟಾಗಿದೆ. ಶ್ರೀಲಲಿತಾ ಸಹಸ್ರನಾಮಸ್ತೋತ್ರದಲ್ಲಿ—"ತಾಂಬೂಲಪೂರಿತಮುಖೀ, ಅರುಣಾರುಣ ಕೌಸುಂಭವಸ್ತ್ರಭಾಸ್ವತ್ಕಟೀತಟೀ, ಕಸ್ತೂರೀ ತಿಲಕಾಂಚಿತಾ" —ಎಂದು ಮುಂತಾಗಿ ನಿನ್ನ ವರ್ಣನೆಗಳು ತಿಳಿದುಬರುತ್ತವೆ. ಇದನ್ನನುಸರಿಸಿ ನಾವೂ ನಮ್ಮ ಅಲ್ಪ ಮಾತುಗಳಿಂದ ನಿನ್ನ ರೂಪವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ವರ್ಣಿಸುತ್ತೇವೆ—ಎಂಬ ಅಭಿಪ್ರಾಯದಿಂದ ವರ್ಣಿಸುತ್ತಾರೆ—

ಮುಖೇ ತೇ ತಾಂಬೂಲಂ ನಯನಯುಗಲೇ ಕಜ್ಜಲಕಲಾ
ಲಲಾಟೇ ಕಾಶ್ಮೀರಂ ವಿಲಸತಿ ಗಲೇ ಮೌಕ್ತಿಕಲತಾ ।
ಸ್ಫುರತ್ಕಾಂಚೀ ಶಾಟೀ ಪೃಥುಕಟಿತಟೇ ಹಾಟಕಮಯೀ
ಭಜಾಮಸ್ತ್ವಾಂ ಗೌರೀಂ ನಗಪತಿಕಿಶೋರೀಮವಿರತಂ ॥ ೩ ॥

ಹೇ ದೇವಿ, ತೇ =ನಿನ್ನ ; ಮುಖೇ =ಬಾಯಿಯಲ್ಲಿ ; ತಾಂಬೂಲಂ= ಏಲಾ, ಲವಂಗ, ಕರ್ಪೂರಾದಿಗಳಿಂದ ಕೂಡಿ ಸುಮನೋಹರವಾಗಿರುವ ತಾಂಬೂಲವು ; ವಿಲಸತಿ = ಶೋಭಿಸುತ್ತಿದೆ ; ನಯನಯುಗಲೇ = ಅರಳಿದ ಕಮಲದಂತೆ ಬೆಳಗುತ್ತಿರುವ ನಿನ್ನ ಎರಡು ಕಣ್ಣುಗಳಲ್ಲಿಯೂ ; ಕಜ್ಜಲಕಲಾ = ಕಾಡಿಗೆಯ ಕಪ್ಪು ; (ವಿಲಸತಿ): ಲಲಾಟೇ = ಅರ್ಧಚಂದ್ರಾಕಾರವಾಗಿ ವಿಶಾಲವಾಗಿರುವ ಹಣೆಯಲ್ಲಿ ; ಕಾಶ್ಮೀರಂ = ಸುಪ್ರಸಿದ್ಧವೂ ಶ್ರೇಷ್ಠವೂ ಆದ ಕಾಶ್ಮೀರದ ಕುಂಕುಮ ಕೇಸರವು ; (ವಿಲಸತಿ): ಗಲೇ = ಶಂಖದಂತೆ ರಮ್ಯವಾಗಿರುವ ಕಂಠದಲ್ಲಿ, ಮೌಕ್ತಿಕಲತಾ = ಆಣಿಮುತ್ತುಗಳ ಹಾರವು ; (ವಿಲಸತಿ) ; ಪೃಥುಕಟಿತಟೇ = ವಿಶಾಲವಾದ ನಡುವಿನಲ್ಲಿ ; ಸ್ಫುರತ್ಕಾಂಚೀ = ಹೊಳೆಯುತ್ತಿರುವ ಒಡ್ಯಾಣವನ್ನುಳ್ಳ ; ಹಾಟಕಮಯೀ = ಸುವರ್ಣಮಯವಾದ ; ಶಾಟೀ = ಅನುಷ್ಠಾನಾಹ ದಿವ್ಯಾಂಬರವು ; (ವಿಲಸತಿ) ;

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ದಿವ್ಯಾಲಂಕಾರಗಳಿಂದ ಲೋಕವನ್ನು ಬೆಳಗುತ್ತಿರುವ : **ನಗಪತಿ ಕಿಶೋರೀಂ**—ನಗಪತಿ = ಪರ್ವತರಾಜನಾದ ಶ್ರೀಹಿಮವಂತನ ; **ಕಿಶೋರೀಂ** = ಮುದ್ದಿನ ಮಗಳಾದ ; **ಗೌರೀಂ** = ಚಿನ್ನದ ಬಣ್ಣದಿಂದ ಶೋಭಿಸುತ್ತ ಶ್ರೀಸ್ವರ್ಣಗೌರೀದೇವಿಯೆಂದು ಪ್ರಸಿದ್ಧಳಾಗಿರುವ ; **ತ್ವಾಂ** = ನಿನ್ನನ್ನು ; **ಭಜಾಮಃ** = ಸೇವಿಸುತ್ತೇವೆ—ಶರಣು ಹೊಂದುತ್ತೇವೆ. ನಮ್ಮಲ್ಲಿ ದಯೆಯುಳ್ಳವಳಾಗಿ ನಮ್ಮನ್ನು ಅನುಗ್ರಹಿಸಿ ಉದ್ಧಾರ ಮಾಡು—ಸಿ.

ವಿರಾಜನ್ಮಂದಾರದ್ರುಮಕುಸುಮಹಾರಸ್ತನತಟೀ
ನದದ್ವೀಣಾನಾದಶ್ರವಣವಿಲಸತ್ಕುಂಡಲಗುಣಾ ।
ನತಾಂಗೀ ಮಾತಂಗೀ ರುಚಿರಗತಿಭಂಗೀ ಭಗವತೀ
ಸತೀ ಶಂಭೋರಂಭೋರುಹಚಟುಲಚಕ್ಷುರ್ವಿಜಯತೇ ॥ ೪ ॥

ವಿರಾಜನ್ಮಂದಾರದ್ರುಮಕುಸುಮಹಾರಸ್ತನತಟೀ— ವಿರಾಜತ್ = ಪ್ರಕಾಶಿಸುತ್ತಿರುವ ; ಮಂದಾರದ್ರುಮಕುಸುಮ = ದೇವಲೋಕದ ಮಂದಾರವೃಕ್ಷಗಳ ಹೂವುಗಳ ; **ಹಾರ** = ಮಾಲೆಗಳಿಂದ ; ಅಲಂಕೃತವಾಗಿರುವ **ಸ್ತನತಟೀ** = ಸ್ತನಗಳೆರಡರ ಪ್ರದೇಶವನ್ನುಳ್ಳವಳಾದ, ವಕ್ಷಸ್ಥಳವುಳ್ಳವಳಾದ ; **ನದದ್ವೀಣಾನಾದಶ್ರವಣವಿಲಸತ್ಕುಂಡಲಗುಣಾ**—ನದತ್ = ಮಧುರವಾದ ಗಾನದ ಧ್ವನಿಯನ್ನು ಉಂಟುಮಾಡುತ್ತಿರುವ ; ವೀಣಾ = ಸರಸ್ವತೀ ದೇವಿಯ ವೀಣೆಯ, **ನಾದ** = ಇಂಪಾದ ಶಬ್ದವನ್ನು ; **ಶ್ರವಣ** = ಕೇಳುತ್ತ ; **ವಿಲಸತ್** = ಅದನ್ನು ಕೇಳಿದ ಆನಂದದಿಂದ ಚಲಿಸುತ್ತಿರುವ ; ಕರ್ಣಗಳಲ್ಲಿರುವ **ಕುಂಡಲಗುಣಾ** = ಕರ್ಣಾಭರಣಗಳಿಂದ ಸುಂದರವಾದ ; **ನತಾಂಗೀ**— ರಮ್ಯಗಳಾದ ಪಯೋಧರಗಳ ಭಾರದಿಂದ ಸ್ವಲ್ಪ ಬಾಗಿರುವ ದೇಹವುಳ್ಳವಳಾದ ; **ಮಾತಂಗೀ** = ಸೇವೆಯಿಂದ ಪ್ರಸನ್ನಳಾಗಿ ಮಾತಂಗಮುನಿಗಳಿಗೆ ವರಕುವರಿಯಾಗಿ ಅವತರಿಸಿ ಮಾತಂಗಿಯೆಂದು ಪ್ರಸಿದ್ಧಳಾದ. **ರುಚಿರಗತಿಭಂಗೀ** = ಮನೋಹರಗಳಾದ ನಡಿಗೆಗಳ ವಿಲಾಸವುಳ್ಳವಳಾದ : **ಅಂಭೋರುಹಚಟುಲಚಕ್ಷುಃ**—**ಅಂಭೋರುಹ** = ಕಮಲಗಳಂತೆ ; **ಚಟುಲ** = ಮನೋಹರವೂ ಚಂಚಲವೂ ಆದ ; **ಚಕ್ಷುಃ** = ಕಣ್ಣುಗಳುಳ್ಳವಳಾದ ; **ಶಂಭೋಃ ಸತೀ** = ಶ್ರೀಪರಶಿವನ ಅರ್ಧಾಂಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾಗಿ, ಸತೀದೇವಿಯೆಂದು ಪ್ರಸಿದ್ಧಳಾದ; ಭಗವತೀ=ಸಕಲೈಶ್ವರ್ಯ ಸಂಪನ್ನಳಾಗಿ ಸರ್ವಪೂಜ್ಯಳಾದ ಶ್ರೀಪಾರ್ವತೀದೇವಿಯು; ವಿಜಯತೇ= ಸರ್ವ ಮಹತ್ತ್ವಮಳಾಗಿದ್ದಾಳೆ.—ಳಿ.

ನವೀನಾರ್ಕಭ್ರಾಜನ್ಮಣಿಕನಕಭೂಷಾಪರಿಕರೈಃ
ವೃತಾಂಗೀ ಸಾರಂಗೀರುಚಿರನಯನಾಂಗೀಕೃತಶಿವಾ।
ತಡಿತ್ಪೀತಾ ಪೀತಾಂಬರಲಲಿತಮಂಜೀರಸುಭಗಾ
ಮಮಾಪರ್ಣಾ ಪೂರ್ಣಾ ನಿರವಧಿಸುಖೈರಸ್ತು ಸುಮುಖೀ
॥ ೫ ॥

ನವೀನಾರ್ಕಭ್ರಾಜನ್ಮಣಿಕನಕಭೂಷಾಪರಿಕರೈಃ — ನವೀನ = ಆಗತಾನೆ ಉದಯಿಸಿದ; ಅರ್ಕ=ಬಾಲಸೂರ್ಯನಂತೆ; ಭ್ರಾಜತ್=ಹೊಳೆಯುತ್ತಿರುವ; ಮಣಿ=ರತ್ನಗಳಿಂದ ಖಚಿತಗಳಾದ; ಕನಕಭೂಷಾ=ಅಪರಂಜಿ ಚಿನ್ನದ ಆಭರಣಗಳ; ಪರಿಕರೈಃ=ಅನೇಕ ಅಲಂಕಾರಗಳಿಂದ; ವೃತಾಂಗೀ= ಅಲಂಕೃತಗಳಾಗಿರುವ ಅವಯವಗಳನ್ನುಳ್ಳ; ಸಾರಂಗೀರುಚಿರನಯನಾ— ಸಾರಂಗೀ=ಹೆಣ್ಣುಜಿಂಕೆಯಂತೆ; ರುಚಿರ=ಸುಂದರವಾದ; ನಯನಾ= ಕಣ್ಣುಗಳನ್ನುಳ್ಳ; ಅಂಗೀಕೃತಶಿವಾ=ವರಿಸಿದ ಈಶ್ವರನನ್ನುಳ್ಳ—ಕಠಿಣ ತಪಸ್ಸನ್ನಾಚರಿಸಿ ಈಶ್ವರನನ್ನೇ ಪತಿಯನ್ನಾಗಿ ವರಿಸಿದವಳಾದ; ತಡಿತ್ಪೀತಾ= ಮಿಂಚಿನಂತೆ ಹೊಂಬಣ್ಣದಿಂದ ಶೋಭಿಸುತ್ತಿರುವ; ಪೀತಾಂಬರಲಲಿತಮಂಜೀರಸುಭಗಾ ಪೀತಾಂಬರ=ಹಳದಿಬಣ್ಣದ ದಿವ್ಯವಸ್ತ್ರದಿಂದ ಮುಚ್ಚಲ್ಪಟ್ಟಿರುವ; ಲಲಿತ=ಮನೋಹರವಾದ; ಮಂಜೀರ=ಕಾಲಂದಿಗೆಗಳಿಂದ; ಸುಭಗಾ = ಸುಂದರಳಾಗಿರುವ; ನಿರವಧಿಸುಖೈಃ =ಪಾರವಿಲ್ಲದ ಸುಖದಿಂದ–ಅಪರಿಮಿತಾನಂದದಿಂದ; ಪೂರ್ಣಾ =ತುಂಬಿರುವ–ನಿರತಿಶಯಾನಂದಭರಿತಳಾಗಿರುವ; ಅಪರ್ಣಾ =ಶ್ರೀಮದಪರ್ಣಾಂಬಿಕೆಯು; ಮಮ =ನನಗೆ; ಸುಮುಖೀ = ಅನುಗ್ರಹ ಮಾಡುವುದಕ್ಕೆ ಅನುಕೂಲವಾದ ಪ್ರವೃತ್ತಿಯುಳ್ಳವಳು; ಅಸ್ತು = ಆಗಲಿ. ಅಥವಾ—ಸುಮುಖೀ =ಸುಂದರಮುಖವನ್ನುಳ್ಳ; ಅಪರ್ಣಾ = ಅಪರ್ಣಾದೇವಿಯು; ಮಮ = ನನಗೆ; ಅಸ್ತು = ಪರಮೇಷ್ಟಪ್ರದಳಾಗಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪೀತಾಂಬರಲಲಿತಮಂಜೀರಸುಭಗಾ—ಎಂಬ ವಿಶೇಷಣದಿಂದ, ಸ್ತ್ರೀಯರು ಹೆಜ್ಜೆಯ ಪರ್ಯಂತವೂ ವಸ್ತ್ರವನ್ನು ಧರಿಸತಕ್ಕದ್ದೆಂದೂ, ಈಗಿನ ಕಾಲದವರಂತೆ ತೊಡೆಯ ಮೇಲಕ್ಕೆ ಬಟ್ಟೆಯನ್ನು ತೊಡುವುದೂ, ಸೆರಗನ್ನು ಪೂರ್ತಿಯಾಗಿ ಹೊದೆಯದಿರುವುದೂ ಲಜ್ಜಾಸ್ಪದವೆಂದೂ ಸೂಚಿತವಾಗುತ್ತದೆ—ಶಿ.

ಹಿಮಾದ್ರೇಃ ಸಂಭೂತಾ ಸುಲಲಿತಕರೈಃ ಪಲ್ಲವಯುತಾ
ಸುಪುಷ್ಪಾ ಮುಕ್ತಾಭಿರ್ನವಮರಕಲಿತಾ ಚಾಲಕಭರೈಃ ।
ಕೃತಸ್ಥಾಣುಸ್ಥಾನಾ ಕುಚಫಲನತಾ ಸೂಕ್ತಿಸರಸಾ
ರುಜಾಂ ಹಂತ್ರೀ ಗಂತ್ರೀ ವಿಲಸತಿ ಚಿದಾನಂದಲತಿಕಾ ॥ ೬ ॥

ಎಲ್ಲರಿಗೂ ಸಕಲೇಷ್ಟಾರ್ಥಗಳನ್ನೂ ಕರುಣಿಸುವ ಕಲ್ಪಲತೆಯೆಂದು ಶ್ರೀಜಗನ್ಮಾತೆಯನ್ನು ವರ್ಣಿಸುತ್ತಾರೆ—

ಹಿಮಾದ್ರೇಃ ಸಂಭೂತಾ =ಹಿಮಾಲಯ ಪರ್ವತದಿಂದ ಹುಟ್ಟಿಬಂದಿರುವ; ಹಿಮವು ಬಿದ್ದರೆ ಎಲ್ಲ ಗಿಡ ಮರ ಬಳ್ಳಿಗಳೂ ಮುದುರಿಕೊಂಡು ಒಣಗಿಹೋಗುತ್ತವೆ; ಜಗದಂಬಿಕೆಯೆಂಬ ಈ ಬಳ್ಳಿಯು ಹಾಗಲ್ಲವೆಂದು, ಇತರ ಬಳ್ಳಿಗಳಿಗಿಂತ ವೈಲಕ್ಷಣ್ಯವನ್ನು ಈ ವಿಶೇಷಣಗಳು ಸೂಚಿಸುತ್ತವೆ; ಸುಲಲಿತಕರೈಃ ಪಲ್ಲವಯುತಾ =ಕೋಮಲವೂ ಕೆಂಪಾಗಿಯೂ, ನೀಳವಾಗಿಯೂ ಇರುವ ಕೈಬೆರಳುಗಳಿಂದ ಚಿಗುರಿರುವ; ಈಕೆಯ ಇಂಥ ಬೆರಳುಗಳು ಬಳ್ಳಿಯ ಚಿಗುರುಗಳಂತೆ ರಂಜಿಸುತ್ತಿವೆಯೆಂದು ಅರ್ಥವು; ಮುಕ್ತಾಭಿಃ ಸುಪುಷ್ಪಾ = ತೋರಮುತ್ತಿನ ಆಭರಣಗಳಿಂದ ಹೂ ಬಿಟ್ಟಿರುವ; ಮುತ್ತಿನ ಹಾರಗಳಿಂದ, ಹೂ ಬಿಟ್ಟಿರುವ ಬಳ್ಳಿಯಂತೆ ರಾರಾಜಿಸುತ್ತಿದ್ದಾಳೆಂದು ತಾತ್ಪರ್ಯವು; ಅಲಕಭರೈಃ ಭ್ರಮರಕಲಿತಾ = ಮುಖದ ಮೇಲೆ ಹಾರಾಡುತ್ತಿರುವ ನೀಲವರ್ಣದ ಮುಂಗುರುಳುಗಳಿಂದ ದುಂಬಿಗಳಿಂದ ತುಂಬಿದಂತಿರುವ; ಸುಗಂಧ ಮಕರಂದಗಳಿಂದ ತುಂಬಿರುವ ಹೂವುಗಳಲ್ಲಿ ದುಂಬಿಗಳು ಮಕರಂದಪಾನಕ್ಕಾಗಿ ಬಂದು ಮುತ್ತುತ್ತವೆ; ದೇವಿಯ ಹಣೆಯ ಮೇಲೆ ಹಾರಾಡು

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತಿರುವ ಮುಂಗುರುಳುಗಳು ಇಂಥ ದುಂಬಿಗಳಂತೆ ಕಂಗೊಳಿಸುತ್ತಿವೆಯೆಂದು ಅಭಿಪ್ರಾಯವು : **ಕೃತಸ್ಥಾಣುಸ್ಥಾನಾ** = ಮಾಡಲ್ಪಟ್ಟ ಈಶ್ವರನಲ್ಲಿ ಆಶ್ರಯವನ್ನುಳ್ಳ–ಈಶ್ವರನನ್ನೇ ಆಶ್ರಯಿಸಿಕೊಂಡಿರುವ ; **'ನಿರಾಶ್ರಯಾ ನ ಶೋಭಂತೇ ಪಂಡಿತಾ ವನಿತಾ ಲತಾಃ'**—'ವಿದ್ವಾಂಸರೂ, ಸ್ತ್ರೀಯರೂ, ಬಳ್ಳಿಗಳೂ ಆಶ್ರಯವಿಲ್ಲದೆ ಶೋಭಿಸುವುದಿಲ್ಲ' ಈಗಿನ ಕಾಲದಂತೆ, ಇವರು ಸ್ವತಂತ್ರರಾದರೆ, ಯೋಗ್ಯರೆನಿಸುವುದಿಲ್ಲ. ಬಳ್ಳಿಗೆ ಸ್ಥಿರವಾಗಿರುವ ಮರದ ಆಶ್ರಯವು ಬೇಕು. ಜಗದಂಬಿಕೆಯೆಂಬ ಈಲತೆಯೂ ಸ್ಥಿರವಾಗಿರುವ, ನಿತ್ಯನಾಗಿರುವ, **ಸ್ಥಾಣು**—ಎಂದರೆ ಶ್ರೀಪರಶಿವನನ್ನು ಆಶ್ರಯಿಸಿ ಇರುವಳು. **ಕುಚಫಲನತಾ** = ಸ್ತನಗಳೆಂಬ ಫಲಗಳ ಭಾರದಿಂದ ಬಗ್ಗಿರುವ : **'ಸ್ತನೌ ಸ್ವಾಪಾಸ್ವಧಾಕಾರೌ ಲೋಕೋಜ್ಜೀವನ ಹೇತುಕೌ'**—ಎಂಬಂತೆ, ದೇವತೆಗಳಿಗೆ ತೃಪ್ತಿಕರವಾಗಿರುವ ಸ್ವಾಹಾಕಾರವೂ, ಪಿತೃಗಳಿಗೆ ತೃಪ್ತಿಯನ್ನುಂಟುಮಾಡುವ ಸ್ವಧಾಕಾರವೂ ಶ್ರೀಭಗವತಿಯ ಎರಡು ಸ್ತನಗಳಾಗಿವೆ ; ಎಂದರೆ ಸಕಲಲೋಕಕ್ಕೂ ತೃಪ್ತಿ ಸುಖವನ್ನು ಉಂಟುಮಾಡುವವಳಾಗಿದ್ದಾಳೆ : ಬಳ್ಳಿಯ ಉತ್ತಮವಾದ ಹಣ್ಣಿನಂತೆ, ದೇವಿಯ ಸ್ತನಗಳು ಫಲಗಳಾಗಿವೆಯೆಂದು ಭಾವವು ; **ಸೂಕ್ತಿ ಸರಸಾ** = ಹಿತೋಪದೇಶದ ಮಾತುಗಳಿಂದ ರಸಭರಿತಳಾಗಿರುವ ; **'ವಾಚಸ್ತೇ ಶ್ರುತಯೋಽಖಿಲಾಃ'**—ಶ್ರೀಪರಮೇಶ್ವರಿಯ ಮಾತುಗಳೇ ಸಮಸ್ತ ಶ್ರುತಿಗಳು ; ಇವು ಲೋಕಕ್ಕೆ ಕ್ಷೇಮಕರಗಳಾದ ಹಿತೋಪಾಯಗಳನ್ನು ಉಪದೇಶಿಸುತ್ತಿವೆ : **ರುಜಾಂ ಹಂತ್ರೀ** = ಎಲ್ಲ ವಿಧಗಳಾದ ರೋಗಗಳನ್ನೂ ಬಾಧೆಗಳನ್ನೂ, ಹಾಗೆಯೇ ಸಂಸಾರರೋಗವನ್ನೂ ಸಹ ನಿರ್ಮೂಲವಾಗಿ ನಾಶಮಾಡುವಂಥ ; **ಮತ್ಕೂ ಗಂತ್ರೀ** = ಸಂಚರಿಸುತ್ತಿರುವ ; ಎಲ್ಲ ಕಡೆಯಲ್ಲಿಯೂ ಎಲ್ಲರಿಗೂ ಯಾವಾಗಲೂ ದೊರೆಯುವಂತೆ ಸುಲಭಸಿದ್ಧವಾಗಿರುವ ; **ಚಿದಾನಂದಲತಿಕಾ** =ಸ್ವಪ್ರಕಾಶವಾಗಿ ಎಲ್ಲರ ಅನುಭವಗಮ್ಯವಾಗುವ, ಪರಮಾನಂದರೂಪವಾದ, ಜಗದಂಬಿಕೆಯೆಂಬ ಈ ಕಲ್ಪಲತೆಯು ; **ವಿಲಸತಿ** = ದಿವ್ಯವಾಗಿ ಬೆಳಗುತ್ತಿದೆ !—೬.

ಶ್ರೀ ಮಹಾದೇವಿಯ ಮಹಿಮಾತಿಶಯವನ್ನು ಅದ್ಭುತವಾಗಿ ವರ್ಣಿಸುತ್ತ, ಸರ್ವರೂ ಈಕೆಯನ್ನೇ ಸೇವಿಸಬೇಕೆಂಬುದನ್ನು ಉಪದೇಶಿಸುತ್ತಾರೆ—

Sri Vidyaranya Bharati Collection, Sringeri

CC-O. In Public Domain. Digitized by eGangotri

ಸಪರ್ಣಾಮಾಕೀರ್ಣಾಂ ಕತಿಪಯಗುಣೈಃ ಸಾದರಮಿಹ
ಶ್ರಯಂತ್ವನ್ಯೇ ವಲ್ಲೀಂ ಮಮ ತು ಮತಿರೇವಂ ವಿಲಸತಿ ।
ಅಪರ್ಣೈಕಾ ಸೇವ್ಯಾ ಜಗತಿ ಸಕಲೈರ್ಯತ್ಪರಿವೃತಃ
ಪುರಾಣೋಽಪಿ ಸ್ಥಾಣುಃ ಫಲತಿ ಕಿಲ ಕೈವಲ್ಯಪದವೀಂ ॥ ೭ ॥

ಕತಿಪಯಗುಣೈಃ = ಕೆಲವು ಗುಣ (ಫಲ)ಗಳಿಂದ ಮಾತ್ರವೇ ; ಆಕೀರ್ಣಾಂ = ಆಲ್ಲಲ್ಲಿ ಹರಡಿಕೊಂಡಿರುವ ; ಸಪರ್ಣಾಂ = ಎಲೆಗಳಿಂದ ತುಂಬಿರುವ ; ವಲ್ಲೀಂ = ಬಳ್ಳಿಯನ್ನು ; ಅನ್ಯೇ = ವಿಚಾರಸಾಮರ್ಥ್ಯವಿಲ್ಲದ ಇತರರು ; ಸಾದರಂ = ಹೆಚ್ಚಿನ ಫಲವು ದೊರೆಯಬಹುದೆಂಬ ಆಸೆಯಿಂದ ಶ್ರದ್ಧೆಯುಳ್ಳವರಾಗಿ ; ಇಹ = ಲೋಕದಲ್ಲಿ ; ಶ್ರಯಂತು = ಆಶ್ರಯಿಸಲಿ ; ಮಮ = ನನ್ನ ; ಮತಿಃ ತು = ಬುದ್ಧಿಯಾದರೋ ; ಏವಂ = ಹೀಗೆ ; ವಿಲಸತಿ = ವಿಚಾರಪೂರ್ವಕವಾಗಿ ನಿಶ್ಚಯಗೊಂಡಿದೆ ; ಹೇಗೆ ? ಎಂದರೆ ; ಜಗತಿ = ಲೋಕದಲ್ಲಿ ; ಸಕಲೈಃ = ಉತ್ತಮ ಫಲವನ್ನು ಅಪೇಕ್ಷಿಸುವ ಎಲ್ಲರಿಂದಲೂ ; ಅಪರ್ಣಾ ಏಕಾ (ವಲ್ಲೀ) = 'ಅಪರ್ಣೆ'ಯೆಂಬ ಬಳ್ಳಿಯೊಂದೇ ; ಸೇವ್ಯಾ = ಸೇವಿಸಲ್ಪಡಬೇಕು ; ಎಲೆಗಳೇ ಇಲ್ಲದ ಎಂದೂ 'ಅಪರ್ಣಾ' ಶಬ್ದಕ್ಕೆ ಅರ್ಥವಾಗುವುದು ; ಗಿಡ ಮರ ಬಳ್ಳಿಗಳಿಗೆ ಎಲೆಯೇ ಜೀವಿತ ; ಎಲೆಗಳನ್ನೆಲ್ಲ ಕತ್ತರಿಸಿದರೆ ಬಳ್ಳಿಯು ನಾಶವಾಗುತ್ತದೆ ; ಇದನ್ನು ತಿಳಿದ ಜನರು ಸಪರ್ಣಾ ಎಂದರೆ ಎಲೆಗಳಿಂದ ಶೋಭಿಸುತ್ತಿರುವ ಬಳ್ಳಿಯನ್ನೇ ಫಲಕ್ಕಾಗಿ ಆಶ್ರಯಿಸುತ್ತಾರೆ ; ಆದರೆ ನಾವು ಹೇಳುವುದೇನೆಂದರೆ, ಫಲವನ್ನು ಬೇಕೆಂಬುವವರು ಅಪರ್ಣಾ— ಎಂದರೆ ಎಲೆಯೇ ಇಲ್ಲದ, 'ಅಪರ್ಣೆ'ಯೆಂಬ ಬಳ್ಳಿಯ ಸೇವೆಯನ್ನೇ ಮಾಡಬೇಕು— ಎಂದು ; ಏಕೆಂದರೆ ; ಯತ್ಪರಿವೃತಃ = ಅಪರ್ಣೆಯೆಂಬ ಎಲೆಯಿಲ್ಲದ ಬಳ್ಳಿಯಿಂದ ಸುತ್ತಲ್ಪಟ್ಟಿರುವ ; ಸ್ಥಾಣುಃ = ಒಣ— ಮೋಟುಮರವು, ಶ್ರೀ ಪರಮೇಶ್ವರನು ; ಪುರಾಣಃ ಅಪಿ = ಬಹುಕಾಲದ ಹಳೆಯ ಮುದಿಮರವಾಗಿದ್ದರೂ ; ನಿತ್ಯನಿರ್ವಿಕಾರಸ್ವರೂಪನಾಗಿದ್ದರೂ ; ಕೈವಲ್ಯಪದವೀಂ = ಸರ್ವೋತ್ತಮವಾದ ಮೋಕ್ಷವೆಂಬ ಪರಮ ಪದವಿಯನ್ನು ; ಫಲತಿ ಕಿಲ = ಫಲಿಸುತ್ತಾನಲ್ಲವೆ !

ನಿತ್ಯನಿರ್ಗುಣಪರಬ್ರಹ್ಮಸ್ವರೂಪಪ್ರಾಪ್ತ್ಯೈ ಮೋಕ್ಷವೆಂಬ ಪರಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಫಲವು. ಅಂತಃಕರಣದ ಅಖಿಂಡಾಕಾರವೃತ್ತಿರೂಪವಾದ ಬ್ರಹ್ಮಾತ್ಮೈಕತ್ವಜ್ಞಾನದಿಂದ ಇದು ಸಿದ್ಧಿಸುತ್ತದೆ. ಈ ಅಖಿಂಡವೃತ್ತಿಯು ಮಾಯೆಯ ಕಾರ್ಯವಾದ ಅಂತಃಕರಣದ ಪರಿಣಾಮವು. ಇದರಲ್ಲಿ ಪ್ರತಿಬಿಂಬಿಸುವ ಪರಬ್ರಹ್ಮಸ್ವರೂಪಚೈತನ್ಯವು, ಸಂಸಾರ ಕಾರಣವಾದ ಅಜ್ಞಾನವನ್ನು ನಿಃಶೇಷವಾಗಿ ನಾಶಮಾಡುವುದು; ಆಗ ನಿತ್ಯವಾದ ಮೋಕ್ಷವು ಕೈಗೂಡುವುದು. ಪರಬ್ರಹ್ಮಸ್ವರೂಪವು ನಿತ್ಯವಾಗಿ ಯಾವಾಗಲೂ ಇರುವಂಥದ್ದಾದರೂ, ಇದು ಸಂಸಾರ ಕಾರಣವಾದ ಅಜ್ಞಾನವನ್ನು ಸ್ವತಃ ಕಳೆಯುವುದಿಲ್ಲ; ಅಂತಃಕರಣದ ಅಖಿಂಡಾಕಾರವೃತ್ತಿಯ ಮೂಲಕವಾಗಿ ಬಂದ ಈ ಸ್ವರೂಪಚೈತನ್ಯವೇ ಅಜ್ಞಾನ ನಾಶಕವಾಗುವುದು. ನಿತ್ಯನಿರ್ವಿಕಾರವಾಗಿರುವ ಬ್ರಹ್ಮಚೈತನ್ಯವು—ಎಂದರೆ, ಈ ಪುರಾಣವಾದ ಸ್ಥಾಣುವು, ಕೈವಲ್ಯ (ಮೋಕ್ಷ) ಫಲವನ್ನು ಕೊಡಬೇಕಾದರೆ, ಅಖಿಂಡಾಕಾರವಾದ (ಅಪರ್ಣಾ, ಎಲೆ ಮುಂತಾದ ಯಾವ ವಿಕಾರವೂ ಇಲ್ಲದ) ವೃತ್ತಿ, (ಬಳ್ಳಿ) ಯಿಂದ ಸುತ್ತಲ್ಪಡಬೇಕು, ಆದ್ದರಿಂದ ಅಪರ್ಣಾಂಬಿಕೆಯ ಅನುಗ್ರಹದ ಲಾಭಕ್ಕಾಗಿ ಈಕೆಯನ್ನೇ ಸೇವಿಸತಕ್ಕದ್ದು—೭.

ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಿಗೂ ಮೂಲಕಾರಣಳೆಂದು ದೇವಿಯನ್ನು ಸ್ತುತಿಸುತ್ತಾರೆ—

ವಿಧಾತ್ರೀ ಧರ್ಮಾಣಾಂ ತ್ವಮಸಿ ಸಕಲಾಮ್ನಾಯಜನನಿ
ತ್ವಮರ್ಥಾನಾಂ ಮೂಲಂ ಧನದನಮನೀಯಾಂಘ್ರಿಕಮಲೇ ।
ತ್ವಮಾದಿಃ ಕಾಮಾನಾಂ ಜನನಿ ಕೃತಕಂದರ್ಪವಿಜಯೇ
ಸತಾಂ ಮುಕ್ತೇರ್ಬೀಜಂ ತ್ವಮಸಿ ಪರಮಬ್ರಹ್ಮಮಹಿಷಿ ॥ ೮ ॥

ಸಕಲಾಮ್ನಾಯಜನನಿ = ಎಲ್ಲ ವೇದಶಾಸ್ತ್ರಗಳಿಗೂ ಕಾರಣಳಾಗಿರುವ ದೇವಿಯೇ; ತ್ವಂ = ನೀನು; ಧರ್ಮಾಣಾಂ = ಎಲ್ಲ ಧರ್ಮಗಳಿಗೂ; ವಿಧಾತ್ರೀ = ವಿಧಾಯಕಳಾಗಿದ್ದೀಯೆ. 'ಧರ್ಮಾತ್ತು ಖಂ ಚ ಜ್ಞಾನಂ ಚ'—ಎಂಬಂತೆ ಇಹಪರಗಳ ಸುಖಗಳಿಗೂ, ಮೋಕ್ಷ ಕಾರಣವಾದ ಬ್ರಹ್ಮಾತ್ಮೈ

Sri Vidyabharati Book Centre, Sringeri

CC-O. In Public Domain. Digitized by eGangotri

ಜ್ಞಾನಕ್ಕೂ ಧರ್ಮವೇ ಮೂಲವು. ಇಂಥ ಧರ್ಮದಲ್ಲಿ ವೇದವೇ ಪ್ರಮಾಣವು—ವೇದವಿಹಿತವಾದ ಕರ್ತವ್ಯ ಕರ್ಮವೇ ಧರ್ಮವು. ಸಕಲ ವೇದಗಳನ್ನೂ ಉಂಟುಮಾಡಿರುವವಳು ದೇವಿಯೇ ಆಗಿದ್ದಾಳೆ. ಆದ್ದರಿಂದ ವೇದಶಾಸ್ತ್ರಕ್ಕೆ ಕಾರಣಳಾಗಿರುವ ದೇವಿಯೇ ಧರ್ಮಕ್ಕೆ ಕಾರಣಳೆಂಬುದು ಸ್ಪಷ್ಟವೇ ಇದೆ.

ಧನದನಮನೀಯಾಂಘ್ರಿಕಮಲೇ—ಧನದ = ನವನಿಧಿಗಳಿಗೂ ಅಧಿಪತಿಯಾಗಿ, ಲೋಕದಲ್ಲಿ ಎಲ್ಲರಿಗೂ ಅವರವರ ಅದೃಷ್ಟಗಳಿಗೆ ತಕ್ಕಂತೆ ಐಶ್ವರ್ಯವನ್ನು ಕೊಡುವ, ಧನಾಧಿಪತಿಯಾಗಿರುವ ಕುಬೇರನಿಂದ ; ನಮನೀಯ = ನಿತ್ಯವೂ ನಮಸ್ಕರಿಸಲ್ಪಡುತ್ತಿರುವ ; ಅಂಘ್ರಿಕಮಲೇ = ಪಾದಪದ್ಮಗಳನ್ನುಳ್ಳ ಹೇ ದೇವಿಯೇ ; ತ್ವಂ = ನೀನು ; ಆರ್ಥಾನಾಂ = ಸಕಲೇಷ್ಟಾರ್ಥಗಳಿಗೂ ; ಮೂಲಂ = ಮೂಲಕಾರಣಳಾಗಿದ್ದೀಯೆ. ನಿನ್ನ ಆಜ್ಞೆಗೆ ಒಳಪಟ್ಟೇ ಕುಬೇರನು ಎಲ್ಲರಿಗೂ ಧನವನ್ನು ಕೊಡುವನು.

ಕೃತಕಂದರ್ಪವಿಜಯೇ—ಕೃತ = ಮಾಡಲ್ಪಟ್ಟ ; ಕಂದರ್ಪವಿಜಯೇ = ಮನ್ಮಥನ ಜಯವನ್ನುಳ್ಳ, ಕಾಮನನ್ನು ಜಯಿಸಿರುವ ; ಜನನಿ = ಲೋಕ ಮಾತೆಯಾದ ದೇವಿಯೇ ; ಕಾಮಾನಾಂ = ಎಲ್ಲ ಇಚ್ಛಾಭೋಗಗಳಿಗೂ ; ತ್ವಂ = ನೀನು ; ಆದಿಃ = ಮೂಲಕಾರಣಳು. ಫಾಲನೇತ್ರದಿಂದ ಮನ್ಮಥನನ್ನು ಸುಟ್ಟವನು ಈಶ್ವರನೇ ಆದರೂ, ಈಶ್ವರನು ನಿರ್ವಿಕಾರನಾದ್ದರಿಂದ, ಮಾಯಾಸಂಬಂಧವಿಲ್ಲದೆ ಇದು ಆಗಲಾರದುದರಿಂದ, ಮನ್ಮಥನನ್ನು ಜಯಿಸಿದವಳು ದೇವಿಯೇ ಎಂದು ತಾತ್ಪರ್ಯವು.

ಪರಮಬ್ರಹ್ಮಮಹಿಷಿ—ಪರಮಬ್ರಹ್ಮ = ಸರ್ವೋತ್ಕೃಷ್ಟನಾದ ಸಗುಣ ಬ್ರಹ್ಮರೂಪನಾದ ಶ್ರೀಪರಮೇಶ್ವರನ ; ಮಹಿಷಿ = ಪಟ್ಟದರಾಣಿಯಾಗಿರುವ ದೇವಿಯೇ ; ತ್ವಂ = ನೀನು ; ಸತಾಂ = ಬ್ರಹ್ಮಸಾಕ್ಷಾತ್ಕಾರಕ್ಕೆ ಮುಖ್ಯಾಧಿಕಾರ ಸಂಪತ್ತನ್ನು ಪಡೆದಿರುವ ಸತ್ಪುರುಷರಿಗೆ ; ಮುಕ್ತೇಃ ಬೀಜಂ = ಮುಕ್ತಿಸಿದ್ಧಿಗೆ ಕಾರಣವಾಗಿರುವ ಅಖಂಡಾಕಾರವೃತ್ತಿರೂಪಳೂ ; ಅಸಿ = ಆಗಿದ್ದೀಯೆ !

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಪಂಚದಲ್ಲಿ ಪ್ರತಿಯೊಬ್ಬರೂ ಅಪೇಕ್ಷಿಸುತ್ತಿರುವುದೂ ಈ ನಾಲ್ಕು ವಿಧ ಪುರುಷಾರ್ಥಗಳನ್ನೇ ಆಗಿದೆ. ಈ ನಾಲ್ಕಕ್ಕೂ ಶ್ರೀಪರಮೇಶ್ವರಿಯೇ ಮೂಲಕಾರಣಳು. ಆದ್ದರಿಂದ ಇಷ್ಟಸಿದ್ಧಿಗಾಗಿ ಶ್ರೀಮಹೇಶ್ವರಿಯೇ ಸರ್ವರಿಂದಲೂ ಸೇವ್ಯಳು—ಓ.

"ನನ್ನಲ್ಲಿ ಅತಿಶಯವಾದ ಭಕ್ತಿಯುಳ್ಳವರನ್ನು ಮಾತ್ರವೇ ನಾನು ಅನುಗ್ರಹಿಸುವೆನು; ನಿನಗೆ ಅಂಥ ಭಕ್ತಿಯು ನನ್ನಲ್ಲಿ ಇಲ್ಲವಲ್ಲಾ ?"—ಎಂದು ಒಂದು ವೇಳೆ ನೀನು ಕೇಳಬಹುದು; "ಹೌದು, ನನಗೆ ನಿನ್ನ ಅನುಗ್ರಹಕ್ಕೆ ಪಾತ್ರವಾಗುವ ಯೋಗ್ಯತೆಯಿಲ್ಲ; ಆದರೆ, ಸಕಲರಿಗೂ ತಾಯಿಯಾಗಿರುವ ನೀನು ನನ್ನನ್ನು ಉದಾಸೀನ ಮಾಡುವುದು ಉಚಿತವೆ ?"—ಎಂದು ದೇವಿಯನ್ನು ಪ್ರಾರ್ಥಿಸುತ್ತಾರೆ—

ಪ್ರಭೂತಾ ಭಕ್ತಿಸ್ತೇ ಯದಪಿ ನ ಮಮಾಲೋಲಮನಸಃ
ತಥಾಪಿ ಶ್ರೀಮತ್ಯಾ ಸದಯಮವಲೋಕ್ಯೋಽಹಮಧುನಾ
ಪಯೋದಃ ಪಾನೀಯಂ ದಿಶತಿ ಮಧುರಂ ಚಾತಕಮುಖೇ
ಭೃಶಂ ಶಂಕೇ ಕೈರ್ವಾ ವಿಧಿಭರನುನೀತೋ ಮಮ ಮತಿಃ ॥ ೯ ॥

ಅಲೋಲಮನಸಃ = ಅತ್ಯಂತ ಚಪಲಚಿತ್ತನಾಗಿರುವ; ಮಮ = ನನಗೆ; ಪ್ರಭೂತಾ = ಅಧಿಕವಾದ; ತೇ ಭಕ್ತಿಃ = ನಿನ್ನ ಭಕ್ತಿಯು; ನ ಯದಪಿ = ಇಲ್ಲವೆಂಬುದು ಸತ್ಯವೇ: ತಥಾ ಅಪಿ = ಆದಾಗ್ಯೂ; ಶ್ರೀಮತ್ಯಾ = ಸರ್ವಸೌಭಾಗ್ಯಸಂಪದ್ಭರಿತಳಾಗಿರುವ ನಿನ್ನಿಂದ; ಅಧುನಾ = ಈಗ; ಅಹಂ = ನಾನು; ಸದಯಂ = ದಯಾಪೂರ್ವಕವಾಗಿ; ಅವಲೋಕ್ಯಃ = ನೋಡಲ್ಪಡತಕ್ಕವನು ಆಗಿದ್ದೇನೆ.

ಭಕ್ತಿಯಿಲ್ಲದವನಾಗಿದ್ದರೂ, ದಯಾಮಯಳಾದ ನೀನು ನನ್ನ ಮೇಲೆ ದಯೆಯನ್ನು ತೋರುವುದು ಉಚಿತವೇ ಆಗುತ್ತದೆ. ಹೇಗೆಂದರೆ ?—ಪಯೋದಃ = ಮೋಡವು; ಮಧುರಂ = ಸಿಹಿಯಾಗಿರುವ; ಪಾನೀಯಂ = ನೀರನ್ನು. ಚಾತಕಮುಖೇ = ಚಾತಕಪಕ್ಷಿಯ ಬಾಯಲ್ಲಿ; ದಿಶತಿ =

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಡುತ್ತದೆಯಷ್ಟೆ; **ಕೈಃವಾ ವಿಧಿಭಿಃ** = ಎಷ್ಟು ಪ್ರಕಾರಗಳಿಂದ **ಅನುನೀತಃ** = ಪ್ರಾರ್ಥಿಸಲ್ಪಟ್ಟದ್ದಾಗಿ ಆದು (ದಿಶತಿ?) ಎಂದು **ಭೃಶಂ** = ಅತಿಶಯವಾಗಿ; **ಶಂಕೇ** = ಸಂಶಯ ಪಡುತ್ತೇನೆ; **ಮಮ** = ನನ್ನ : **ಮತಿಃ** = ಬುದ್ಧಿಯು; ಹೀಗೆ ಯೋಚಿಸುತ್ತದೆ—೯.

ನಿನ್ನನ್ನೇ ನಾನು ಶರಣುಹೊಂದಿದ್ದೇನೆ; ಆದ್ದರಿಂದ ನನ್ನನ್ನು ರಕ್ಷಿಸುವುದು ಯುಕ್ತವೆಂದು ಪ್ರಾರ್ಥಿಸುತ್ತಾರೆ—

ಕೃಪಾಪಾಂಗಾಲೋಕಂ ವಿತರ ತರಸಾ ಸಾಧುಚರಿತೇ
ನ ತೇ ಯುಕ್ತೋಪೇಕ್ಷಾ ಮಯಿ ಶರಣದೀಕ್ಷಾಮುಪಗತೇ।
ನ ಚೇದಿಷ್ಟಂ ದದ್ಯಾದನುಪದಮಹೋ ಕಲ್ಪಲತಿಕಾ
ವಿಶೇಷಃ ಸಾಮಾನ್ಯೈಃ ಕಥಮಿತರವಲ್ಲೀಪರಿಕರೈಃ ॥ ೧೦ ॥

ಸಾಧುಚರಿತೇ = ಸತ್ಪುರುಷರಾದ ಮಹಾತ್ಮರಿಗೆ ಯೋಗ್ಯವಾದ ನಡತೆಯುಳ್ಳ ಮಹಾದೇವಿಯೇ; **ಶರಣದೀಕ್ಷಾಂ** = (ನಾನು) ನೀನೇ ಗತಿಯೆಂದು ನಿನ್ನ ಮರೆಯನ್ನು; **ಉಪಗತೇ (ಸತಿ)** = ಹೊಂದಿರುವಾಗ; **ಉಪೇಕ್ಷಾ** =ನನ್ನ ಮೇಲೆ ಉದಾಸೀನತೆಯು; **ತೇ** = ನಿನ್ನಂಥ ಮಹಾತ್ಮಳಿಗೆ; **ನ ಯುಕ್ತಾ** = ಉಚಿತವಲ್ಲ; ಆದ್ದರಿಂದ, **ಹೇ ದೇವಿ**; **ತರಸಾ** = ಈ ಕೂಡಲೆ; **ಕೃಪಾಪಾಂಗಾಲೋಕಂ** = ದಯಾಕಟಾಕ್ಷದ ನೋಟವನ್ನು; **ಮಯಿ** = ನನ್ನಲ್ಲಿ; **ವಿತರ** = ನೀಡು.

ಕಲ್ಪಲತಿಕಾ = ಎಲ್ಲರ ಇಷ್ಟಾರ್ಥಗಳನ್ನೂ ಬೇಡಿದ ಕೂಡಲೆ **ಈಡೇರಿ**ಸುವ ಸ್ವಭಾವದ ಕಲ್ಪಲತೆಯು; **ಅನುಪದಂ** = ಪ್ರಾರ್ಥಿಸಿದ ಕ್ಷಣದಲ್ಲಿಯೇ; **ಇಷ್ಟಂ** = ಬೇಡಿದುದನ್ನು; **ನ ದದ್ಯಾತ್ ಚೇತ್** = ಕೊಡದೇ ಇರುವ ಪಕ್ಷದಲ್ಲಿ; **ಸಾಮಾನ್ಯೈಃ** = ಲೋಕಸಾಮಾನ್ಯದಲ್ಲಿ ಕಾಣಬರುವ; **ಇತರವಲ್ಲೀ ಪರಿಕರೈಃ** = ಇತರ ಕಾಡುಬಳ್ಳಿಗಳ ಸಮೂಹಗಳಿಂದ; **ವಿಶೇಷಃ** = ಕಲ್ಪಲತೆಗೆ ಆಧಿಕ್ಯವು, ಹೆಚ್ಚುಗಾರಿಕೆಯು; **ಕಥಂ** = ಹೇಗೆ? ಯಾವ ರೀತಿಯಿಂದ? **ಹೇ** ಭಗವತಿ! ನೀನು ಎಲ್ಲರಲ್ಲಿಯೂ ನಿಷ್ಪಕ್ಷಪಾತವಾಗಿ ದಯೆಯುಳ್ಳವಳು; **ನಾನು**

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನನ್ನೇ ಮರೆಹೊಕ್ಕಿದ್ದೇನೆ; ನನಗೆ ಬೇರೆ ಯಾರೂ ದಿಕ್ಕಿಲ್ಲ; ಆದ್ದರಿಂದ ನೀನು ನನ್ನನ್ನು ಕೈಹಿಡಿದು ಉದ್ಧರಿಸಬೇಕು—ಎಂದು ತಾತ್ಪರ್ಯವು—೧೦.

ನಿನ್ನನ್ನೇ ನಂಬಿಕೊಂಡಿರುವುದರಿಂದ ನನ್ನ ಉದ್ಧಾರವನ್ನು ನೀನೇ ಮಾಡತಕ್ಕದ್ದಾಗಿದೆಯೆಂಬ ಪ್ರಾರ್ಥನೆಯನ್ನು ತೋರಿಸುತ್ತಾರೆ—

ಮಹಾಂತಂ ವಿಶ್ವಾಸಂ ತವ ಚರಣಪಂಕೇರುಹಯುಗೇ
ನಿಧಾಯಾನ್ಯನ್ನೈವಾಶ್ರಿತಮಿಹ ಮಯಾ ದೈವತಮುಮೇ।
ತಥಾಪಿ ತ್ವಚ್ಚೇತೋ ಯದಿ ಮಯಿ ನ ಜಾಯೇತ ಸದಯಂ
ನಿರಾಲಂಬೋ ಲಂಬೋದರಜನನಿ ಕಂ ಯಾಮಿ ಶರಣಂ ॥ ೧೧ ॥

ಉಮೇ = ಭಗವತಿಯಾದ ಪಾರ್ವತೀ ದೇವಿಯೇ. ದಕ್ಷಬ್ರಹ್ಮನ ಮಗಳಾಗಿದ್ದ ಶ್ರೀಸತೀದೇವಿಯು ಶ್ರೀಪರಮೇಶ್ವರನನ್ನು ವರಿಸಿದ್ದಾಗ, ಕಾರಣಾಂತರದಿಂದ ಶ್ರೀಶಿವನಲ್ಲಿ ದ್ವೇಷವನ್ನು ಹೊಂದಿದ್ದ ದಕ್ಷಬ್ರಹ್ಮನು, ತಾನು ಮಾಡಿದ ಯಾಗದಲ್ಲಿ ಶ್ರೀಪರಮೇಶ್ವರನನ್ನು ತಿರಸ್ಕರಿಸಲು, ಕುಪಿತಳಾದ ಶ್ರೀಸತೀದೇವಿಯು ಅಗ್ನಿಕುಂಡದಲ್ಲಿ ದೇಹತ್ಯಾಗ ಮಾಡಿ, ಪರ್ವತರಾಜನಾದ ಹಿಮವಂತನ ಮಗಳಾಗಿ ಜನಿಸಿದಳು; ಆಗ ಹಿಮವಂತನ ತೊಪ್ಪಲು ಪ್ರದೇಶದಲ್ಲಿ ತಪೋನಿರತನಾಗಿದ್ದ ಶ್ರೀಪರಮೇಶ್ವರನನ್ನು ಒಲಿಸಿಕೊಳ್ಳುವುದಕ್ಕಾಗಿ ಪಾರ್ವತಿಯು ತಾನು ತಪಸ್ಸು ಮಾಡುವುದಕ್ಕೆ ತಾಯಿ ತಂದೆಗಳ ಅನುಮತಿಯನ್ನು ಕೇಳಿದಳು. ತಾಯಿಯಾದ ಮೇನಾದೇವಿಯು ತನ್ನ ಮುದ್ದುಮಗಳು ಕಠಿಣವಾದ ತಪಸ್ಸನ್ನು ಹೇಗೆ ಸಹಿಸಿಯಾಳೆಂಬ ಚಿಂತೆಯಿಂದ—'ಉ = ಎಲೆ ಪಾರ್ವತಿ, ಮಾ = ಬೇಡಮ್ಮ' ತಪಸ್ಸಿಗೆ ಹೋಗಬೇಡಮ್ಮ'—ಎಂದು ಮತ್ತೆ ಮತ್ತೆ ಹೇಳುತ್ತ ಅವಳನ್ನು ತಡೆದಳು. ಹೀಗೆ ಅತ್ಯಂತ ವಾತ್ಸಲ್ಯದಿಂದ ತಡೆಯಲ್ಪಟ್ಟ ಪಾರ್ವತಿಗೆ 'ಉಮಾ'—ಎಂಬ ಹೆಸರು ಪ್ರಸಿದ್ಧವಾಯಿತು; ಹೇ ಉಮೇ = ಕಠಿಣವಾದ ತಪಸ್ಸನ್ನಾಚರಿಸಿ ಶ್ರೀಪರಮೇಶ್ವರನನ್ನೇ ಮತ್ತೆ ಪತಿಯನ್ನಾಗಿ ಪಡೆದ ಮಹಿಮಾಶಾಲಿಯಾದ ಶ್ರೀಪಾರ್ವತೀ ದೇವಿಯೇ; ತವ = ನಿನ್ನ; ಚರಣಪಂಕೇರುಹಯುಗೇ = ಪಾದಪದ್ಮದ್ವಯದಲ್ಲಿಯೇ; ಮಹಾಂತಂ ವಿಶ್ವಾಸಂ = 'ಇದೇ ನನಗೆ ರಕ್ಷಕವು' ಬೇರೆ ಯಾವುದೂ

Sri Vidyabharathi Book Centre, Shimoga

CC-O. In Public Domain. Digitized by eGangotri

ಇಲ್ಲ'—ಎಂಬ ವಿಶೇಷವಾದ ನಂಬಿಕೆಯನ್ನು ; ನಿಧಾಯ = ಇಟ್ಟು ಕೊಂಡು ; ಅನ್ಯತ್ ದೈವತಂ = ಬೇರೆ ಯಾವ ದೇವತೆಯೂ ; ಮಯಾ = ನನ್ನಿಂದ ; ನ ಆಶ್ರಿತಂ ಏವ = ಆಶ್ರಯಿಸಲ್ಪಡಲೇ ಇಲ್ಲ ; ಸೇವಿಸಲ್ಪಡಲಿಲ್ಲ ; ತಥಾ ಅಪಿ = ಹಾಗಿದ್ದಾಗ್ಯೂ ; ತ್ವಚ್ಚೇತಃ = ನಿನ್ನ ಮನಸ್ಸು ; ಮಯಿ = ನನ್ನಲ್ಲಿ ; ಸದಯಂ = ದಯೆಯನ್ನು ಉಳ್ಳದ್ದು ; ನ ಜಾಯೇತ ಯದಿ = ಆಗದೇ ಹೋಗುವ ಪಕ್ಷದಲ್ಲಿ ; ಹೇ ಲಂಬೋದರ ಜನನಿ = ಲಂಬೋದರನಾದ—ಎಂದರೆ ಯಾವ ಕಾರ್ಯವನ್ನು ಮಾಡಲೂ ಸರ್ಮಥನಾಗದೆ, ಕೇವಲ ತಿಂಡಿಪೋತನಾಗಿ ಹೊಟ್ಟೆಯನ್ನು ಬೆಳೆಸಿಕೊಂಡಿರುವ ವಿಘ್ನೇಶ್ವರನ ; ಜನನಿ = ತಾಯಿಯೆ ; ತಾಯಿಯಾದ ನೀನು ಅಂಥ ಮಗನನ್ನು ರಕ್ಷಿಸಿ ಪೋಷಿಸುತ್ತಿಲ್ಲವೆ ? ಇದರಂತೆ ಯಾವ ಯೋಗ್ಯತೆಯೂ ಇಲ್ಲದವನಾದರೂ, ಲೋಕೈಕಜನನಿಯಾದ ನೀನು ನನ್ನನ್ನೂ ಕಾಪಾಡುವುದು ಉಚಿತವೇ ಆಗುವುದು—ಎಂದು ಈ ಸಂಬೋಧನೆಯ ಅಭಿಪ್ರಾಯವು ; ನಿರಾಲಂಬಃ = ಬೇರೆ ಯಾವ ಆಶ್ರಯವೂ ಇಲ್ಲದ ನಾನು : ಈಗ ಕಂ = ಯಾರನ್ನು ; ಶರಣಂ ಯಾಮಿ ? = ಶರಣು ಹೊಂದಲಿ ? ಬೇರೆ ಯಾರನ್ನೂ ಇದುವರೆವಿಗೂ ನಾನು ಸೇವಿಸಲಿಲ್ಲ : ಆದ್ದರಿಂದ ಅವರು ಯಾರೂ ನನ್ನನ್ನು ರಕ್ಷಿಸುವುದಿಲ್ಲ. ನಿನ್ನನ್ನೇ ನಿರಂತರವೂ ಸೇವಿಸುತ್ತ ಬಂದಿರುತ್ತೇನೆ ; ಈಗ ನೀನು ನನ್ನನ್ನು ಕೈಬಿಡುವುದಾದರೆ, ನಾನು ಗತಿಯಿಲ್ಲದವನಾಗುವೆನು—ಎಂದು ಭಾವವು—೧೧.

ಸರ್ವಪಾಪಹಾರಿಣಿಯಾದ ನಿನ್ನಲ್ಲಿ ಪ್ರೀತಿಯನ್ನು ಹೊಂದಿದ ಮೇಲೂ ನಾನು ದೋಷಯುಕ್ತನೆಂಬುದು ಹೇಗೆ ? ನಿನ್ನ ಒಲಿಮೆಗೆ ಯೋಗ್ಯನಲ್ಲ ವೆಂಬುದು ಹೇಗೆ ?—ಎಂದು ಪ್ರಾರ್ಥಿಸುತ್ತಾರೆ—

ಅಯಃ ಸ್ಪರ್ಶೇ ಲಗ್ನಂ ಸಪದಿ ಲಭತೇ ಹೈಮಪದವೀಂ
ಯಥಾ ರಥ್ಯಾಪಾಥಃ ಶುಚಿ ಭವತಿ ಗಂಗೌಘಮಿಲಿತಂ ।
ತಥಾ ತತ್ತ್ವತ್ಪ್ರೇರತಿಮಲಿನಮಂತರ್ಮಮ ಯದಿ
ತ್ವಯಿ ಪ್ರೇಮಾ ಸಕ್ತಂ ಕಥಮಿವ ನ ಜಾಯೇತ ವಿಮಲಂ ॥ ೧೨ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇ ಮಹಾದೇವಿ, ಸ್ಪರ್ಶೇ = ಸ್ಪರ್ಶ ಮಣಿಯಲ್ಲಿ : ಲಗ್ನಂ = ದೃಢವಾಗಿ ಸಂಬಂಧವನ್ನು ಹೊಂದಿರುವ; ಅಯಃ = ಕಬ್ಬಿಣವು; ಸಪದಿ= ತತ್ಕ್ಷಣದಲ್ಲಿಯೇ; ಹೈಮಪದವೀಂ = ಚಿನ್ನದ ಭಾವವನ್ನು; ಯಥಾ = ಹೇಗೆ: ಲಭತೇ = ಹೊಂದುತ್ತದೆಯೋ; ಸ್ಪರ್ಶವೆಂಬ ಮಣಿಯ ಸಂಬಂಧದಿಂದ ಕಬ್ಬಿಣವೂ ಚಿನ್ನವಾಗುತ್ತದೆಂದು ಶಾಸ್ತ್ರ ಸಮ್ಮತವಾಗಿದೆ; ಇದರಂತೆ ಎಂದು ಅಭಿಪ್ರಾಯವು. ಮತ್ತು ರಥ್ಯಾಪಾಥಃ = ಬೀದಿಯಲ್ಲಿ ಹರಿದು ಬರುವ ಮಲಿನವಾದ ನೀರು; ಗಂಗೌಘಮಿಲಿತಂ = ಪವಿತ್ರವಾದ ಗಂಗಾಪ್ರವಾಹದಲ್ಲಿ ಸೇರಿ; ಶುಚಿ = ಪವಿತ್ರವು; ಯಥಾ = ಹೇಗೆ, ಭವತಿ ಆಗುತ್ತದೆಯೋ; ತಥಾ = ಹಾಗೆಯೇ; ಮಮ = ನನ್ನ; ಅಂತಃ = ಮನಸ್ಸು; ತತ್ತತ್ಪಾಪೈಃ = ನಾನಾವಿಧಗಳಾದ ಆ ಪಾಪಗಳಿಂದ; ಮಲಿನಂ = ಮಲಿನವಾಗಿರುವುದಾದರೂ; ತ್ವಯಿ = ನಿನ್ನಲ್ಲಿ; ಪ್ರೇಮ್ಣಾ = ಪ್ರೀತಿಯಿಂದ; ಯದಿ ಆಸಕ್ತಂ = ಆಸಕ್ತವಾಗಿರುವುದರಿಂದ; ಕಥಂ ಇವ = ಹೇಗೆ ತಾನೆ; ವಿಮಲಂ = ಸರ್ವದೋಷರಹಿತವಾಗಿ ನಿರ್ಮಲವು; ನ ಜಾಯೇತ = ಆಗದೆ ಇದ್ದೀತು? ಪರಮ ಪವಿತ್ರಳಾಗಿರುವ ನಿನ್ನನ್ನು ಭಕ್ತಿಯಿಂದ ಸೇವಿಸುತ್ತಿರುವ ನಾನು ಪವಿತ್ರನೇ ಆಗಿದ್ದೇನೆ ಎಂದು ತಾತ್ಪರ್ಯವು–೧೨.

ಇತರ ದೇವತೆಗಳನ್ನೆಲ್ಲ ತ್ಯಜಿಸಿ ನಾನು ನಿನ್ನಲ್ಲಿಯೇ ಅತ್ಯಂತವಾಗಿ ಆಸಕ್ತನಾಗಿರುವುದಕ್ಕೆ ಪ್ರಬಲವಾದ ಕಾರಣವೂ ಇದೆ–ಎಂಬುದನ್ನು ಹೇಳುತ್ತಾರೆ—

ತ್ವದನ್ಯಸ್ಮಾದಿಚ್ಛಾವಿಷಯಫಲಲಾಭೇ ನ ನಿಯಮಃ
ತ್ವಮರ್ಥಾನಾಮಿಚ್ಛಾಧಿಕಮಪಿ ಸಮರ್ಥಾ ವಿತರಣೇ ।
ಇತಿ ಪ್ರಾಹುಃ ಪ್ರಾಂಚಃ ಕಮಲಭವನಾದ್ಯಾಃ ತ್ವಯಿ ಮನಃ
ತದಾಸಕ್ತಂ ನಕ್ತಂದಿವಮುಚಿತಮಿಶಾನಿ ಕುರು ತತ್ ॥ ೧೩ ॥

ತ್ವದನ್ಯಸ್ಮಾತ್ = ನೀನಲ್ಲದೆ, ಬೇರೆ ದೇವತೆಯಿಂದ; ಇಚ್ಛಾವಿಷಯಫಲಲಾಭೇ—ಇಚ್ಛಾವಿಷಯ = ನಮ್ಮ ಇಚ್ಛೆಗೆ ವಿಷಯವಾದ—

Sri Vidyabharathi Book Centre, Sringeri

CC-O. In Public Domain. Digitized by eGangotri

ನಾವು ಇಚ್ಛಿಸುವಷ್ಟು ; ಫಲಲಾಭೇ = ಫಲದ ಲಾಭದಲ್ಲಿಯೂ ; ನಿಯಮಃ = ನಿಶ್ಚಯವು ; ನ = ಇರುವುದಿಲ್ಲ. ಇತರ ದೇವತೆಗಳನ್ನು ಎಷ್ಟು ಸೇವಿಸಿದರೂ, ಅವರಿಂದ ನಾವು ಬಯಸುವಷ್ಟು ಫಲವೂ ದೊರೆ ತೀತೆಂಬ ನಿಶ್ಚಯವು ಇಲ್ಲ ; ತ್ವಂ = ನೀನಾದರೋ ; ಇಚ್ಛಾಧಿಕಂ ಅಪಿ = ಇಷ್ಟಪಟ್ಟದ್ದಕ್ಕಿಂತಲೂ ಹೆಚ್ಚಾಗಿಯೇ ; ಅರ್ಥಾನಾಂ = ಫಲಗಳ ; ವಿತರಣೇ = ಕೊಡುವುದರಲ್ಲಿ ; ಸಮರ್ಥಾ = ಶಕ್ತಳಾಗಿದ್ದೀಯೆ ;"—ಇತಿ = ಹೀಗೆಂದು ; ಕಮಲಭವನಾದ್ಯಾಃ = ಬ್ರಹ್ಮನೇ ಮೊದಲಾದ ; ಪ್ರಾಂಚಃ = ಪೂರ್ವಿಕರಾದ ಬಲ್ಲ ಪ್ರಾಜ್ಞರು ; ಪ್ರಾಹುಃ = ಪ್ರಮಾಣ ಸಮ್ಮತವಾಗಿ ಹೇಳುತ್ತಾರೆ ; ತತ್ = ಅವರ ಮಾತಿನ ನಂಬಿಕೆಯಿಂದ ; ಮನಃ = ನನ್ನ ಮನಸ್ಸು ; ಹೇ ಈಶಾನಿ = ಶ್ರೀಪರಮೇಶ್ವರಿಯೇ ; ತ್ವಯಿ = ನಿನ್ನಲ್ಲಿ ; ನಕ್ತಂ ದಿವಂ = ಹಗಲೂ ರಾತ್ರಿಯೂ ; ಯಾವಾಗಲೂ, ನಿರಂತರವೂ ; ಅಸಕ್ತಂ = ಶ್ರದ್ಧೆಯಿಂದ ಪ್ರೀತಿಯುಳ್ಳದ್ದಾಗಿದೆ ; ಅದಕಾರಣ ; ಉಚಿತಂ = ನಿನ್ನನ್ನೇ ನಂಬಿಕೊಂಡು ಆಶ್ರಯಿಸಿ, ನಿತ್ಯವೂ ನಿನ್ನ ಸೇವೆಯಲ್ಲಿಯೇ ನಿರತ ನಾಗಿರುವ ದೀನನಾದ ನನ್ನ ವಿಷಯದಲ್ಲಿ ಯಾವುದು ಉಚಿತವೆಂದು ನೀನು ತಿಳಿಯುತ್ತೀಯೋ ; ತತ್ = ಅದನ್ನು ; ಕುರು = ಮಾಡು ! ನಿನಗೆ ಪೂರ್ಣ ವಾಗಿ ಅಧೀನನಾಗಿದ್ದೇನೆ ; ನೀನು ಹೇಗೆ ಮಾಡಿದರೂ ಸರಿಯೇ, ಅದಕ್ಕೆ ನಾನು ಸಂತೋಷದಿಂದ ಬದ್ಧನಾಗುತ್ತೇನೆ. ॥ ೧೩ ॥

ಶ್ರೀಮಹಾದೇವಿಯ ದಿವ್ಯಸೌಭಾಗ್ಯದ ವೈಭವವನ್ನು ವರ್ಣಿಸು ತ್ತಾರೆ—

ಸ್ಫುರನ್ನಾನಾರತ್ನಸ್ಫಟಿಕಮಯಭಿತ್ತಿಪ್ರತಿಫಲ–
ತ್ತ್ವದಾಕಾರಂ ಚಂಚಚ್ಛಶಧರವಿಲಾಸೌಘಶಿಖಿರಂ ।
ಮುಕುಂದಬ್ರಹ್ಮೇಂದ್ರಪ್ರಭೃತಿಪರಿವಾರಂ ವಿಜಯತೇ
ತವಾಗಾರಂ ರಮ್ಯಂ ತ್ರಿಭುವನಮಹಾರಾಜಗೃಹಿಣಿ ॥ ೧೪ ॥

ಹೇ ತ್ರಿಭುವನಮಹಾರಾಜಗೃಹಿಣಿ—ತ್ರಿಭುವನ = ಮೂರೂ ಲೋಕ ಗಳ ; ಮಹಾರಾಜ = ಪರಮಾಧಿಪತಿಯಾಗಿರುವ ಶ್ರೀಪರಮೇಶ್ವರನ ;

Sri Vidyaranya Sanskrit Book Centre, Sringeri

CC-O. In Public Domain. Digitized by eGangotri

ಗೃಹಿಣೀ = ಪಟ್ಟದ ಮಹಾರಾಣಿಯಾಗಿರುವ ಹೇ ಪಾರ್ವತೀದೇವಿಯೇ ; **ರಮ್ಯಂ** = ಲೋಕೋತ್ತರವಾದ ರಾಮಣೀಯಕತೆಯಿಂದ ಶೋಭಿಸುತ್ತಿರುವ; **ತವ ಆಗಾರಂ** = ನಿನ್ನ ಅರಮನೆಯು ; **ಸ್ಫುರನ್ನಾ ನಾರತ್ನಸ್ಫಟಿಕಮಯಭಿತ್ತಿ ಪ್ರತಿಫಲತ್ತ್ವದಾಕಾರಂ—ಸ್ಫುರತ್** = ಹೊಳೆಯುತ್ತಿರುವ ; **ನಾನಾರತ್ನ** = ಅನೇಕ ವಿಧ ರತ್ನಗಳಿಂದ ಖಚಿತಗಳಾದ ; **ಸ್ಫಟಿಕಮಯಭಿತ್ತಿ** = ಸ್ಫಟಿಕಶಿಲೆಗಳಿಂದ ಕಟ್ಟಿರುವ ಗೋಡೆಗಳಲ್ಲಿ; **ಪ್ರತಿಫಲತ್** = ಪ್ರತಿಬಿಂಬಿಸುತ್ತಿರುವ; **ತ್ವದಾಕಾರಂ** = ನಿನ್ನ ಆಕಾರವುಳ್ಳದ್ದಾಗಿಯೂ ; ನಿನ್ನ ದಿವ್ಯಸೌಧದ ಒಳ ಭಾಗಗಳು ನಾನಾವಿಧ ರತ್ನಗಳಿಂದ ಖಚಿತಗಳಾದ ಸ್ಫಟಿಕದ ಗೋಡೆಗಳಿಂದ ಅಲಂಕೃತಗಳಾಗಿವೆ ; ಅವುಗಳಲ್ಲಿ ನೀನು ಸಂಚರಿಸುವಾಗ ಆ ರತ್ನಗಳಲ್ಲಿಯೂ ಗೋಡೆಗಳಲ್ಲಿಯೂ ಅನೇಕವಿಧವಾಗಿ ನಿನ್ನ ಪ್ರತಿಬಿಂಬಗಳು ಕಂಡುಬರುತ್ತ— 'ನೀನು ಎಲ್ಲ ಕಡೆಗಳಲ್ಲಿಯೂ ಪೂರ್ಣವಾಗಿ ತುಂಬಿಕೊಂಡಿದ್ದೀಯೆ' ಎಂಬ ಶಾಸ್ತ್ರೋಪದಿಷ್ಟವಾದ ತತ್ತ್ವವು ಇಲ್ಲಿ ಸ್ಪಷ್ಟವಾಗಿ ತಿಳಿದುಬರುವಂತಿದೆ.

ಮತ್ತು : ನಿನ್ನ ಅರಮನೆಯ **ಚಂಚಚ್ಛಶಧರವಿಲಾಸೌಧಶಿಖರಂ—ಚಂಚತ್** = ಪ್ರಕಾಶಿಸುತ್ತಿರುವ ; **ಶಶಧರ** = ಪೂರ್ಣಚಂದ್ರನ; **ವಿಲಾಸೌಧ** = ವಿಲಾಸಗಳ ಸಮೂಹವನ್ನುಳ್ಳ : **ಶಿಖರಂ** = ಗೋಪುರದ ಶಿಖರವನ್ನುಳ್ಳದ್ದಾಗಿದೆ. **ಶಶಧರ** = ಮೊಲವನ್ನು ಧರಿಸಿದ—ಎಂದು ಅರ್ಥವು. ಚಂದ್ರನಲ್ಲಿ ಮೊಲದ ಚಿಹ್ನೆಯು ಕಾಣಬರುವುದರಿಂದ ಚಂದ್ರನು ಶಶಧರನೆಂದು ಹೇಳಲ್ಪಡುತ್ತಾನೆ. ಮೊಲದ ಗುರುತು ಪೂರ್ಣ ಚಂದ್ರನಲ್ಲಿಯೇ ಕಂಡುಬರುವುದರಿಂದ ಪೂರ್ಣಚಂದ್ರನೇ ಶಶಧರ ಶಬ್ದಕ್ಕೆ ಮುಖ್ಯವಾದ ಅರ್ಥವಾಗುವುದು, ಇಂಥ ಪೂರ್ಣಚಂದ್ರನ ವಿಹಾರಗಳಿಗೆಲ್ಲ ದೇವಿಯ ಅರಮನೆಯ ಗೋಪುರದ ಶಿಖರವೇ ಸ್ಥಾನವಾಗಿರುತ್ತದೆ— ಎಂದರೆ, ಪೂರ್ಣಚಂದ್ರನ ಬೆಳದಿಂಗಳಿನಿಂದಲೋ ಎಂಬಂತೆ ದೇವಿಯ ಅರಮನೆಯ ಶಿಖರವು ಯಾವಾಗಲೂ ಶುಭ್ರವಾಗಿ ದೇದೀಪಿಸುತ್ತಿದೆಯೆಂದು ತಾತ್ಪರ್ಯವು.

ಮತ್ತು : ನಿನ್ನ ಅರಮನೆಯು ಹೇ ದೇವಿಯೇ **ಮುಕುಂದಬ್ರಹ್ಮೇಂದ್ರ ಪ್ರಮುಖಪರಿವಾರಂ—ಮುಕುಂದ** = ಶ್ರೀಮಹಾವಿಷ್ಣುವು ; **ಬ್ರಹ್ಮಾ**

Sri Vidyabharathi Book Centre, Shringeri

CC-O. In Public Domain. Digitized by eGangotri

ಜಗತ್ಸೃಷ್ಟಿಕರ್ತೃವಾಗಿ ಬ್ರಹ್ಮಲೋಕಾಧಿಪತಿಯಾದ ಬ್ರಹ್ಮದೇವನು; ಇಂದ್ರ = ಸ್ವರ್ಗಲೋಕಾಧಿಪತಿಯಾದ ದೇವರಾಜನಾದ ಇಂದ್ರನು; ಪ್ರಭೃತಿ = ಇವರೇ ಮೊದಲಾದ ದೇವ, ಋಷಿ, ಗಂಧರ್ವ, ಯಕ್ಷ–ಮುಂತಾದ ದಿವ್ಯಪುರುಷರ; ಪರಿವಾರಂ = ಸೇವಕರನ್ನು ಉಳ್ಳದ್ದಾಗಿದೆ. ಇಂದ್ರ, ಬ್ರಹ್ಮ, ವಿಷ್ಣು—ಮೊದಲಾದ ಎಲ್ಲ ದೇವತೆಗಳೂ ನಿನ್ನ ಆರಮನೆಯಲ್ಲಿ ಕಿಂಕರರಾಗಿ ಸೇವೆ ಮಾಡುತ್ತಿದ್ದಾರೆ. ನೀನು ಸರ್ವದೇವವ್ಯಂದ ಸೇವ್ಯಳಾಗಿದ್ದೀಯೆ! ಇಂಥ ಸೌಭಾಗ್ಯಾತಿಶಯದಿಂದ ನಿನ್ನ ಆರಮನೆಯು ವಿಜಯತೇ = ಸರ್ವೋತ್ಕೃಷ್ಟತೆಯಿಂದ ಬೆಳಗುತ್ತಿದೆ—೧೪.

ಹೇ ದೇವಿ, ನಿನ್ನ ಸೌಭಾಗ್ಯಕ್ಕೆ ಎಣೆಯುಂಟೇ ?

ನಿವಾಸಃ ಕೈಲಾಸೇ ವಿಧಿಶತಮುಖಾದ್ಯಾಃ ಸ್ತುತಿಕರಾಃ
ಕುಟುಂಬಂ ತ್ರೈಲೋಕ್ಯಂ ಕೃತಕರಪುಟಃ ಸಿದ್ಧಿನಿಕರಃ ।
ಮಹೇಶಃ ಪ್ರಾಣೇಶಸ್ತದವನಿಧರಾಧೀಶತನಯೇ
ನ ತೇ ಸೌಭಾಗ್ಯಸ್ಯ ಕ್ವಚಿದಪಿ ಮನಾಗಪ್ಯಿ ತುಲನಾ ॥ ೧೫ ॥

ಕೈಲಾಸೇ=ಬ್ರಹ್ಮಾಂಡದಲ್ಲಿ ಸರ್ವೋತ್ತಮವೆನಿಸಿರುವ ಬೆಳ್ಳಿಯ ಬೆಟ್ಟವಾದ ಕೈಲಾಸವೇ; **ನಿವಾಸಃ** = ನಿನ್ನ ವಾಸಸ್ಥಾನವು; **ವಿಧಿಶತ ಮುಖಾದ್ಯಾಃ**=ಬ್ರಹ್ಮ, ಇಂದ್ರ—ಮೊದಲಾದ ದೇವೋತ್ತಮರೇ; **ಸ್ತುತಿಕರಾಃ**=ನಿನ್ನ ವಂದಿಮಾಗಧರು; **ತ್ರೈಲೋಕ್ಯಂ** = ಮೂರು ಲೋಕವೇ; **ಕುಟುಂಬಂ** = ನಿನ್ನ ಪೋಷಣೆಗೆ ಒಳಪಟ್ಟದ್ದು; **ಸಿದ್ಧಿ ನಿಕರಃ** = ಅಣಿಮಾ, ಮಹಿಮಾ—ಮುಂತಾದ ಅಷ್ಟ ಸಿದ್ಧಿಗಳೂ; **ಕೃತಕರಪುಟಃ**=ಕೈ ಮುಗಿದುಕೊಂಡು ನಿನ್ನ ಆಜ್ಞೆಯನ್ನು ಎದುರು ನೋಡುತ್ತಿರುವುವು; **ಮಹೇಶಃ**=ನಿಖಿಲ ಜಗದೇಕ ಸಾರ್ವಭೌಮನಾಗಿರುವ ಶ್ರೀಪರಮೇಶ್ವರನೇ, **ಪ್ರಾಣೇಶಃ**=ಪ್ರಾಣಕ್ಕಿಂತಲೂ ಅತಿಶಯವಾದ ಭಕ್ತಿಗೂ, ಪ್ರೀತಿಗೂ ಪಾತ್ರನಾದ ನಿನ್ನ ಪತಿಯಾಗಿದ್ದಾನೆ; **ತತ್**=ಆದ್ದರಿಂದ; **ಅವನಿಧರಾಧೀಶತನಯೇ–ಅವನಿಧರಾಧೀಶ**=ಪರ್ವತ ರಾಜನಾದ ಹಿಮವಂತನ; **ತನಯೇ**=ಪ್ರಿಯ ಕುವರಿಯಾಗಿರುವ ಹೇ ಪಾರ್ವತಿಯೇ; **ತೇ**=ನಿನ್ನ;

Sri Vidyabharathi Book Centre, Sringeri

CC-O. In Public Domain. Digitized by eGangotri

ಸೌಭಾಗ್ಯಸ್ಯ = ಮಹಿಮೆಗೆ ; ಕ್ವಚಿತ್ ಅಪಿ = ಲೋಕದಲ್ಲಿ ಎಲ್ಲಿಯೂ ; ಮನಾಕ್ = ಅಲ್ಪವಾಗಿಯೂ ; ತುಲನಾ = ಹೋಲಿಕೆಯು ; ನ = ಇರುವುದಿಲ್ಲ. ಇಂಥ ಸೌಭಾಗ್ಯಶಾಲಿಗಳು ಯಾರಿದ್ದಾರೆ ?— ॥ ೧೫ ॥

ಶ್ರೀಪಾರ್ವತೀ ದೇವಿಗಿಂತಲೂ ಆಕೆಗೂ ಆರಾಧ್ಯನಾಗಿರುವ ಆಕೆಯ ಪತಿಯಾದ ಶ್ರೀಪರಮೇಶ್ವರನು ಹೆಚ್ಚು ಸೌಭಾಗ್ಯಶಾಲಿಯಲ್ಲವೇ ?— ಎಂದರೆ, ಹೌದು ; ಆದರೆ ಶ್ರೀಪರಮೇಶ್ವರನ ಸೌಭಾಗ್ಯಕ್ಕೂ ದೇವಿಯೇ ಕಾರಣಳಾಗಿದ್ದಾಳೆ—ಎಂದು ಸ್ತುತಿಸುತ್ತಾರೆ—

ವೃಷೋ ವೃದ್ಧೋ ವಿಷಮಶನಮಾಶಾ ನಿವಸನಂ
ಶ್ಮಶಾನಂ ಕ್ರೀಡಾಭೂರ್ಭುಜಗನಿವಹೋ ಭೂಷಣವಿಧಿಃ
ಸಮಗ್ರಾ ಸಾಮಗ್ರೀ ಜಗತಿ ವಿದಿತೈವ ಸ್ಮರರಿಪೋಃ
ಯದೇತಸ್ಯೈಶ್ವರ್ಯಂ ತವ ಜನನಿ ಸೌಭಾಗ್ಯಮಹಿಮಾ ॥ ೧೬ ॥

ಸ್ಮರರಿಪೋಃ = ಮನ್ಮಥನ ಶತ್ರುವಾಗಿರುವ ; ಎಲ್ಲ ಲೌಕಿಕ ಸುಖಕ್ಕೂ ಕಾರಣನು ಮನ್ಮಥನು—ಕಾಮನು ! ಇವನನ್ನೇ ದ್ವೇಷಿಸಿ ಸುಟ್ಟು ನಾಶ ಮಾಡಿರುವ ಶಿವನಿಗೆ ಯಾವ ಸೌಖ್ಯ ತಾನೇ ಇದ್ದೀತು ? ಇದು ಪ್ರತ್ಯಕ್ಷವೇ ಇದೆಯಲ್ಲವೆ ? ಹೇಗೆಂದರೆ,—ಇವನಿಗೆ ಯಾನಂ = ಸಂಚಾರಕ್ಕೆ ಸಾಧನವಾದ ವಾಹನವು ; ವೃದ್ಧೋ ವೃಷಃ = ಒಂದು ಮುದಿಯೆತ್ತು—ಬೇರೆ ಯಾವುದೂ ಇವನಿಗೆ ಸಿಕ್ಕಲಿಲ್ಲ ; ಅಶನಂ = ಊಟದ ಆಹಾರವೋ ; ವಿಷಂ = ವಿಷವು—ಬೇರೆ ಯಾವ ಆಹಾರವೂ ದೊರೆಯಲಿಲ್ಲ ; ನಿವಸನಂ = ಬಟ್ಟೆಯೋ : ಆಶಾಃ = ದಿಕ್ಕುಗಳೇ—ಯಾರೂ ಇವನಿಗೆ ಹರಕು ಬಟ್ಟೆಯನ್ನೂ ಸಹ ಕೊಡಲಿಲ್ಲ ; ಕ್ರೀಡಾಭೂಃ = ವಿಹಾರ ಸ್ಥಳವೋ ; ಶ್ಮಶಾನಂ = ಸುಡುಗಾಡು—ಬೇರೆ ಎಲ್ಲಿಯೂ ಇವನನ್ನು ಸೇರಿಸಲಿಲ್ಲ ; ಭೂಷಣವಿಧಿಃ = ಅಲಂಕಾರದ ವಸ್ತುವೋ ; ಭುಜಗನಿವಹಃ = ಹಾವುಗಳ ಗುಂಪು, ಬೇರೆ ಅಲಂಕಾರವಾವುದೂ ಸಿಗಲಿಲ್ಲ ; ಈ ರೀತಿಯಲ್ಲಿರುವ ಸ್ಮರರಿಪೋಃ = ಕಾಮನ ಶತ್ರುವಾಗಿರುವ ಈಶ್ವರನ ; ಸಮಗ್ರಾ ಸಾಮಗ್ರೀ = ಪೂರ್ಣೈಶ್ವರ್ಯವು ; ಜಗತಿ = ಲೋಕದಲ್ಲಿ ; ವಿದಿತಾ ಏವ = ಎಲ್ಲರಿಗೂ ತಿಳಿದಿರುವುದಲ್ಲವೇ ? ಆದರೆ ;

Sri Vidyabharathi Book Centre, Sringeri

CC-O. In Public Domain. Digitized by eGangotri

ಏತಸ್ಯ = ಈ ಈಶ್ವರನ : ಯತ್ = ಈಗ ಇರುವ ಯಾವ ; ಐಶ್ವರ್ಯಂ = ಸಂಪತ್ಸಾಭಾಗ್ಯವು ಇದೆಯೋ; ಹೇ, ಜನನಿ = ಜಗನ್ಮಾತೆಯಾದ ಅಂಬಿಕೆಯೇ; ಇದು ತವ = ನಿನ್ನ ; ಸೌಭಾಗ್ಯಮಹಿಮಾ = ಸೌಭಾಗ್ಯದ ಮಹಿಮೆಕಣಮ್ಮ ! ಕೈ ಹಿಡಿದ ಹೆಂಡತಿಯ ಪುಣ್ಯದಿಂದ ನಿರ್ಭಾಗ್ಯನೂ ಭಾಗ್ಯವಂತನಾಗುತ್ತಾನೆ; ಆಕೆಯ ದೌರ್ಭಾಗ್ಯದಿಂದ ಸೌಭಾಗ್ಯಶಾಲಿಯೂ ಅಭಾಗ್ಯನಾಗುತ್ತಾನೆಂಬುದು ಲೋಕದಲ್ಲಿ ಪ್ರಸಿದ್ಧವೇ ಇದೆ. ನಿರ್ಗತಿಕನಾಗಿದ್ದ ಈಶ್ವರನು ಈಗ ಜಗದೈಶ್ವರ್ಯ ಶಾಲಿಯಾಗಿರುವುದು, ಮಹಿಮಾಶಾಲಿನಿಯಾದ ದೇವಿಯ ಕೈ ಹಿಡಿದ ಭಾಗ್ಯವೇ ಹೊರತು, ಬೇರೆಯಲ್ಲವೆಂದು ಅಭಿಪ್ರಾಯವು.

ಇದು ಸ್ಥೂಲ ದೃಷ್ಟಿಯಿಂದ ತೋರುವ ಅರ್ಥವು. ಇದರ ನಿಜವಾದ ಅರ್ಥವೇ ಬೇರೆ. ವೃಷ—ಎಂದರೆ ಧರ್ಮವೆಂದರ್ಥವು. ವೃದ್ಧವೃಷ ವೆಂದರೆ ಪುಷ್ಕಳವಾಗಿರುವ ಧರ್ಮವು. ಶ್ರುತಿಸ್ಮೃತಿಗಳಲ್ಲಿ ಅವರವರು ಅನುಷ್ಠಿಸತಕ್ಕದ್ದೆಂದು ವಿಹಿತವಾಗಿರುವ ಶ್ರೇಯಸ್ಕರವಾದ ಕರ್ಮವೇ ಧರ್ಮವು. ಇದನ್ನು ನಿಷ್ಕಾಮವಾಗಿ, ಎಂದರೆ—ಈಶ್ವರಸೇವೆಯೆಂಬ ಭಾವನೆಯಿಂದ ಅನುಷ್ಠಿಸುವುದು ಧರ್ಮದ ವೃದ್ಧಿ—ಪೌಷ್ಕಲ್ಯ. ಇಂಥ ಈಶ್ವರಾರ್ಪಿತವಾಗಿ ಅನುಷ್ಠಿಸಿದ ಸ್ವಧರ್ಮವು ಚಿತ್ತಶುದ್ಧಿ—ಜ್ಞಾನಪ್ರಾಪ್ತಿಯ ಮೂಲಕ ಪರಮಪುರುಷಾರ್ಥರೂಪನಾದ ಪರಮಾತ್ಮನ, ಯಾನಂ = ಪ್ರಾಪ್ತಿಗೆ ಮುಖ್ಯ ಸಾಧನವು—ಎಂದು ತಾತ್ಪರ್ಯವು !

ಹಾಗೆಯೇ—'ವಿಷಂ ಅಶನಂ'—ಎಂದರೆ, ದೇವಾಸುರರು ಕ್ಷೀರ ಸಮುದ್ರವನ್ನು ಅಮೃತಕ್ಕಾಗಿ ಕಡೆದಾಗ, ಸಕಲ ಜಗತ್ತನ್ನೂ ನಾಶಮಾಡುವಂಥ ಕಾಲಕೂಟ ವಿಷವು ಹುಟ್ಟಿತು. ಆದರಿಂದ ಭಯಪಟ್ಟು ದೇವಾದಿಗಳೆಲ್ಲ ಓಡಿಹೋದರು. ಆಗ ಶ್ರೀಪರಶಿವನು ಮುಂದೆ ಬಂದು ಅಭಯವನ್ನಿತ್ತು ಆ ವಿಷವನ್ನೆಲ್ಲ ಕುಡಿದು ಜಗತ್ತನ್ನು ರಕ್ಷಿಸಿದನು. ಬೇರೆ ಯಾರಿಂದಲೂ ಆಗದಿದ್ದ ಇಂಥ ವಿಪತ್ತನ್ನು ಪರಿಹರಿಸಿ ಜಗತ್ತನ್ನು ರಕ್ಷಿಸಿದ ಮಹಾತ್ಮನು ಶ್ರೀಪರಶಿವನು—ಎಂದು ತಾತ್ಪರ್ಯವು !

'ಆಶಾಃ ನಿವಸನಂ' = ಬೇಡಿ ಬೇಡಿ ಬರುವ ಭಕ್ತವೃಂದಕ್ಕೆ ಬೇಕು

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಕಾದುದನ್ನೆಲ್ಲ ನಿಸ್ಸಂಕೋಚವಾಗಿ ಅನುಗ್ರಹಿಸುತ್ತ, 'ತನಗೆ ಬೇಕು'— ಎಂದು ಯಾವುದನ್ನೂ ಆಶಿಸದವನು ಶ್ರೀಪರಶಿವನು! ಯಾವುದರಲ್ಲಿಯೂ ಆಸೆಯಿಲ್ಲದವನು—ಎಂದು ಅರ್ಥವು!

'ಸ್ಮಶಾನಂ ಕ್ರೀಡಾಭೂಃ' = ಮಹಾಪ್ರಳಯದಲ್ಲಿ ಹರಿಬ್ರಹ್ಮೇಂದ್ರಾದಿ ಸಹಿತವಾಗಿ ಸಮಸ್ತ ಬ್ರಹ್ಮಾಂಡವೂ ಮಾಯೆಯಲ್ಲಿ ಲಯ ಹೊಂದುವುದರಿಂದ, ಮಹಾ ಪ್ರಳಯ ಕಾಲದ ಮಾಯೆಯು ಜಗತ್ತಿನ ಸ್ಮಶಾನವು. ಆ ಸಮಯದಲ್ಲಿ ನಿರಪಾಯನಾಗಿ ಸ್ವಸ್ವರೂಪದಿಂದ ಶ್ರೀಪರಶಿವನೊಬ್ಬನೇ ಬೆಳಗುತ್ತಿರುವನೆಂಬ ಅಭಿಪ್ರಾಯದಿಂದ ಇವನನ್ನು **'ಸ್ಮಶಾನವಿಹಾರೀ'** ಎನ್ನುತ್ತಾರೆ!

'ಭುಜಗನಿವಹೋ ಭೂಷಣವಿಧಿಃ' = ಹಾವುಗಳು ಭಯಂಕರವಾದವುಗಳು; ಇವುಗಳನ್ನು ಲೋಕದಲ್ಲಿ ಎಲ್ಲರೂ ದೂರಮಾಡುತ್ತಾರೆಯೇ ಹೊರತು ಯಾರೂ ಇವುಗಳನ್ನು ಸ್ವೀಕರಿಸುವುದಿಲ್ಲ. ಇದರಂತೆ, ಶ್ರೀಪರಮೇಶ್ವರನಿಗೆ ಆಲಂಕಾರಗಳಂತೆ ಪ್ರಿಯಗಳಾಗಿರುವ ಶೌಚಾಚಾರಾದಿ ನಿಯಮ ಪೂರ್ವಕಗಳಾದ ಸ್ವಧರ್ಮಾನುಸರಣೆಗಳು, ವಸ್ತುತಃ ಶ್ರೇಯಸ್ಕರಗಳಾಗಿದ್ದರೂ, ಯಾರಿಗೂ ಇವು ಬೇಕಾಗಿರುವುದಿಲ್ಲ; ಇವುಗಳಿಗೆ ಎಲ್ಲರೂ ಹೆದರಿ ದೂರ ಹೋಗುತ್ತಾರೆ. ಆದರೂ ಇವು ಶ್ರೀಪರಮೇಶ್ವರನಿಗೆ ಅತ್ಯಂತ ಪ್ರಿಯಗಳಾಗಿ ಆಲಂಕಾರಗಳಂತಿರುವುದರಿಂದ. ಶ್ರೀಪರಮೇಶ್ವರನ ಅನುಗ್ರಹವನ್ನು ಪಡೆಯುವುದಕ್ಕಾಗಿ ಶ್ರೇಯಸ್ಕಾಮಿಗಳು ತಮ್ಮ ತಮ್ಮ ಸಂಪ್ರದಾಯಗಳಿಗೆ ತಕ್ಕ ಆಚಾರಾದಿ ನಿಯಮಗಳನ್ನು ಯಥಾವತ್ತಾಗಿ ಅನುಸರಿಸುತ್ತ ಸ್ವಧರ್ಮ ನಿರತರಾಗಬೇಕೆಂದು ಅಭಿಪ್ರಾಯವು!

ಮತ್ತು: ಶ್ರೀಪರಮಾತ್ಮನ ಐಶ್ವರ್ಯವೆಂದರೆ ಜಗತ್ತಿನ ಸೃಷ್ಟಿ ಸ್ಥಿತಿಲಯಗಳನ್ನು ನಡೆಸುತ್ತಿರುವುದು. ನಿರ್ಗುಣನಾದ ಪರಮಾತ್ಮನಿಗೆ ಈ ಕರ್ತೃತ್ವಾದಿಗಳು ವಸ್ತುತಃ ಸಂಭವಿಸುವುದಿಲ್ಲ; ಈಶ್ವರನಿಗೆ ಉಪಾಧಿಯಾಗಿರುವ ಮಾಯೆಯ ಮೂಲಕವೇ ಇದು ಆಗುತ್ತದೆ. ಆದ್ದರಿಂದ

CC-O. In Public Domain. Digitized by eGangotri

ಮಾಯೆಯ ಸಂಬಂಧದಿಂದಲೇ ಶ್ರೀಪರಮೇಶ್ವರನ ಜಗದೀಶ್ವರತ್ವವು ಆಗಿರುವುದೆಂಬುದು ಯಥಾರ್ಥವೇ ಆಗಿರುತ್ತದೆಯೆಂದು ವಸ್ತುಸ್ಥಿತಿಯು— ೧೭.

ಜಗತ್ತನ್ನು ರಕ್ಷಿಸುವಿಕೆಯೆಂಬ ಜಗದೀಶ್ವರತ್ವವು ಶ್ರೀಪರಮೇಶ್ವರನಿಗೆ ದೇವಿಯಿಂದಲೇ ಉಂಟಾಗಿರುವುದೆಂಬುದನ್ನು ವರ್ಣಿಸುತ್ತಾರೆ—

ಅಶೇಷಬ್ರಹ್ಮಾಂಡಪ್ರಳಯವಿಧಿನೈಸರ್ಗಿಕಮತಿಃ
ಸ್ಮಶಾನೇಷ್ವಾಸೀನಃ ಕೃತಭಸಿತಲೇಪಃ ಪಶುಪತಿಃ
ದಧೌ ಕಂಠೇ ಹಾಲಾಹಲಮಖಿಲಭೂಗೋಲಕೃಪಯಾ
ಭವತ್ಯಾಃ ಸಂಗತ್ಯಾಃ ಫಲಮಿತಿ ಚ ಕಲ್ಯಾಣಿ ಕಲಯೇ ॥ ೧೭ ॥

ಪರಮಾತ್ಮನು ನಿತ್ಯವೂ ನಿರ್ವಿಕಾರಸ್ವರೂಪನಾದ್ದರಿಂದ ಕರ್ತೃತ್ವಾದಿ ವಿಕಾರಗಳು ಅವನಲ್ಲಿ ಸಂಭವಿಸುವುದಿಲ್ಲ. ತ್ರಿಗುಣಾತ್ಮಕವಾದ ಮಾಯೆಯ ಉಪಾಧಿಯಿಂದ ಸಗುಣನಾದ ತುರೀಯ ಪರಮೇಶ್ವರನೂ ವಸ್ತುತಃ ನಿರ್ವಿಕಾರನೂ ನಿರಾಕಾರನೂ ಆಗಿರುತ್ತಾನೆ. ಮಾಯೆಯ ಗುಣಗಳಲ್ಲಿ ಒಂದೊಂದೂ ಪ್ರಧಾನವಾದಾಗ ಶ್ರೀಪರಮೇಶ್ವರನು ಬ್ರಹ್ಮ, ವಿಷ್ಣು, ರುದ್ರ—ಎಂದೆನಿಸಿ, ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ಮಾಡುತ್ತಾನೆ. ಈತ್ರಿಮೂರ್ತಿಗಳಲ್ಲಿ ಬ್ರಹ್ಮವಿಷ್ಣುಗಳಿಗಿಂತಲೂ ರುದ್ರನಲ್ಲಿ ಶ್ರೀಪರಮೇಶ್ವರನ ಸಾಮ್ಯವು ವಿಶೇಷವಾಗಿರುತ್ತದೆಂದು ಶಾಸ್ತ್ರವು ತಿಳಿಸುತ್ತದೆ. ಈ ಕಾರಣದಿಂದ ಅನೇಕ ಸಂದರ್ಭಗಳಲ್ಲಿ ಶ್ರೀಪರಮೇಶ್ವರನ ಮಹಿಮೆಯನ್ನು ರುದ್ರನದೆಂದೂ, ರುದ್ರನ ಕಾರ್ಯಗಳನ್ನು ಶ್ರೀಪರಮೇಶ್ವರನದೆಂದೂ ಪುರಾಣಾದಿಗಳಲ್ಲಿ ವರ್ಣಿಸಿರುತ್ತದೆ. ಈ ವಿಶೇಷವನ್ನು ತಿಳಿಯದೆ, ಗುಣರುದ್ರನೇ ಪರಮೇಶ್ವರನು, ಗುಣರುದ್ರನಿಗಿಂತ ಬೇರೆ ಪರಮೇಶ್ವರನು ಇಲ್ಲವೆಂದು ಅನೇಕರಿಗೆ ಭ್ರಾಂತಿಗೆ ಅವಕಾಶವಾಗಿರುತ್ತದೆ. ಪ್ರಕೃತದಲ್ಲಿ ಗುಣರುದ್ರನಲ್ಲಿರುವ ಜಗತ್ಸಂಹಾರಾದಿಕಾರ್ಯಗಳನ್ನು ಶ್ರೀಪರಮೇಶ್ವರನಲ್ಲಿ ಆರೋಪಿಸಿ ಹೇಳುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಶೇಷಬ್ರಹ್ಮಾಂಡಪ್ರಳಯವಿಧಿನೈಸರ್ಗಿಕಮತಿಃ—ಅಶೇಷ ಬ್ರಹ್ಮಾಂಡ= ಸಮಸ್ತ ಪ್ರಪಂಚದ. ಪ್ರಳಯವಿಧಿ=ನಾಶ ಮಾಡುವಿಕೆಯಲ್ಲಿಯೇ, ನೈಸರ್ಗಿಕ=ಸಹಜವಾದ, ಮತಿಃ = ಬುದ್ಧಿಯುಳ್ಳವನೂ ; **ಸ್ಮಶಾನೇಷು ಆಸೀನಃ** = ಸ್ಮಶಾನದಲ್ಲಿಯೇ ವಾಸಮಾಡುವವನೂ ; ಸಂಧ್ಯಾಕಾಲದಲ್ಲಿ ಪ್ರಮಥಾದಿ ಭೂತಗಣಗಳು ಜಗತ್ತನ್ನು ಹಿಂಸಿಸಲು ಉದ್ಯುಕ್ತರಾಗುತ್ತಾರೆ. ಆಗ ಅವರನ್ನು ಅದರಿಂದ ತಪ್ಪಿಸಿ ಆಟವಾಡಿಸುತ್ತ ಶ್ರೀಶಿವನು ಸ್ಮಶಾನದಲ್ಲಿ ಇರುವನು. ಜಗದ್ರಕ್ಷಣೆಗಾಗಿಯೇ ಸ್ಮಶಾನವಾಸಿಯೆಂದರ್ಥ. **ಕೃತಭಸಿತ ಲೇಪಃ**—**ಕೃತ** = ಮಾಡಿಕೊಂಡಿರುವ ; **ಭಸಿತಲೇಪಃ** = ಬೂದಿಯ ಲೇಪನ ವುಳ್ಳವನೂ,—ಬೂದಿಯನ್ನು ಮೈ ತುಂಬ ಬಳಿದುಕೊಂಡಿರುವವನೂ ; ಆಗಿರುವ, **ಪಶುಪತಿಃ** = ದೊಡ್ಡ ಪಶುವಿನಂತೆ ಇರುವ ಈ ಈಶ್ವರನು ; ಕೊಬ್ಬಿ ಬೆಳೆದಿರುವ ಪಶುಪತಿಯು ಎಂದರೆ, ದೊಡ್ಡ ಗೂಳಿಯು ಎದುರಿಗೆ ಸಿಕ್ಕಿದವರನ್ನೆಲ್ಲಾ ನಾಶ ಮಾಡುತ್ತ, ಬೇರೆ ಕಡೆಯಲ್ಲಿ ಸ್ಥಳವು ಸಿಗದೆ ಸ್ಮಶಾನದಲ್ಲಿ ಇದ್ದು, ಮೈಯೆಲ್ಲವನ್ನೂ ಬೂದಿಯಿಂದ ಕೊಳೆ ಮಾಡಿಕೊಂಡು ಇರುವಂತೆ, ಈಶ್ವರನೂ ಇದ್ದಾನೆಂದು ಭಾವವು. ಇಂಥ ಈಶ್ವರನು **ಹಾಲಾಹಲಂ** = ಸಮುದ್ರಮಥನಕಾಲದಲ್ಲಿ ಹುಟ್ಟಿ ಜಗತ್ತನ್ನೇನಾಶಪಡಿಸುತ್ತಿದ್ದ ಕಾಲಕೂಟವಿಷವನ್ನು ; **ಅಖಿಲ ಭೂಗೋಳಕೃಪಯಾ**—**ಅಖಿಲ** = ಸಮಸ್ತ ; **ಭೂಗೋಳ** = ಪ್ರಪಂಚದ ಮೇಲಿನ—ಇಲ್ಲಿ ಭೂಗೋಳವೆಂದು ಹೇಳಿದುದು ಎಲ್ಲ ಲೋಕವೆಂಬ ಅಭಿಪ್ರಾಯದಿಂದ ಆಗಿದೆ ; —**ಕೃಪಯಾ** = ದಯೆಯಿಂದ ; **ಕಂಠೇದಧೌ** = ಕತ್ತಿನಲ್ಲಿಯೇ ಧರಿಸಿದನು. ತಾನೂ ನಾಶ ಹೊಂದದೆ, ಲೋಕದ ನಾಶವನ್ನೂ ತಪ್ಪಿಸುವಂತೆ, ಭಯಂಕರವಾದ ಈ ವಿಷವನ್ನು ಕಂಠದಲ್ಲಿಯೇ ಧರಿಸಿದನಷ್ಟೆ ! ವಿವೇಕವಿಲ್ಲದ ಈಶ್ವರನು ಈ ಉತ್ತಮ ಕಾರ್ಯವನ್ನು ಇಷ್ಟು ಉಪಾಯದಿಂದ ಮಾಡಿರುವುದನ್ನು ನೋಡಿದರೆ, **ಹೇ ಕಲ್ಯಾಣಿ** = ಸರ್ವ ಮಂಗಳೇ ; ಇದು **ಭವತ್ಯಾಃ** = ನಿನ್ನ ; **ಸಂಗತ್ಯಾಃ** = ಸಹವಾಸದ ; **ಫಲಂ** = ಫಲವೆಂದು ; **ಕಲಯೇ** = ನಾನು ತಿಳಿಯುತ್ತೇನೆ !

ಲೋಕದಲ್ಲಿ ಏನಾದರೊಂದು ಅನಿಷ್ಟವು ಉಂಟಾದರೆ, ಯಾರಿಗೂ ಬೇಡವಾದವನನ್ನು ಅದಕ್ಕೆ ಗುರಿ ಮಾಡಿ ಅವರ ಪ್ರಾಣವನ್ನು ತಪ್ಪಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಳ್ಳುವುದುಂಟು. ಇದರಂತೆ, ಅಕಾಲದಲ್ಲಿ ಜಗತ್ತಿನ ಪ್ರಳಯವನ್ನೇ ಮಾಡುತ್ತಿದ್ದ ಕಾಲಕೂಟವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ದೇವತೆಗಳೆಲ್ಲರೂ, ಹುಚ್ಚನಂತಿದ್ದ ಈಶ್ವರನನ್ನು—ಅದನ್ನು ಕುಡಿಯುವಂತೆ ಪ್ರೇರಿಸಿದರು; ತಿಳಿವಳಿಕೆಯಿಲ್ಲದ ಈಶ್ವರನೂ, ಅವರ ಸ್ತುತಿಗೆ ಮರುಳಾಗಿ, ಆ ವಿಷವನ್ನು ಪೂರ್ತಿಯಾಗಿ ಕುಡಿದುಬಿಟ್ಟನು. ಆದರೆ ಕಲ್ಯಾಣಿ = ಸರ್ವ ಮಂಗಳೆಯಾಗಿರುವ ನಿನ್ನ ಕೈಹಿಡಿದ ಭಾಗ್ಯದಿಂದಲೇ ಶ್ರೀಶಿವನು ಬದುಕಿಕೊಂಡನು. ಈ ಧೈರ್ಯದಿಂದಲೇ ನೀನೂ ಕೂಡ. ಹೇ ದೇವಿ, ಜಗದ್ರಕ್ಷಣೆಗಾಗಿಯೇ ಈಶ್ವರನು ವಿಷವನ್ನು ಕುಡಿಯುವುದನ್ನು ಬೇಡವೆಂದು ತಡೆಯಲೂ ಇಲ್ಲ! ಇಂಥ ಲೋಕೋತ್ತರ ಮಹಿಮಾಶಾಲಿನಿಯು ನೀನು!

ಪಶುಪತಿಃ—ಸಂಸಾರಪಾಶಬದ್ಧರಾಗಿರುವ ಬ್ರಹ್ಮನೇ ಮೊದಲಾದ ಎಲ್ಲ ಜೀವ ಸಮೂಹವೂ ಪರವಶವಾಗಿರುತ್ತ ಪಶುವೆನಿಸುವುದು; ಈ ಎಲ್ಲ ಪಶುಗಳಿಗೂ ಸಂಸಾರ ಭೋಗವನ್ನೂ, ಇದರಿಂದ ಬಿಡುಗಡೆಯನ್ನೂ ಮಾಡುವುದರಲ್ಲಿ ಸರ್ವಸ್ವತಂತ್ರನಾದ ಶ್ರೀಪರಮೇಶ್ವರನನ್ನು **ಪಶುಪತಿ**ಯೆಂದು ಶಾಸ್ತ್ರವು ಹೇಳುತ್ತಿದೆ. ಇಂಥ ಈಶ್ವರನು ಜಗದ್ರಕ್ಷಣೆಗಾಗಿ ಕಾಲಕೂಟ ವಿಷವನ್ನು ಪಾನ ಮಾಡಿದನು, ಸ್ವತಃ ನಿರ್ವಿಕಾರನಾದ ಶ್ರೀಪರಶಿವನ ಇಂಥ ಕಾರ್ಯಗಳೆಲ್ಲ ಮಾಯಾಮೂಲಕಗಳೇ ಆಗುತ್ತವೆಂದು ವಾಸ್ತವಾಭಿಪ್ರಾಯವು—೧೭.

ಶ್ರೀಭಗವತಿಯ ಸೌಂದರ್ಯವು ನಿರತಿಶಯವಾದುದೆಂದು ವರ್ಣಿಸುತ್ತಾರೆ—

ತ್ವದೀಯಂ ಸೌಂದರ್ಯಂ ನಿರತಿಶಯಮಾಲೋಕ್ಯ ಪರಯಾ
ಭಿಯೈವಾಸೀದ್ಗಂಗಾ ಜಲಮಯತನುಃ ಶೈಲತನಯೇ।
ತದೇತಸ್ಯಾಸ್ತಾಮ್ಯದ್ವದನಕಮಲಂ ವೀಕ್ಷ್ಯ ದಯಯಾ
ಪ್ರತಿಷ್ಠಾಮಾತೇನೇ ನಿಜಶಿರಸಿ ವಾಸೇನ ಗಿರಿಶಃ ॥ ೧೮ ॥

ಹೇ ಶೈಲತನಯೇ = ಪರ್ವತರಾಜ ಕುವರಿಯಾದ ಹೇ ದೇವಿ; **ತ್ವದೀಯಂ** = ನಿನ್ನ; **ನಿರತಿಶಯಂ** = ಅತಿಶಯವೆಂದರೆ ಹೆಚ್ಚು; ಯಾವುದಕ್ಕಿಂತಲೂ ಹೆಚ್ಚಿನದು ಯಾವುದೂ ಇಲ್ಲದುದು ನಿರತಿಶಯ; ಇಂಥ

Sri Vidyabharathi Book Centre, Sringeri

CC-O. In Public Domain. Digitized by eGangotri

ಅತ್ಯಧಿಕವಾದ ; ಸೌಂದರ್ಯಂ = ಸೊಬಗನ್ನು ; ಆಲೋಕ್ಯ =ನೋಡಿ ; ಜಲಮಯತನುಃ = ನೀರಿನ ದೇಹವುಳ್ಳ ; ಗಂಗಾ = ಈಶ್ವರನ ಎರಡನೆಯ ಹೆಂಡತಿಯಾಗಿರುವ ಗಂಗಾದೇವಿಯು ; ಪರಯಾ = ಹೆಚ್ಚಾದ ; ಭಯಾ ಏವ = ಭಯದಿಂದಲೇ ; ಜಲಮಯತನುಃ = ಸಂಸ್ಕೃತದಲ್ಲಿ ಲಕಾರಡಕಾರ ಗಳಿಗೆ ಅಭೇಧವನ್ನು ಒಪ್ಪುವುದರಿಂದ ಜಡಮಯತನುಃ—ಎಂದೂ ಈ ಪದವನ್ನು ತಿಳಿಯಬಹುದು : ಎಂದರೆ, ಜಡವಾದ ದೇಹವುಳ್ಳವಳು ; ಹೆಚ್ಚು ಭಯವುಂಟಾದರೆ ಮೈಯೆಲ್ಲ ಜಡವಾಗುವುದು ಅನುಭವಸಿದ್ಧವು ; ಇಂಥ ಸ್ಥಿತಿಯವಳು ; ಆಸೀತ್—ಆದಳು. ನಿನ್ನ ಪರಮೋತ್ಕೃಷ್ಟವಾದ ಸೌಂದರ್ಯ ವನ್ನು ನೋಡಿ, ನಾಚಿಕೆಯಿಂದಲೂ ಭಯದಿಂದಲೂ ಗಂಗಾ ದೇವಿಯು ಅತ್ಯಂತ ದುಃಖಿಪಟ್ಟಳೆಂದು ತಾತ್ಪರ್ಯವು. ಏತಸ್ಯಾಃ = ಈ ಗಂಗೆಯ ; ತತ್ ವದನಕಮಲಂ = ಕಮಲದಂತೆ ಮನೋಹರವಾಗಿದ್ದ ಆ ಮುಖವನ್ನು ; ತಾಮ್ಯತ್ = ದುಃಖಭಯಗಳಿಂದ ದಿನದಿನಕ್ಕೂ, ಕ್ಷಣಕ್ಷಣಕ್ಕೂ, ಬಾಡುತ್ತ ಕಾಂತಿಗುಂದುತ್ತಿದ್ದುದನ್ನು ; ವೀಕ್ಷ್ಯ = ನೋಡಿ ; ಗಿರಿಶಃ = ಶ್ರೀಪರಮೇಶ್ವರನು, ದಯಯಾ = ಆಕೆಯ ಮೇಲಿನ ದಯೆಯಿಂದ ; ನಿಜ ಶಿರಸಿ = ತನ್ನ ತಲೆಯ ಮೇಲೆ ; ವಾಸೇನ = ವಾಸವನ್ನು ಅನುಗ್ರಹಿಸಿ ; ಪ್ರತಿಷ್ಠಾಂ ಆತೇನೇ = ಪ್ರತಿಷ್ಠೆ ಮಾಡಿದನು.

ಕಪಿಲಮಹರ್ಷಿಗಳ ಕೋಪಾಗ್ನಿಗೆ ತುತ್ತಾಗಿ ನಾಶಹೊಂದಿದ್ದ ಸಗರ ಚಕ್ರವರ್ತಿಯ ಮಕ್ಕಳಿಗೆ ಸದ್ಗತಿಯನ್ನು ಉಂಟುಮಾಡುವುದಕ್ಕಾಗಿ ಭಗೀರಥ ಮಹಾರಾಜನು ಬಹು ಪ್ರಯತ್ನಗಳಿಂದ ದೇವಗಂಗೆಯನ್ನು ಭೂಲೋಕಕ್ಕೆ ಕರೆತಂದನು. ದೇವಲೋಕದಿಂದ ಭೂಮಿಗೆ ಬಿದ್ದ ಗಂಗೆಯ ವೇಗವನ್ನು ಶ್ರೀಪರಮೇಶ್ವರನು ತನ್ನ ಜಟೆಯಲ್ಲಿ ತಡೆದನು. ಅನಂತರ ಭಗೀರಥನ ಪ್ರಾರ್ಥನೆಯಿಂದ ಒಂದು ಹನಿಯನ್ನು ಮಾತ್ರ ಅವನಿಗೆ ಕೊಟ್ಟು ಗಂಗೆಯನ್ನು ಜಟೆಯಲ್ಲಿ ಕರೆದುಕೊಂಡು ಬಂದನು. ತನ್ನ ಸೌಂದರ್ಯಕ್ಕೆ ಮಾರುಹೋಗಿ ಈಶ್ವರನು ತನ್ನನ್ನು ವರಿಸಿದನೆಂದು ಗಂಗೆಯು ಭ್ರಾಂತಿಪಟ್ಟಳು ! ಮನೆಗೆ ಬಂದಮೇಲೆ ಅಲ್ಲಿದ್ದ ಮಂಗಳಾಂಗಿಯಾದ ಶ್ರೀಪಾರ್ವತೀ ದೇವಿಯನ್ನು ನೋಡಿ, ಅವಳ ರೂಪಸೌಭಾಗ್ಯಕ್ಕೆ ನಾಚಿಕೆಪಟ್ಟು, ದುಃಖಿಪಡುತ್ತಿದ್ದಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಗಂಗೆಯ ದುಃಖವನ್ನು ಕಳೆಯುವುದಕ್ಕಾಗಿ ಈಶ್ವರನು ಗಂಗೆಯನ್ನು ಮತ್ತೆ ತಲೆಯಲ್ಲಿಯೇ ಇಟ್ಟುಕೊಂಡನೆಂದು ಅಭಿಪ್ರಾಯವು—.೧೮

ವಿಶಾಲಶ್ರೀಖಂಡದ್ರವಮೃಗಮದಾಕೀರ್ಣಘುಸೃಣ
ಪ್ರಸೂನವ್ಯಾಮಿಶ್ರಂ ಭಗವತಿ ತವಾಭ್ಯಂಗಸಲಿಲಂ
ಸಮಾದಾಯ ಸ್ರಷ್ಟಾ ಚಲಿತಪದಪಾಂಸೂನ್ನಿಜಕರೈಃ
ಸಮಾಧತ್ತೇ ಸೃಷ್ಟಿಂ ವಿಬುಧಪುರಪಂಕೇರುಹದೃಶಾಂ ॥ ೧೯ ॥

ವಿಶಾಲಶ್ರೀಖಂಡದ್ರವಮೃಗಮದಾಕೀರ್ಣಘುಸೃಣಪ್ರಸೂನವ್ಯಾಮಿಶ್ರಂ—ವಿಶಾಲ = ಹೆಚ್ಚಾದ; ಇದು ಮುಂದಿನ ಪದಗಳಿಗೆಲ್ಲ ವಿಶೇಷಣವಾಗುತ್ತದೆ. ಶ್ರೀಖಂಡ = ಶ್ರೀಗಂಧದ; ದ್ರವ = ಕೆಸರಿನಂತೆ ದಪ್ಪವಾಗಿರುವ ಮುದ್ದೆ, ಮತ್ತು ಮೃಗಮದ = ಕಸ್ತೂರಿ; ಇವುಗಳಿಂದ ಆಕೀರ್ಣ =ಆರೆಯಲ್ಪಟ್ಟಿರುವ; ಘುಸೃಣ =ಕರ್ಪೂರ; ಮತ್ತು ಪ್ರಸೂನ= ಕೇಸರಿ ಹೂ; ಇವುಗಳಿಂದ ವ್ಯಾಮಿಶ್ರಂ = ಕೂಡಿರುವ; ತವ ಅಭ್ಯಂಗ ಸಲಿಲಂ = ನಿನ್ನ ಅಭ್ಯಂಗದ ನೀರನ್ನು; ನೀನು ಅಭ್ಯಂಗ ಸ್ನಾನಮಾಡಿ, ನಿನ್ನ ದೇಹದ ಮೂಲಕವಾಗಿ ಬಂದ ನೀರನ್ನು; ಸಮಾದಾಯ = ತೆಗೆದುಕೊಂಡು; ಚಲಿತಪದಪಾಂಸೂನ್–ಚಲಿತ = ಆ ನೀರಿನಲ್ಲಿ ಚಲಿಸುತ್ತಿರುವ,ತೇಲುತ್ತಿರುವ; ಪದಪಾಂಸೂನ್ = ನಿನ್ನ ಹೆಜ್ಜೆಗಳ ಧೂಳುಗಳನ್ನು; ನಿಜಕರೈಃ = ತನ್ನ ಕೈಗಳಿಂದ; ಸಮಾದಾಯ=ಎತ್ತಿಕೊಂಡು; ಸ್ರಷ್ಟಾ = ಸೃಷ್ಟಿಕರ್ತನಾದ ಬ್ರಹ್ಮದೇವನು; ವಿಬುಧಪುರಪಂಕೇರುಹದೃಶಾಂ–ವಿಬುಧ = ದೇವತೆಗಳ; ಪುರ = ಪಟ್ಟಣ,ಎಂದರೆ ದೇವಲೋಕವಾದ ಸ್ವರ್ಗದ; ಪಂಕೇರುಹದೃಶಾಂ = ಕಮಲನೇತ್ರೆಯರ ಎಂದರೆ, ಸ್ವರ್ಗಲೋಕದ ಸುಂದರಿಯರ; ಸೃಷ್ಟಿಂ = ಸೃಷ್ಟಿಯನ್ನು; ಸಮಾಧತ್ತೇ = ಮಾಡುತ್ತಾನೆ.

ಕಾರಣವಿಲ್ಲದೆ ಕಾರ್ಯವಾಗುವುದಿಲ್ಲ. ಉತ್ತಮವಾದ ಕಾರ್ಯವನ್ನು ಮಾಡುವುದಕ್ಕೆ ಅದಕ್ಕೆ ತಕ್ಕ ಉತ್ತಮ ಸಾಮಗ್ರಿಯು ಬೇಕಾಗುವುದು. ದೇವಲೋಕದ ಮೇನಕೆ, ರಂಭೆ, ತಿಲೋತ್ತಮೆ ಮುಂತಾದ ಸ್ತ್ರೀಯರು ಲೋಕದಲ್ಲಿ ಅಸಮಾನ ಸುಂದರಿಯರೆಂದು ಪ್ರಸಿದ್ಧವು. ಇವರ ಭೋಗವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಆಶಿಸಿಯೇ ಅಲ್ಲವೆ ಸ್ವರ್ಗವನ್ನು ಅಪೇಕ್ಷಿಸುತ್ತಾರೆ ! ಇವರ ಇಂಥ ಉತ್ತಮವಾದ ಸೌಂದರ್ಯವನ್ನು ಮಾಡುವುದಕ್ಕೆ ಬ್ರಹ್ಮನಿಗೆ ಸಾಮಗ್ರಿಯು ಎಲ್ಲಿತ್ತು? —ಎಂದರೆ, 'ದಿವ್ಯಗಂಧಾನುಲೇಪನಾ'—ಎಂಬಂತೆ ಶ್ರೀಲಲಿತಾದೇವಿಯು ಶ್ರೇಷ್ಠವಾದ ಗಂಧದಿಂದ ಚರ್ಚಿತಳಾಗಿರುತ್ತಾಳೆ. ಈಕೆಯು ಅಭ್ಯಂಜನ ಮಾಡಿದಾಗ ಈ ಗಂಧದಿಂದ ಮಿಶ್ರಿತವಾದ ಶ್ರೀಮದಂಬಿಕೆಯ ಪಾದಕಮಲಗಳ ಧೂಳಿನ ಕಣಗಳು ಆ ನೀರಿನಲ್ಲಿ ತೇಲಿ ಬರುತ್ತವೆ. ಶ್ರೀಬ್ರಹ್ಮದೇವನು ಈ ನೀರನ್ನು ಎರಡು ಕೈಗಳಲ್ಲಿಯೂ ಹಿಡಿದುಕೊಂಡು, ಈ ಧೂಳಿನ ಕಣಗಳನ್ನು ಎತ್ತಿಕೊಂಡು, ಈ ಧೂಳುಗಳಿಂದ ದೇವಲೋಕದ ರಂಭೆಯರ ಸೌಂದರ್ಯವನ್ನು ರಚಿಸಿದನು ! ಯಾರ ಪಾದಧೂಳಿನ ಕಣಗಳು ಸ್ವರ್ಗ ಸುಂದರಿಯರ ಸೌಂದರ್ಯಕ್ಕೆ ಕಾರಣವಾಗಿದೆಯೋ, ಆ ದೇವಿಯ ಸೌಂದರ್ಯವನ್ನು ಮತ್ತೆ ವರ್ಣಿಸುವುದು ಸಾಧ್ಯವೆ ?—೧೯.

ಅಪಾರವೂ ಅಪರಿಮಿತವೂ ಆಗಿರುವ ಶ್ರೀಜಗದೀಶ್ವರಿಯ ಮಹಿಮೆಯ ಒಂದು ಕಣವನ್ನು ಉದಾಹರಿಸಿ, ಸ್ತುತಿಯನ್ನು ಉಪಸಂಹಾರ ಮಾಡುತ್ತಾರೆ—

ವಸಂತೇ ಸಾನಂದೇ ಕುಸುಮಿತಲತಾಭಿಃ ಪರಿವೃತೇ
ಸ್ಫುರನ್ನಾನಾಪದ್ಮೇ ಸರಸಿ ಕಲಹಂಸಾಳಿಸುಭಗೇ ।
ಸಖೀಭಿಃ ಖೇಲಂತೀಂ ಮಲಯಪವನಾಂದೋಲಿತಜಲೈಃ
ಸ್ಮರೇದ್ಯಸ್ತ್ವಾಂ ತಸ್ಯ ಜ್ವರಜನಿತಪೀಡಾಪಸರತಿ ॥ ೨೦ ॥

ಕುಸುಮಿತಲತಾಭಿಃ—ಕುಸುಮಿತ = ಅರಳಿದ ಹೂಗಳಿಂದ ರಮ್ಯವಾಗಿರುವ ; **ಲತಾಭಿಃ** = ಬಳ್ಳಿಗಳಿಂದ ; **ಪರಿವೃತೇ** =ಸುತ್ತಲೂ ತುಂಬಿರುವ; **ಸಾನಂದೇ** = ಆದ್ದರಿಂದಲೇ ಸುಖಕರವಾಗಿರುವ ; **ವಸಂತೇ** = ಸುಮನೋಹರ ವಸಂತಕಾಲದಲ್ಲಿ; **ಸ್ಫುರನ್ನಾನಾಪದ್ಮೇ** =ಅನೇಕ ಕಮಲಗಳಿಂದ ಕಂಗೊಳಿಸುತ್ತ; **ಕಲಹಂಸಾಳಿಸುಭಗೇ**—ಕಲಹಂಸ = ಶ್ರೇಷ್ಠಗಳಾದ ಕಲಹಂಸಗಳಿಗೂ; **ಅಳಿ**= ದುಂಬಿಗಳಿಗೂ **ಸುಭಗೇ** = ಹಿತಕರವಾಗಿರುವ ; **ಸರಸಿ** = ಸರೋವರದಲ್ಲಿ ; **ಸಖೀಭಿಃ (ಸಹ)** = ಸಖಿಯರೊಡಗೂಡಿ ; **ಮಲಯಪವನಾಂದೋಲಿತಜಲೈಃ** —ಮಲಯಪವನ = ಶ್ರೀಗಂಧದ ವೃಕ್ಷಗಳಿಂದ ಸುಗಂಧವಾಗಿರುವ ಮಲಯ ಪರ್ವತದ ಮೂಲಕವಾಗಿ ಬೀಸುತ್ತಿರುವ ಗಾಳಿಗಳಿಂದ ; **ಆಂದೋಲಿತ** =

CC-O. Vidyabharathi Book Centre, Sringeri

CC-O. In Public Domain. Digitized by eGangotri

ತೂಗಾಡಿಸಲ್ಪಟ್ಟ ; ಜಲ್ಪೈಃ = ನೀರುಗಳಿಂದ ; ಖೇಲಂತೀಂ = ಜಲಕ್ರೀಡೆ ಯಾಡುತ್ತಿರುವ ; ತ್ವಾಂ = ನಿನ್ನನ್ನು ; ಯಃ = ಯಾರಾದರೂ ; ಸ್ಮರೇತ್ = ಸ್ಮರಣೆಮಾಡಿಕೊಂಡರೆ ; ಅಷ್ಟು ಮಾತ್ರದಿಂದಲೇ ; ತಸ್ಯ = ಅವನ ; ಜ್ವರಜನಿತಪೀಡಾ = ಜ್ವರದಿಂದುಟಾದ ತಾಪವು ; ಅಪಸರತಿ = ದೂರವಾಗು ತ್ತದೆ, ಕಳೆಯುತ್ತದೆ.

ಗಿಡಮರಬಳ್ಳಿಗಳಿಲ್ಲ ಚಿಗುರಿ ಹೂಬಿಟ್ಟು ರಮ್ಯವಾಗಿರುವ ವಸಂತಕಾಲ ದಲ್ಲಿ ಅರಳಿದ ಕಮಲಗಳಿಂದ ಮನೋಹರವಾಗಿರುವ ನಿರ್ಮಲ ಸರೋವರ ದಲ್ಲಿ, ಆಪ್ತರಾದ ಸಖಿಯರೊಡನೆ ಜಲಕ್ರೀಡಾಸಕ್ತಳಾಗಿರುವ ದೇವಿಯನ್ನು ಧ್ಯಾನ ಮಾಡಿದರೆ, ಎಲ್ಲ ತಾಪಗಳೂ ಶಮನವಾಗುತ್ತವೆಂಬುದು ಮಂತ್ರ ಶಾಸ್ತ್ರಸಿದ್ಧವು.

ಶ್ರೀಪರಮೇಶ್ವರನ ಅವತಾರಪುರುಷರಾಗಿರುವ ಶ್ರೀಮಚ್ಛಂಕರ ಭಗವತ್ಪಾದರವರ ವಾಣಿಯೂ ಮಂತ್ರವೇ ಆಗಿದೆ. ಪದ್ಯರೂಪವಾಗಿರುವ ಈ ಮಂತ್ರವನ್ನು ಸದ್ಗುರುಗಳ ಉಪದೇಶದಿಂದ ಪಡೆದು, ನಿಯಮ ಪೂರ್ವಕ ವಾಗಿ ಜಪಿಸಿ ಸಿದ್ಧಿಪಡೆದವರು ಈ ಮಂತ್ರದ ಪ್ರಯೋಗದಿಂದ ತಮ್ಮ ಮತ್ತು ಇತರರ ಜ್ವರದ ತಾಪವನ್ನು ಪರಿಹರಿಸುವರು—೨೦.

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಸ್ಯ
ಶ್ರೀಗೋವಿಂದಭಗವತ್ಪೂಜ್ಯಪಾದಶಿಷ್ಯಸ್ಯ
ಶ್ರೀಮಚ್ಛಂಕರಭಗವತಃ ಕೃತೌ
ಶ್ರೀಆನಂದಲಹರೀಸ್ತೋತ್ರಂ ಸಂಪೂರ್ಣಂ ॥

ಜಗಜ್ಜನನ್ಯೈ ಜಗದೇಕಪಿತ್ರೇ
ನಿರೀಶ್ವರಾಯ್ಯೈ ನಿಖಿಲೇಶ್ವರಾಯ ।
ಶಿವಾನ್ವಿತಾಯ್ಯೈ ಚ ಶಿವಾನ್ವಿತಾಯ
ನಮಃ ಶಿವಾಯ್ಯೈ ಚ ನಮಃ ಶಿವಾಯ ॥

ಓಂತತ್ಸತ್

Sri Vidyabharathi Book Centre, Sringeri

CC-O. In Public Domain. Digitized by eGangotri

ದಶಶ್ಲೋಕೀ

ನಿವೇದನೆ

ಶಾಂತೋ ಮಹಾಂತೋ ನಿವಸಂತಿ ಸಂತೋ
ವಸಂತವಲ್ಲೋಕಹಿತಂ ಚರಂತಃ ।
ತೀರ್ತ್ವಾ ಸ್ವಯಂ ಭೀಮಭವಾರ್ಣವಂ ಜನಾನ್
ಅಹೇತುನಾನ್ಯಾನಪಿ ತಾರಯಂತಃ ॥

"ಗುರವೋ ಬಹವೋ ಲೋಕೇ ಶಿಷ್ಯವಿತ್ತಾಪಹಾರಕಾಃ । ಗುರವೋ ದುರ್ಲಭಾ ಲೋಕೇ ಶಿಷ್ಯಹೃತ್ತಾಪಹಾರಕಾಃ" ॥ ಎಂಬಂತೆ ವಾಸ್ತವವಾಗಿಯೂ ತತ್ತ್ವಾನುಭವ ಶಾಲಿಗಳಾಗಿ, ಕೇವಲದಯೆಯಿಂದ ಪ್ರಜಾಕೋಟಿಗೆ ಯಥಾರ್ಥವಾದ ಹಿತವನ್ನು ಬೋಧಿಸುವವರು ಅತ್ಯಂತದುರ್ಲಭವೇ ಸರಿ. ಶ್ರೀಮಚ್ಛಂಕರ ಭಗವತ್ಪೂಜ್ಯಪಾದಾಚಾರ್ಯರು ಇಂಥವರು. ಮುಮುಕ್ಷುಗಳಾದ ಅಧಿಕಾರಿಗಳಿಗೆ ಅವಶ್ಯ ಬೇಕಾಗಿರುವ ವೇದಾಂತಗಳ ಪಾರಮಾರ್ಥಿಕತತ್ತ್ವಜ್ಞಾನವನ್ನು ಉಪದೇಶಮಾಡುವುದಕ್ಕಾಗಿ, ಇದರಲ್ಲಿ ಪ್ರಮಾಣವಾಗಿರುವ ಶ್ರುತಿಸ್ಮೃತಿ ನ್ಯಾಯವೆಂಬ ವ್ರಸ್ಥಾನತ್ರಯಕ್ಕೂ ಅಸಾಧಾರಣಮಹತ್ತ್ವದಿಂದ ಶೋಭಿಸುವ ವಿಸ್ತಾರವಾದ ಮತ್ತು ಅಮೋಘವಾದ ಭಾಷ್ಯಗಳನ್ನು ಇವರು ವಿರಚಿಸಿದ್ದಾರೆ.

ವೇದಾಂತಸಿದ್ಧಾಂತದ ಮಹಿಮೆಯು ಅಸದೃಶವಾದುದು. ಅದನ್ನು ಒಂದೇ ಮಾತಿನಲ್ಲಿ ಹೇಳಬಹುದು; ಸಹಸ್ರಾರುಗ್ರಂಥಗಳಿಂದ ಹೇಳಿದರೂ ಮುಗಿಯಲಾರದು ! ಇದರಂತೆ, ಶ್ರೀಭಗವತ್ಪಾದರು ಒಂದೇ ಶ್ಲೋಕದಿಂದಲೂ ಇದನ್ನು ಪ್ರತಿಪಾದಿಸಿಕೊಟ್ಟಿದ್ದಾರೆ; ಹಾಗೆಯೇ ಸಹಸ್ರಗ್ರಂಥಗಳಿಂದಲೂ ವಿವರಿಸಿದ್ದಾರೆ. ಅವರವರ ಅಧಿಕಾರಸಂಪತ್ತಿಗೆ ತಕ್ಕಂತೆ ಸಾಧನೆಗಳನ್ನು ಅನುಷ್ಠಿಸುತ್ತಿದ್ದು, ಈ ಪ್ರಕರಣಗ್ರಂಥಗಳನ್ನು ಆಲೋಚನೆಮಾಡುತ್ತಿರುವುದು ಶ್ರೇಯಃಸಿದ್ಧಿಗೆ ಪರಮೋಪಕಾರಕವಾಗಿರುವುದು.

Sringeri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಗವತ್ಪಾದರ ಪ್ರಕರಣಗ್ರಂಥಗಳಲ್ಲಿ ದಶಶ್ಲೋಕೀ ಎಂಬುದು ಒಂದು. ಇದು ಬಹುಮಹತ್ವದ ಪ್ರಕರಣವೇ ಆಗಿರುತ್ತದೆ, ಇತರಪ್ರಕರಣ ಗ್ರಂಥಗಳಲ್ಲಿ ಸಾಮಾನ್ಯವಾಗಿ ವೇದಾಂತತತ್ತ್ವದ ಮತ್ತು ಅದರ ಸಾಧನೆಗಳ ನಿರೂಪಣೆಯು ಇರುತ್ತದೆ. ಇತರ ಎಲ್ಲ ಮತಗಳ ನಿರಾಕರಣೆಯಮೂಲಕ ವಾಗಿ, ವೇದಾಂತಸಿದ್ಧಾಂತವೇ ಯಥಾರ್ಥವೆಂಬುದು ಪ್ರತಿಪಾದಿತವಾಗಿರು ವುದು ಇಲ್ಲಿ ವಿಶೇಷವು.

ಈ ಕಾರಣದಿಂದಲೇ "ಅದ್ವೈತ ಸಿದ್ಧಿ" ಮುಂತಾದ ಅತಿಪ್ರೌಢಶಾಸ್ತ್ರ ಗ್ರಂಥಗಳನ್ನು ಬರೆದಿರುವ ಶ್ರೀಮಧುಸೂದನಯತಿವರ್ಯರು ಈ ದಶಶ್ಲೋಕಿಗೆ ವ್ಯಾಖ್ಯಾನ ಮಾಡುವ ಪ್ರಯಾಸಮಾಡಿದ್ದಾರೆ. ಶ್ರೀಮಧುಸೂದನಸರಸ್ವತಿಗಳ ಅದ್ವೈತಸಿದ್ಧಿ ಗ್ರಂಥಕ್ಕೆ ಶ್ರೀಬ್ರಹ್ಮಾನಂದಯತಿಗಳು 'ಗುರುಚಂದ್ರಿಕೆ' –'ಲಘು ಚಂದ್ರಿಕೆ' ಎಂಬ ಮಹತ್ವದ ಎರಡುವ್ಯಾಖ್ಯಾನಗಳನ್ನು ರಚಿಸಿರುತ್ತಾರೆ. ಇದು 'ಬ್ರಹ್ಮಾನಂದೀ' ಎಂದು ಪ್ರಸಿದ್ಧವಾಗಿದೆ. 'ಸಿದ್ಧಿಬ್ರಹ್ಮಾನಂದಿ' ಗಳನ್ನು ಓದಿದಲ್ಲದೆ ವೇದಾಂತಾಧ್ಯಯನವು ಪೂರ್ಣವಾಗುವುದಿಲ್ಲ – ಇಂಥ ಪ್ರೌಢ ಗ್ರಂಥಗಳು ಇವು. ಇಂಥ ಮಹತ್ವದ ಗ್ರಂಥಕರ್ತರಾದ ಶ್ರೀಮಧುಸೂದನ ಸರಸ್ವತಿಗಳು ಈ ದಶಶ್ಲೋಕಿಗೆ 'ಸಿದ್ಧಾಂತಬಿಂದು' ಎಂಬ ವ್ಯಾಖ್ಯಾನವನ್ನು ರಚಿಸಿ, ಶ್ರೀಬ್ರಹ್ಮಾನಂದರು ಈ ಸಿದ್ಧಾಂತಬಿಂದುವಿಗೆ 'ರತ್ನಾವಳಿ' ಎಂಬ ವ್ಯಾಖ್ಯಾನವನ್ನು ವಿರಚಿಸಿದ್ದಾರೆಂದಮೇಲೆ, ಈ ದಶಶ್ಲೋಕಿಯ ಮಹಿಮೆ ಯನ್ನು ವರ್ಣಿಸುವುದೇನು ?

ಶ್ರೀಮಧುಸೂದನಸರಸ್ವತಿಗಳ ಮಹತ್ವವನ್ನು ಶ್ರೀಬ್ರಹ್ಮಾನಂದರು ಮುಕ್ತಕಂಠವಾಗಿ ಹೊಗಳಿದ್ದಾರೆ.

"ಮಧುಸೂದನಸರಸ್ವತ್ಯಾಃ ಸಾರಂ ವೇತ್ತಿ ಸರಸ್ವತೀ ।
ಸರಸ್ವತ್ಯಾಶ್ಚ ಸಾರಂ ತು ಮಧುಸೂದನ ಸರಸ್ವತೀ ॥"

"ಮಧುಸೂದನಸರಸ್ವತಿಗಳ ಮಾತುಗಳ ರಹಸ್ಯಾರ್ಥವನ್ನು ವಿದ್ಯಾಧಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದೇವತೆ ಸರಸ್ವತಿಯೇ ಬಲ್ಲಳು; ಸರಸ್ವತಿಯ ರಹಸ್ಯಾರ್ಥವನ್ನು ಮಧುಸೂದನ ಸರಸ್ವತಿಗಳೇ ಬಲ್ಲರು"—ಎಂದು. ಶ್ರೀಮಧುಸೂದನಸರಸ್ವತಿಗಳನ್ನು ಶ್ರೀಸರಸ್ವತಿಯ ಸಾಕ್ಷಾತ್ಪುರುಷಾವತಾರವೇ ಎಂದು ಬಲ್ಲವರು ಹೇಳುತ್ತಾರೆ.

ಶ್ರೀಮಧುಸೂದನಸರಸ್ವತಿಗಳು ಶ್ರೀಭಗವತ್ಪಾದರನ್ನೂ ಮತ್ತು ಆಮ ಈ ದಶಶ್ಲೋಕೀ ಪ್ರಕರಣವನ್ನೂ ಕಂಠೋಕ್ತವಾಗಿ ಶ್ಲಾಘಿಸಿದ್ದಾರೆ.

"ನ ಸ್ತೌಮಿ ತಂ ವ್ಯಾಸಮಶೇಷಮರ್ಥಂ ಸಮಗ್ರಸೂತ್ರೈರಪಿ ನೋ ಬಬಂಧ।
ವಿನಾಪಿ ಕೈಃ ಸಂಗ್ರಥಿತಾಖಿಲಾರ್ಥಂ ತಂ ಶಂಕರಂ ನೌಮಿ ಸುರೇಶ್ವರಂ ಚ ॥"

ಸೂತ್ರ ಶಬ್ದಕ್ಕೆ ಸಂಗ್ರಹವಾಕ್ಯವೆಂದೂ, ದಾರವೆಂದೂ ಎರಡು ಅರ್ಥಗಳಿವೆ. ಶ್ರೀವ್ಯಾಸಮಹರ್ಷಿಗಳು ವೇದಾಂತಾರ್ಥಗಳನ್ನು ಬ್ರಹ್ಮಸೂತ್ರಗಳಿಂದ ಸಂಗ್ರಹಿಸಿರುತ್ತಾರೆ, ಇದರಲ್ಲಿ ೫೫೫ ಸೂತ್ರಗಳಿವೆ. ಇಷ್ಟು ಸೂತ್ರಗಳ ಸಹಾಯ ವಿದ್ದರೂ ಶ್ರೀವ್ಯಾಸರು ವೇದಾಂತಾರ್ಥವನ್ನು ಸ್ಪಷ್ಟವಾಗುವಂತೆ ಕಟ್ಟಲು ಸಮರ್ಥರಾಗಲಿಲ್ಲ. ಸೂತ್ರಗಳೊಂದೂ ಇಲ್ಲದೆಯೇ ಈ ದಶಶ್ಲೋಕಿಯಲ್ಲಿ ಸಮಸ್ತವೇ ದಾಂತತತ್ತ್ವವನ್ನು ವಿಶದವಾಗಿ ಪ್ರತಿಪಾದಿಸಿರುವ ಶ್ರೀಶಂಕರಭಗವತ್ಪಾದರನ್ನೂ, ಹಾಗೆಯೇ ಮಾಡಿರುವ ಶ್ರೀಮತ್ಸುರೇಶ್ವರಾಚಾರ್ಯರನ್ನೂ ಶಿರಸಾ ವಚಸಾ ಮನಸಾ ನಮಸ್ಕರಿಸುತ್ತೇನೆ."— ಎಂದು ಗೌರವಪುರಸ್ಸರವಾಗಿ ಸ್ತುತಿಸಿದ್ದಾರೆ. ದ್ವೈತ, ವಿಶಿಷ್ಟಾದ್ವೈತ ಪರವಾಗಿಯೂ ವ್ಯಾಖ್ಯಾನಮಾಡುವದಕ್ಕೆ ಅವಕಾಶವಾಗಿರುವ ಬ್ರಹ್ಮಸೂತ್ರಗಳು ನಿಶ್ಚಿತವಾದ ಅರ್ಥವನ್ನು ತಿಳಿಸುವುದರಲ್ಲಿ ಸಮರ್ಥಗಳಾಗಿಲ್ಲವೆಂದು ಸ್ಪಷ್ಟವೇ ಇದೆ. ಶ್ರೀಭಗವತ್ಪಾದರು ಶ್ರೀದಕ್ಷಿಣಾಮೂರ್ತಿಸ್ತೋತ್ರಕ್ಕೆ ಶ್ರೀಸುರೇಶ್ವರಾಚಾರ್ಯರವರು ಮಾನಸೋಲ್ಲಾಸವೆಂಬ ವಾರ್ತಿಕವನ್ನು ರಚಿಸಿ, ಅದರಲ್ಲಿ ಮತಾಂತರಗಳ ನಿರಸನ ಪೂರ್ವಕವಾಗಿ ವೇದಾಂತಮತವನ್ನು ಸಿದ್ಧಾಂತಿಸಿದ್ದಾರೆ.

ಶ್ರೀಮಧುಸೂದನಸರಸ್ವತಿಗಳ ಈ ಸಿದ್ಧಾಂತಬಿಂದುವ್ಯಾಖ್ಯಾನವನ್ನು ಅವಲಂಬಿಸಿಕೊಂಡು, ಶ್ರೀಭಗವತ್ಪಾದರವರ ಈ ದಶಶ್ಲೋಕೀಪ್ರಕರಣದ ತಾತ್ಪರ್ಯಾರ್ಥವನ್ನು ಕನ್ನಡನುಡಿಯಲ್ಲಿ ವಿವರಿಸಲು ಯಥಾಮತಿ ಪ್ರಯತ್ನಿಸಿರುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದಶಶ್ಲೋಕೀ

ಶ್ರೀಮಚ್ಛಂಕರಭಗವತ್ಪಾದಾಚಾರ್ಯಾನ್ವಂದೇಽಶೇಷಗುರೂಂಸ್ತಾ ।
ಯದ್ಬೋಧಾದಯಮಾತ್ಮಾ ಭೂದಾತ್ಮನ್ಯಸ್ತಸಮಸ್ತವಿಕಲ್ಪಃ ॥ ॥೧॥

ವೇದಾಂತವೇದ್ಯಂ ಪರಮಂ ಪವಿತ್ರಂ ಶ್ರೇಷ್ಠಚ್ಚಿದಾನಂದಘನಸ್ವರೂಪಂ ।
ಮಾಯಾಮಯದ್ವೈತಜಗದ್ವಿಹೀನಂ ಪ್ರತ್ಯಗ್ಭಿನ್ನಮಾತ್ಮಾನಮಮುಂ
ಭಜೇಽಹಂ ॥ ೨ ॥

ಲೋಕದಲ್ಲಿ ಮನುಷ್ಯನು ವಿಚಾರಸಾಮರ್ಥ್ಯವುಳ್ಳವನಾಗಿ ಸರ್ವೋತ್ಕೃಷ್ಟನೆನಿಸಿರುವನು. ಆದರೂ, ಪಶ್ವಾದಿಭಿಶ್ಚಾವಿಶೇಷಾತ್—'ವ್ಯವಹಾರಸ್ಥಿತಿಯಲ್ಲಿ ಮನುಷ್ಯನೂ ಪಶುಸಮಾನನೇ ಆಗಿದ್ದಾನೆ'—ಎಂಬ ನ್ಯಾಯದಂತೆ, ತನ್ನ ವಾಸ್ತವ ಸ್ಥಿತಿಯನ್ನು ಅರಿಯದೆ, ಪಶುಗಳಂತೆಯೇ ತಾತ್ಕಾಲಿಕವಾದ ಸುಖವನ್ನು ಸಂಪಾದಿಸಿಕೊಳ್ಳುವುದರಲ್ಲಿಯೇ ತನ್ನ ಜೀವಿತವನ್ನೆಲ್ಲ ಉಪಯೋಗಿಸಿಕೊಳ್ಳುತ್ತಿದ್ದಾನೆ.

ಲೋಕಸಾಮಾನ್ಯದ ಸ್ಥಿತಿಯು ಹೀಗಿರುವುದಾದರೂ, ಪುಣ್ಯಶಾಲಿಯಾದ ಯಾರಾದರೂ ಒಬ್ಬನು, ಪ್ರಾಜ್ಞರ ಹಿತೋಪದೇಶವನ್ನು ಪಡೆದು—ಪ್ರಾಣಿಮಾತ್ರವೂ ಅನಾದ್ಯನಂತವಾದ ಸಂಸಾರದುಃಖಸಾಗರದಲ್ಲಿ ಮುಳುಗಿ ಪಾರಗಾಣದೆ ತೊಳಲುತ್ತಿದೆಯೆಂಬುದನ್ನು "ಅರಿತು,—ಇದರಿಂದ ಹೇಗಾದರೂ ಪಾರಾಗಬೇಕೆಂದು ತೀವ್ರವಾದ ಇಚ್ಛೆಯನ್ನು ಹೊಂದುವನು. ಇಂಥವನನ್ನು ಮುಮುಕ್ಷುವೆನ್ನುವರು. ಮುಮುಕ್ಷುವೆಂದರೆ,— ಸಂಸಾರದುಃಖಬಂಧನದಿಂದ ಬಿಡುಗಡೆಯನ್ನು ಬಯಸುವವನು—ಎಂದು ಅರ್ಥವು. ಸಂಸಾರವೆಂದರೆ—ಶಾಸ್ತ್ರೀಯ ಧರ್ಮಾಧರ್ಮಗಳಿಗೆ ಅಧೀನವಾಗಿ, ಅವುಗಳ ಸುಖದುಃಖರೂಪಗಳಾದ ಫಲಗಳನ್ನು ಅನುಭವಿಸುವುದಕ್ಕಾಗಿ, ಎಡಬಿಡದೆ, ತುದಿಮೊದಲಿಲ್ಲದೆ, ಜನ್ಮಮರಣಗಳ ಪರಂಪರೆಯನ್ನು ಹೊಂದುತ್ತಿರುವ ಸ್ಥಿತಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂಥ ಮುಮುಕ್ಷುವಿಗೆ ಸಂಸಾರಬಂಧನದಿಂದ ಮುಕ್ತಿಯನ್ನು ಪಡೆಯ ವುದಕ್ಕೆ ಬೇಕಾದ ಸಾಧನೆಯನ್ನು ವೇದಾಂತಗಳು ತಿಳಿಸುತ್ತವೆ. ವೇದಾಂ ವೆಂದರೆ—ಲೋಕದಲ್ಲಿ ತಿಳಿದುಬರದಂಥ ಶ್ರೇಯಸ್ಸಾಧನೆಯನ್ನು ತಿಳಿಸುವ ಪರಮಪ್ರಮಾಣಗಳಾಗಿರುವ, ವೇದಗಳ ನಿಶ್ಚಿತವಾದ ತಾತ್ಪರ್ಯಾರ್ಥವನ್ನು ಬೋಧಿಸುವ, ಉಪನಿಷತ್ತುಗಳು. ಉಪನಿಷತ್ತುಗಳಿಂದ ತಿಳಿದುಬರು ವೇದತಾತ್ಪರ್ಯಾರ್ಥವೇ ಸಂಸಾರಮೋಚಕವಾದುದು. ಆದುದರಿಂ ಮುಮುಕ್ಷುವಿಗೆ ಉಪನಿಷತ್ತುಗಳ ಅರ್ಥವನ್ನು ತಿಳಿಯುವುದು ಅತ್ಯವಶ್ಯ ವಾಗಿದೆ. ಉಪನಿಷತ್ತುಗಳು ವೇದದ ಒಂದು ಭಾಗವೇ ಆಗಿವೆ.

ವೇದಾಂತಗಳ ಅರ್ಥವು ಅತ್ಯಂತದುರೂಹಗಳಾಗಿರುವ ಕಾರಣ, ಅನೇ ಜನ ವಿದ್ವಾಂಸರುಗಳು ಇವುಗಳ ಅರ್ಥವನ್ನು ವಿವರಿಸುವುದಕ್ಕಾಗಿ ಪ್ರಯತ್ನಿ ರುತ್ತಾರೆ. ಆದರೂ, ಅವುಗಳಲ್ಲಿ ಪರಸ್ಪರವಿರುದ್ಧಾರ್ಥಗಳೇ ಕಾಣಬರುವು ರಿಂದಲೂ, ವೇದಾಂತಗಳಿಗೆ ಒಂದೇ ತಾತ್ಪರ್ಯಾರ್ಥವು ಇರಬೇಕಾದ್ದ ರಿಂದಲೂ, ಅವುಗಳಲ್ಲಿ ಯಾವುದು ಯಥಾರ್ಥವೆಂದು ಸಂಶಯವು ಉಂಟಾಗು ತ್ತದೆ. ಇಂಥಸಂದರ್ಭದಲ್ಲಿ ಆ ವೇದವನ್ನು ಪ್ರಚಾರಮಾಡಿರುವ ಜಗದೇ ಗುರುವಾದ, ಶ್ರೀಪರಮೇಶ್ವರನು, ಶ್ರೀಶಂಕರಭಗವತ್ಪಾದರವರ ರೂಪದಿಂ ಅವತರಿಸಿಬಂದು, ವೇದಾಂತಗಳ ಪಾರಮಾರ್ಥಿಕತತ್ತ್ವವನ್ನು ವಿಶದವಾಗಿ ಪ್ರ ಪಾದಿಸಿರುತ್ತಾನೆ. ಆತ್ಮಾನಾತ್ಮಗಳ ವಿವೇಚನೆಯಿಂದ ಆಗುವ ಆತ್ಮ ಯಥಾರ್ಥಸ್ವರೂಪದ ಪರಿಜ್ಞಾನವೇ ಸಂಸಾರಮೋಚಕವು—ಎಂಬ ವೇದಾಂ ಗಳ ಈ ಅರ್ಥವನ್ನು ವಿಶದಪಡಿಸುವುದಕ್ಕಾಗಿ ಶ್ರೀಭಗವತ್ಪಾದರು ಈ ದಶಶ್ಲೋಕೀ ಗ್ರಂಥವನ್ನು ವಿರಚಿಸಿದ್ದಾರೆ.

ಆತ್ಮಾನಾತ್ಮಗಳ ವಿವೇಕವೆಂದರೆ—ಆತ್ಮಾ ಮತ್ತು ಅನಾತ್ಮಗಳ ಭೇದ ಜ್ಞಾನ. ಇದರಿಂದ ಆತ್ಮನು, ಅನಾತ್ಮಗಳೆಲ್ಲಕ್ಕೂ ಬೇರೆಯಾಗಿದ್ದಾನೆಂದು ತಿಳಿದುಬರುವುದು. "'ಇದು'—ಎಂಬ ತಿಳಿವಿಗೆ ವಿಷಯವಾದುದೆಲ್ಲ ಅನಾತ್ಮ ವೆಂದೂ, 'ನಾನು' ಎಂಬ ತಿಳಿವಿಗೆ ವಿಷಯನಾದವನು ಆತ್ಮನೆಂದೂ, ಈ ಆತ್ಮಾನಾತ್ಮವಿವೇಕವು ಈಗಲೇ ಎಲ್ಲರಿಗೂ ಸ್ಪಷ್ಟವೇ ಇದೆಯಲ್ಲವೆ ? ಇದನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ತಿಳಿಸುವ ವೇದಾಂತಗಳು ಹೊಸದನ್ನೇನನ್ನೂ" ತಿಳಿಸುವಂತಾಗುವುದಿಲ್ಲವಾಗಿ, ಈ ವಿಷಯದಲ್ಲಿ ಅವು ಪ್ರಮಾಣಗಳಾಗಲಾರವು ಮತ್ತು ಈ ವಿವೇಕವು ಈಗ ಇದ್ದರೂ, ಯಾರಿಗೂ ಸಂಸಾರವು ತಪ್ಪಿರುವುದಿಲ್ಲವಾಗಿ, ಈ ವಿವೇಕವು ವ್ಯರ್ಥವೇ ಆಗಿರುತ್ತದೆಯಲ್ಲವೆ ? - ಎಂದು ಕೇಳಬಹುದು.

'ಅದು'-ಎಂಬ ತಿಳಿವಿಗೆ ವಿಷಯವಾದುದು ಅನಾತ್ಮವೆಂದೂ, 'ನಾನೂ' ಎಂಬ ತಿಳಿವಿಗೆ ವಿಷಯವಾದುದು ಆತ್ಮವೆಂದೂ ಸಾಮಾನ್ಯವಾಗಿ ಈಗ ತಿಳಿದಿರುವುದು ಸತ್ಯವೇ. ಇದರಿಂದ ಹೊರಗಿನ ಪ್ರಪಂಚವೆಲ್ಲ ಅನಾತ್ಮವೆಂದು ಸ್ಪಷ್ಟವಾಗುತ್ತದೆ. ದೇಹ, ಇಂದ್ರಿಯ, ಪ್ರಾಣ, ಮನುಷ್ಯ, ಬುದ್ಧಿ, ಅಹಂಕಾರ-ಇವುಗಳು-"ನನ್ನ ಈ ದೇಹ, ನನ್ನ ಈ ಇಂದ್ರಿಯ, ನನ್ನ ಈ ಮನಸ್ಸು"-ಎಂದು ಮುಂತಾಗಿ-'ನನ್ನದು ಇದು-ಎಂದು ತಿಳಿದುಬರುತ್ತಿದ್ದರೂ "ನಾನು ಮನುಷ್ಯ, ಬಾಲಕ, ಯುವಕ, ವೃದ್ಧ, ಕುರುಡ, ಕಿವುಡ, ದಡ್ಡ, ಬುದ್ಧಿಶಾಲಿ"-ಎಂದುಮುಂತಾಗಿ 'ನಾನು'-ಎಂಬ ತಿಳಿವಿಗೂ ವಿಷಯವಾಗಿ ತೋರಿಬರುತ್ತಿರುವುದರಿಂದ ಈ ದೇಹ-ಮುಂತಾದವುಗಳು ಅನಾತ್ಮಗಳೋ ಆತ್ಮಗಳೋ ಎಂದು ಸಂದೇಹವು ಉಂಟಾಗುತ್ತದೆ. ವಿಚಾರಕುಶಲರಾದವರೂ ಈ ವಿಷಯದಲ್ಲಿ ಭಿನ್ನಾಭಿಪ್ರಾಯವುಳ್ಳವರಾಗಿದ್ದಾರೆ. ಇದರ ನಿಶ್ಚಯವು ವೇದಾಂತದಿಂದಲೇ ಆಗುವುದರಿಂದ, ಅಜ್ಞಾತವಾದ ಈ ಹೊಸ ವಿಷಯವನ್ನು ತಿಳಿಸುವ ವೇದಾಂತಗಳು ಪರಮಪ್ರಮಾಣಗಳಾಗುತ್ತವೆ. ಮತ್ತು, ವೇದಾಂತಪ್ರಮಾಣದಂತೆ ಈ ವಿವೇಚನೆಯಿಂದ ಉಂಟಾಗುವ ಆತ್ಮತತ್ತ್ವಜ್ಞಾನವು ಸಂಸಾರಮೋಚಕವಾಗಿ ಪ್ರಯೋಜನಕರವೂ ಆಗಿರುತ್ತದೆ. ಆದ ಕಾರಣ ವೇದಾಂತಗಳ ಅರ್ಥವನ್ನು ವಿಚಾರಮಾಡುವುದು ಅವಶ್ಯವು.

ತತ್ತ್ವಮಸಿ-"ನೀನು ಅದು ಆಗಿದ್ದೀಯೆ"; **'ಅಹಂ ಬ್ರಹ್ಮಾಸ್ಮಿ,'** 'ನಾನು ಬ್ರಹ್ಮ ಆಗಿದ್ದೇನೆ' - ಎಂದು ಮುಂತಾದ ವೇದಾಂತಮಹಾವಾಕ್ಯಗಳು ಈ ತತ್ತ್ವವನ್ನು ಉಪದೇಶಿಸುತ್ತವೆ. ಆದ್ದರಿಂದ ವೇದಾಂತಗಳ ತಾತ್ಪರ್ಯಾರ್ಥವನ್ನು ತಿಳಿಯಬೇಕಾದರೆ ಈ ಮಹಾವಾಕ್ಯಗಳ ಅರ್ಥವನ್ನು ತಿಳಿಯಬೇಕು. ವಾಕ್ಯವೆಂದರೆ ಪದಗಳ ಸಮೂಹವು. ಪದಗಳ ಅರ್ಥವನ್ನು ತಿಳಿಯದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಕ್ಯದ ಅರ್ಥವನ್ನು ತಿಳಿಯಲಾಗುವುದಿಲ್ಲ. ಈ ಪದಗಳ ಅರ್ಥವು ಲೋಕದಲ್ಲಿ ಪ್ರಸಿದ್ಧವಲ್ಲದ್ದರಿಂದ, ಇವುಗಳ ಅರ್ಥವನ್ನು ವೇದಾಂತಗಳಿಂದಲೇ ತಿಳಿಯಬೇಕಾಗಿದೆ.

ಯತೋ ವಾ ಇಮಾನಿ ಭೂತಾನಿ ಜಾಯಂತೇ; ಯೇನ ಜಾತಾನಿ ಜೀವಂತಿ; ಯತ್ಪ್ರಯಂತ್ಯಭಿಸಂವಿಶಂತಿ; ತದ್ವಿಜಿಜ್ಞಾಸಸ್ವ; ತದ್ಬ್ರಹ್ಮ— ಈ ಭೂತಗಳೆಲ್ಲವೂ ಯಾವುದರ ದೆಸೆಯಿಂದ ಹುಟ್ಟುವುವೊ, ಹುಟ್ಟಿದ ಇವು ಯಾರಿಂದ ಜೀವಿಸುವುವೋ, ಲಯವಾಗುವಾಗ ಯಾವುದನ್ನು ಪ್ರವೇಶಿಸುವುವೊ, ಅದನ್ನೇ ವಿಚಾರಮಾಡಿ ತಿಳಿ" ಅದು ಬ್ರಹ್ಮ; "ಸತ್ಯಂ ಜ್ಞಾನಮನಂತಂ ಬ್ರಹ್ಮ— 'ಸತ್ಯವೂ, ಜ್ಞಾನವೂ, ಆನಂತವೂ ಆದುದು ಬ್ರಹ್ಮ'— ಎಂದು ಮುಂತಾದ ವೇದಾಂತವಚನಗಳಿಂದ - ಸಕಲಜಗತ್ತಿನ ಉತ್ಪತ್ತಿಸ್ಥಿತಿಲಯಗಳಿಗೆ ಕಾರಣವಾಗಿ, ಸತ್ಯಜ್ಞಾನಾನಂತರೂಪವಾದುದು ಬ್ರಹ್ಮವೆಂದು ತಿಳಿದುಬರುವುದು. ಇದು ತತ್ತ್ವಮಸಿ ಮಹಾವಾಕ್ಯದಲ್ಲಿರುವ 'ತತ್'—ಪದದ ಅರ್ಥವು.

ಹಾಗೆಯೇ - "ತದ್ಯಥಾ ಮಹಾಮತ್ಸ್ಯ ಉಭೇ ಕೂಲೇ ಅನುಸಂಚರತಿ ಪೂರ್ವಂ ಚೈವಾಪರಂ ಚ ಏವಮೇವಾಯಂ ಪುರುಷಃ ಏತಾವುಭಾವಂತಾವನು ಸಂಚರತಿ ಸ್ವಪ್ನಾಂತಂ ಚ ಬುದ್ಧಾಂತಂ ಚ" – "ಬಲಿಷ್ಠವಾದ ದೊಡ್ಡ ಮೀನು ನದಿಯ ಎರಡು ದಡಗಳ ಕಡೆಗೂ ಸ್ವತಂತ್ರವಾಗಿ ಆಲೆದಾಡುವುದು; ಹೀಗೆಯೇ ಈ ಪುರುಷನು ಜಾಗ್ರತ್ತು, ಸ್ವಪ್ನ - ಎಂಬ ಈ ಎರಡು ಅವಸ್ಥೆಗಳಲ್ಲಿಯೂ ಸಂಚರಿಸುತ್ತಾನೆ." "ಯೋಽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ ಪುರುಷಃ"—ಪ್ರಾಣಿಗಳಿಗೂ ಹೃದಯಕ್ಕೂ ಬೇರೆಯಾಗಿ, ಚೈತನ್ಯರೂಪನಾಗಿರುವ ಈ ಪುರುಷನು"-ಎಂದು ಮುಂತಾದ ವೇದಾಂತವಚನಗಳಿಂದ ಜಾಗ್ರದಾದಿ ಅವಸ್ಥೆಗಳನ್ನು ಅನುಭವಿಸುವ, ಕೇವಲಚಿನ್ಮಾತ್ರಸ್ವರೂಪನು ಆತ್ಮನೆಂದು ತಿಳಿದುಬರುತ್ತದೆ. ಇದು ಮಹಾವಾಕ್ಯದ 'ತ್ವಂ' ಪದದ ಅರ್ಥವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾವಾಕ್ಯದ 'ಅಸಿ' ಎಂಬ ಪದವು "ಈ ಎರಡು ಪದಗಳ ಅರ್ಥವೂ ಒಂದೇ" ಎಂದು ಬೋಧಿಸುತ್ತದೆ. ಹೀಗೆ ಈ ಮಹಾವಾಕ್ಯವು ಜೀವಬ್ರಹ್ಮರ ಏಕತ್ವವನ್ನು ತಿಳಿಸುವುದು. ಈ ಏಕತ್ವದ ಜ್ಞಾನವೇ ಸಂಸಾರಮೋಚಕವಾದುದೆಂದು "ತಮೇವಂ ವಿದ್ವಾನಮೃತ ಇಹ ಭವತಿ ; ನಾನ್ಯಃ ಪಂಥಾ ವಿದ್ಯತೇಯನಾಯ"—'ಹೀಗೆ ತಿಳಿದವನೇ ಮುಕ್ತನಾಗುವನು ; ಇದಕ್ಕೆ ಬೇರೆ ಯಾವ ಉಪಾಯವೂ ಇರುವುದಿಲ್ಲ' ಎಂದು ಮುಂತಾದ ವಚನಗಳು ತಿಳಿಸುತ್ತವೆ. ಈ ಅರ್ಥವನ್ನು ವಿಚಾರಮಾಡಿ ನಿಶ್ಚಯಿಸಿಕೊಳ್ಳಬೇಕು.

ಪ್ರಮಾಣಗಳು ಸ್ವತಃಪ್ರಮಾಣಗಳು – ಎಂದರೆ ಯಾವ ದೋಷವೂ ಇಲ್ಲದಿರುವಾಗ ತಮ್ಮ ವಿಷಯವನ್ನು ಯಥಾರ್ಥವೆಂದೇ ನಿಶ್ಚಿತವಾಗಿ ತಿಳಿಸುವ ಸಾಮರ್ಥ್ಯವುಳ್ಳವುಗಳು. ವೇದಾಂತಗಳು ಶಬ್ದರೂಪಪ್ರಮಾಣವು. ಶಬ್ದದಲ್ಲಿ ಸ್ವತಃ ಯಾವ ದೋಷವೂ ಇರುವುದಿಲ್ಲ. ಹೇಳುವವನ ಅಜ್ಞಾನ, ಪ್ರಮಾದ, ವಂಚನೆ ಮುಂತಾದ ದೋಷಗಳಿಂದ ಅವನು ಆಡಿದ ಮಾತಿನಲ್ಲಿ ದೋಷವು ಸಂಭವಿಸುತ್ತದೆ. ಎಂದರೆ, ಪೌರುಷೇಯಶಬ್ದದಲ್ಲಿಯೇ ದೋಷಕ್ಕೆ ಪ್ರಸಂಗವಿದ್ದೀತು. ವೇದವು ಅಪೌರುಷೇಯವಾದ್ದರಿಂದ ವೇದಾಂತವಾಕ್ಯಗಳಿಂದ ತಿಳಿದುಬರುವ ಅರ್ಥವು ಯಥಾರ್ಥವೆಂದೇ ಸರ್ವನಿಶ್ಚಿತವಾಗುವುದು, ಹೀಗಾದಮೇಲೆ, ಮತ್ತೆ ವೇದಾಂತವಾಕ್ಯಗಳ ಅರ್ಥವನ್ನು ವಿಚಾರಮಾಡತಕ್ಕದ್ದೇನಿದೆ ?—ಎಂದು ಕೇಳಬಹುದು.

ಹೌದು, ವೇದಾಂತಗಳು ಸ್ವತಃಪ್ರಮಾಣಗಳೇ ಆಗಿರುತ್ತ, ಅವುಗಳಿಂದ ತಿಳಿದುಬರುವ ಈ ಬ್ರಹ್ಮಾತ್ಮೈಕತ್ವ–ಎಂಬ ಅರ್ಥವು ಯಥಾರ್ಥವೇ ಎಂದು ನಿಶ್ಚಿತವಾಗುತ್ತದೆ. ಆದರೂ, ಎಲ್ಲರ ನಿತ್ಯದ ಅನುಭವವು ಇದಕ್ಕೆ ವಿರುದ್ಧವಾಗಿದೆ. "ತತ್ಪದಾರ್ಥವಾದ ಬ್ರಹ್ಮವು ಜಗತ್ಕಾರಣವಾಗಿ ಸರ್ವಜ್ಞವೂ, ಸರ್ವಶಕ್ತವೂ ಆಗಿದೆಯೆಂದೂ, ಸತ್ಯಜ್ಞಾನಾನಂತರೂಪವಾಗಿ ಅಸಂಸಾರಿಯೆಂದೂ ತಿಳಿದುಬರುವುದು ; ಜೀವನು ಕೇವಲ ಅಜ್ಞನೂ, ಅಶಕ್ತನೂ, ಸಂಸಾರಿಯೂ ಆಗಿರುವನು ; ಹೀಗೆ ಪರಸ್ಪರವಿರುದ್ಧಸ್ವಭಾವದ ಇವರು, ಒಂದೇ ಎಂಬುದು ಹೇಗೆ ಸಂಭಾವಿತ ?"—ಎಂದು ಸಂದೇಹವು ಸಹಜವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಉಂಟಾಗುತ್ತದೆ. ಇದರ ಜತೆಗೆ, ಇತರಮತದವರು ಈ ವೇದಾಂತಾರ್ಥಕ್ಕೆ ವಿರುದ್ಧವಾಗಿಯೇ ಅರ್ಥವನ್ನು ವಾದಿಸುತ್ತಾರೆ. ತತ್ತ್ವವು ಯಾವುದೆಂಬಲ್ಲಿ ಹೀಗೆ ನಾನಾವಿಧಗಳಾದ ಸಂಶಯಗಳು ಇರುವಾಗ, ವೇದಪ್ರಮಾಣದಿಂದ ತಿಳಿದುಬಂದ ಯಥಾರ್ಥಜ್ಞಾನವೂ ಪ್ರಯೋಜನಕ್ಕೆ ಬರದೆಹೋಗುವುದು. ವಂಚಕರ ದುರ್ಬೋಧನೆಯಿಂದ ಒಬ್ಬರಲ್ಲಿ ಅವಿಶ್ವಾಸವು ಉಂಟಾಗಿರುವಾಗ, ಅವರು ಪ್ರತ್ಯಕ್ಷವಾಗಿ ತೋರಿಸುವ ವಿಷಯದಲ್ಲಿಯೂ ನಂಬಿಕೆಯು ಹುಟ್ಟಲಾರದೆ ಹೋಗುವುದು ಅನುಭವಸಿದ್ಧವು. ವಿಚಾರದಿಂದ ಈ ಸಂಶಯಗಳೆಲ್ಲವೂ ತೊಲಗಲು, ವೇದಾಂತದ ಯಥಾರ್ಥಜ್ಞಾನವು ಸಫಲವಾಗುವುದು. "ವೇದಾಂತವಿಜ್ಞಾನ ಸುನಿಶ್ಚಿತಾರ್ಥಾಃ"; "ಛಿದ್ಯಂತೇ ಸರ್ವಸಂಶಯಾಃ"— "ವೇದಾಂತದ ತಿಳಿವಿನಲ್ಲಿ ಪೂರ್ಣವಾಗಿ ನಿಶ್ಚಿತರಾಗಿರುವವರ ಎಲ್ಲ ಸಂಶಯಗಳೂ ಕತ್ತರಿಸಿಹೋಗುತ್ತವೆ" – ಮುಂತಾದ ವೇದಾಂತವಾಕ್ಯಗಳು ಯಾವ ಸಂಶಯವೂ ಇಲ್ಲದ ನಿಶ್ಚಿತಜ್ಞಾನವೇ ಬೇಕೆಂಬುದನ್ನು ತಿಳಿಸುತ್ತವೆ. ಆದ ಕಾರಣ – 'ತತ್–ತ್ವಂ ಅಸಿ' – "'ನೀನು ಅದು ಆಗಿದ್ದೀಯೆ'– ಎಂಬ ಮಹಾವಾಕ್ಯದ ಅರ್ಥವನ್ನು ಚೆನ್ನಾಗಿ ವಿಚಾರ ಮಾಡಬೇಕಾಗಿದೆ.

ವಿಚಾರಕ್ಕೆ ಸಂಶಯವೇ ಮೂಲ. ವಾದಿಗಳ ವಿರುದ್ಧಾಭಿಪ್ರಾಯಗಳಿಂದ ಸಂಶಯವು ಸಂಭವಿಸುತ್ತದೆ. ಆದುದರಿಂದ, ಮೊದಲು 'ತ್ವಂ' (ನೀನು) ಪದದಲ್ಲಿ ವಾದಿಗಳಿಗಿರುವ ಅಭಿಪ್ರಾಯಗಳನ್ನು ತಿಳಿಯಬೇಕು.

ಇದರಲ್ಲಿ—ಪೃಥಿವಿ (ಭೂಮಿ), ಅಪ್ಪು (ಜಲ), ತೇಜಸ್ಸು (ಅಗ್ನಿ), ಮತ್ತು ವಾಯು (ಗಾಳಿ)—ಈ ನಾಲ್ಕು ಭೂತಗಳು ಸೇರಿ ದೇಹದ ಆಕಾರವಾಗಿವೆ; ಇವೇ ಆತ್ಮನು—'ತ್ವಂ' ಪದಾರ್ಥವು—ಎಂದು ಚಾರ್ವಾಕರು ಹೇಳುತ್ತಾರೆ. ಶಾಸ್ತ್ರದ ಪರಿಚಯವಿಲ್ಲದ ಜನಸಾಮಾನ್ಯವು ಪಶುಸಮಾನವಾಗಿ ಪಾಮರವೆನಿಸುತ್ತದೆ, ಶಾಸ್ತ್ರಜ್ಞರಲ್ಲಿ ಕಡೆಯ ದರ್ಜಿಯವರು ಚಾರ್ವಾಕರು. ಪ್ರತ್ಯಕ್ಷ—ಎಂದರೆ ಇಂದ್ರಿಯಗಳನ್ನೇ ಪ್ರಮಾಣವೆಂದು ಒಡಂಬಡುವ ಇವರು, ಪೃಥಿವಿ ಮುಂತಾದ ನಾಲ್ಕು ಭೂತಗಳನ್ನು ಮಾತ್ರವೇ ಒಪ್ಪುವರು. ದೇಹದ ಆಕಾರವನ್ನು ಹೊಂದಿರುವ ಈ ನಾಲ್ಕುಭೂತಗಳನ್ನೇ 'ತ್ವಂ' ಪದಾರ್ಥವಾದ ಆತ್ಮನೆಂದು ಹೇಳುವರು. ಪ್ರತ್ಯಕ್ಷದಿಂದ ತಿಳಿದುಬರದ

Sri Vidyabharathi Book Centre, Sirsi

CC-O. In Public Domain. Digitized by eGangotri

ಬೇರೆ ಆತ್ಮನನ್ನಾಗಲಿ, ಪುಣ್ಯಪಾಪಗಳನ್ನಾಗಲಿ, ಜನ್ಮಾಂತರಗಳನ್ನಾಗಲಿ, ಸ್ವರ್ಗನರಕಗಳನ್ನಾಗಲಿ, ದೇವರನ್ನಾಗಲಿ—ಒಂದನ್ನೂ ಇವರು ಒಡಂಬಡುವುದಿಲ್ಲ. ಶಾಸ್ತ್ರಪರಿಚಯಶೂನ್ಯರಾದ ಜನಸಾಮಾನ್ಯರ ಅಭಿಪ್ರಾಯವೂ ಇದೇ ಆಗಿರುತ್ತದೆ. ದೇವರು, ಪುಣ್ಯಪಾಪಗಳು, ಜನ್ಮಾಂತರಗಳು—ಇವೇ ಮೊದಲಾದವುಗಳನ್ನು ಒಪ್ಪುವವರೂ ಸಹ, ವ್ಯವಹಾರದ ಸ್ಥಿತಿಯಲ್ಲಿ ದೇಹವನ್ನೇ ತಾವೆಂದು ನಿಶ್ಚಯವಾಗಿ ನಂಬಿರುತ್ತ, ಚಾರ್ವಾಕರೇ ಆಗಿರುತ್ತಾರೆ. ಈ ಕಾರಣದಿಂದ ಈ ಮತವನ್ನು ಲೋಕಾಯತಮತವೆಂದೂ ಕರೆಯುತ್ತಾರೆ—ಎಂದರೆ ಲೋಕದಲ್ಲಿ ಎಲ್ಲೆಡೆಯಲ್ಲಿಯೂ ವಿಸ್ತರಿಸಿರುವಮತವೆಂದು ಅರ್ಥವು.

ಚಾರ್ವಾಕರಲ್ಲಿ ಕೆಲವರು ಚಕ್ಷುಸ್ಸು ಮೊದಲಾದ ಇಂದ್ರಿಯಗಳನ್ನು ಆತ್ಮವೆಂದು ಹೇಳುವರು. ಇಂದ್ರಿಯಗಳು ಒಂದೊಂದೂ ಬೇರೆ ಬೇರೆ ಆತ್ಮವೆಂದೂ, ಇವೆಲ್ಲವೂ ಸೇರಿಯೇ ಆತ್ಮವೆಂದೂ ಇವರಲ್ಲಿ ಅಭಿಪ್ರಾಯಭೇದವುಂಟು.

ಮನಸ್ಸನ್ನೇ ಆತ್ಮವೆಂದು ಇವರಲ್ಲಿ ಕೆಲವರ ಮತವಾಗಿದೆ. ಮತ್ತೆ ಕೆಲವರು ಪ್ರಾಣವಾಯುವನ್ನು ಆತ್ಮವೆಂದು ಹೇಳುತ್ತಾರೆ.

ಕ್ಷಣಿಕವಾದ—ಎಂದರೆ, ಪ್ರತಿಕ್ಷಣವೂ ಹುಟ್ಟಿನಾಶವಾಗುತ್ತಿರುವ ತಿಳಿವೇ ಆತ್ಮವೆಂದು ಬೌದ್ಧರ ಮತವು. ಇವರಲ್ಲಿ ಉತ್ತಮರೆನಿಸಿರುವ ಮಾಧ್ಯಮಿಕರು ಶೂನ್ಯವನ್ನೇ ಆತ್ಮನೆನ್ನುವರು.

ಜೈನರು–ದೇಹಕ್ಕೆ ಬೇರೆಯಾಗಿ ಆತ್ಮನು ಇರುವನೆಂದೂ, ಆವನು ದೇಹದ ಆಕಾರವಾಗಿರುವನೆಂದೂ ಒಪ್ಪುತ್ತಾರೆ.

ಆತ್ಮನು ದೇಹಕ್ಕೆ ಬೇರೆಯಾಗಿ ಇದ್ದಾನೆಂದೂ, ಆವನು ಕರ್ತೃವೂ, ಭೋಕ್ತೃವೂ, ಜಡಸ್ವರೂಪನೂ (ಅಚೇತನನೂ), ವಿಭು (ಸರ್ವತ್ರವ್ಯಾಪಕ)ನೆಂದೂ, ವೈಶೇಷಿಕರೂ, ನೈಯಾಯಿಕರೂ, ಮೀಮಾಂಸಕರಲ್ಲಿ ಒಬ್ಬರಾದ ಪ್ರಾಭಾಕರರೂ ವಾದಿಸುತ್ತಾರೆ. ಜಡಬೋಧರೂಪನೆಂದು ಮೀಮಾಂಸಕರಲ್ಲಿ ಮತ್ತೊಬ್ಬರಾದ ಭಾಟ್ಟರು ಪ್ರತಿಪಾದಿಸುತ್ತಾರೆ.

CC-O. Vidyabharathi Research & Publication Centre, Sringeri

CC-O. In Public Domain. Digitized by eGangotri

ಸಾಂಖ್ಯರೂ, ಯೋಗಮತದವರೂ ಸಹ, ಆತ್ಮನು ಕರ್ತೃವಲ್ಲ; ಮತ್ತ ಕೇವಲಜ್ಞಾನಸ್ವರೂಪನೂ ಭೋಕ್ತೃವೂ ಆಗಿರುವನೆಂದು ಹೇಳುವರು.

ಆತ್ಮನಿಗೆ ಕರ್ತೃತ್ವಭೋಕ್ತೃತ್ವ—ಮುಂತಾದ ಸಂಸಾರವೆಲ್ಲ ಅವಿದ್ಯೆಯಿಂದ ಆದ ಅವಾಸ್ತವರೂಪವೇ ಸರಿ; ಆತ್ಮನು ವಾಸ್ತವವಾಗಿ ಸರ್ವಧರ್ಮರಹಿತವಾದ ಅದ್ವಿತೀಯನಿತ್ಯಮುಕ್ತಬ್ರಹ್ಮಸ್ವರೂಪನೇ ಆಗಿದ್ದಾನೆ—ಎಂದು ಉಪನಿಷತ್ತುಗಳು ತಿಳಿಸುತ್ತವೆ.

"ಅಹಂಪ್ರತ್ಯಯ (ನಾನು ಎಂಬ ತಿಳಿವಿಗೆ) ವಿಷಯನಾದ ಆತ್ಮನು ಯಾರು?"—ಎಂಬ ವಿಷಯದಲ್ಲಿ ವಾದಿಗಳ ಅಭಿಪ್ರಾಯಗಳು ಇಷ್ಟೊಂದು ವಿರುದ್ಧಗಳಾಗಿರುವಾಗ, ಈ ಆತ್ಮನು ಯಾರೆಂಬುದನ್ನು ನಿಶ್ಚಿತವಾಗಿ ತಿಳಿಸುವುದಕ್ಕಾಗಿ, ಶ್ರೀಭಗವತ್ಪಾದರವರು ಹೇಳುತ್ತಾರೆ—

ನ ಭೂಮಿರ್ನ ತೋಯಂ ನ ತೇಜೋ ನ ವಾಯುಃ
ನ ಖಂ ನೇಂದ್ರಿಯಂ ವಾ ನ ತೇಷಾಂ ಸಮೂಹಃ ।
ಅನೈಕಾಂತಿಕತ್ವಾತ್ ಸುಷುಪ್ತ್ಯೇಕಸಿದ್ಧಃ
ತದೇಕೋऽವಶಿಷ್ಟಃ ಶಿವಃ ಕೇವಲೋऽಹಂ ॥೧॥

ಅಹಂ=ನಾನು; ಭೂಮಿಃ ನ=ಭೂಮಿಯಲ್ಲ; ತೋಯಂ ನ=ಜಲವಲ್ಲ; ತೇಜಃ ನ=ತೇಜಸ್ಸು ಅಲ್ಲ; ವಾಯುಃ ನ=ಗಾಳಿಯಲ್ಲ; ಖಂ ನ=ಆಕಾಶವಲ್ಲ; ಇಂದ್ರಿಯಂ ನ=ಇಂದ್ರಿಯವಲ್ಲ; ತೇಷಾಂ=ಇವೆಲ್ಲವುಗಳ; ಸಮೂಹಃ ನ=ಸಮುದಾಯವೂ ಅಲ್ಲ; ಏಕೆಂದರೆ; ಅನೈಕಾಂತಿಕತ್ವಾತ್=ಇವು ಅಸ್ಥಿರಗಳಾದ್ದರಿಂದ; ಸುಷುಪ್ತ್ಯೇಕಸಿದ್ಧಃ=ಸುಷುಪ್ತಿಯ ಅವಸ್ಥೆಯೊಂದರಲ್ಲಿಯೇ ತಿಳಿದುಬರುವ ವಾಸ್ತವಸ್ಥಿತಿಯಂತೆ; ಅವಶಿಷ್ಟಃ=ಎಲ್ಲವೂ ಕಳೆದು ಉಳಿದಿರುವ; ಏಕಃ=ಅದ್ವಿತೀಯವಾದ; ಕೇವಲಃ=ನಿರ್ಧರ್ಮಕವಾದ; ಶಿವಃ=ಮಂಗಳಕರವಾದ ಆನಂದರೂಪದ; ತತ್=ತತ್ಪದದ ಅರ್ಥವಾದ ಆ ಪರಬ್ರಹ್ಮವು; ಅಹಂ=ನಾನು – ಆತ್ಮನು. ಇದು ಈ ಪದ್ಯದ ತಾತ್ಪರ್ಯಾರ್ಥ. ಇದನ್ನು ವಿವರಿಸುತ್ತಾರೆ—

Sri Vidyaranya Pith Book Centre, Sringeri

CC-O. In Public Domain. Digitized by eGangotri

ಅಹಂ=ನಾನು; ಎಂದರೆ, ಅಹಂ ಎಂಬ ತಿಳಿವಿಗೆ ಆಶ್ರಯನಾದ ಆತ್ಮನು; ಏಕಃ=ಅದ್ವಿತೀಯನು, ಯಾವದ್ವೈತವೂ ಇಲ್ಲದವನು. ಏಕೆಂದರೆ, ಅವಶಿಷ್ಟಃ=ದ್ವೈತವೆಲ್ಲ ಕಳೆದು ಉಳಿದವನು; ಕಳೆಯುವುದಕ್ಕೆ ಸಾಧ್ಯವಾದುದನ್ನೆಲ್ಲವನ್ನೂ ಕಳೆದು, ಕಳೆಯಲು ಬಾರದೆ ಉಳಿದವನು; ಆದ್ದರಿಂದಲೇ ಕೇವಲಃ=ಯಾವ ಧರ್ಮವೂ ಯಾವ ಗುಣವೂ ಇಲ್ಲದೆ, ನಿರ್ಧರ್ಮಕ ಮತ್ತು ನಿರ್ಗುಣವಾದ ಅಖಂಡಚಿನ್ಮಾತ್ರಸ್ವರೂಪನು, ಆದಕಾರಣ ಶಿವಃ=ಮಂಗಳಸ್ವರೂಪನು; ದುಃಖವು ಅಮಂಗಳಕರವಾದ್ದರಿಂದ, ಆನಂದರೂಪನೆಂದು ತಾತ್ಪರ್ಯವು. ಅಹಂ, ಅಹಂ='ನಾನು, ನಾನು' ಎಂದು ಯಾರನ್ನು ಎಲ್ಲರೂ ವ್ಯವಹಾರಮಾಡುತ್ತಿದ್ದಾರೋ, ಆ ಅಹಂ—ಎಂಬ ತಿಳಿವಿಗೆ ಆಶ್ರಯವಾದ ಅವನು ವಸ್ತುತಃ ಸತ್ಯವೂ ಅದ್ವಿತೀಯವೂ ಪರಮಾನಂದರೂಪವೂ ಆದ ತತ್=ತತ್ಪದದ ಅರ್ಥವಾದ ಪರಮಾತ್ಮನು—ಎಂದು ವಾಕ್ಯದ ಅರ್ಥವು. ಉಪನಿಷತ್ತುಗಳು ಮಹಾವಾಕ್ಯಗಳಿಂದ ಬೋಧಿಸುವ ಈ ಅರ್ಥವೇ ಸತ್ಯವಾದುದೆಂದು ಅಭಿಪ್ರಾಯವು.

ವೇದಾಂತಪಕ್ಷವೇ ಯಥಾರ್ಥವೆಂದು ಹೀಗೆ ಪ್ರತಿಜ್ಞೆಮಾಡಿದ್ದಾರೆ. ಪ್ರತಿಜ್ಞೆಮಾಡಿದಮಾತ್ರದಿಂದ ವಿಷಯವು ಸಿದ್ಧಿಸಿದಂತಾಗುವುದಿಲ್ಲವಾಗಿ, ಅದನ್ನು ಯುಕ್ತಿಯಿಂದ ಪ್ರತಿಪಾದಿಸುವುದಕ್ಕಾಗಿ—ನ ಭೂಮಿಃ, ನ ತೋಯಂ ನ ತೇಜಃ, ನ ವಾಯುಃ, ನ ಖಂ—ಎಂದು ಹೇಳಿದ್ದಾರೆ. ಇದು ಚಾರ್ವಾಕ ಮತದ ನಿರಾಕರಣೆಯಾಗಿದೆ. ಅಹಂ – ಎಂಬ ಪದವು ಈ ಒಂದೊಂದರೊಡನೆಯೂ ಅನ್ವಯಿಸುತ್ತದೆ. ಅಹಂ ಭೂಮಿಃ ನ, ಭೂಮಿಃ ಅಹಂ ನ—'ನಾನು ಭೂಮಿಯು ಅಲ್ಲ; ಭೂಮಿಯು ನಾನು ಅಲ್ಲ'—ಎಂದುಮುಂತಾಗಿ ಎರಡುವಿಧವಾಗಿಯೂ ಅರ್ಥವಾಗುವುದು. ಇದರಿಂದ, ಅಹಂಪದಾರ್ಥವೂ ಭೂಮಿಪದಾರ್ಥವೂ ಅತ್ಯಂತ ಬೇರೆ ಬೇರೆಯಾದುದೆಂದು ಇವುಗಳ ಪರಸ್ಪರ ಭೇದವು ಸ್ಪಷ್ಟವಾಗುವುದು. ಇದರಂತೆಯೇ 'ನ ತೋಯಂ'—ಮುಂತಾದವುಗಳ ಅರ್ಥವನ್ನೂ ತಿಳಿಯಬೇಕು.

ಚಾರ್ವಾಕರು ನಾಲ್ಕುಭೂತಗಳ ಸಮುದಾಯವಾದ ದೇಹವನ್ನು ಆತ್ಮನೆಂದು ಹೇಳುವರೇ ಹೊರತು, ಭೂಮಿ ಮೊದಲಾದ ಒಂದೊಂದನ್ನೂ ಆತ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ವೆಂದು ಹೇಳುವುದಿಲ್ಲ. ಆದರೂ, ಅನೇಕ ಅವಯವಗಳು ಸೇರಿ ಬೇರೆ ಅವಯವಿಯೊಂದು ಹುಟ್ಟುವುದೆಂದು ನೈಯಾಯಿಕರು ಹೇಳುವಂತೆ, ಚಾರ್ವಾಕರು ದೇಹವೆಂಬ ಬೇರೆ ಅವಯವಿಯನ್ನು ಒಪ್ಪುವುದಿಲ್ಲವಾದ್ದರಿಂದ, ಒಂದೊಂದುಭೂತವನ್ನೂ ಆತ್ಮವಲ್ಲವೆಂದು ನಿರಾಕರಿಸಿ, ಚಾರ್ವಾಕರ ದೇಹಾತ್ಮವಾದವನ್ನು ನಿರಾಕರಿಸಿರುತ್ತಾರೆ.

ಪ್ರತ್ಯಕ್ಷವೊಂದನ್ನೇ ಪ್ರಮಾಣವೆಂದು ಒಪ್ಪುವ ಚಾರ್ವಾಕರು, ಕಣ್ಣಿಗೆ ಕಾಣದ ಆಕಾಶವನ್ನು ಒಪ್ಪುವುದಿಲ್ಲವಾದರೂ, ವೇದಾಂತದಲ್ಲಿ ಆಕಾಶವನ್ನು ಒಪ್ಪಿರುವುದರಿಂದ, ಭೂಮಿ ಮೊದಲಾದವು ಆತ್ಮವಲ್ಲವಾದರೂ, "ಆಕಾಶವು ಆತ್ಮವೋ"–ಎಂಬ ಸಂಶಯವನ್ನು ನಿರಾಕರಿಸುವುದಕ್ಕಾಗಿ – ನ ಖಂ ಎಂದು ಹೇಳಿರುತ್ತಾರೆ. ಅಥವಾ – ನ ಭೂಮಿಃ, ನ ತೋಯಂ, ನ ತೇಜಃ, ನ ವಾಯುಃ – ಇದಿಷ್ಟೇ ಚಾರ್ವಾಕಮತದ ನಿರಾಕರಣೆಯು ; ನ ಖಂ – ಎಂಬುದು ಶೂನ್ಯವಾದದ ಬೌದ್ಧಮತದ ನಿರಾಕರಣೆಯೊಂದು ತಿಳಿಯತಕ್ಕದ್ದು.

ಇಂದ್ರಿಯಂ ನ—ಎಂದು ಒಂದೊಂದುಇಂದ್ರಿಯವೂ ಆತ್ಮವೆಂಬ ಅಭಿಪ್ರಾಯವನ್ನು ನಿರಾಕರಿಸಿದೆ ; ತೇಷಾಂ ಸಮೂಹಃ ನ—ಎಂದು ಇಂದ್ರಿಯಗಳ ಸಮುದಾಯವು ಆತ್ಮವೆಂಬ ಮತವನ್ನೂ, ದೇಹದ ಆಕಾರವಾಗಿ ಪರಿಣಮಿಸಿರುವ ಇಂದ್ರಿಯಗಳು ಆತ್ಮವೆಂಬ ಮತವನ್ನೂ ನಿರಾಕರಿಸಿರುತ್ತಾರೆ. ಚಾರ್ವಾಕಮತದಲ್ಲಿ ಅವಯವಿಯನ್ನು ಒಪ್ಪುವುದಿಲ್ಲವಾಗಿ, ಪ್ರತ್ಯೇಕವಾಗಿ ಇವು ಆತ್ಮವಲ್ಲವೆಂದು ಮೊದಲು ನಿರಾಕರಿಸಿರುತ್ತೆ ; ಅವಯವಿಯನ್ನು ಒಪ್ಪುತ್ತೇವೆಂದು ಅವರಲ್ಲಿ ಯಾರಾದರೂ ಹೇಳುವುದಾದರೆ, ಅದೂ ಆತ್ಮವಲ್ಲವೆಂದು ಈಗ ನಿರಾಕರಿಸಿದ್ದಾರೆಂದು ತಿಳಿಯಬೇಕು.

ಭೂತಗಳು ಆತ್ಮವಲ್ಲವೆಂದು ನಿರಾಕರಿಸಿದ್ದರಿಂದಲೇ, ಭೌತಿಕಗಳಾದ ಪ್ರಾಣವನ್ನೂ ಮನಸ್ಸನ್ನೂ ಆತ್ಮವಲ್ಲವೆಂದು ಹೇಳಿದಂತಾಗುವುದು. ಮನಸ್ಸು ಆತ್ಮವಲ್ಲವೆಂದಾದಮೇಲೆ, ಮನಸ್ಸಿನ ವೃತ್ತಿರೂಪವಾಗಿರುವ ಕ್ಷಣಿಕವಿಜ್ಞಾನವು ಆತ್ಮವೆಂಬ ಬೌದ್ಧಮತವೂ ನಿರಾಕರಿಸಲ್ಪಟ್ಟದ್ದಾಯಿತು. ಆತ್ಮನು ದೇಹಕ್ಕೆ ಬೇರೆಯಾಗಿದ್ದಾನೆಂದು ಸಿದ್ಧವಾದ್ದರಿಂದ— "ದೇಹದ ಆಕಾರದವನು ಆತ್ಮನು"

CC-O. Vidyabharathi Book Centre, Sringeri

CC-O. In Public Domain. Digitized by eGangotri

—ಎಂಬ ಜೈನಮತವೂ ಅಸಂಗತವೆಂದು ಸಿದ್ಧವಾಗುವುದು. ಈ ಕಾರಣ ದಿಂದಲೇ ಆತ್ಮನನ್ನು ಕರ್ತೃ, ಭೋಕ್ತೃ ಎಂದು ಮುಂತಾಗಿ ಹೇಳುವ ಇತರ ಎಲ್ಲ ಮತಗಳನ್ನೂ ಅಸನ್ಮತಗಳೆಂದು ನಿರಾಕರಿಸಿದಂತಾಗುವುದು.

'ಈ ಮತಗಳು ಅಸನ್ಮತಗಳೆಂಬುದು ಹೇಗೆ ?' ಎಂದರೆ; ಅದಕ್ಕೆ ಅನೈಕಾಂತಿಕತ್ವಾತ್—ಎಂದು ಕಾರಣವನ್ನು ಹೇಳಿದ್ದಾರೆ. ಏಕಾಂತಿಕ– ಎಂದರೆ ಯಾವಾಗಲೂ ಒಂದೇರೂಪದಲ್ಲಿ ನಿಶ್ಚಿತವಾಗಿರುವಂಥದ್ದು; ಅನೈಕಾಂತಿಕತ್ವಾತ್-ಯಾವಾಗಲೂ ವಿಕಾರಹೊಂದುತ್ತ ಇವು ಒಂದೇರೂಪದಲ್ಲಿ ಸ್ಥಿರವಾಗಿರುವುದಿಲ್ಲವಾದ್ದರಿಂದ. ಅಂಥ ಆತ್ಮನು ಇವು ಆಗುವುದಿಲ್ಲವೆಂದು ಅರ್ಥವು. ದೇಹ. ಪ್ರಾಣ, ಇಂದ್ರಿಯ, ಮನಸ್ಸು, ಬುದ್ಧಿ–ಇವುಗಳ ವಿಕಾರ ಗಳಿಲ್ಲವೂ ಆತ್ಮನಿಗೆ ತಿಳಿದುಬರುತ್ತಲೇ ಇರುತ್ತವೆ; ಆತ್ಮನಿಗೆ ತಿಳಿದುಬರದ ಇವುಗಳ ಸ್ಥಿತಿಯು ಯಾವುದೂ ಇರುವುದಿಲ್ಲ; ಇದಕ್ಕೆಲ್ಲ ಸಾಕ್ಷಿಯಾಗಿರುವ ಆತ್ಮನು ಯಾವವಿಕಾರವೂ ಇಲ್ಲದೆ, ಯಾವಾಗಲೂ ಸ್ಥಿರವಾದ ಜ್ಞಾನಸ್ವರೂಪ ವಾಗಿದ್ದಾನೆಂದು ಇದರಿಂದ ಸ್ಪಷ್ಟವಾಗುವುದು. ಸತ್ಯಜ್ಞಾನ ಸ್ವರೂಪವಾದ ಆತ್ಮನು, ವಿಕಾರಗಳಾಗಿ ಜಡಗಳಾಗಿ ನಶ್ವರಗಳಾಗಿರುವ ಇವುಗಳ ರೂಪನು ಅಲ್ಲವೆಂದು ನಿಶ್ಚಿತವು. 'ಮತ್ತೆ ಇವುಗಳ ಸ್ವರೂಪವೇನು' ? '—ಎಂದರೆ, ಅದ್ವಿತೀಯವಾದ ಆತ್ಮನಲ್ಲ; ಅನಾದಿಯೂ ಅನಿರ್ವಚನೀಯವೂ ಆದ ಅವಿದ್ಯೆ ಯಿಂದ ಕಲ್ಪಿತವಾಗಿ, ಇವು ಮಿಥ್ಯಾಭೂತಗಳೆಂದು ತಾತ್ಪರ್ಯವು.

ಸುಷುಪ್ತಿಯಲ್ಲಿ ಏನೊಂದೂ ತಿಳಿದು ಬರುವುದಿಲ್ಲವಾದ್ದರಿಂದ, ಆತ್ಮನೂ ಆಗ ಇರುವುದಿಲ್ಲವಾಗಿ— ಆತ್ಮನು ಯಾವಾಗಲೂ ಸ್ಥಿರವಾಗಿ ಇರುವನೆಂಬುದು "ಹೇಗೆ ?'—ಎಂದರೆ: ಹಾಗಲ್ಲ; ಸುಷುಪ್ತ್ಯೇಕಸಿದ್ಧಃ ಅವನು, ಆತ್ಮನು ಸುಷುಪ್ತಿಗೆ ಸಾಕ್ಷಿಯಾಗಿರುತ್ತಾನೆ. ಆತ್ಮನು ಸುಷುಪ್ತಿ ಯಲ್ಲಿ ಇಲ್ಲವೆಂದಾದರೆ, - 'ಸುಖಂ ಅಹಂ ಅಸ್ವಾಪ್ಸಂ' – 'ಇದುವರೆಗೂ ಸುಖವಾಗಿ ಇದ್ದೆ'—ಎಂದು ಎಚ್ಚರಗೊಂಡವನು ಹೇಳುವುದಕ್ಕಾಗದೆ ಹೋಗುವುದು. ಜಾಗ್ರತ್ತು ಮತ್ತು ಸ್ವಪ್ನಗಳಲ್ಲಿ ದೇಹೇಂದ್ರಿಯಾದಿಗಳ ವ್ಯವಹಾರಗಳನ್ನೂ ಸುಷುಪ್ತಿಯಲ್ಲಿ ಇವುಗಳು ಇಲ್ಲದಿರುವುದನ್ನೂ ಸಾಕ್ಷಿಯಾಗಿ ತಿಳಿಯುತ್ತಿರುವ ಆತ್ಮನು, ಇವೆಲ್ಲಕ್ಕೂ ಬೇರೆಯಾದವನೆಂದು ಸ್ಪಷ್ಟವು. ಹೀಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂರುಕಾಲಗಳಲ್ಲಿಯೂ ಸ್ಥಿರನಾಗಿರುವ ಆತ್ಮನ ಸ್ವರೂಪವು ಪಾರಮಾರ್ಥಿಕ ತತ್ತ್ವವೆಂದು ಸಿದ್ಧವು. "ತಮೇವ ಭಾಂತಮನುಭಾತಿ ಸರ್ವಂ: ತಸ್ಯಭಾಸಾ ಸರ್ವಮಿದಂ ವಿಭಾತಿ" 'ಬೆಳಗುವ ಅವನನ್ನು ಅನುಸರಿಸಿಯೇ ಇವೆಲ್ಲವೂ ಬೆಳಗುತ್ತವೆ; ಅವನ ಪ್ರಕಾಶದಿಂದಲೇ ಇವೆಲ್ಲವೂ ಬೆಳಗುವುದು' - ಎಂಬ ಶ್ರುತಿಯು ಇಂಥ ಸ್ವಪ್ರಕಾಶವಸ್ತುವನ್ನು ಬ್ರಹ್ಮವೆಂದು ಹೇಳುವುದು. ಆದ್ದರಿಂದ ಇಂಥ ಆತ್ಮನು ಬ್ರಹ್ಮವೇ—ಎಂದು ಸಿದ್ಧಾಂತವು ಸಿದ್ಧಿಸುತ್ತದೆ.

"ಸಕಲವನ್ನೂ ತಿಳಿಯುವ ಆತ್ಮನೊಬ್ಬನೇ ಸಾಕ್ಷಿಯಾಗಿ ಸ್ವಪ್ರಕಾಶನೆಂದೂ, ಇತರ ದೇಹೇಂದ್ರಿಯಾದಿಗಳೆಲ್ಲ ಆತ್ಮನಿಗೆ ದೃಶ್ಯವಾಗಿದ್ದು ಜಡಗಳೆಂದೂ ಹೇಳಿದರೆ, ನಿರ್ವಿಕಾರನಾದ ಆತ್ಮನು ಕರ್ತೃವಾಗಲಾರದೆ, ಜಡವೂ ಕರ್ತೃವಾಗಲಾರದಾಗಲಾಗಿ, ವ್ಯವಹಾರದಲ್ಲಿ ಕರ್ತೃವು ಯಾರು ?"—ಎಂದರೆ ಆತ್ಮನು ಕೂಟಸ್ಥನಿತ್ಯವಾದ್ದರಿಂದ ಕರ್ತೃವಾಗಲಿ ಭೋಕ್ತೃವಾಗಲಿ ಸಂಸಾರಿಯಾಗಲಿ ಅಗುವಂತೆಯೇ ಇಲ್ಲ. ಜಡವಾದ ಅಂತಃಕರಣವು ಸ್ವತಃ ಕರ್ತೃವಾಗಲಾರದುದಾದರೂ. ಸ್ವಚ್ಛಸ್ವಭಾವದ ಅಂತಃಕರಣದಲ್ಲಿ, ಸೂರ್ಯನ ಪ್ರಕಾಶವು ಕನ್ನಡಿಯಲ್ಲಿ ಹೇಗೋ ಹಾಗೆ, ಆತ್ಮಚೈತನ್ಯವು ಪ್ರತಿಬಿಂಬಿಸುತ್ತದೆ. ಆತ್ಮಚೈತನ್ಯದ ಪ್ರತಿಬಿಂಬಸಹಿತವಾದ ಅಂತಃಕರಣವು ಚೇತನದಂತೆ ತೋರಿಬರುತ್ತ, ಕರ್ತೃತ್ವಾದಿರೂಪವಾಗಿ ವಿಕಾರಹೊಂದುತ್ತದೆ. ಅಂತಃಕರಣದಲ್ಲಿ ಪ್ರತಿಬಿಂಬಿಸಿರುವ ಚೈತನ್ಯವನ್ನು ಜೀವನೆಂದು ಹೇಳುತ್ತಾರೆ. ಹೀಗೆ ಜೀವನಿಗೆ ಸಂಸಾರವೇ ಹೊರತು, ಆತ್ಮನಿಗಲ್ಲ. ಈ ಜೀವನು ವಾಸ್ತವಸ್ವರೂಪದವನಲ್ಲ; ಪ್ರತಿಬಿಂಬವು ಬಿಂಬವನ್ನು ಬಿಟ್ಟು ಬೇರೆ ಸ್ವತಂತ್ರವಾದವಸ್ತುವಲ್ಲ.

"ರೂಪವುಳ್ಳ ವಸ್ತುವಿಗೇ ಪ್ರತಿಬಿಂಬವು ಸಂಭವಿಸುವುದರಿಂದ. ನಿರೂಪವಾದ ಆತ್ಮಚೈತನ್ಯಕ್ಕೆ ಪ್ರತಿಬಿಂಬವು ಹೇಗೆ ಉಂಟಾಗುತ್ತದೆ ?"—ಎಂದರೆ, ಹಾಗಲ್ಲ; ರೂಪಕ್ಕೆ ಮತ್ತೊಂದು ರೂಪವಿಲ್ಲವಾದ್ದರಿಂದ, ಕೆಂಪುಹೂವಿನ ಕೆಂಪು ನಿರೂಪವಾಗಿದೆ; ಆದರೂ ಅದು ಸ್ಫಟಿಕದಲ್ಲಿ ಪ್ರತಿಬಿಂಬಿಸುತ್ತದೆ. ಹಾಗೆಯೇ, ರೂಪವಿಲ್ಲದ ಆಕಾಶವು ನೀರಿನಲ್ಲಿ ಪ್ರತಿಬಿಂಬಿಸುತ್ತದೆ; ಆಕಾಶವು ನೀರಿನಲ್ಲಿ ಪ್ರತಿಬಿಂಬಿಸದೆ ಇದ್ದರೆ, ಅಲ್ಲಿ ಪ್ರತಿಬಿಂಬಿಸಿರುವ ವಸ್ತುಗಳ ರೂಪವು

Sri Vidyabharathi Publications, Sringeri

CC-O. In Public Domain. Digitized by eGangotri

ಕಾಣಬರದೆ ಹೋಗುತ್ತಿತ್ತು. ಆದ್ದರಿಂದ, ರೂಪವಿಲ್ಲದ ವಸ್ತುವಿಗೂ ಪ್ರತಿಬಿಂಬವು ಸಂಭವಿಸುತ್ತದೆಯಾಗಿ, ಸ್ವಚ್ಛವಾದ ಅಂತಃಕರಣದಲ್ಲಿ ಆತ್ಮಚೈತನ್ಯವು ಪ್ರತಿಬಿಂಬಿಸಿ, ಸಂಸಾರಿಯಾದ ಜೀವನಾಗಿದೆ. ಹೀಗೆ ಅಂತಃಕರಣವು ಚೈತನ್ಯ ಪ್ರತಿಬಿಂಬದ ಅಧ್ಯಾಸದ ಮೂಲಕ ಕರ್ತೃವಾಗಿರುತ್ತದೆ. ಚೈತನ್ಯವು ನಿರವಯವವಾಗಿ ಅಸಂಗವಾಗಿದೆ. ಆದ್ದರಿಂದ ಇದಕ್ಕೆ ಯಾವುದರ ಸಂಬಂಧವೂ ವಾಸ್ತವವಾಗಿ ಆಗುವಹಾಗಿಲ್ಲ, ಆದಕಾರಣ, ಆತ್ಮಚೈತನ್ಯಕ್ಕೆ ಅಂತಃಕರಣದಲ್ಲಿ ಆಗಿರುವ ಸಂಬಂಧವು ಅವಾಸ್ತವವೇ ಆಗಿರುತ್ತದೆ. ಇದನ್ನೇ ಅಧ್ಯಾಸವೆಂದು ಹೇಳಿರುತ್ತೆ.

"ಚೈತನ್ಯವನ್ನು ಸಾವಯವವೆಂದು ಹೇಳಬಾರದೇಕೆ ?"—ಎಂದರೆ ಅದು ಸಮಂಜಸವಾಗುವುದಿಲ್ಲ. ಚೈತನ್ಯಕ್ಕೆ ಅವಯವಗಳು ಇರುವುವೆಂದಾದರೆ, ಆ ಅವಯವಗಳು ಚೇತನಗಳೋ, ಅಚೇತನಗಳೋ ? ಅಚೇತನ ಅವಯವಗಳನ್ನುಳ್ಳ ವಸ್ತುವು ಅಚೇತನವೇ ಆಗಬೇಕಾಗುವುದರಿಂದ, ಚೇತನವಸ್ತುವಿಗೆ ಅಚೇತನಾವಯವಗಳು ಇರುವಹಾಗಿಲ್ಲ. ಮತ್ತೆ, ಚೇತನಕ್ಕೆ ಚೇತನಾವಯವಗಳಿವೆಯೆಂದರೆ, ಆ ಚೇತನವು ಅನೇಕ ಚೇತನಗಳ ಸಮುದಾಯವೆಂದಾಗುವುದೇ ಹೊರತು, ಒಂದು ಚೇತನವೆಂದಾಗಲಾರದು. ಆದ್ದರಿಂದ, ಚೇತನಸ್ವರೂಪವಾದ ಆತ್ಮನು ನಿರವಯವನಾಗಿ, ಅಖಂಡ ಚಿನ್ಮಾತ್ರಸ್ವರೂಪನೆಂದು ನಿಶ್ಚಿತವಾಗುವುದು. ಪ್ರಜ್ಞಾನಘನ:— ಎಂದು ಶ್ರುತಿಯೂ ಹೀಗೆ ಹೇಳಿರುತ್ತದೆ. ಸಂಯೋಗ ಮುಂತಾದ ವಾಸ್ತವಸಂಬಂಧವು ಸಾವಯವ ವಸ್ತುವಿನಲ್ಲಿಯೇ ಸಂಭವಿಸುವುದರಿಂದ, ನಿರವಯವನಾದ ಆತ್ಮನಿಗೆ ಇತರ ವಸ್ತುಗಳೊಡನೆ ಸಂಬಂಧವು ಅವಾಸ್ತವವಾದುದು—ಮಿಥ್ಯಾಭೂತವಾದುದು—ಅಧ್ಯಾಸಿಕವೇ ಆಗಿರುತ್ತದೆ.

'ನಾನು ಮನುಷ್ಯ, ಕರ್ತೃ, ಭೋಕ್ತೃ'—ಎಂಬ ತಿಳಿವು ಎಲ್ಲರಿಗೂ ಸಹಜವಾಗಿರುತ್ತವೆ: ಆದರೆ ದೇಹಾದಿಗಳಿಗೆ ಬೇರೆಯಾಗಿರುವ ಆತ್ಮನಿಗೆ, ದೇಹಾದಿಗಳ ಸಂಬಂಧದಿಂದಲೇ ಆಗುವ ಈ ತಿಳಿವುಗಳು ವಾಸ್ತವವಾಗುವಹಾಗಿಲ್ಲ. ದೇಹಾದಿಗಳ ತೋರುವಿಕೆಯಿಲ್ಲದಿರುವ ಸುಷುಪ್ತಿಯಲ್ಲಿ ಈ ವಿಧವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ತಿಳಿವು ಯಾರಿಗೂ ಆಗುವುದಿಲ್ಲ. ಆತ್ಮನು ವಿಕಾರಹೊಂದುವಪಕ್ಷದಲ್ಲಿ, ನಶ್ವರನಾಗುವನು; ಮತ್ತು ಪರಿಚ್ಛಿನ್ನವಾಗಿ ಅನಾತ್ಮನೇ ಆಗುವನು. ದ್ರಷ್ಟಲ (ನೋಡುವವ)ವಿಗೆ ದೃಶ್ಯದ ಸಂಬಂಧವಾಗುವುದಿಲ್ಲ—ಬೆಂಕಿಯನ್ನು ನೋಡುವವನಿಗೆ ಕಣ್ಣು ಸುಟ್ಟುಹೋಗುವುದಿಲ್ಲ. ಆದ್ದರಿಂದ, ಸಾಕ್ಷಿಯಾಗಿರುವ ಆತ್ಮನಿಗೆ ದೃಶ್ಯಗಳಾಗಿರುವ ದೇಹಾದಿಗಳೊಡನಾಗಲಿ, ಅವುಗಳ ಧರ್ಮಗಳೊಡನಾಗಲಿ ಯಾವ ಸಂಬಂಧವೂ ಆಗುವುದಿಲ್ಲ. ಆತ್ಮನು ವಸ್ತುತಃ ಕರ್ತೃ ಸ್ವರೂಪನಾಗಿರುವುದಾದರೆ, ಸ್ವಾಭಾವಿಕಧರ್ಮವು ಆ ವಸ್ತುವು ಇರುವವರೆಗೂ ಇರಲೇಬೇಕಾದ್ದರಿಂದಲೂ, ಕರ್ತೃತ್ವವು ದುಃಖರೂಪವಾದ್ದರಿಂದಲೂ ಆತ್ಮನಿಗೆ ಸಂಸಾರದಿಂದ ಮೋಕ್ಷವೇ ಇಲ್ಲವೆಂದಾಗುವುದು. ಆದುದರಿಂದ ಆತ್ಮನನ್ನು ನಿರ್ಧರ್ಮಕಸ್ವಪ್ರಕಾಶಪರಮಾನಂದಸ್ವರೂಪನೆಂದು ಅವಶ್ಯ ಅಂಗೀಕರಿಸಬೇಕು.

ಹೀಗಾದ ಮೇಲೆ,—'ನಾನು ಮನುಷ್ಯ, ಕರ್ತಾ, ಭೋಕ್ತಾ—ಮುಂತಾದ ಅನುಭವಗಳೆಲ್ಲ ಭ್ರಾಂತಿಯೆಂದು ವಿಶದಪಡುವುದು. ಈ ಭ್ರಾಂತಿಯು ಸುಷುಪ್ತಿಯಲ್ಲಿ ಇಲ್ಲದಿರುವುದರಿಂದ, ಇದು ನಿತ್ಯವಾದುದಲ್ಲವಾಗಿ ಕಾರ್ಯರೂಪವೆಂದು ತಿಳಿದುಬರುವುದು. ಇದಕ್ಕೆ ಕಾರಣವೊಂದನ್ನು ಒಪ್ಪಬೇಕು—ಕಾರಣವಿಲ್ಲದೆ ಕಾರ್ಯವು ಆಗಲಾರದು. ಭ್ರಾಂತಿರೂಪವಾದ ಈ ಕಾರ್ಯಕ್ಕೆ ಅಂಥ ಭ್ರಾಂತಿ ರೂಪವಾದ ಕಾರಣವನ್ನೇ ಒಡಂಬಡಬೇಕಾಗುವುದು, ಮತ್ತು ಅದನ್ನು ಅನಾದಿಯಾದುದೆಂದೂ ಒಪ್ಪಬೇಕು; ಇದೂ ಕಾರ್ಯವಾದರೆ, ಇದಕ್ಕೆ ಮತ್ತೊಂದು ಕಾರಣವನ್ನು ಹೇಳಬೇಕಾಗುವುದು. ಹೀಗೆ ಅನಾದಿಯೂ, ಅವಾಸ್ತವವೂ ಆಗಿರುವ ಈ ಭ್ರಾಂತಿಕಾರಣವನ್ನೇ ಮಾಯೆ, ಅಜ್ಞಾನ, ಅವಿದ್ಯೆ—ಎಂದು ಮುಂತಾಗಿ ಹೇಳುವರು.

ಪ್ರಪಂಚವಾಗಲಿ, ಸಂಸಾರವಾಗಲಿ ಸತ್ಯವಾಗುವ ಪಕ್ಷದಲ್ಲಿ, ಸತ್ಯವಾದುದು ಆತ್ಮನಂತೆ ಎಂದೂ ನಿವರ್ತಿಸಲಾರದೆ, ಆತ್ಮನಿಗೆ ಅನಿರ್ಮೋಕ್ಷವೇ ಪ್ರಸಕ್ತವಾಗುವುದು. ಜ್ಞಾನಾದೇವತು ಕೈವಲ್ಯಂ, ಬ್ರಹ್ಮವೇದ ಬ್ರಹ್ಮೈವ ಭವತಿ, ತರತಿ ಶೋಕಮಾತ್ಮವಿತ್, ಬ್ರಹ್ಮವಿದಾಪ್ನೋತಿ ಪರಂ, ಜ್ಞಾತ್ವಾ ಮಾಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಂತಿಮೃಚ್ಛತಿ—ಎಂದು ಅನೇಕ ಶ್ರುತಿಸ್ಮೃತಿಗಳು ತತ್ತ್ವಜ್ಞಾನ ಮಾತ್ರದಿಂದಲೇ ಸಂಸಾರನಿವೃತ್ತಿಯ ಮೂಲಕವಾದ ಮುಕ್ತಿಯನ್ನು ಬೋಧಿಸುತ್ತಿವೆ. ಸತ್ಯವಾದದ್ದು ಜ್ಞಾನಮಾತ್ರದಿಂದ ನಿವರ್ತಿಸುವುದಿಲ್ಲವಾದ್ದರಿಂದ, ತತ್ತ್ವಜ್ಞಾನ ಮಾತ್ರದಿಂದ ಪೂರ್ಣವಾಗಿ ತೊಲಗುವ ದ್ವೈತಸಂಸಾರವು ಮಿಥ್ಯಾ ಎಂದು ಸಿದ್ಧಿಸುವುದು. ಆದಕಾರಣ ಆತ್ಮನು ಅದ್ವಿತೀಯನೂ ಅಸಂಸಾರಿನಿತ್ಯ ಮುಕ್ತಸ್ವರೂಪನೂ ಆಗಿರುತ್ತಾನೆ. ಬ್ರಹ್ಮವು ಇಂಥ ವಸ್ತುವೆಂದು ವೇದಾಂತಗಳು ತಿಳಿಸುತ್ತವೆ; ಇಂಥ ವಸ್ತುಗಳು ಎರಡು ಇರುವುದು ಸಂಭಾವಿತವಲ್ಲ; ಹಾಗಾದರೆ, ಒಂದರಿಂದ ಒಂದಕ್ಕೆ ಪರಿಚ್ಛಿನ್ನತೆಯು ಪ್ರಾಪ್ತವಾಗಿ, ಯಾವುದೂ ನಿತ್ಯವೂ, ಸತ್ಯವೂ, ಅದ್ವಿತೀಯವೂ ಆಗದೆ ಹೋಗುವುದು, ಆದ್ದರಿಂದ ಬ್ರಹ್ಮವು ಬ್ರಹ್ಮವಾಗುವುದಕ್ಕೂ, ಆತ್ಮನು ಆತ್ಮನಾಗುವುದಕ್ಕೂ, ಈ ಎರಡು ಪದಗಳಿಂದ ಹೇಳಲ್ಪಡುವ ಅರ್ಥವು ಒಂದೇ ಆಗಿರಬೇಕಾಗುವುದು, ಈ ಪ್ರಕಾರವಾಗಿ—**ಬ್ರಹ್ಮ ಸತ್ಯಂ ಜಗನ್ಮಿಥ್ಯಾ, ಜೀವೋ ಬ್ರಹ್ಮೈವ ನಾಪರಃ**—ಎಂಬ ವೇದಾಂತಸಿದ್ಧಾಂತವೂ ಪರಮಾರ್ಥವಾಗಿರುತ್ತೆ. ಈ ಸಿದ್ಧಾಂತಕ್ಕೆ ವಿರುದ್ಧಗಳಾಗಿರುವುದರಿಂದ ಇತರ ಮತಗಳೆಲ್ಲ ಅಸನ್ಮತಗಳೆಂದು ನಿರಾಕೃತಗಳಾಗುತ್ತವೆ.

"ಅಶಾಸ್ತ್ರೀಯವಾದ ಲೌಕಿಕ ದ್ವೈತವ್ಯವಹಾರವನ್ನು ಮಿಥ್ಯಾ ಎಂದು ಹೇಳಬಹುದಾದರೂ, ಶಾಸ್ತ್ರೀಯವಾದ ಜೀವೇಶ್ವರರ ಭೇದ, ವರ್ಣಾಶ್ರಮ ಧರ್ಮವ್ಯವಸ್ಥೆ—ಮುಂತಾದವು ಸತ್ಯಗಳೇ ಅಲ್ಲವೆ? ಇಲ್ಲವಾದರೆ, ಶಾಸ್ತ್ರವು ಅಪ್ರಮಾಣವಾಗುವುದಲ್ಲವೆ!"—ಎಂದರೆ, ಇದು ಸರಿಯಲ್ಲ. ಜೀವನ, ಈಶ್ವರನ ಮತ್ತು ದ್ವೈತಪ್ರಪಂಚದ ವಾಸ್ತವಸ್ವರೂಪವನ್ನು ವಿಚಾರ ಮಾಡಿ, ಮೇಲಿನ ಸಿದ್ಧಾಂತವು ನಿಶ್ಚಿತವಾಗಿರುತ್ತದೆ. ಜೀವೇಶ್ವರಭೇದಾದಿಗಳು ಶಾಸ್ತ್ರದ ಅಪೇಕ್ಷೆಯಿಲ್ಲದೆಯೇ, ಲೋಕದಲ್ಲಿಯೇ ಪ್ರಸಿದ್ಧವಾಗಿವೆ. ಇವುಗಳನ್ನೇ ಶಾಸ್ತ್ರದಲ್ಲಿ ಅನುವಾದ ಮಾಡಿರುತ್ತದೆಯೇ ಹೊರತು, ಇವುಗಳನ್ನು ಹೇಳುವ ಶಾಸ್ತ್ರಕ್ಕೆ ಇವುಗಳಲ್ಲಿ ತಾತ್ಪರ್ಯವಿರುವುದಿಲ್ಲ—ಪ್ರಾಮಾಣ್ಯವಿರುವುದಿಲ್ಲ. ಅದ್ವಿತೀಯಾತ್ಮತತ್ತ್ವವು ಲೋಕಪ್ರಸಿದ್ಧವೂ ಅಲ್ಲ, ಮೋಕ್ಷಫಲಕವೂ ಆಗಿದೆ; ಆದ್ದರಿಂದ ವೇದಕ್ಕೆ ಇಂಥ ತತ್ತ್ವದಲ್ಲಿಯೇ ತಾತ್ಪರ್ಯವಿದ್ದು ಅದು ಪ್ರಮಾಣ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗುತ್ತದೆ. "ಫಲವತ್ಸನ್ನಿಧೌ ಆಫಲಂ ತದಂಗಂ"—"ಫಲವನ್ನು ಉಳ್ಳ, ವಿಷಯದ ಸಮೀಪದಲ್ಲಿ ಹೇಳಿರುವ ನಿಷ್ಫಲವಾದ ವಿಷಯವು, ಆ ಫಲವುಳ್ಳ ವಿಷಯಕ್ಕೆ ಅಂಗವಾಗುವುದು"—ಎಂಬ ನ್ಯಾಯದಂತೆ, ಜೀವೇಶ್ವರಭೇದ, ವರ್ಣಾಶ್ರಮಧರ್ಮ ಮುಂತಾದವುಗಳೆಲ್ಲವೂ, ಫಲವತ್ತಾಗಿರುವ ಆತ್ಮ ತತ್ತ್ವಾನುಭವಕ್ಕೆ ಉಪಯೋಗಿಯಾದ ಸಾಧನೆಗಳಾಗಿರುತ್ತವೆ. ನಿಷ್ಕಾಮನೆಯಿಂದ, ಈಶ್ವರಾರಾಧನೆಯ ರೂಪವಾಗಿ, ಆನುಷ್ಠಿಸುವ ವರ್ಣಾಶ್ರಮಸ್ವಧರ್ಮವು, ಚಿತ್ತಶುದ್ಧಿ ಜ್ಞಾನಪ್ರಾಪ್ತಿದ್ವಾರಾ ಮೋಕ್ಷೋಪಯೋಗಿಯಾಗುವುದೆಂಬುದು ವೇದಾಂತದ ಡಂಗುರವಾಗಿದೆ.

ಈ ಪ್ರಕಾರವಾಗಿ, ಜ್ಞಾನರೂಪವಾದ ಆತ್ಮನು ಸುಷುಪ್ತಿಯಲ್ಲಿ ಸ್ವತಃಸಿದ್ಧನಾಗಿದ್ದು, ದೃಶ್ಯವಾಗಿರುವ ದೇಹೇಂದ್ರಿಯಾದಿಗಳು ಇಲ್ಲದುದರಿಂದ, ಇವು ಅನಾತ್ಮಗಳೆಂದು ನಿಶ್ಚಿತವಾಗಿರುವುದರಿಂದ, ಇವುಗಳನ್ನು ಆತ್ಮವೆಂದು ತಿಳಿದಿರುವ ಇತರ ವಾದಿಗಳೆಲ್ಲರೂ ಭ್ರಾಂತರೆಂದು ವಿಶದವಾಗುವುದು. ಆದ ಕಾರಣ ಉಪನಿಷನ್ಮತವೇ ಪ್ರಾಮಾಣಿಕವೆಂದು ಸಿದ್ಧವು—೧

ಬ್ರಹ್ಮಾತ್ಮೈಕ್ಯಜ್ಞಾನವೇ ಪರಮಪುರುಷಾರ್ಥವಾದ ಮೋಕ್ಷಸಿದ್ಧಿಗೆ ಕಾರಣವೆಂದೂ, ಈ ವಿಷಯದಲ್ಲಿ ಅಪೌರುಷೇಯವಾದ ವೇದವೇ ಪ್ರಮಾಣವೆಂದೂ ಇದುವರೆಗೆ ಪ್ರತಿಪಾದಿಸಿದ್ದಾಯಿತು. ಇದರಿಂದ,-ಆತ್ಮನು ವಸ್ತುತಃ ನಿರ್ಧರ್ಮಕಚಿನ್ಮಾತ್ರರೂಪನೆಂದೂ, 'ನಾನು ಮನುಷ್ಯ, ಕರ್ತಾ, ಭೋಕ್ತಾ' ಮುಂತಾದ ಈಗಿನ ಅನುಭವವೆಲ್ಲ ಅಧ್ಯಾಸಿಕವಾಗಿ ಭ್ರಾಂತಿಯೆಂದೂ, ಹೇಳಿದ ಹಾಗಾಯಿತು. ಆದರೆ, ಪ್ರಮಾಣವಾಗಿರುವ ವೇದವು— 'ಬ್ರಾಹ್ಮಣೋ ಯಜೇತ'—'ಬ್ರಾಹ್ಮಣನು ಆಮುಷ್ಮಿಕವಾದ ಸ್ವರ್ಗಾದಿಭೋಗದ ಲಾಭಕ್ಕಾಗಿ ವೇದವಿಹಿತವಾಗಿರುವ ಯಾಗಾದಿಕರ್ಮಗಳನ್ನು ಮಾಡತಕ್ಕದ್ದು'—ಎಂದು ಬೋಧಿಸುತ್ತಿದೆ. ಬ್ರಾಹ್ಮಣಾದಿ ಜಾತಿಗಳೂ, ಸ್ವರ್ಗಾದಿಪರಲೋಕಗಳೂ, ಯಾಗಾದಿಧರ್ಮಗಳೂ ಲೋಕಪ್ರಸಿದ್ಧಗಳಲ್ಲವಾಗಿ, ಶಾಸ್ತ್ರಮಾತ್ರವೇದ್ಯಗಳಾಗಿರುವುದರಿಂದ, ವೇದಶಾಸ್ತ್ರಕ್ಕೆ ಇವುಗಳಲ್ಲಿ ತಾತ್ಪರ್ಯವಿರಬೇಕೆಂಬ ತಿಳಿದುಬರುವುದು. "ಇವುಗಳು ವಾಸ್ತವಗಳಲ್ಲ ಮಿಥ್ಯಾ" ಎಂದಾದರೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಇವುಗಳನ್ನು ಹೇಳುವ ಶಾಸ್ತ್ರವು ಅಪ್ರಮಾಣವೆಂದಾಗುವುದು. ಕರ್ಮಕಾಂಡ ಮತ್ತು ಜ್ಞಾನಕಾಂಡ—ಎಂದು ಎರಡು ಭಾಗವಾಗಿರುವ ವೇದದಲ್ಲಿ, ಯಾಗಾದಿಕರ್ಮಗಳನ್ನು ಹೇಳುವ ಕರ್ಮಕಾಂಡವನ್ನು ಹೀಗೆ ಅಪ್ರಮಾಣವೆಂದು ಹೇಳಿದರೆ, ವೇದದ ಮತ್ತೊಂದು ಭಾಗವಾದ ಜ್ಞಾನಕಾಂಡವೂ ಅಪ್ರಮಾಣವೆಂದೇ ಆಗುವುದು. ಹೀಗಾದರೆ, ಜ್ಞಾನಕಾಂಡವಾದ ಉಪನಿಷತ್ತಿನಲ್ಲಿ ಪ್ರತಿಪಾದಿತವಾಗಿರುವ ಬ್ರಹ್ಮವಾಗಲಿ, ಬ್ರಹ್ಮಾತ್ಮೈಕ್ಯವಾಗಲಿ ಪ್ರಾಮಾಣಿಕವಾಗುವುದು ಹೇಗೆ ?"—ಎಂದರೆ, ಇದಕ್ಕೆ ಸಮಾಧಾನವನ್ನು ಹೇಳುತ್ತಾರೆ.

ನ ವರ್ಣಾ ನ ವರ್ಣಾಶ್ರಮಾಚಾರಧರ್ಮಾಃ
ನ ಮೇ ಧಾರಣಾಧ್ಯಾನಯೋಗಾದಯೋಽಪಿ ।
ಅನಾತ್ಮಾಶ್ರಯಾಹಂಮಮಾಧ್ಯಾಸಹಾನಾತ್
ತದೇಕೋಽವಶಿಷ್ಟಃ ಶಿವಃ ಕೇವಲೋಽಹಂ ॥ **॥೨॥**

ಮೇ-ನನಗೆ, ಆತ್ಮನಿಗೆ; **ವರ್ಣಾಃ ನ**–ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವರ್ಣಗಳ ಸಂಬಂಧವು ಇರುವುದಿಲ್ಲ; ಆದಕಾರಣವೇ **ವರ್ಣಾಶ್ರಮಾಚಾರ ಧರ್ಮಾಃ ನ**— ಈ ವರ್ಣಗಳ ಮತ್ತು ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ್ಯ, ಸನ್ನ್ಯಾಸಗಳೆಂಬ ಆಶ್ರಮಗಳ ಆಚಾರಗಳೂ ಮತ್ತು ಅವುಗಳ ಧರ್ಮಕರ್ಮಗಳೂ ಇರುವುದಿಲ್ಲ; ಏಕೆಂದರೆ, **ಅನಾತ್ಮಾಶ್ರಯಾಹಂಮಮಾಧ್ಯಾಸಹಾನಾತ್**—ಅನಾತ್ಮಗಳಾದ ದೇಹಾದಿಗಳಲ್ಲಿ ಇರುವ 'ನಾನು, ನನ್ನದು'–ಎಂಬ ಅಧ್ಯಾಸ, ಎಂದರೆ ತಪ್ಪು ತಿಳಿವಳಿಕೆಯ ಭ್ರಾಂತಿಯ ನಾಶವಾಗಿರುವುದರಿಂದ; ಆದ್ದರಿಂದ **ತದೇಕೋಽವಶಿಷ್ಟಃ ಶಿವಃ ಕೇವಲೋಽಹಂ**—ನಾನು ಅದ್ವಿತೀಯನಿರ್ಧರ್ಮಕಸಚ್ಚಿದಾನಂದಪರಬ್ರಹ್ಮಸ್ವರೂಪವೇ ಆಗಿದ್ದೇನೆ.

ವಿವರಣೆ

ವರ್ಣಗಳು—ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು; **ಆಶ್ರಮಗಳು**—ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ್ಯ, ಸನ್ನ್ಯಾಸ–ಎಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಆಚಾರಗಳು – ಸ್ನಾನ, ಶೌಚ ಮುಂತಾದವು; ಆಯಾವರ್ಣದವರೂ ಆಶ್ರಮದವರೂ ಮಾಡಬೇಕಾಗಿ ಶಾಸ್ತ್ರದಲ್ಲಿ ವಿಹಿತವಾಗಿರುವ ಧರ್ಮಗಳು—ವರ್ಣಧರ್ಮ, ಆಶ್ರಮಧರ್ಮ, ವರ್ಣಾಶ್ರಮಧರ್ಮ, ಸಾಮಾನ್ಯಧರ್ಮ, ವಿಶೇಷಧರ್ಮ—ಎಂದು ಐದುವಿಧವಾಗಿವೆ. ಇತರವಿಷಯಗಳನ್ನು ತ್ಯಜಿಸಿ ಬ್ರಹ್ಮತತ್ತ್ವದಲ್ಲಿಯೇ ಮನಸ್ಸು ಸ್ಥಿರವಾಗಿರುವಿಕೆಯು ಧಾರಣೆಯು; ಈ ತತ್ತ್ವವನ್ನು ಚಿಂತಿಸುವಿಕೆಯು ಧ್ಯಾನವು- ವಿಷಯಪರವಾದ ಚಿತ್ತವೃತ್ತಿಯನ್ನು ತಡೆಯುವುದು ಯೋಗವು. ಆದಿಶಬ್ದದಿಂದ ಶ್ರವಣಮನನಗಳನ್ನು ತಿಳಿಯತಕ್ಕದ್ದು.

ಅನಾತ್ಮಗಳಾದ ದೇಹೇಂದ್ರಿಯಾದಿಗಳಲ್ಲಿ – 'ನಾನು, ನನ್ನದು—ಎಂಬ ಭಾವನೆಯು ಉಂಟಾಗದೆ ಲೌಕಿಕವಾಗಲಿ ಶಾಸ್ತ್ರೀಯದ್ದೇ ಆಗಲಿ ಯಾವ ವ್ಯವಹಾರವೂ ಸಂಭವಿಸುವುದಿಲ್ಲ. ಅಸಂಗನಾದ ಆತ್ಮನಿಗೆ ದೇಹಾದಿಗಳಲ್ಲಿ ಈ ಅಹಂ—ಮಮಾಭಿಮಾನವು ಅವಿದ್ಯೆಯಿಂದಾಗಿರುವ ಆಧ್ಯಾತ್ಮಿಕ ಭ್ರಾಂತಿಯೇ ಸರಿಯೆಂದು ವಿಸ್ತರವಾಗಿ ತೋರಿಸಿದ್ದಾಗಿದೆ. ಆದಕಾರಣ ವ್ಯವಹಾರವೆಲ್ಲ ಅವಿದ್ಯಕವೇ ಆಗಿರುತ್ತದೆ. ವರ್ಣಾಶ್ರಮಗಳ ವಿಭಾಗವು ದೇಹಕ್ಕೆ ಸಂಬಂಧಿಸಿರುವುದೇ ಹೊರತು ಆತ್ಮನಿಗಲ್ಲ. ಆಚಾರಧರ್ಮಾಧಿಗಳೂ ಸಹ ದೇಹಮೂಲಕವೇ ಆಗಿರುತ್ತವೆ. ಆದ್ದರಿಂದ ಇವು ಆತ್ಮನಿಗೆ ವಾಸ್ತವವೆಂದು ಆಗುವುದಿಲ್ಲ.

"ಅವಾಸ್ತವವಾದ ಇದನ್ನು ಬೋಧಿಸಿರುವ ಶಾಸ್ತ್ರವು ಅಪ್ರಮಾಣವಾಗುವುದಿಲ್ಲವೆ ?"—ಎಂದರೆ; ವೇದಶಾಸ್ತ್ರಕ್ಕೆ ಬ್ರಹ್ಮಾತ್ಮೈಕತ್ವದಲ್ಲಿಯೇ ಪರಮತಾತ್ಪರ್ಯವು, ಇದು ಪರಮಾರ್ಥಸತ್ಯವಾಗಿರುವುದರಿಂದ, ವೇದದ ಪ್ರಾಮಾಣ್ಯಕ್ಕೆ ಚ್ಯುತಿಯಿರುವುದಿಲ್ಲ,

ವಸ್ತುತಃ ವಿಚಾರಮಾಡಿದರೆ—ಧರ್ಮಾದಿಗಳನ್ನು ಬೋಧಿಸುವ ಶಾಸ್ತ್ರಕ್ಕೆ ಅಪ್ರಾಮಾಣ್ಯವು ಯಾವಾಗ ಸಂಭವಿಸುತ್ತದೆ?–ತತ್ತ್ವಜ್ಞಾನವು ಉದಯಿಸುವುದಕ್ಕೆ ಮುಂಚೆಯೋ ಆಮೇಲೋ ? ತತ್ತ್ವಾನುಭವವು ಸಿದ್ಧಿಸುವುದಕ್ಕೆ ಮುಂಚೆ ಪ್ರಮಾಣಪ್ರಮೇಯ ವ್ಯವಹಾರವು ಬಾಧಿತವಾಗುವುದಿಲ್ಲವಾದ್ದ

Sri Vidyabharathi Book Centre, Srinagar

CC-O. In Public Domain. Digitized by eGangotri

ರಿಂದ ಪ್ರಮಾಣಾಪ್ರಮಾಣ–ಯುಕ್ತಾಯುಕ್ತ—ಧರ್ಮಾಧರ್ಮ—ಯೋಗ್ಯಾಯೋಗ್ಯ-ಸ್ಪೃಶ್ಯಾಸ್ಪೃಶ್ಯ–ಭಕ್ಷ್ಯಾಭಕ್ಷ್ಯ–ಗಮ್ಯಾಗಮ್ಯ–ಮುಂತಾದ ಸಕಲ ವಿಭಾಗವೂ ಶಾಸ್ತ್ರಾನುಸಾರವಾಗಿ ವ್ಯವಸ್ಥಿತಗಳೇ ಆಗುತ್ತವೆಯಾಗಿ, ಶಾಸ್ತ್ರ ಪ್ರಾಮಾಣ್ಯವು ಅಬಾಧಿತವಾಗಿರುತ್ತದೆ. ತತ್ತ್ವಾನುಭವವು ಸಿದ್ಧಿಸಿದ ಅನಂತರವಾದರೋ, ದ್ವೈತವೇ ಬಾಧಿತವಾಗುವುದರಿಂದ ಯಾವ ವ್ಯವಹಾರವೂ ಸಂಭವಿಸುವುದಿಲ್ಲವಾಗಿ, ಪ್ರಮಾಣಾಪ್ರಮಾಣವಿಚಾರವೇ ಇಲ್ಲವಾಗುವುದು.

ಇದಲ್ಲದೆ, ಭ್ರಾಂತಿಯ ಕಾಲದಲ್ಲಿ ಅದು ಭ್ರಾಂತಿಯೆಂದು ತಿಳಿದುಬರುವದೇ ಇಲ್ಲ;-ಸ್ವಪ್ನಕಾಲದಲ್ಲಿ ಸ್ವಪ್ನಾನುಭವವು ಯಥಾರ್ಥವೆಂದೇ ತಿಳಿದುಬರುವುದು; ಇದರಂತೆ, ವ್ಯವಹಾರಕಾಲದಲ್ಲಿ ಅದು ವಸ್ತುತಃ ಅವಿದ್ಯಕವೇ ಆಗಿರುವುದಾದರೂ, ಅದು ಅವಿದ್ಯಕವೆಂದು ತಿಳಿದುಬರದೆ, ಯಥಾರ್ಥವೆಂದೇ ತಿಳಿದುಬರುತ್ತಿರುವುದರಿಂದ, ವ್ಯಾವಹಾರಿಕಧರ್ಮಾಧರ್ಮಾದಿವ್ಯವಸ್ಥೆಯನ್ನು ತಿಳಿಸುವ ವೇದಕ್ಕೆ ಈಗ ಅಪ್ರಾಮಾಣ್ಯದ ಶಂಕೆಯೂ ಇರುವುದಿಲ್ಲವಾಗಿ, ಸರ್ವವೂ ಸಮಂಜಸವಾಗಿರುತ್ತದೆ. ವ್ಯವಹಾರದಶೆಯಲ್ಲಿ ಎಲ್ಲವೂ ಸತ್ಯವಾಗಿರುವುದರಿಂದ, ತಮ್ಮ ತಮ್ಮ ಇಹಪರಶ್ರೇಯೋಭ್ಯುದಯಗಳಿಗಾಗಿ ಶಾಸ್ತ್ರೀಯ ವರ್ಣಾಶ್ರಮನಿಯಮಗಳನ್ನು ಅನುಸರಿಸುವುದು ಎಲ್ಲರಿಗೂ ಅವಶ್ಯಕವೆಂದು ತಾತ್ಪರ್ಯವು.

ತತ್ತ್ವಜ್ಞಾನವು ಲಭಿಸಿದ ಅನಂತರ ವರ್ಣಾಶ್ರಮಾದಿಗಳು ಇರುವುದಿಲ್ಲವೆಂಬುದಕ್ಕೆ ಕಾರಣವನ್ನು ಹೇಳಿದ್ದಾರೆ—ಅನಾತ್ಮಾಶ್ರಯಾಹಂಮಮಾಧ್ಯಾಸಹಾನಾತ್—ಎಂದು. ಇಲ್ಲಿ ಅನಾತ್ಮಶಬ್ದದಿಂದ ಅವಿದ್ಯೆಯನ್ನು ಹೇಳಿರುತ್ತದೆ; ಇದನ್ನು ಆಶ್ರಯಿಸಿಕೊಂಡಿರುವ—ಎಂದರೆ, ಅವಿದ್ಯೆಯ ಕಾರ್ಯವಾದ-ಅಹಂಕಾರ ಮತ್ತು ಮಮಕಾರಗಳ ಅಧ್ಯಾಸವು; ಇದರ ಹಾನಿ ಎಂದರೆ ಪೂರ್ಣನಾಶ. ತತ್ತ್ವಜ್ಞಾನದಿಂದ ಸರ್ವಸಂಸಾರಮೂಲಕಾರಣವಾಗಿರುವ ಅವಿದ್ಯೆಯು ಪೂರ್ಣವಾಗಿ ನಾಶವಾಗುವುದರಿಂದ, ಅದರಿಂದ ಉಂಟಾಗುವ ವರ್ಣಾಶ್ರಮಾದಿವ್ಯವಹಾರಕ್ಕೆ ಪ್ರಸಕ್ತಿಯೇ ಇರುವುದಿಲ್ಲವೆಂದು ಅಭಿಪ್ರಾಯವು–೨

ವರ್ಣಾಶ್ರಮಾದಿವ್ಯವಹಾರವೆಲ್ಲ ಮಿಥ್ಯಾಜ್ಞಾನದ ಮೂಲಕವಾಗಿರುವುದ

Sri Vidyabharathi Book Centre, Sringeri

CC-O. In Public Domain. Digitized by eGangotri

ರಿಂದ ಮಿಥ್ಯಾಭೂತವಾಗಿದೆಯೆಂಬುದನ್ನು ದೃಢಪಡಿಸುವುದಕ್ಕಾಗಿ, ಸುಷುಪ್ತಿಯಲ್ಲಿ ಮಿಥ್ಯಾಜ್ಞಾನವಿಲ್ಲದಿದ್ದಾಗ ಈ ವ್ಯವಹಾರವೂ ಇರುವುದಿಲ್ಲವೆಂಬುದನ್ನು ಹೇಳುತ್ತಾರೆ—

ನ ಮಾತಾ ಪಿತಾ ವಾ ನ ದೇವಾ ನ ಲೋಕಾಃ
ನ ವೇದಾ ನ ಯಜ್ಞಾ ನ ತೀರ್ಥಂ ಬ್ರುವಂತಿ ।
ಸುಷುಪ್ತೌ ನಿರಸ್ತಾತಿಶೂನ್ಯಾತ್ಮಕತ್ವಾತ್
ತದೇಕೋಽವಶಿಷ್ಟಃ ಶಿವಃ ಕೇವಲೋಽಹಂ ॥ ॥ ೩ ॥

ಸುಷುಪ್ತೌ – ಸುಷುಪ್ತಿಯ ಅವಸ್ಥೆಯಲ್ಲಿ; **ಮಾತಾ ನ** – ತಾಯಿಯೂ ಇಲ್ಲ; **ಪಿತಾ ವಾ** – ತಂದೆಯೂ ಇಲ್ಲ; **ದೇವಾಃ ನ** – ದೇವತೆಗಳೂ ಇಲ್ಲ; **ಲೋಕಾಃ** ನ-ಲೋಕಗಳೂ ಇಲ್ಲ; **ವೇದಾಃ ನ** – ವೇದಗಳೂ ಇಲ್ಲ; **ಯಜ್ಞಾಃ ನ** – ಯಜ್ಞಗಳೂ ಇಲ್ಲ; **ತೀರ್ಥಂ ನ** – ತೀರ್ಥವೂ ಇಲ್ಲ;ಎಂದು **ಬ್ರುವಂತಿ** – ವೇದಗಳು ತಿಳಿಸುತ್ತವೆ; **ನಿರಸ್ತಾತಿಶೂನ್ಯಾತ್ಮಕತ್ವಾತ್** – ದೂರ ಮಾಡಲ್ಪಟ್ಟ ಶೂನ್ಯರೂಪವಾದ್ದರಿಂದ; **ತದೇಕೋಽವಶಿಷ್ಟಃ ಶಿವಃ ಕೇವಲೋಽಹಂ** – ಸುಷುಪ್ತಿಯಲ್ಲಿ ಎಲ್ಲ ಕಳೆದು ಉಳಿದಿರುವ ನಿರ್ವಿಶೇಷಾಖಂಡಾದ್ವಿತೀಯಸಚ್ಚಿದಾನಂದಸ್ವರೂಪನೇ ನಾನು.

ವಿವರಣೆ –

ಮಾತಾ ಎಂದರೆ ನಮಗೆ ಜನ್ಮವನ್ನು ಕೊಟ್ಟ ಸ್ತ್ರೀ, **ಪಿತಾ** ಜನ್ಮದಾತೃವಾದ ಪುರುಷ. ಇಂದ್ರಾಗ್ನಿ ಮೊದಲಾದವರು **ದೇವತೆಗಳು**. ಇವರ ಆರಾಧನೆಯಿಂದ ಲಭಿಸುವ ಫಲರೂಪಗಳಾದ ಸ್ವರ್ಗಾದಿಗಳು **ಲೋಕಗಳು**. ಲೋಕಪ್ರಸಿದ್ಧಗಳಲ್ಲದ ಹಿತಾಹಿತಸಾಧನೆಗಳನ್ನು ಪ್ರತಿಪಾದಿಸುವ, ಮತ್ತು ಬ್ರಹ್ಮವನ್ನು ಬೋಧಿಸುವ, ಅಪೌರುಷೇಯಪ್ರಮಾಣವಚನಗಳು **ವೇದಗಳು**. ಸ್ವರ್ಗಾದಿಗಳಿಗೆ ಸಾಧನಗಳಾಗಿರುವ, ವೇದಬೋಧಿತಗಳಾಗಿರುವ, ಜ್ಯೋತಿಷ್ಟೋಮಾದಿಗಳು **ಯಜ್ಞಗಳು**,ಯಜ್ಞಾಧಿಧರ್ಮಾನುಷ್ಠಾನಕ್ಕೆ ಯೋಗ್ಯಗಳಾದ ದೇಶಾದಿಗಳು **ತೀರ್ಥಗಳು**, ಇದು – **ಅಧರ್ಮ, ಅವುಗಳ ಫಲ** – ಮುಂತಾದವುಗಳಿಗೂ ಸೂಚಕವು. ಇವೆಲ್ಲವೂ ದೇಹಾಭಿಮಾನದ ಮೂಲಕವೇ ಆಗು

Sri Vidyabharathi Book Centre, Sringeri

CC-O. In Public Domain. Digitized by eGangotri

ವುದರಿಂದ ದೇಹಾಭಿಮಾನವಿಲ್ಲದ ಸುಷುಪ್ತಿಯಲ್ಲಿ ಇವು ಯಾವುದೂ ಇರುವುದಿಲ್ಲವಾಗಿ, ಆತ್ಮನಿಗೆ ಇವುಗಳ ಸಂಬಂಧವು ಇರುವುದಿಲ್ಲವೆಂದು ತಾತ್ಪರ್ಯವು;

ಸ್ವಪ್ನವನ್ನೂ ಕಾಣದ ಗಾಢನಿದ್ರೆಯ ಸ್ಥಿತಿಯು ಸುಷುಪ್ತಾವಸ್ಥೆಯು; **'ಸುಷುಪ್ತಿಕಾಲೇ ಸಕಲೇ ವಿಲೀನೇ ತಮೋಽಭಿಭೂತಃ ಸುಖರೂಪವೇತಿ'** — 'ಸುಷುಪ್ತಿಯ ಕಾಲದಲ್ಲಿ, ಸರ್ವದ್ವೈತಪ್ರಪಂಚವೂ ಕಾರಣವಾದ ಅವಿದ್ಯೆಯಲ್ಲಿಲಯಹೊಂದಿರುವಾಗ, ಅವಿದ್ಯೆಯಿಂದ ಆವೃತನಾಗಿ, ಆತ್ಮನು ತನ್ನ ವಾಸ್ತವವಾದ ಸುಖಿಸ್ವರೂಪದಲ್ಲಿ ಇರುವನು'—ಎಂಬ ಶ್ರುತಿವಚನದಂತೆ, ಸುಷುಪ್ತಿಯ ಸ್ಥಿತಿಯಲ್ಲಿ ಸಕಲದ್ವೈತವೂ ಕಳೆದು, ಆತ್ಮನು ಮಾತ್ರ ತನ್ನ ವಾಸ್ತವಸ್ವರೂಪದಲ್ಲಿ ಇರುತ್ತಾನೆ. ಈ ಸ್ಥಿತಿಯಲ್ಲಿ ತಿಳಿದುಬರುವ ಸ್ವರೂಪವೇ ಆತ್ಮನ ವಾಸ್ತವರೂಪವು. ಇಲ್ಲಿ ದೇಹಾದಿಗಳ ತೋರುವಿಕೆಯೇ ಇಲ್ಲವಾಗಿ, ಅದರ ಮೂಲಕವಾದ ವ್ಯವಹಾರವೂ ಇರುವುದಿಲ್ಲ. ಆದ್ದರಿಂದ, ಇವೆಲ್ಲವೂ ಅವಿದ್ಯಕವಾಗಿ ಮಿಥ್ಯಾಭೂತವೆಂದು ಸ್ಪಷ್ಟವಾಗುವುದು.

ಸುಷುಪ್ತಿಯಲ್ಲಿನ ಸ್ಥಿತಿಯು ಇಂಥಾದ್ದೆಂಬುದನ್ನು ಶ್ರುತಿಯು ಸ್ಪಷ್ಟವಾಗಿ ತಿಳಿಸುತ್ತದೆ—**"ಅತ್ರ ಪಿತಾ ಅಪಿತಾ ಭವತಿ, ಮಾತಾ ಅಮಾತಾ, ದೇವಾಃ ಅದೇವಾಃ; ವೇದಾಃ ಅವೇದಾಃ; ಯಜ್ಞಾಃ ಅಯಜ್ಞಾಃ; ಸ್ತೇನೋ ಅಸ್ತೇನೋ ಭವತಿ; ಭ್ರೂಣಹಾ ಅಭ್ರೂಣಹಾ; ಚಾಂಡಾಲೋ ಅಚಾಂಡಾಲಃ ಪೌಲ್ಕಸೋ ಅಪೌಲ್ಕಸಃ; ಶ್ರಮಣೋ ಅಶ್ರಮಣಃ; ತಾಪಸೋ ಅತಾಪಸೋ; ಅನನ್ವಾಗತಂ ಪುಣ್ಯೇನ ಅನನ್ವಾಗತಂ ಪಾಪೇನ; ತೀರ್ಣೋ ಹಿ ತದಾ ಸರ್ವಾನ್ ಶೋಕಾನ್ ಹೃದಯಸ್ಯ ಭವತಿ"** — 'ಜಾಗ್ರದವಸ್ಥೆಯಲ್ಲಿ ತಂದೆಯೆನಿಸಿರುವವನು ಸುಷುಪ್ತಿಯಲ್ಲಿ ತಂದೆಯಾಗಿರುವುದಿಲ್ಲ. ತಾಯಿಯಾಗಿದ್ದವಳು ತಾಯಿಯಾಗಿರುವುದಿಲ್ಲ; ದೇವತೆಯು ದೇವತೆಯಾಗಿರುವುದಿಲ್ಲ; ವೇದಗಳು ವೇದಗಳಾಗುವುದಿಲ್ಲ; ಯಜ್ಞಗಳು ಯಜ್ಞಗಳಲ್ಲ; ಕಳ್ಳನು ಕಳ್ಳನಾಗುವುದಿಲ್ಲ; ಭ್ರೂಣಹತ್ಯಮಾಡಿದವನು ಅದಾಗುವುದಿಲ್ಲ ; ಚಂಡಾಲನು ಚಂಡಾಲನಾಗುವುದಿಲ್ಲ; ಪೌಲ್ಕಸನು ಪೌಲ್ಕಸನಲ್ಲ; ಸನ್ಯಾಸಿಯು ಸನ್ಯಾಸಿಯಲ್ಲ; ತಪಸ್ವಿಯು ತಪಸ್ವಿಯಾಗುವುದಿಲ್ಲ ; ಹೆಚ್ಚೇನು—ಪುಣ್ಯದಿಂದಾಗಲಿ ಪಾಪದಿಂದಾಗಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಗತನಾಗುವುದಿಲ್ಲ; ಒಟ್ಟಿನಲ್ಲಿ ಅಂತಃಕರಣದ ಎಲ್ಲ ಸಂಸಾರದುಃಖ ದಿಂದಲೂ ಉತ್ತೀರ್ಣನಾಗುತ್ತಾನೆ'—ಎಂದು

(ಬೃ. ೪–೩–೨೨)

ಭ್ರೂಣಹಾ ಎಂದರೆ, ಶ್ರೇಷ್ಠನಾದ ಬ್ರಾಹ್ಮಣನನ್ನು ಕೊಂದವನು, ಪೌಲ್ಕಸ, ಚಂಡಾಲ—ಇವರು ಮಹಾಪಾಪದ ಫಲವಾಗಿ ಜನಿಸಿರುವ ನೀಚ ಜಾತಿಯವರು, ಶ್ರಮಣನೆಂದರೆ ಸನ್ಯಾಸಿಭಿಕ್ಷುಕ.

ಪುತ್ರನನ್ನು ಪಡೆದ ಕರ್ಮದ ನಿಮಿತ್ತದಿಂದ ಜಾಗ್ರತ್ತಿನಲ್ಲಿ ಪಿತಾ (ತಂದೆ) ಯೆನಿಸಿರುತ್ತಾನೆ; ಸುಷುಪ್ತಿಯಲ್ಲಿ ಈ ಕರ್ಮನಿಮಿತ್ತವು ಬಿಟ್ಟು ಹೋಗುವುದರಿಂದ, ಅವನು ಪಿತೃವೆನಿಸುವುದಿಲ್ಲ. ಇತರ ವಿಷಯಗಳನ್ನೂ ಇದರಂತೆಯೇ ತಿಳಿಯತಕ್ಕದ್ದು. ಅಯಾಕರ್ಮಗಳ ನಿಮಿತ್ತದಿಂದ ವ್ಯವಹಾರಾವಸ್ಥೆಯಲ್ಲಿ ನಾನಾವಿಧಗಳಾದ ತಾರತಮ್ಯಸ್ಥಿತಿಗಳು ಉಂಟಾಗಿರುತ್ತವೆ. ಈ ಕರ್ಮ ನಿಮಿತ್ತವು ನಿವರ್ತಿಸಲಾಗಿ, ಈ ತಾರತಮ್ಯಗಳೂ ನಿವೃತ್ತವಾಗುತ್ತವೆ. ಕರ್ಮ ನಿಮಿತ್ತದಿಂದಾದ ಇವು ಆತ್ಮನ ವಾಸ್ತವಸ್ವರೂಪವಲ್ಲವೆಂದು ಸ್ಪಷ್ಟಪಡುವುದು. ಕೆಂಪು, ಹಳದಿ, ಹಸಿರು ಮುಂತಾದ ವಸ್ತುಗಳ ಸಂಬಂಧದಿಂದ ಆಗುವ ಸ್ಫಟಿಕದ ರೂಪಗಳು ಅದರ ವಾಸ್ತವ ರೂಪಗಳೆಂದಾಗುವುದಿಲ್ಲ.

"ಸುಷುಪ್ತಾವಸ್ಥೆಯಲ್ಲಿ ಆತ್ಮನಿಗೆ ಸಂಸಾರಸಂಬಂಧವು ಇರುವುದಿಲ್ಲವಾದರೂ, ಜಾಗ್ರತ್ತು ಮತ್ತು ಸ್ವಪ್ನಾವಸ್ಥೆಗಳಲ್ಲಿ ಅದು ಇರುವುದು ಎಲ್ಲರ ಅನುಭವಸಿದ್ಧವಾಗಿರುವುದರಿಂದ, ಆತ್ಮನು ಯಾವಾಗಲೂ ಅಸಂಸಾರಿಯೇ ಆಗಿರುವನೆಂಬುದು ಯುಕ್ತವಲ್ಲವಲ್ಲವೆ ?"—ಎಂದರೆ, ಹಾಗಲ್ಲ. ಆತ್ಮನಿಗೆ ಸಂಸಾರವು ಇರುವುದು ವಾಸ್ತವವಾಗುವ ಪಕ್ಷದಲ್ಲಿ, ವಾಸ್ತವಸ್ವರೂಪವು ತಾತ್ಕಾಲಿಕವಾಗಿ ಕಾರಣಾಂತರದಿಂದ ತಪ್ಪಿರುವಂತೆ ಕಂಡುಬಂದರೂ, ಅದು ನಿತ್ಯವಾಗಿ, ಸಂಸಾರವೇ ಶಾಶ್ವತವೆನಿಸಿ, ಆತ್ಮನಿಗೆ ಮೋಕ್ಷವೇ ಇಲ್ಲವೆಂದಾಗುವುದು. 'ಶೈತ್ಯಂ ಹಿ ಯತ್ಸಾ ಪ್ರಕೃತಿರ್ಜಲಸ್ಯ'—"ನೀರು ತಣ್ಣನೆಯ ಸ್ವಭಾವದ್ದು;" ಬೆಂಕಿಯ ಸಂಬಂಧದಿಂದ ಅದು ಬಿಸಿಯಾಗಿ ಕಂಡುಬರುವುದಾದರೂ, ಅದರ ಶೈತ್ಯಸ್ವಭಾವವೇನೂ ನಷ್ಟವಾಗಿರುವುದಿಲ್ಲ; ಸ್ವಲ್ಪಕಾಲದಲ್ಲಿಯೇ ಅದು

CC-O. Vidyabharathi Book Centre, Sringeri

 CC-O. In Public Domain. Digitized by eGangotri

ಮತ್ತೆ ತನ್ನ ಸ್ವಭಾವವನ್ನೇ ಪಡೆಯುತ್ತದೆ. ಅಗ್ನಿಯ ಸಂಬಂಧದಿಂದ ನೀರಿನ ಶೈತ್ಯವು ವಾಸ್ತವವಾಗಿ ನಷ್ಟವಾಗಿದ್ದಿದ್ದರೆ, ಅದಕ್ಕೆ ಶೈತ್ಯವನ್ನು ಉಂಟು ಮಾಡಲು ಬೇರೆ ಪ್ರಯತ್ನವು ಬೇಕಾಗುತ್ತಿತ್ತು. ಆಗಂತುಕವಾಗಿದ್ದ ಬಿಸಿಯು ಕಳೆಯಲು ನೀರು ಸಹಜವಾಗಿಯೇ ತನ್ನ ವಾಸ್ತವವಾದ ಶೀತಸ್ವಭಾವದಲ್ಲಿರುವುದು. ತಾಮ್ರಾದಿಲೋಹಗಳಿಗೆ ಚಿನ್ನದ ಮುಲಾಮನ್ನು ಮಾಡಬಹುದು; ಆದರೂ ಕಾಲಾಂತರದಲ್ಲಿ ಅದು ಹೋಗಿಬಿಡುತ್ತದೆ. ಕೃತ್ರಿಮವಾದ ಮತ್ತು ಆಗಂತುಕ (ಹೊಸದಾಗಿಆಗುವುದಾದ) ರೂಪವು ವಸ್ತುವಿಗೆ ವಾಸ್ತವವಾಗುವುದಿಲ್ಲ. ಈಗ ವಾಸ್ತವವಾಗಿ ಸಂಸಾರಿಯೇ ಆಗಿರುವ ಜೀವನು, ಶಾಸ್ತ್ರವಿಹಿತಗಳಾದ ಭಕ್ತಿಧ್ಯಾನಾದಿಸಾಧನೆಗಳಿಂದ ಮುಕ್ತನಾಗುತ್ತಾನೆಂದು ಇತರ ಮತದವರು ಹೇಳುತ್ತಾರೆ. ಈ ಮತಗಳಲ್ಲಿ ಮುಕ್ತಿಯು ನಿತ್ಯವಾಗದೆಹೋಗುವ ದೊಡ್ಡದೋಷವು ಅಪರಿಹಾರ್ಯವೇ ಆಗುತ್ತದೆ. ಆತ್ಮನಿಗೆ ಮುಕ್ತಿಯು ಉಂಟೆಂದಾಗಬೇಕಾದರೆ, ಆತ್ಮನು ನಿತ್ಯಮುಕ್ತನೇ ಆಗಿರಬೇಕು—ಎಂದಮೇಲೆ, ಈಗ ಅನುಭವಸಿದ್ಧವಾಗಿದ್ದರೂ ಸಂಸಾರಾನುಭವವು ವಾಸ್ತವವಲ್ಲ—ಭ್ರಾಂತಿಯೇ ಸರಿಯೆಂದು ನಿಶ್ಚಿತವಾಗುವುದು. ಶ್ರೀಮತ್ಸುರೇಶ್ವರಾಚಾರ್ಯರು ಇದನ್ನು ವಿಶದವಾಗಿ ತಳಿಸಿರುತ್ತಾರೆ – **"ಆತ್ಮಾ ಕರ್ತ್ರಾದಿರೂಪಶ್ಚೇನ್ಮೋಕ್ಷಾಕಾಂಕ್ಷೀಸ್ತರ್ಹಿ ಮುಕ್ತತಾಂ। ನ ಹಿ ಸ್ವಭಾವೋ ಭಾವಾನಾಂ ವ್ಯಾವರ್ತೇತೌಷ್ಣ್ಯವದ್ರವೇಃ"** ॥ 'ಆತ್ಮನು ಕರ್ತೃತ್ವಾದಿರೂಪನೆಂದಾದರೆ ಮತ್ತೆ ಮುಕ್ತಿಯನ್ನು ಅಪೇಕ್ಷಿಸಬೇಡ; ಸೂರ್ಯನ ಉಷ್ಣಪ್ರಕಾಶಗಳಂತೆ, ಸ್ವಾಭಾವಿಕರೂಪವು ಎಂದೂ ಕಳೆಯಲಾಗದು" ಎಂದು.

'ತರತಿಶೋಕಮಾತ್ಮವಿತ್'-'ಆತ್ಮನನ್ನು ತಿಳಿದವನು ಸಂಸಾರದುಃಖವನ್ನು ದಾಟುವನು; – **ಬ್ರಹ್ಮವಿದಾಪ್ನೋತಿ ಪರಂ**—ಬ್ರಹ್ಮವನ್ನು ತಿಳಿದವನು ಬ್ರಹ್ಮರೂಪಮೋಕ್ಷವನ್ನು ಹೊಂದುವನು; **'ಜ್ಞಾನಾದೇವತು ಕೈವಲ್ಯಂ**—'ಜ್ಞಾನದಿಂದಲೇ ಮೋಕ್ಷಸಿದ್ಧಿಯು' **ಜ್ಞಾತ್ವಾ ಮಾಂ ಶಾಂತಿಮೃಚ್ಛತಿ**—'ಪರಮಾತ್ಮನನ್ನು ತಿಳಿದು ಸಂಸಾರರಹಿತವಾದ ನೆಮ್ಮದಿಯನ್ನು ಪಡೆಯುತ್ತಾನೆ'—ಎಂದು ಮುಂತಾದ ಶ್ರುತಿಸ್ಮೃತಿವಚನಗಳಿಂದ, ತತ್ತ್ವಜ್ಞಾನವೇ ಮುಕ್ತಿಸಾಧನವೆಂದು ತಿಳಿದುಬರುವುದು. ಸಂಸಾರವು ಸತ್ಯವಾದರೆ, ಅದು ನಿಃಶೇಷವಾಗಿ ನಿವೃತ್ತ

 CC-O. In Public Domain. Digitized by eGangotri

ವಾಗುವುದಿಲ್ಲ ಮಾತ್ರವಲ್ಲದೆ, ಸತ್ಯವಾದದ್ದು ಜ್ಞಾನಮಾತ್ರದಿಂದ ನಿವೃತ್ತವಾಗುವುದು ಸಾಧ್ಯವೇ ಇಲ್ಲ. 'ಜ್ಞಾನಮಜ್ಞಾನಸ್ಯೈವ ನಿವರ್ತಕಂ'—'ಜ್ಞಾನವು ಅಜ್ಞಾನವೊಂದಕ್ಕೇ ನಿವರ್ತಕವು'—ಎಂಬ ನಿಯಮವಿದೆ. ಆದ್ದರಿಂದ ಆತ್ಮತತ್ತ್ವಜ್ಞಾನಮಾತ್ರದಿಂದ ನಿವರ್ತಿಸುವುದೆಂದು ಶ್ರುತಿಯು ಹೇಳುವ ಸಂಸಾರವು ಸತ್ಯವಲ್ಲವೆಂದು ದೃಢಪಡುವುದು.

ಮತ್ತು,—ಭೋಜನದಿಂದ ತೃಪ್ತನಾದವನು ಎಲ್ಲಿಗೆ ಹೋದರೂ ಆ ತೃಪ್ತಿಸುಖವುಳ್ಳವನಾಗಿರುತ್ತಾನೆ; ಎಡವಿ ಕಾಲುಗಾಯವಾದವನು ಎಲ್ಲಿದ್ದರೂ ಗಾಯದ ನೋವಿನ ಬಾಧೆಯನ್ನು ಅನುಭವಿಸುತ್ತಿರುವನು. ಇದರಂತೆ ಜಾಗ್ರತ್ಸ್ವಪ್ನಗಳಲ್ಲಿನ ಸುಖದುಃಖಿಗಳು ಆತ್ಮನಿಗೆ ವಾಸ್ತವವಾಗಿ ಇರುವುದಾದರೆ, ಅವು ಸುಷುಪ್ತಿಯಲ್ಲಿಯೂ ಅವನಿಗೆ ಇರಬೇಕಾಗುವುವು. ಆದರೆ, ಇವು ಸುಷುಪ್ತಿಯಲ್ಲಿ ಆತ್ಮನೊಡನೆ ಬರುವುದಿಲ್ಲವಾದ್ದರಿಂದ, ಅವು ಆತ್ಮನಿಗೆ ಸಂಬಂಧಿಸಿದವುಗಳು ಅಲ್ಲವೆಂದು ದೃಢವಾಗುವುದು. ಅನನ್ವಾಗತಂ ಪುಣ್ಯೇನ ಅನನ್ವಾಗತಂ ಪಾಪೇನ—ಎಂದು ಶ್ರುತಿಯು ಇದನ್ನೇ ತಿಳಿಸುತ್ತದೆ.

ಇದಲ್ಲದೆ, ದ್ರಷ್ಟೃವಿಗೆ ದೃಶ್ಯದ ಸಂಬಂಧವಿರುವುದಿಲ್ಲ. ಸುಖದುಃಖಾನುಭವರೂಪವಾದ ಸಂಸಾರವು ದೃಶ್ಯವಾಗಿದೆ—ಎಂದರೆ ಅನುಭವಕ್ಕೆ ವಿಷಯವಾಗಿದೆ. ಅನುಭವಕ್ಕೆ ಬರದೆ ಇರುವುದು ಸುಖವನ್ನಾಗಲಿ ದುಃಖವನ್ನಾಗಲಿ ಉಂಟುಮಾಡಲಾರದು. ಅನುಭವಗೋಚರವಾದುದು ಅನುಭವಿಸುವವರಿಗೆ ಸಂಬಂಧಿಸುವುದಿಲ್ಲ. ಆದಕಾರಣ, ಅನುಭವಕ್ಕೆ ವಿಷಯವಾಗಿರುವ ಸಂಸಾರವು ಆತ್ಮನಿಗೆ ಇಲ್ಲವೆಂದು ನಿಶ್ಚಿತವಾಗುವುದು.

"ದೃಶ್ಯಗಳಾಗಿರುವ ದೇಹೇಂದ್ರಿಯಾಂತಃಕರಣಗಳಲ್ಲಿರುವ ಸುಖದುಃಖಿಗಳು ದ್ರಷ್ಟೃವಾದ ಆತ್ಮನಿಗೆ ಆಗುವುದು ಬೇಡ; ಆತ್ಮನಿಗೇ ಸುಖದುಃಖಿಗಳು ಏಕಿರಬಾರದು?"—ಎಂದರೆ, ಇದು ಸರಿಯಲ್ಲ. ತನಗೆ ತಾನಾಗಲಿ, ತನ್ನ ಧರ್ಮವಾಗಲಿ ವಿಷಯವಾಗುವುದಿಲ್ಲ. ಇತರ ಎಲ್ಲವನ್ನೂ ದಹಿಸುವ ಅಗ್ನಿಯು ತನ್ನನ್ನು ದಹಿಸಿಕೊಳ್ಳುವುದಿಲ್ಲ; ಒಂದು ಬೆರಳಿನ ತುದಿಯಿಂದ ಅದೇ ಬೆರಳ ತುದಿಯನ್ನು ಮುಟ್ಟಲಾಗುವುದಿಲ್ಲ; ತನ್ನ ಕಣ್ಣಿನಿಂದ ತನ್ನ

Sri Vidyabharathi Book Centre, Sringeri

 CC-O. In Public Domain. Digitized by eGangotri

ಕಣ್ಣನ್ನೇ ನೋಡಲಾಗುವುದಿಲ್ಲ. ಆದ್ದರಿಂದ, ಒಂದುವೇಳೆ ಆತ್ಮನು ದುಃಖರೂಪನೇ ಎಂದಾದರೂ, ಆವನ ದುಃಖವು ಆವನಿಗೆ ದುಃಖವಾಗುವಂತೆಯೇ ಇಲ್ಲ. ಇದಲ್ಲದೆ, ಪ್ರಾಣಿಮಾತ್ರಕ್ಕೂ ತನ್ನಲ್ಲಿ ನಿರತಿಶಯಪ್ರೀತಿಯಿರುವುದು ಸರ್ವಪ್ರಸಿದ್ಧವಾಗಿರುವುದರಿಂದ, ಆತ್ಮನು ದುಃಖರೂಪನೆಂಬಕಲ್ಪನೆಗೂ ಅವಕಾಶವಿರುವುದಿಲ್ಲ.

"ದುಃಖದಂತೆ ಸುಖವೂ ಆತ್ಮಸ್ವರೂಪವಾಗದೆ ಹೋಗುವುದಲ್ಲವೆ ?" —ಎಂದರೆ, ವೇದ್ಯವಾದ ಸುಖವು ಹಾಗೆಯೇ ಸರಿ. ಆತ್ಮನು ಆನಂದಸ್ವರೂಪನೇ ಹೊರತು, ಆನಂದಾನುಭವಶಾಲಿಯಲ್ಲ. "ಮತ್ತೆ ಮೋಕ್ಷದಲ್ಲಿ ಸುಖಾನುಭವವಿಲ್ಲವಾದರೆ, ಅದರಿಂದ ಪ್ರಯೋಜನವೇನು ?" – ಎಂದರೆ, ಹಾಗಲ್ಲ ; ಆತ್ಮನು ಸ್ವಪ್ರಕಾಶವಾಗಿರುವ ಪರಮಾನಂದಸ್ವರೂಪನು; ಆದ್ದರಿಂದ ಮೋಕ್ಷದಲ್ಲಿ ಈ ಪರಮಾನಂದವು ನಿತ್ಯವೂ ಅಭಿವ್ಯಕ್ತವಾಗಿದ್ದು ನಿತ್ಯತೃಪ್ತಿಯಾಗುತ್ತದೆ.

ಕೆಲವರು—'ನಾವು ಸಕ್ಕರೆಯೇ ಆಗಬಾರದು ; ನಿತ್ಯವೂ ಅದರ ಸಿಹಿಯನ್ನು ಆಸ್ವಾದಿಸುತ್ತಿರಬೇಕು ; ಇದರಂತೆ ನಾವು ಸುಖರೂಪವೇ ಆಗುವುದು ಮೋಕ್ಷವಲ್ಲ ; ಮೋಕ್ಷದಲ್ಲಿ ನಿರತಿಶಯವಾದ ಸುಖವನ್ನು ನಾವು ಯಾವಾಗಲೂ ಅನುಭವಿಸಬೇಕು. ಪರಮಾತ್ಮನು ಇಂಥ ಸುಖಿಸ್ವರೂಪನಾದ್ದರಿಂದ, ಮೋಕ್ಷದಲ್ಲಿ ಮುಕ್ತನು, ಪರಮಾತ್ಮನ ಸುಖವನ್ನು ಅನುಭವಿಸುತ್ತಿರುತ್ತಾನೆ' —ಎಂದು ಅಭಿಪ್ರಾಯಪಡುವರು; ಇದರಲ್ಲಿ ಪರಮಾತ್ಮನನ್ನು ಭೋಗ್ಯವಸ್ತುವನ್ನಾಗಿಮಾಡಿ, ಜೀವನನ್ನು ಭೋಕ್ತೃವನ್ನಾಗಿಮಾಡಿದ ಮಹಾದೋಷವಾಗುವುದು. ಭೋಗ್ಯವು ಭೋಕ್ತೃವಿಗಾಗಿಯೇ ಇರುವಂಥದ್ದಾದ್ದರಿಂದ, ಜೀವನೇ ಪ್ರಧಾನನೆಂದಾಗಿ ಪರಮಾತ್ಮನು ಜೀವನಿಗೆ ಶೇಷನೆಂದೆನಿಸಿ, ಪರಮಾತ್ಮ ಮತ್ತು ಜೀವರ ಶೇಷಿಶೇಷಭಾವದ ಇವರ ಸಿದ್ಧಾಂತವು ತಲೆಕೆಳಗಾಗುವುದು ! ಕರ್ತೃತ್ವಭೋಕ್ತೃತ್ವರೂಪವಾದ ಸಂಸಾರದಿಂದ ಬೇಸತ್ತು ಮೋಕ್ಷವನ್ನು ಅಪೇಕ್ಷಿಸುವವನಿಗೆ, ಮತ್ತೆ ಮೋಕ್ಷದಲ್ಲಿಯೂ ಸುಖಭೋಕ್ತೃತ್ವವು ಇರುವುದೆಂದಾದರೆ, ಅದು ಸಂಸಾರವೇ ಆಗುವುದು. ಇವೇ

Sri Vidyabharathi Book Centre, Sringeri

 CC-O. In Public Domain. Digitized by eGangotri

ಮೊದಲಾದ ವಿಚಾರಗಳಿಂದ, ಆತ್ಮನು ನಿತ್ಯಮುಕ್ತಾದ್ವಿತೀಯಸ್ವರೂಪನೆಂದೂ ಈಗ ತೋರಿಬರುತ್ತಿರುವ ಸಂಸಾರವು ಕೇವಲ ಅವಿದ್ಯಕವೆಂದೂ ವ್ಯಕ್ತವಾಗುವುದು. ಆದ್ದರಿಂದ ಈ ಉಪನಿಷತ್ಸಿದ್ಧಾಂತಕ್ಕೆ ವಿರುದ್ಧಗಳಾದ ಇತರ ಮತಗಳೆಲ್ಲವೂ ಅಸನ್ಮತಗಳೆಂದು ಸರ್ವಸಿದ್ಧವು—ಷಿ.

ಮೊದಲಿನ ಈ ಮೂರುಪದ್ಯಗಳಲ್ಲಿ, ವಾದಿಗಳ ವಿರುದ್ಧಾಭಿಪ್ರಾಯಗಳನ್ನು ನಿರಾಕರಿಸಿ, 'ತ್ವಂ' ಪದಾರ್ಥವನ್ನು ನಿತ್ಯಶುದ್ಧಬುದ್ಧಮುಕ್ತಸ್ವರೂಪವೆಂದು ನಿರ್ಧರಿಸಿದ್ದಾಗಿದೆ. ಈಗ 'ತತ್' ಪದಾರ್ಥವನ್ನೂ ಹೀಗೆ ನಿರ್ಧರಿಸಬೇಕಾಗಿದೆ. ಸಮಸ್ತಜಗತ್ತಿಗೂ ಮೂಲಕಾರಣವಾದುದೇ ತತ್ಪದಾರ್ಥವು; ಜಗತ್ತೆಲ್ಲ ಅದರ ಕಾರ್ಯವಾಗಿದೆ. ಇದು ಎಲ್ಲವಾದಿಗಳಿಗೂ ಸಮ್ಮತವಾಗಿದೆ. ಎಲ್ಲರ ಅನುಭವದಲ್ಲಿರುವ ಈ ಜಗತ್ತಿನ ಸ್ವರೂಪದಲ್ಲಿಯೂ, ಇದರ ಮೂಲಕಾರಣವಾದ ತತ್ಪದಾರ್ಥದ ಸ್ವರೂಪದಲ್ಲಿಯೂ ವಾದಿಗಳಿಗೆ ವಿರುದ್ಧಾಭಿಪ್ರಾಯಗಳಿವೆ. ಜಗತ್ತೆಲ್ಲ ಜಡವೂ, ವಿಕಾರಿಯೂ, ನಶ್ವರವೂ ಆಗಿರುತ್ತ, ಮಿಥ್ಯಾಭೂತವೆಂಬುದನ್ನು ತೋರಿಸಿರುತ್ತೆ.

"ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ, ತದೈಕ್ಷತ, ತತ್ತೇಜೋಽಸೃಜತ।"—'ಅಪ್ಪ, ಈ ಜಗತ್ತು, ಸೃಷ್ಟಿಯಾಗುವುದಕ್ಕೆ ಮುಂಚೆ, ಸಜಾತೀಯವಿಜಾತೀಯಸ್ವಗತಭೇದತ್ರಯರಹಿತವಾದ ಅದ್ವಿತೀಯಸದ್ವಸ್ತುವೇ ಆಗಿತ್ತು; ಅದು ಆಲೋಚಿಸಿ ತೇಜಸ್ಸನ್ನು ಸೃಷ್ಟಿಸಿತು';—**'ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ'** । 'ಆ ಈ ಆತ್ಮನಿಂದಲೇ ಆಕಾಶವು ಹುಟ್ಟಿತು'—ಎಂದು ಮುಂತಾದ ಶ್ರುತಿಗಳು ಅದ್ವಿತೀಯಚೇತನವಸ್ತುವಿನಿಂದಲೇ ಆಕಾಶಾದಿಪೂರ್ವಕವಾಗಿ ಜಗತ್ತು ಸೃಷ್ಟವಾಯಿತೆಂದು ತಿಳಿಸುತ್ತವೆ.

ಈ ಉಪನಿಷನ್ಮತಕ್ಕೆ ವಿರುದ್ಧವಾಗಿ, ಪ್ರಧಾನವೆಂಬ ದೊಡ್ಡದಾದ ಅಚೇತನವನ್ನು ಜಗತ್ಕಾರಣವೆಂದು ಸಾಂಖ್ಯರು ಹೇಳುವರು. ಜೀವನಿಗೆ ಬೇರೆಯಾದ ಚೇತನವಾದ ಪಶುಪತಿಯು ಜಗತ್ಕಾರಣವೆಂದು ಪಾಶುಪತರು ವಾದಿಸುವರು; ಭಗವಾನ್ ವಾಸುದೇವನೇ ಜಗತ್ಕಾರಣನು; ಅವನಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಕರ್ಷಣನೆಂಬ ಜೀವನೂ, ಅವನಿಂದ ಪ್ರದ್ಯುಮ್ನನೆಂಬ ಮನಸ್ಸೂ, ಅದರಿಂದ ಅನಿರುದ್ಧನೆಂಬ ಅಹಂಕಾರವೂ ಹುಟ್ಟುವುದು–ಎಂದು ಪಾಂಚರಾತ್ರಮತದವರು ಅಭಿಪ್ರಾಯಪಡುವರು.

ಪರಿಣಾಮಹೊಂದುತ್ತ, ನಿತ್ಯನೂ ಸರ್ವಜ್ಞನೂ, ಭಿನ್ನಾಭಿನ್ನನೂ ಆಗಿರುವ ಚೇತನನು ಜಗತ್ಕಾರಣವೆಂದು ಜೈನರೂ ತ್ರಿದಂಡಿಗಳೂ ಹೇಳುವರು. ಅತೀಂದ್ರಿಯವಾದ ಜಗತ್ಕಾರಣತ್ವಾದಿವಿಷಯಗಳಲ್ಲಿ ವೇದವನ್ನೇ ಪ್ರಮಾಣವೆಂದು ಒಪ್ಪಬೇಕು; ವೇದಕ್ಕೆಲ್ಲ ಅಗ್ನಿಹೋತ್ರಾದಿಕರ್ಮಗಳಲ್ಲಿಯೇ ಮುಖ್ಯತಾತ್ಪರ್ಯವಾದ್ದರಿಂದ, ಸರ್ವಜ್ಞನಾದ ಈಶ್ವರನು ಇರುವನೆಂಬಲ್ಲಿ ಪ್ರಮಾಣವೇ ಇಲ್ಲವೆಂದು ಕರ್ಮಮೀಮಾಂಸಕರ ಮತವಾಗಿದೆ; ನಿತ್ಯಜ್ಞಾನವನ್ನುಳ್ಳ ಈಶ್ವರನು ಇರುವನೆಂಬುದು–"ಜಗತ್ತಿಗೆಲ್ಲ ಕರ್ತೃವೊಬ್ಬನು ಇರಬೇಕೆಂಬ"–ಅನುಮಾನದಿಂದ ಸಿದ್ಧಿಸುತ್ತದೆ; ಅವನು ಜೀವರಿಗೆ ಅತ್ಯಂತಬೇರೆಯಾದವನು—ಎಂದು ನೈಯಾಯಿಕರು ವಾದಿಸುತ್ತಾರೆ; ಕ್ಷಣಿಕನೂ, ಸರ್ವಜ್ಞನೂ ಆಗಿರುವವನೇ ಈಶ್ವರನೆಂದು ಬೌದ್ಧರ ಮತವು, ಪಾತಂಜಲಯೋಗಮತದವರು—ಕ್ಲೇಶ, ಕರ್ಮ, ವಿಪಾಕ—ಆಶಯಾದಿಗಳಿಲ್ಲದ, ಸರ್ವಜ್ಞನಾದ ಈಶ್ವರನು ಇರುವನೆಂದು ಹೇಳುತ್ತಾರೆ. ಜಗತ್ಕಾರಣವಸ್ತುವಿನ ವಿಷಯದಲ್ಲಿ, ವಾದಿಗಳಿಗೆ ಹೀಗೆ ವಿರುದ್ಧಾಭಿಪ್ರಾಯಗಳು ಇರುವಾಗ, ಅದರ ನಿರ್ಣಯಕ್ಕಾಗಿ ಹೇಳುತ್ತಾರೆ—

ನ ಸಾಂಖ್ಯಂ ನ ಶೈವಂ ನ ತತ್ಪಾಂಚರಾತ್ರಂ
ನ ಜೈನಂ ನ ಮೀಮಾಂಸಕಾದೇರ್ಮತಂ ವಾ ।
ವಿಶಿಷ್ಟಾನುಭೂತ್ಯಾ ವಿಶುದ್ಧಾತ್ಮಕತ್ವಾತ್
ತದೇಕೋऽವಶಿಷ್ಟಃ ಶಿವಃ ಕೇವಲೋಹಂ ॥ ೪ ॥

ಸಾಂಖ್ಯಂ ನ=ಸಾಂಖ್ಯಮತವು ಸಮಂಜಸವಲ್ಲ; ಶೈವಂ ನ=ಪಾಶುಪತಮತವೂ ಸರಿಯಲ್ಲ; ಪಾಂಚರಾತ್ರಂ ತತ್ ನ=ಆ ಪಾಂಚರಾತ್ರಮತವೂ ಯುಕ್ತವಲ್ಲ: ಜೈನಂ ನ=ಜೈನಮತವೂ ಯೋಗ್ಯವಲ್ಲ; ಮೀಮಾಂಸಕಾದೇಃ

CC-O. Mumukshu Bhawan Varanasi Collection. Digitized by eGangotri

CC-O. In Public Domain. Digitized by eGangotri

ಮತಂ ವಾ ನ=ಮಿಮಾಂಸಕರೇ ಮೊದಲಾದವರ ಮತವೂ ಯಥಾರ್ಥವಲ್ಲ ; ವಿಶಿಷ್ಟಾನುಭೂತ್ಯಾ=ನಿರ್ವಿಕಲ್ಪಕತತ್ತ್ವಸಾಕ್ಷಾತ್ಕಾರದಿಂದ ; ವಿಶುದ್ಧತ್ವಕತ್ವಾತ್=ಸರ್ವಧರ್ಮವರ್ಜಿತವಾದಸ್ವರೂಪದ್ದಾದ್ದರಿಂದ ; ತದೇಕೋವಶಿಷ್ಟಃ ಶಿವಃ ಕೇವಲೋಽಹಂ=ನಿರ್ವಿಶೇಷಾದ್ವಿತೀಯಾಖಂಡಸಚ್ಚಿದಾನಂದ ಸ್ವರೂಪವೇ ಪರಮಾರ್ಥತತ್ತ್ವವು.

ವಿವರಣೆ—

ನಿಷ್ಕಲಂ ನಿಷ್ಕ್ರಿಯಂ ಶಾಂತಂ ನಿರವದ್ಯಂ ನಿರಂಜನಂ — ಎಂದು ಮುಂತಾದಶ್ರುತಿಯಿಂದ ಬ್ರಹ್ಮವು ಕೂಟಸ್ಥನಿತ್ಯನಿರ್ವಿಕಾರಾಸಂಗಸ್ವರೂಪದ್ದೆಂದು ತಿಳಿದುಬರುವುದರಿಂದ, ಕಾರ್ಯಕಾರಣವೆಂಬುದೇ ವಸ್ತುತಃ ಬ್ರಹ್ಮದಲ್ಲಿ ಸಂಭವಿಸುವುದಿಲ್ಲ. ನಿರ್ವಿಶೇಷವಾದ್ದರಿಂದ ಬ್ರಹ್ಮವನ್ನೇ ಸಾಕ್ಷಾತ್ತಾಗಿ ತಿಳಿಸಲು ಬರುವುದಿಲ್ಲವಾದಕಾರಣ, ಸರ್ವಾನುಭವಸಿದ್ಧವಾಗಿರುವ ಜಗತ್ತನ್ನು ಮೂಲವಾಗಿಟ್ಟುಕೊಂಡು ಅದರ ಮೂಲಕವಾಗಿ ಬ್ರಹ್ಮವನ್ನು ಶ್ರುತಿಯು ಬೋಧಿಸುತ್ತಿದೆ.

ಜಗತ್ತೆಲ್ಲ ಸಾವಯವವೂ ವಿಕಾರಿಯೂ ಆಗಿರುವುದರಿಂದ, ಇದಕ್ಕೊಂದು ಕಾರಣವಿರಬೇಕೆಂದು ಸಾಮಾನ್ಯವಾಗಿ ತಿಳಿದುಬರುತ್ತದೆ. ಲೋಕದಲ್ಲಿ ಪ್ರತಿಯೊಂದು ಕಾರ್ಯಕ್ಕೂ ಅದಕ್ಕೆ ತಕ್ಕಂಥ ಉಪಾದಾನಕಾರಣ ಮತ್ತು ನಿಮಿತ್ತಕಾರಣ – ಎಂದು ಎರಡುವಿಧಕಾರಣಗಳು ಕಂಡಿದೆ. ಯಾವುದು ಕಾರ್ಯದ ರೂಪದಲ್ಲಿರುವುದೋ ಅದು ಉಪಾದಾನಕಾರಣವು ; ಅದನ್ನು ಕಾರ್ಯವಾಗಿ ಮಾಡುವ ಚೇತನನು ನಿಮಿತ್ತಕಾರಣನು. ಮಣ್ಣಿನಿಂದ ಆಗಿರುವ ಮಣ್ಣಿನ ಗಡಿಗೆಗೆ ಮಣ್ಣು ಉಪಾದಾನಕಾರಣ ಮಣ್ಣಿನಿಂದ ಅದನ್ನು ಮಾಡಿರುವ ಕುಂಬಾರನು ನಿಮಿತ್ತಕಾರಣ ; ಚಿನ್ನದಿಂದ ಆಗಿರುವ ಆಭರಣಕ್ಕೆ ಚಿನ್ನ ಉಪಾದಾನಕಾರಣ ; ಅಕ್ಕಸಾಲಿಗನು ನಿಮಿತ್ತಕಾರಣ ; ಮರದ ಮಂಚಕ್ಕೆ ಮರವು ಉಪಾದಾನಕಾರಣ; ಬಡಗಿಯು ನಿಮಿತ್ತಕಾರಣ—ಇತ್ಯಾದಿ. ಪ್ರಕೃತದಲ್ಲಿ ಜಗತ್ತಿಗೆ ಉಪಾದಾನಕಾರಣವು ಯಾವುದು ?—ಎಂಬುದು ವಿಚಾರ್ಯವಿಷಯವಾಗಿದೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಚೇತನವಾದ ಬ್ರಹ್ಮವೇ ಜಗತ್ತಿಗೆ ಉಪಾದಾನಕಾರಣವಾಗಿದೆ; ಚೇತನವಾದ್ದರಿಂದ ನಿಮಿತ್ತಕಾರಣವೂ ಅದೇ ಆಗಿದೆ; ಹೀಗೆ ಬ್ರಹ್ಮವೇ ಜಗತ್ತಿಗೆಲ್ಲ ಅಭಿನ್ನನಿಮಿತ್ತೋಪಾದಾನ ಕಾರಣವಾಗಿದೆ – ಎಂಬುದು ಉಪನಿಷನ್ಮತವಾಗಿರುತ್ತದೆ.

ಇದರಲ್ಲಿ ಸಾಂಖ್ಯರು ಹೀಗೆ ಹೇಳುತ್ತಾರೆ—"ಕಾರ್ಯಕಾರಣಗಳು ಸಮಾನಸ್ವಭಾವದವುಗಳಾಗಿರುತ್ತವೆ. ಮಣ್ಣಿನಿಂದ ಆದ ಗಡಿಗೆ ಮಣ್ಣೇ ಆಗಿರುತ್ತದೆ; ಚಿನ್ನದ ಕಾರ್ಯ ಚಿನ್ನದಿಂದಲೇ ಆಗುತ್ತದೆ. ಪ್ರಪಂಚವೆಲ್ಲ ಅಚೇತನವಾಗಿರುವುದು; ಇದರ ಉಪಾದಾನಕಾರಣವೂ ಅಚೇತನವೆಂದೇ ನಿಶ್ಚಿತವಾಗುವುದು. ಕಾರಣವಸ್ತುವೇ ಕಾರ್ಯರೂಪವಾಗಿ ಪರಿಣಾಮವಾಗುತ್ತದೆ; ಮಣ್ಣೇ ಗಡಿಗೆಯ ಆಕಾರವಾಗಿ ಪರಿಣಮಿಸುತ್ತದೆ, ಮತ್ತು, ದೊಡ್ಡವಸ್ತುವು ಅನೇಕಕಾರ್ಯಗಳಾಗಿ ಪರಿಣಾಮಹೊಂದುತ್ತದೆ. ಆದ್ದರಿಂದ ವಿಚಿತ್ರವೂ ವಿವಿಧವೂ ಆಗಿರುವ ಈ ಜಡಜಗದ್ವಸ್ತುಗಳಿಗೆಲ್ಲ ಮೂಲವಾಗಿರುವ ಉಪಾದಾನಕಾರಣವಸ್ತುವು ಅತಿಮಹತ್ತಾದ ಅಚೇತನವಸ್ತುವಾಗಿರುತ್ತದೆ. ಇದನ್ನು ಪ್ರಧಾನವೆಂದು ಹೇಳುವರು. ಚೇತನರಾದ ಜೀವರುಗಳು ನಿರವಯವರಾಗಿರುವುದರಿಂದ, ಇವರುಗಳಿಗೆ ಕರ್ತೃತ್ವವು ಸಂಭವಿಸುವುದಿಲ್ಲ. ಜೀವರನ್ನು ಬಿಟ್ಟು ಬೇರೆ ಚೇತನವು ಇರುವುದೆಂಬಲ್ಲಿ ಯಾವಪ್ರಮಾಣವೂ ಇಲ್ಲ; ಆದ್ದರಿಂದ ಅಚೇತನವಾದ ಈ ಪ್ರಧಾನವೇ ಸ್ವತಂತ್ರವಾಗಿ ಜಗತ್ತನ್ನು ಸೃಷ್ಟಿಮಾಡುತ್ತದೆ"—ಎಂದು.

ವಿಚಾರಮಾಡಿ ನೋಡಿದರೆ, ಇದು ಸಮಂಜಸವಾಗುವುದಿಲ್ಲ. ಅಚೇತನಗಳಾದ ಮಣ್ಣು ಚಿನ್ನಗಳು, ತಾವಾಗಿಯೇ ಗಡಿಗೆ ಮತ್ತು ಆಭರಣವಾಗಿ ಪರಿಣಮಿಸುವುದನ್ನು ಯಾರೂ ಕಂಡಿರುವುದಿಲ್ಲ. ಒಂದುವೇಳೆ ಅಚೇತನ ಕಾರ್ಯಕ್ಕೆ ಅಚೇತನವಾದ ಉಪಾದಾನಕಾರಣವನ್ನೇ ಒಪ್ಪಬೇಕೆಂದು ವಾದಿಸಿದರೂ, ನಾನಾವಿಧಗಳಾದ ಅಚೇತನಕಾರ್ಯಗಳಿಗೆ ನಾನಾವಿಧಗಳಾದ ಅಚೇತನೋಪಾದಾನಕಾರಣಗಳನ್ನು ಒಪ್ಪಬೇಕಾಗುವುದೇ ಹೊರತು, ಒಂದೇ ಪ್ರಧಾನವು ವಿಚಿತ್ರಜಗತ್ತಿಗೆಲ್ಲ ಉಪಾದಾನಕಾರಣವೆಂದು ಸಿದ್ಧಿಸಲಾರದು. ಪ್ರಧಾನವನ್ನು ಒಪ್ಪಿದರೂ, ಅಚೇತನವಾದ ಇದನ್ನು ಜಗದಾಕಾರವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಣಾಮಗೊಳಿಸುವ ಚೇತನನನ್ನು ಒಪ್ಪದಿರುವ ಸಾಂಖ್ಯಮತದಲ್ಲಿ ಜಗತ್ತೇ ಹುಟ್ಟಲಾರದಾಗುವುದು.

ಉಪನಿಷತ್ತುಗಳಲ್ಲಿ ಜಗದುಪಾದಾನಕಾರಣವೆಂದು ಹೇಳಿರುವ ಬ್ರಹ್ಮವು ಈ ಪ್ರಧಾನವೇ ಆಗಿದೆಯೆಂದು ಸಾಂಖ್ಯರು ಹೇಳುತ್ತಾರೆ. ಆದರೆ, ಇದು ಅಸಂಗತವೇ ಆಗಿದೆ. ಉಪನಿಷತ್ತುಗಳಲ್ಲಿ 'ತದೈಕ್ಷತ ಬಹು ಸ್ಯಾಂ ಪ್ರಜಾಯೇಯ'—"ನಾನು ಬಹುವಾಗಿ ಹುಟ್ಟುತ್ತೇನೆ ಎಂದು ಅದು ಆಲೋಚಿಸಿತು"–ಎಂದು ಆಲೋಚನೆಮಾಡಿ ಜಗತ್ತನ್ನು ಸೃಷ್ಟಿಮಾಡಿತೆಂದು ಹೇಳಿರುವುದರಿಂದ, ಜಗತ್ಕಾರಣವು ಚೇತನವೆಂದು ಸ್ಪಷ್ಟವಾಗುವುದು; ಅಚೇತನವಾದ ಪ್ರಧಾನಕ್ಕೆ ಆಲೋಚನೆ ಮಾಡುವ ಶಕ್ತಿಯಿರುವುದಿಲ್ಲ, ಅನೇನ ಜೀವೇನಾತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ"—ಈ ಜೀವನ ರೂಪದಿಂದ ಇದರಲ್ಲಿ ಪ್ರವೇಶಮಾಡಿ, ನಾಮರೂಪಗಳ ಸೃಷ್ಟಿಯನ್ನು ಮಾಡುತ್ತೇನೆ"—ಎಂದು ಜಗತ್ಕಾರಣವಾದುದು ಜೀವರೂಪವೆಂದು ಉಪನಿಷತ್ತು ಹೇಳುತ್ತದೆ. ಅಚೇತನವಾದ ಪ್ರಧಾನವು ಚೇತನನಾದ ಜೀವನರೂಪವಾಗುವುದಿಲ್ಲ. 'ಯಸ್ಮಿನ್ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ'—"ಜಗತ್ಕಾರಣವಾದ ಇದನ್ನು ತಿಳಿದರೆ, ಇದೆಲ್ಲವೂ ತಿಳಿಯುತ್ತದೆ'–ಎಂದು ಶ್ರುತಿಯು ತಿಳಿಸುತ್ತದೆ. ಕಾರಣವಾದ ಪ್ರಧಾನವನ್ನು ತಿಳಿದರೆ, ಕಾರ್ಯವೆಲ್ಲ ಕಾರಣಸ್ವರೂಪವೇ ಆಗಿದೆಯೆಂದಿಟ್ಟುಕೊಂಡು, ಪ್ರಧಾನದ ಕಾರ್ಯವಾದ ಜಡಜಗತ್ತೆಲ್ಲ ತಿಳಿದುಬಂದೀತೆಂದಾದರೂ, ಅದರ ಕಾರ್ಯರಲ್ಲದ ಅಸಂಖ್ಯಾತ ಚೇತನಜೀವರು ತಿಳಿದುಬರದೆ ಹೋಗುವರು. ಹೀಗೆ ಎಲ್ಲವಿಧದಿಂದಲೂ ಶ್ರುತಿಗೆ ವಿರುದ್ಧವಾದ್ದರಿಂದ, ಸಾಂಖ್ಯರ ಈ ಪ್ರಧಾನಕಾರಣವಾದವು ಯುಕ್ತಿಗೂ ಹೊಂದದೆ, ಅಸನ್ಮತವೆಂದು ವಿಶದಪಡುವುದು.

ಸರ್ವಜ್ಞನೂ ಸರ್ವಶಕ್ತನೂ ಸ್ವತಂತ್ರನೂ ಆದ ಚೇತನಪಶುಪತಿಯೆಂಬ ಈಶ್ವರನು ಜಗತ್ಕಾರಣನೆಂಬ ಪಾಶುಪತಮತವೂ ಯುಕ್ತವಾಗುವುದಿಲ್ಲ. "ವಿಚಿತ್ರವಾಗಿ ತಾರತಮ್ಯದಿಂದ ಸುಖದುಃಖಗಳಿಗೆ ಕಾರಣವಾಗಿರುವ ಈ ಜಗತ್ತನ್ನು ಸ್ವತಂತ್ರನಾದ, ಈಶ್ವರನು ಏಕಕ್ಕಾಗಿ ಸೃಷ್ಟಿ ಮಾಡುವನು?"—

Sri Vidyabharathi Book Centre, Srinagar

CC-O. In Public Domain. Digitized by eGangotri

ಎಂಬ ಪ್ರಶ್ನೆಯು ಸಂಭವಿಸುತ್ತದೆ. ತನ್ನ ಪ್ರಯೋಜನಕ್ಕಾಗಿ ಮಾಡಿದ ನೆಂದಾದರೆ, ಅವನ ಸರ್ವಜ್ಞತ್ವ, ಸರ್ವಶಕ್ತಿತ್ವ, ನಿತ್ಯತೃಪ್ತತ್ವಾದಿರೂಪವಾದ ಈಶ್ವರತ್ವಕ್ಕೇ ವಿರುದ್ಧವಾಗುವುದು. ಜೀವರುಗಳ ಧರ್ಮಾಧರ್ಮಕರ್ಮ ಗಳಿಗೆ ಅಧೀನನಾಗಿ ಸೃಷ್ಟಿಮಾಡುತ್ತಾನೆಂದು ಹೇಳಿದರೆ, ಅವನ ಸ್ವಾತಂತ್ರ್ಯಕ್ಕೆ ವಿರೋಧವಾಗುವುದು. ಸರ್ವಸ್ವತಂತ್ರನೂ, ಸರ್ವಶಕ್ತನೂ ಆಗಿರುವ ಈಶ್ವರನು ಸೃಷ್ಟಿಸಿದ ಜಗತ್ತು ಕೇವಲ ಸುಖಿಮಯವೇ ಆಗಿರಬೇಕಾಗುವುದು. ದಯಾಮಯನಾದ ಆ ಈಶ್ವರನು ಜೀವರೆಲ್ಲರಿಗೂ ಈಗಲೇ ಮೋಕ್ಷವನ್ನು ಅನುಗ್ರಹಿಸಿ, ಸೃಷ್ಟಿಯನ್ನೇ ಇಲ್ಲವಾಗಿ ಮಾಡಬೇಕಾಗುವುದು. ಹೀಗಾಗುವು ದಿಲ್ಲವೆಂದರೆ, ಅಂಥ ಈಶ್ವರನೇ ಇಲ್ಲವೆಂದಾಗುವುದು. ಇವೇ ಮೊದಲಾದ ವಿಚಾರಗಳಿಂದ, ಪಾಶುಪತಮತವು ಅಯುಕ್ತವೆಂದು ನಿಶ್ಚಿತವಾಗುವುದು. ಸ್ವತಂತ್ರವಾದ ಈಶ್ವರನನ್ನು ಜಗತ್ಕಾರಣನೆಂದು ಹೇಳುವ ಪಾಂಚರಾತ್ರ–ಜೈನ–ಮುಂತಾದಮತಗಳೆಲ್ಲವನ್ನೂ ಇದರಿಂದ ನಿರಾಕರಿಸಿದಂತಾಗುತ್ತದೆ.

ತಾರ್ಕಿಕರಾದ ವೈಶೇಷಿಕರೂ, ನೈಯಾಯಿಕರೂ ಪರಮಾಣುಗಳನ್ನು ಜಗತ್ಕಾರಣವೆಂದು ವಾದಿಸುತ್ತಾರೆ. ಕಾರ್ಯವು ಸಾವಯವವಾಗಿರುತ್ತದೆ. ಅದರ ಅವಯವಗಳೇ ಅದಕ್ಕೆ ಕಾರಣಗಳು. ಸಮಾನಜಾತಿಯ ಅನೇಕಕಾರಣ (ಅವಯವ)ಗಳು ಸೇರಿ ಕಾರ್ಯವಾಗುತ್ತದೆ. ಘಟಕ್ಕೆ ಅವಯವಗಳಾಗಿರುವ ಎರಡು ಕಪಾಲಗಳು, ಘಟಕ್ಕೆ ಕಾರಣಗಳು. ಇದನ್ನು ಸಮವಾಯಿಕಾರಣ ವೆಂದು ಕರೆಯುವರು. ಸಮವಾಯಿ (ಉಪಾದಾನ) ಕಾರಣದಿಂದ ಕಾರ್ಯವು ಹುಟ್ಟುವುದನ್ನು ಆರಂಭವೆಂದು ಹೇಳುವರು. ಸಾಂಖ್ಯರ ಮತವು ಪರಿಣಾಮ ವಾದವಾದರೆ, ನೈಯಾಯಿಕರದು ಆರಂಭವಾದವಾಗಿದೆ. ಘಟಕ್ಕೆ ಆರಂಭಕ ಕಾರಣವಾದ ಕಪಾಲವೂ ಸಾವಯವವಾಗಿದ್ದು, ಅದರ ಅವಯವಗಳು ಅದಕ್ಕೆ ಆರಂಭಕವಾಗಿರುತ್ತವೆ. ಹೀಗೆ, ಅವಯವಗಳನ್ನು ವಿಭಾಗಮಾಡುತ್ತ ಬರುವಲ್ಲಿ, ವಿಭಾಗಹೊಂದದ ಅತಿಸೂಕ್ಷ್ಮವಾದ ಅವಯವವು ಯಾವುದು ಉಳಿಯುವುದೋ, ಅದು ಪರಮಾಣುವೆನಿಸುತ್ತದೆ. ಇದೇ ಮೂಲಕಾರಣವಸ್ತುವು. ಲೋಕದಲ್ಲಿ ಪೃಥಿವಿ, ಅಪ್ಪು, ತೇಜಸ್ಸು, ವಾಯು—ಎಂದು ನಾಲ್ಕುವಿಧ ಕಾರ್ಯಗಳು ಪ್ರಸಿದ್ಧವಾಗಿರುವುದರಿಂದ ಈ ನಾಲ್ಕುವಿಧಪರಮಾಣುಗಳಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಜಗತ್ತು ಆಗಿದೆಯೆಂದು ಅವರು ಕಲ್ಪಿಸುತ್ತಾರೆ. ಜಗತ್ತಿಗೂ ಜೀವರಿಗೂ ಬೇರೆಯಾಗಿ, ಸರ್ವಜ್ಞ-ಸರ್ವಶಕ್ತನಾದ ಈಶ್ವರನು ಈ ಪರಮಾಣುಗಳಿಂದ ಜಗತ್ತನ್ನು ಸೃಷ್ಟಿಮಾಡುತ್ತಾನೆಂದು ಅವರು ಹೇಳುತ್ತಾರೆ. "ಅಚೇತನವಾದ ಕಾರಣವಸ್ತುವಿನಿಂದ ಅಚೇತನವಾದ ಕಾರ್ಯವನ್ನು ಮಾಡುವ ಚೇತನನು ಇರಬೇಕೆಂದು" ಲೋಕಾನುಭವವಿರುವುದರಿಂದ, ಇದನ್ನು ಅನುಸರಿಸಿ, ಅಂಥ ಈಶ್ವರನು ಇರಬೇಕೆಂದು ನಿಶ್ಚಿತವಾಗುವುದೆಂದು ಅವರ ಅಭಿಪ್ರಾಯವಾಗಿದೆ.

ಸ್ವತಂತ್ರೇಶ್ವರವಾದವನ್ನು ನಿರಾಕರಿಸಿರುವುದರಿಂದ, ಈ ತಾರ್ಕಿಕಮತವನ್ನೂ ನಿರಾಕರಿಸಿದಂತಾಗುವುದು, ಮತ್ತು, "ಅಚೇತನಕಾರ್ಯಕ್ಕೆ ಚೇತನನಾದ ಕಾರಣನು ಇರಬೇಕೆಂದು" ಲೋಕದಲ್ಲಿ ಕಂಡಂತೆ ಕಲ್ಪಿಸುವುದಾದರೂ, ಒಬ್ಬನೇ ಅನೇಕವಿಧವಿಚಿತ್ರಕಾರ್ಯಗಳನ್ನು ಮಾಡಲಾರನಾದುದರಿಂದ, ಲೋಕದಲ್ಲಿ ಕಂಡಂತೆಯೇ ಅನೇಕವಿಧಕಾರ್ಯಗಳಿಗೆ ಅನೇಕೇಶ್ವರರನ್ನು ಕಲ್ಪಿಸಬೇಕಾಗುವುದು; ಹೀಗಾಗಿ, ಅವರು ಸರ್ವಜ್ಞರೂ, ಸರ್ವಶಕ್ತರೂ ಆಗದೆ, ನಮ್ಮಂತೆಯೇ ಸಂಸಾರಿಗಳೇ ಆಗುವರು. "ಈ ಜಗತ್ತನ್ನೆಲ್ಲ ಒಬ್ಬನೇ ಸೃಷ್ಟಿಸಿದ್ದಾನೆಂದು ನಿಶ್ಚಿತವಾದರೆ. ಆಗ ಅವನು ಸರ್ವಜ್ಞನೂ ಸರ್ವಶಕ್ತನೂ ಆಗಿದ್ದಾನೆಂದು ನಿಶ್ಚಿತವಾಗುವುದು ; ಅವನು ಸರ್ವಜ್ಞನೂ ಸರ್ವಶಕ್ತನೂ ಎಂದು ನಿಶ್ಚಯವಾದರೆ ಆಗ ಅವನೊಬ್ಬನೇ ಸರ್ವಜಗತ್ತನ್ನೂ ನಿರ್ಮಿಸಿದ್ದಾನೆಂದು ಹೇಳಬಹುದು"— ಹೀಗಾಗಿ ಅನ್ಯೋನ್ಯಾಶ್ರಯದೋಷದಿಂದ ಯಾವುದೂ ಸಿದ್ಧಿಸದೆ ಹೋಗುತ್ತದೆ. ಶ್ರುತಿವಿರೋಧವಂತೂ ಪ್ರಸಿದ್ಧವೇ ಇದೆ. ಶ್ರುತಿಪ್ರಮಾಣವನ್ನು ಅಂಗೀಕರಿಸಿ—ಯಃ ಸರ್ವಜ್ಞಃ ಸರ್ವವಿತ್-ತಸ್ಮಾತ್ ಏತತ್ ಜಾಯತೇ—"ಸರ್ವಜ್ಞನೂ ಸರ್ವವಿತ್ತೂ ಆಗಿರುವ ಈಶ್ವರನಿಂದ ಈ ಜಗತ್ತು ಹುಟ್ಟುತ್ತದೆ'"—ಎಂದು ಸರ್ವಜ್ಞನಾದ ಈಶ್ವರನನ್ನು ಅಂಗೀಕರಿಸುವುದಾದರೆ, ಶ್ರುತಿ ಪ್ರಮಾಣಾನುಸಾರವಾಗಿಯೇ ಇತರ ಎಲ್ಲ ವಿಷಯಗಳನ್ನೂ ಅಂಗೀಕರಿಸಬೇಕಾಗುವುದರಿಂದ, ಶ್ರುತಿವಿರುದ್ಧವಾದ ಪರಮಾಣುಕಾರಣವಾದವು ಸಿದ್ಧವಾಗುವುದಿಲ್ಲ.

ಜೀವ, ಈಶ್ವರ, ಜಗತ್ತು ಈ ಮೂರುಪದಾರ್ಥಗಳ ತತ್ತ್ವವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ನಿರ್ಣಯಿಸಲು ಪ್ರವೃತ್ತರಾದವರು ದಾರ್ಶನಿಕರು; ಇವರ ಸಿದ್ಧಾಂತಗಳು ದರ್ಶನಗಳೆನಿಸುತ್ತವೆ: ಆಸ್ತಿಕರೆಂದೂ, ನಾಸ್ತಿಕರೆಂದೂ ದಾರ್ಶನಿಕರು ಎರಡು ವಿಧವಾಗಿದ್ದಾರೆ. ಅತೀಂದ್ರಿಯವಾದ ಈ ತತ್ತ್ವದ ವಿಷಯದಲ್ಲಿ ಅಪೌರುಷೇಯವಾದ ವೇದವನ್ನು ಪ್ರಮಾಣವೆಂದು ಅಂಗೀಕರಿಸುವವರು ಆಸ್ತಿಕದರ್ಶನಕಾರರು; ಇದನ್ನು ಪ್ರಮಾಣವೆಂದು ಒಪ್ಪದವರು ನಾಸ್ತಿಕದರ್ಶನಕಾರರು, ಚಾರ್ವಾಕರು, ಬೌದ್ಧರ ನಾಲ್ಕುಮತದವರು ಮತ್ತು ಜೈನರು—ಈ ಆರು ಮತದವರು ಸೇರಿ ಆರು ನಾಸ್ತಿಕದರ್ಶನಕಾರರು. ನ್ಯಾಯ—ವೈಶೇಷಿಕ, ಸಾಂಖ್ಯ-ಯೋಗ, ಮೀಮಾಂಸಾ–ವೇದಾಂತ,— ಈ ಆರೂ ಆಸ್ತಿಕದರ್ಶನಗಳು; ಇವರು ಅತೀಂದ್ರಿಯವಿಷಯಗಳಲ್ಲಿ ವೇದವನ್ನು ಪ್ರಮಾಣವೆಂದು ಸ್ವೀಕರಿಸುತ್ತಾರೆ.

ದಾರ್ಶನಿಕರು ತಾರ್ಕಿಕರೆಂದೂ, ಶ್ರೌತರೆಂದೂ ಎರಡು ವಿಧವಾಗಿದ್ದಾರೆ. ನಾಸ್ತಿಕರಿಗೆ ಶ್ರುತಿಪ್ರಮಾಣವಿಲ್ಲದ್ದರಿಂದ. ಅವರವರ ತರ್ಕವೇ ಅವರಿಗೆ ಪ್ರಮಾಣವಾಗಿ, ನಾಸ್ತಿಕರೆಲ್ಲರೂ ಕೇವಲ ತಾರ್ಕಿಕರೇ ಆಗಿರುತ್ತಾರೆ, ಆಸ್ತಿಕದರ್ಶನಕಾರರಲ್ಲಿಯೂ ವೇದಾಂತಿಗಳನ್ನು ಬಿಟ್ಟರೆ. ಇತರರೆಲ್ಲರೂ ತಮತಮಗೆ ಅಭಿಮತವಾದ ತರ್ಕದಿಂದ ಸಿದ್ಧಮಾಡಿಕೊಂಡಿರುವ ಅರ್ಥಕ್ಕೆ ಶ್ರುತಿಯ ಬೆಂಬಲವನ್ನು ಪಡೆಯುವುದರಲ್ಲಿ ಸಾಹಸಿಗಳಾಗಿರುತ್ತ, ಅವರು ವಸ್ತುತಃ ತಾರ್ಕಿಕರೇ ಆಗಿರುತ್ತಾರೆ. ದಾರ್ಶನಿಕರಲ್ಲಿ ತಾಂತ್ರಿಕರೆಂಬ ಇನ್ನೊಂದು ಪಂಗಡದವರೂ ಇದ್ದಾರೆ. ಇವರೂ ಸಹ ತಮಗೆ ಅಭಿಮತವಾದ ಪಾಂಚರಾತ್ರ, ಶೈವ, ಶಾಕ್ತ — ಮೊದಲಾದ ತಂತ್ರಗಳನ್ನೇ ತತ್ತ್ವವಿಷಯದಲ್ಲಿ ಪ್ರಮಾಣಗಳೆಂದು ಒಪ್ಪಿಕೊಂಡು; ಶ್ರುತಿಗೂ ಅದೇ ಅರ್ಥವು ಸಮ್ಮತವಾಗಿದೆಯೆಂದು ವಾದಿಸುತ್ತಾರೆ. ಇವರೂ ಶ್ರೌತಾರ್ಥವನ್ನು ಯಥಾವತ್ತಾಗಿ ಸ್ವೀಕರಿಸದಿರುವುದರಿಂದ ಮುಖ್ಯಶ್ರೌತರೆನಿಸುವುದಿಲ್ಲ, ಹೀಗಾಗಿ, ವೇದಾಂತಿಗಳೊಬ್ಬರೇ ಮುಖ್ಯವಾದ ಶ್ರೌತದಾರ್ಶನಿಕರು. ಪಾಶ್ಚಾತ್ಯರಂತೂ ಶುದ್ಧ ನಾಸ್ತಿಕರು,—ಕೇವಲ ಚಾರ್ವಾಕಮತದವರೇ ಆಗಿರುತ್ತಾರೆ, ಅತೀಂದ್ರಿಯ ವಿಷಯದಲ್ಲಿ ವೇದವಲ್ಲದೆ ಬೇರೆಯಾವುದೂ ಪ್ರಮಾಣವಾಗಲಾರದೆಂದು ನಿಶ್ಚಿತವಾದಮೇಲೆ, ವೇದದಿಂದ ಹೇಗೆ, ಏನು ತಿಳಿದುಬರುವುದೋ, ಅದನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಗೆಂದೇ ನಿಶ್ಚಿತವಾಗಿ ತಿಳಿಯಬೇಕು. 'ಅದು ಹೇಗೆ'—ಎಂದು ಮತ್ತೆ ಪ್ರಶ್ನೆಮಾಡುವುದಕ್ಕೆ ಕಾರಣವೇನು ? ಪ್ರಮಾಣಕ್ಕೆ ಪ್ರಮಾಣವನ್ನು ಕೇಳುವುದೆ ? ಇದು ಯಾವ ವಿಚಾರವೈಭವ ? "ವೈದಿಕಾರ್ಥೇ ಅನುಪಪದ್ಯಮಾನೇ ನ ವೈದಿಕಾನಾಂ ಮನಃ ಖಿದ್ಯತಿ; ಕಿಂತು ತದುಪಾಸನಮಾರ್ಗಮೇವ ಅನ್ವೇಷಯತಿ" — "ವೇದಪ್ರತಿಪಾದಿತವಾದ ಯಾವ ವಿಷಯವಾದರೂ ಸಮಂಜಸವಾಗಿ ಕಂಡುಬರದ ಪಕ್ಷದಲ್ಲಿ, ವೈದಿಕರು ಖೇದಪಡುವುದಿಲ್ಲ; ಮತ್ತೇನೆಂದರೆ, ಅದೇ ಸರಿಯೆಂದು ನಿರ್ಧರಿಸಿಕೊಂಡು ಅದನ್ನು ಸರಿಯಾಗಿ ತಿಳಿಯುವ ಪ್ರಯತ್ನ ಮಾಡುತ್ತಾರೆ"—ಎಂದು ಶ್ರೀವಿದ್ಯಾರಣ್ಯಗುರುಗಳು ಹೇಳಿರುತ್ತಾರೆ. ಆದಕಾರಣ, ಶ್ರುತಿಗೆ ವಿರುದ್ಧಗಳಾಗಿರುವ ಈ ಮತಗಳೆಲ್ಲವೂ, ಅಪ್ರಾಮಾಣಿಕಗಳೆಂದು ಸಿದ್ಧವು.

ವೇದಪ್ರಾಮಾಣಿಕರಾದ ಮೀಮಾಂಸಕರ ಮತವು ಹೀಗಿದೆ-"ಅತೀಂದ್ರಿಯ ವಿಷಯದಲ್ಲಿ ವೇದವೊಂದೇ ಪ್ರಮಾಣವು. ವೇದವು ತಾತ್ಪರ್ಯದಿಂದ ಏನನ್ನು ಪ್ರತಿಪಾದಿಸುವುದೋ, ಅದೇ ಪರಮಾರ್ಥವು. ಪ್ರತಿಯೊಬ್ಬರಿಗೂ ಬೇಕಾದುದು ಸುಖ, ಬೇಡವಾದದ್ದು ದುಃಖ. ಲೌಕಿಕಗಳಾದ ಪ್ರಯತ್ನಗಳಿಂದ ಆಗುವ ದುಃಖಪರಿಹಾರವೂ, ಸುಖಲಾಭವೂ ತೃಪ್ತಿಕರವಾಗುವುದಿಲ್ಲ. ಪ್ರವೃತ್ತಿನಿವೃತ್ತಿಗಳಿಂದಲೇ ಇದು ಸಿದ್ಧಿಸತಕ್ಕದ್ದಾಗಿದೆ. ಅಲೌಕಿಕ ತೃಪ್ತಿ ಸಾಧನಗಳಾದ ಪ್ರವೃತ್ತಿ ನಿವೃತ್ತಿ ರೂಪಗಳಾದ ಧರ್ಮಾಧರ್ಮಗಳನ್ನು ಬೋಧಿಸುವುದೇ ವೇದದ ಮುಖ್ಯತಾತ್ಪರ್ಯವಾಗಿರುತ್ತದೆ. ಇವು ವಿಧಿ ಮತ್ತು ನಿಷೇಧಗಳು. ವೇದದಲ್ಲಿ ನಿಷಿದ್ಧವಾಗಿರುವ ಪ್ರವೃತ್ತಿಯಿಂದ ನಿವೃತ್ತನಾಗಿ ವಿಹಿತವಾಗಿರುವ ಕರ್ಮಗಳಲ್ಲಿ ಪ್ರವೃತ್ತನಾಗುವುದರಿಂದ ಇಷ್ಟಾರ್ಥವು ಲಭಿಸುತ್ತದೆ. ವೇದದಲ್ಲಿ ಹೇಳಿರುವ ಇತರ ಎಲ್ಲ ವಿಷಯಗಳೂ ಈ ವಿಧಿನಿಷೇಧಗಳಿಗೆ ಶೇಷ (ಅಂಗ)ಗಳೇ ಹೊರತು, ಅವು ಮುಖ್ಯಗಳಾಗುವುದಿಲ್ಲ. ಆದ ಕಾರಣ ಬ್ರಹ್ಮದಲ್ಲಿ ವೇದಗಳಿಗೆ ತಾತ್ಪರ್ಯವೇ ಇರುವುದಿಲ್ಲ"--ಎಂದು.

ಮೀಮಾಂಸಕರ ಈ ಅಭಿಪ್ರಾಯವು ಪೂರ್ಣದೃಷ್ಟಿಯದಾಗಿಲ್ಲ. ವೇದವು ಕರ್ಮಕಾಂಡವೆಂದೂ ಜ್ಞಾನಕಾಂಡವೆಂದೂ ಎರಡುಕಾಂಡವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಭಕ್ತವಾಗಿದೆ. ಇವರು ಹೇಳಿರುವುದು ಕೇವಲ ಕರ್ಮಕಾಂಡದ ವಿಷಯ ಮಾತ್ರ. ಜ್ಞಾನಕಾಂಡವಾದ ಉಪನಿಷತ್ತುಗಳು ಸ್ವತಂತ್ರಗಳಾಗಿರುವುದರಿಂದ, ಇವುಗಳನ್ನು ಕರ್ಮಕಾಂಡಕ್ಕೆ ಅಧೀನವಾಗಿ ಮಾಡುವುದು ಯುಕ್ತವಲ್ಲ. ಪೂರ್ವಾಪರವಿಚಾರದಿಂದ ಕರ್ಮಕಾಂಡಕ್ಕೆ ಯಾವ ಅರ್ಥವು ನಿಶ್ಚಿತವಾಗುವುದೋ, ಹಾಗೆಯೇ ಜ್ಞಾನಕಾಂಡಕ್ಕೂ ಪೂರ್ವಾಪರವಿಚಾರದಿಂದ ಬ್ರಹ್ಮದಲ್ಲಿ ತಾತ್ಪರ್ಯವು ನಿಶ್ಚಿತವಾಗುತ್ತದೆ, ಜ್ಞಾನಕಾಂಡದಲ್ಲಿ ತೋರಿಬರುವ ಅರ್ಥವನ್ನು ಒಪ್ಪದಿದ್ದರೆ, ಕರ್ಮಕಾಂಡದಲ್ಲಿ ತೋರಿಬರುವ ಅರ್ಥವನ್ನು ಒಪ್ಪುವುದಕ್ಕೆ ಕಾರಣವೇನು ? ಕರ್ಮಕಾಂಡದಲ್ಲಿ ಪ್ರತಿಪಾದಿತವಾಗಿರುವ ಅರ್ಥವನ್ನು ಸ್ವೀಕರಿಸುವುದಾದರೆ, ಅದೇ ನ್ಯಾಯದಿಂದ ಜ್ಞಾನಕಾಂಡದಲ್ಲಿ ಪ್ರತಿಪಾದಿತವಾಗಿರುವ ಅರ್ಥವನ್ನೂ ಸ್ವೀಕರಿಸುವುದು ನಿಷ್ಪಕ್ಷಪಾತವಿಚಾರಪರರಿಗೆ ಯೋಗ್ಯವು.

ವಸ್ತುತಃ ವಿಚಾರಮಾಡಿದರೆ—"**ಸರ್ವೇ ವೇದಾಃ ಯತ್ಪದಮಾಮನಂತಿ; ವೇದೈಶ್ಚ ಸರ್ವೈರಹಮೇವ ವೇದ್ಯಃ**"—"ಎಲ್ಲ ವೇದಗಳೂ ಯಾವ ಪದವನ್ನು ಹೇಳುತ್ತವೋ; ಎಲ್ಲ ವೇದಗಳಿಂದಲೂ ನಾನೇ ತಿಳಿಯಲ್ಪಡುವನು"—ಎಂದು ಮುಂತಾದ ಶ್ರುತಿಸ್ಮೃತಿಗಳು, ವೇದಶಾಸ್ತ್ರಕ್ಕೆಲ್ಲ ಜ್ಞಾನಕಾಂಡಪ್ರತಿಪಾದ್ಯನಾದ ಪರಮಾತ್ಮನಲ್ಲಿಯೇ ಪರಮತಾತ್ಪರ್ಯವೆಂದು ಬೋಧಿಸುತ್ತವೆ. **ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತಿ ಯಜ್ಞೇನ ದಾನೇನ ತಪಸಾನಾಶಕೇನ।** —"ವೇದಾಧ್ಯಯನ, ಯಜ್ಞ, ದಾನ, ತಪಸ್ಸು ಮುಂತಾದ ಸಾಧನೆಗಳಿಂದ ಬ್ರಾಹ್ಮಣರು ಈ ಪರಮಾತ್ಮನನ್ನು ಅರಿಯಲು ಪ್ರಯತ್ನಿಸುತ್ತಾರೆ"— ಎಂದು ಮುಂತಾದ ಶ್ರುತಿವಾಕ್ಯಗಳಿಂದ, ಕರ್ಮಕಾಂಡದಲ್ಲಿ ಪ್ರತಿಪಾದಿತವಾಗಿರುವ ಯಜ್ಞಾದಿಗಳು ಜ್ಞಾನಕಾಂಡಪ್ರತಿಪಾದ್ಯವಾಗಿರುವ ಪರಮಾತ್ಮಜ್ಞಾನಕ್ಕೆ ಸಾಧನೆಗಳೆಂದು ತಿಳಿದುಬರುತ್ತವೆ. ಹೀಗೆ ಕರ್ಮಕಾಂಡವು ಜ್ಞಾನಕಾಂಡಕ್ಕೆ ಶೇಷವಾಗಿದ್ದು ಪ್ರಮಾಣವಾಗಿದೆ. ಮೀಮಾಂಸಕರ ಮತವಲ್ಲಿಯಾದರೋ, ಜ್ಞಾನಕಾಂಡವು ಅಪ್ರಮಾಣವಾಗುವುದು. ಹೀಗೆ, ವೇದದಲ್ಲಿ ಒಂದು ಭಾಗವಾದ ಜ್ಞಾನಕಾಂಡವು ಅಪ್ರಮಾಣವಾದರೆ, ಇನ್ನೊಂದು

CC-O. In Public Domain. Digitized by eGangotri

ಭಾಗವಾದ ಕರ್ಮಕಾಂಡವೂ ಅಪ್ರಮಾಣವೇ ಆದೀತು! ಆದುದರಿಂದ ಮೀಮಾಂಸಕರ ಈ ಮತವು ಯುಕ್ತವಲ್ಲ.

ವೇದಾಂತವ್ಯತ್ತಿರಿಕ್ತಗಳಾದ ಈ ಮತಗಳೆಲ್ಲವೂ ಅಸಂಗತಗಳೆಂಬುದಕ್ಕೆ ಕಾರಣವನ್ನು ಹೇಳುತ್ತಾರೆ—ವಿಶುದ್ಧಾತ್ಮಕತ್ವಾತ್ ಎಂದು. ಅವಿದ್ಯಾ-ಅದರಕಾರ್ಯ ಎಂಬ ಎಲ್ಲ ಉಪಾಧಿಗಳೂ ಇಲ್ಲದೆ, ಅತ್ಯಂತ ಪರಿಶುದ್ಧವಾದ, ನಿರ್ವಿಕಲ್ಪಾದ್ವಿತೀಯಸಚ್ಚಿದಾನಂದಮಾತ್ರರೂಪವಾಗಿರುವುದರಿಂದ—ಎಂದು ಅರ್ಥವು. ಅದು ಹೇಗೆ?—ಎಂದರೆ ವಿಶಿಷ್ಟಾನುಭೂತ್ಯಾ- ಎಂದು. 'ತತ್ತ್ವಮಸಿ'—ಮುಂತಾದ ವೇದಾಂತಮಹಾವಾಕ್ಯಗಳ ಅರ್ಥದ ಶ್ರವಣಮನನನಿದಿಧ್ಯಾಸಗಳ ಪರಿಪಾಕದಿಂದ ಲಭಿಸಿದ ಅಖಂಡಾನುಭವದಿಂದ ಇಂಥ ಸ್ವರೂಪವು ಸಿದ್ಧಿಸಿರುವುದೆಂದು ತಾತ್ಪರ್ಯವು. ವಿದ್ವನುಭವವು ಈ ವಿಷಯದಲ್ಲಿ ಪ್ರಮಾಣವಾಗಿದೆ.

ತತ್ತ್ವದ ಅನುಭವವು ಇಲ್ಲಿಯೇ ಲಭಿಸುವುದೆಂದು ಬೇರೆ ಯಾವ ಮತವೂ ಹೇಳುವುದಿಲ್ಲ; ಉತ್ತಮಸಾಧನೆಯನ್ನು ಮಾಡಿದರೂ, ಅವರು ಹೇಳುವ ತತ್ತ್ವವೂ ಜನ್ಮಾಂತರದಲ್ಲಿಯೇ ದೊರಕುವುದೆಂದೇ ಇತರ ಎಲ್ಲ ಮತದವರೂ ಹೇಳುತ್ತಾರೆ. ವೇದಾಂತಮತದಲ್ಲಾದರೋ ಈ ಅನುಭವವು ಈಗಲೇ ಇಲ್ಲಿಯೇ ಸಿದ್ಧಿಸುತ್ತದೆ—ಸಾಧನಪರಿಪಾಕದಿಂದ, ತತ್ತ್ವಾನುಭವವನ್ನು ಸಾಧಿಸಿಕೊಂಡವನು ಜೀವನ್ಮುಕ್ತನೆನಿಸುವನು. ಜೀವನ್ಮುಕ್ತಿಯನ್ನು ಇತರ ಯಾವ ಮತದವರೂ ಒಪ್ಪುವುದಿಲ್ಲ. ಹೀಗಾಗಿ ಇತರಮತಗಳಲ್ಲಿ ಕೇವಲ ಅಜ್ಞಪರಂಪರೆಯು ಇರುವುದೇ ಹೊರತು, ವಿದ್ವತ್ಪರಂಪರೆಯಿರುವುದಿಲ್ಲ.—'ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ'।"ಜ್ಞಾನಿಗಳು; ಜ್ಞಾನಿಗಳೆಂದರೆ ತತ್ತ್ವವನ್ನು ಶಾಸ್ತ್ರದಿಂದ ಪರೋಕ್ಷವಾಗಿಮಾತ್ರ ತಿಳಿದವರಲ್ಲ; 'ತತ್ತ್ವದರ್ಶಿಗಳು'—ತತ್ತ್ವದ ಸಾಕ್ಷಾದನುಭವವನ್ನು ಪಡೆದವರು; ಇಂಥವರೇ ಪಾರಮಾರ್ಥಿಕಪರಬ್ರಹ್ಮತತ್ತ್ವಜ್ಞಾನವನ್ನು ಇತರರಿಗೆ ಉಪದೇಶಮಾಡಲು ಸಮರ್ಥರು'–"ಎಂದು ಶ್ರೀಭಗವಂತನು ಸ್ಪಷ್ಟವಾಗಿ ತಿಳಿಸಿರುತ್ತಾನೆ. ಇದರಿಂದಲೂ ವೇದಾಂತದರ್ಶನವೇ ಪಾರಮಾರ್ಥಿಕವೆಂಬು ದೃಢಪಡುವುದು.

Sri Vidyabharathi Bangalore

CC-O. In Public Domain. Digitized by eGangotri

ಜೀವನ್ಮುಕ್ತಿಯೆಂದೂ ವಿದೇಹಮುಕ್ತಿಯೆಂದೂ ಮುಕ್ತಿಯು ಎರಡು ವಿಧ. ತತ್ತ್ವಾನುಭವವು ಉಂಟಾದಮೇಲೂ, ಪ್ರಾರಬ್ಧಕರ್ಮದ ಬಲದಿಂದ ದೇಹಧಾರಣೆಮಾಡಿಕೊಂಡಿರುವ ಸ್ಥಿತಿಯು ಜೀವನ್ಮುಕ್ತಿಯು. ಪ್ರಾರಬ್ಧಕರ್ಮವು ಅದರ ಫಲದ ಅನುಭವದಿಂದ ತೀರಲು, ದೇಹವು ನಾಶವಾದಾಗ, ವಿದೇಹಕೈವಲ್ಯವು ಸಿದ್ಧಿಸುವುದು.

"ವೇದಾಂತಶಾಸ್ತ್ರವನ್ನು ಅಧ್ಯಯನಮಾಡಿ, ಬ್ರಹ್ಮಾತ್ಮತ್ವವೇ ಪಾರಮಾರ್ಥಿಕವೆಂದು ದೃಢವಾದ ನಿಶ್ಚಯವು ಉಂಟಾಗಿರುವುದರಿಂದ, ಇದರ ಅನುಭವವು ಈಗ ಸಿದ್ಧವಾಗದೆ ಜೀವನ್ಮುಕ್ತಿಯು ಇಲ್ಲವಾದರೂ, ಈ ದೇಹವು ಹೋದ ನಂತರ ವಿದೇಹಕೈವಲ್ಯವು ತಾನಾಗಿಯೇ ಲಭಿಸುವುದು."—ಎಂದು ವೇದಾಂತವನ್ನು ಓದಿರುವವರೆಲ್ಲರೂ ಸಾಮಾನ್ಯವಾಗಿ ತಿಳಿಯುತ್ತಾರೆ. ಇದು ಶುದ್ಧಭ್ರಾಂತಿಯೇ ಸರಿ. ಜೀವನ್ಮುಕ್ತಿಯು ಸಿದ್ಧಿಸದೆ, ವಿದೇಹಮುಕ್ತಿಯು ಸಿದ್ಧಿಸಲೇ ಆರದು. ಇಹ ಚೇದವೇದೀದಥ ಸತ್ಯಮಸ್ತಿ, ನ ಚೇದಿಹಾವೇದೀನ್ಮಹತೀ ವಿನಷ್ಟಿಃ—"ಈ ಜನ್ಮದಲ್ಲಿಯೇ ತತ್ತ್ವಾನುಭವವನ್ನು ಪಡೆದರೆ, ಶ್ರೇಯಸ್ಸು; ಇಲ್ಲಿ ಅನುಭವವನ್ನು ಪಡೆಯದಿದ್ದರೆ, ಮಹತ್ತರವಾದ ಸಂಸಾರಾನರ್ಥವೇ ಗತಿ"—ಎಂದು ಶ್ರುತಿಯು ತಿಳಿಸುತ್ತದೆ; ಇಹೈವ ತೈರ್ಜಿತಃ ಸರ್ಗಃ ಯೇಷಾಂ ಸಾಮ್ಯೇ ಸ್ಥಿತಂ ಮನಃ। "ಯಾರ ಮನಸ್ಸು ಬ್ರಹ್ಮದಲ್ಲಿಯೇ ಸ್ಥಿರತೆಯನ್ನು ಪಡೆದು ಅನುಭವವನ್ನು ಹೊಂದುವುದೋ, ಅವರು ಇಲ್ಲಿಯೇ ಜನ್ಮವನ್ನು ಕಳೆದುಕೊಳ್ಳುವರು"—ಎಂದು ಆ ಭಗವಂತನೂ ಹೇಳಿರುತ್ತಾನೆ. ತತ್ತ್ವದ ಅನುಭವವಿಲ್ಲದೆ ಮುಕ್ತಿಯು ದೊರೆಯದು; ಸಾಧನವಿಲ್ಲದೆ ಅನುಭವವು ಸಿದ್ಧಿಸದು; ಪರೋಕ್ಷನಿಶ್ಚಯವು ಅನುಭವವನ್ನು ಉಂಟುಮಾಡುವುದಿಲ್ಲ. ಆದ್ದರಿಂದ, ಜೀವನ್ಮುಕ್ತಿಯನ್ನು ಸಾಧಿಸಿಕೊಳ್ಳುವುದು ಅತ್ಯವಶ್ಯಕ; ತತ್ತ್ವಾನುಭವದಿಂದಲೇ ಜೀವನ್ಮುಕ್ತಿಯು ಸಿದ್ಧಿಸುವುದು. ಆದಕಾರಣ ತತ್ತ್ವಾನುಭವವು ಇಲ್ಲಿಯೇ ಸಿದ್ಧಿಸುವುದಕ್ಕೆ ತಕ್ಕ ಸಾಧನೆಗಳನ್ನು ಪೂರ್ಣವಾಗಿ ಈಗಲೇ ಅಭ್ಯಾಸಮಾಡಬೇಕು.

ಸ ಏಷೋಽಣಿಮಾ—'ಈ ಪರಮಾತ್ಮನು ಅಣುಸ್ವರೂಪನು'—ಎಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಮಾತ್ಮನನ್ನು ಅಣುಸ್ವರೂಪನೆಂದು ಶ್ರುತಿಯು ಹೇಳುತ್ತಿದೆ. ಹಾಗೆಯೇ ಜೀವನನ್ನು ಕುರಿತು – **ಅಂಗುಷ್ಠಮಾತ್ರಃ ಪುರುಷಃ**—"ಈ ಪುರುಷನು ಅಂಗುಷ್ಠದ ಪರಿಮಾಣನು"— ಪರಿಚ್ಛಿನ್ನಸ್ವರೂಪನು—ಎಂದು ತಿಳಿಸುತ್ತದೆ. ಹೀಗೆ ಜೀವಪರಮಾತ್ಮರೀರ್ವರೂ ಪರಿಚ್ಛಿನ್ನರೆಂದು ಶ್ರುತಿಯು ಹೇಳುತ್ತಿರುವಾಗ, ಅದ್ವಿತೀಯತತ್ತ್ವವೂ ಹೇಗೆ ಸಿದ್ಧಿಸುತ್ತದೆ ?—ಎಂದು ಶಂಕಿಸಿದರೆ —ಆತ್ಮನನ್ನು ಅಖಂಡಸ್ವರೂಪನೆಂದು ಪ್ರತಿಪಾದಿಸುತ್ತಾರೆ—

ನ ಚೋರ್ಧ್ವಂ ನ ಚಾಧೋ ನ ಚಾಂತರ್ನ ಬಾಹ್ಯಂ
ನ ಮಧ್ಯಂ ನ ತಿರ್ಯಙ್ನ ಪೂರ್ವಾಪರಾ ದಿಕ್ ।
ವಿಯದ್ವ್ಯಾಪಕತ್ವಾದಖಂಡೈಕರೂಪಃ
ತದೇಕೋऽವಶಿಷ್ಟಃ ಶಿವಃ ಕೇವಲೋऽಹಂ ॥ ೫ ॥

ಊರ್ಧ್ವಂ ಚ ನ – ಮೇಲೆ ಎಂಬುದಿಲ್ಲ ; **ಅಧಶ್ಚ ನ**—ಕೆಳಗೆ ಎಂಬುದೂ ಇಲ್ಲ **ಅಂತಶ್ ಚ ನ**–ಒಳಗೆಂಬುದೂ ಇಲ್ಲ; **ಬಾಹ್ಯಂ ನ**–ಹೊರಗೆಂಬುದೂ ಇಲ್ಲ; **ಮಧ್ಯಂ ನ**– ಮಧ್ಯವೆಂಬುದೂ ಇಲ್ಲ; **ತಿರ್ಯಕ್ ನ** – ಅಡ್ಡವೆಂಬುದೂ ಇಲ್ಲ; **ಪೂರ್ವಾಪರಾ ದಿಕ್ ನ** – ಪೂರ್ವಪಶ್ಚಿಮ ಎಂಬ ದಿಗ್ವಿಭಾಗವೂ, ಇಲ್ಲ; **ವಿಯದ್ವ್ಯಾಪಕತ್ವಾತ್** – ಆಕಾಶವನ್ನೂ ವ್ಯಾಪಿಸಿಕೊಂಡಿರುವುದರಿಂದ; **ಅಖಂಡೈಕರೂಪಃ** – ಅಪರಿಚ್ಛಿನ್ನಸ್ವರೂಪವೇ ಆಗಿದೆ; **ತದೇಕೋऽವಶಿಷ್ಟಃ ಶಿವಃ ಕೇವಲೋऽಹಂ** – ಆದ್ದರಿಂದ, ನಿರ್ವಿಶೇಷಾದ್ವಿತೀಯಕೂಟಸ್ಥ ನಿತ್ಯಸಚ್ಚಿದಾನಂದಸ್ವರೂಪನೇ ನಾನು.

ವಿಯದ್ವ್ಯಾಪಕತ್ವಾತ್ । – **ಆಕಾಶವತ್ಸರ್ವಗತಶ್ಚ ನಿತ್ಯಃ** – 'ಆಕಾಶದಂತೆ ಸರ್ವಗತವೂ ನಿತ್ಯವೂ ಆಗಿದೆ'—ಎಂದು ಪರಮಾತ್ಮನನ್ನು ಸರ್ವಗತನೆಂದು ಶ್ರುತಿಯ ತಿಳಿಸುತ್ತದೆ. 'ಆಕಾಶದಂತೆ'—ಎಂದು ದೃಷ್ಟಾಂತವನ್ನು ಹೇಳಿರುವುದು, ಲೋಕಸೃಷ್ಟಿಯನ್ನು ಅನುಸರಿಸಿ. ಹದಿನಾಲ್ಕುಲೋಕಗಳ ಬ್ರಹ್ಮಾಂಡವೂ ಆಕಾಶದಲ್ಲಿಯೇ ಇದೆ. ಆಕಾಶವಿಲ್ಲದ ಸ್ಥಳವಿಲ್ಲ; ಹೀಗೆ ಆಕಾಶವು ಸರ್ವಗತವೆಂಬುದು ಲೋಕದಲ್ಲಿ ಪ್ರಸಿದ್ಧಿಯಿದೆ, ಆಕಾಶವೂ

Sri Vidyaranya Bharathi Book Gallery, Sringeri

CC-O. In Public Domain. Digitized by eGangotri

ಪರಮಾತ್ಮನ ಕಾರ್ಯವಾಗಿರುವುದರಿಂದ, ಅದು ವಸ್ತುತಃ ಪರಿಚ್ಛಿನ್ನವೂ ಅನಿತ್ಯವೂ ಆಗಿದೆ. ಅಥವಾ ವಿಯದಾ್ಯಃ ಪ್ರಕತ್ವಾತ್ ಎಂದರೆ, "ಆಕಾಶವನ್ನೂ ವ್ಯಾಪಿಸಿಕೊಂಡಿರುವುದರಿಂದ—" ಎಂದು ಅರ್ಥವು. ಪರಮಾತ್ಮನಿಂದ ಹುಟ್ಟಿರುವ ಪಂಚಭೂತಗಳಲ್ಲಿ ಆಕಾಶವು ಮೊದಲನೆಯದು. ಆಕಾಶದಿಂದ ವಾಯು, ತೇಜಸ್ಸು ಮುಂತಾದ ಇತರ ಭೂತಗಳು ಹುಟ್ಟಿರುತ್ತವೆ. ಕಾರ್ಯಕ್ಕಿಂತಲೂ ಕಾರಣವು ವ್ಯಾಪಕವೂ ನಿತ್ಯವೂ ಆಗಿರುತ್ತದೆ. ಇತರ ಎಲ್ಲ ಕಾರ್ಯಗಳಿಗಿಂತಲೂ ಆಕಾಶವು ವ್ಯಾಪಕವೂ ನಿತ್ಯವೂ ಆಗಿದೆಯೆಂದು ಇದರಿಂದ ಸ್ಪಷ್ಟವಾಗುವುದು. ಇಂಥ ಆಕಾಶಕ್ಕೂ ಮೂಲಕಾರಣವಾಗಿರುವ ಬ್ರಹ್ಮವು ನಿರತಿಶಯವ್ಯಾಪಕವೂ, ನಿರತಿಶಯನಿತ್ಯವೂ ಆಗಿರುವುದೆಂಬುದು ಅವಚನಸಿದ್ಧವು. ಆದಕಾರಣ ಪರಮಾತ್ಮನು ಅಖಿಂಡಸ್ವರೂಪವಾಗಿರುತ್ತಾನೆ. ಶ್ರುತಿಯಲ್ಲಿ ಪರಮಾತ್ಮನನ್ನು 'ಅಣು' ಎಂದು ಹೇಳಿರುವುದು, ಅತೀಂದ್ರಿಯವೂ ಪ್ರಮಾಣಾತೀತವೂ ಆಗಿರುವನೆಂಬ ಅಭಿಪ್ರಾಯದಿಂದಲೇ ಹೊರತು; ಅಣುಪರಿಮಾಣನೆಂಬ ಅಭಿಪ್ರಾಯದಿಂದಲ್ಲ. ಇಂದ್ರಿಯಗೋಚರವಾಗುವುದೆಲ್ಲ ರೂಪಸ್ಪರ್ಶಾದಿ ಗುಣವತ್ತಾಗಿರುತ್ತದೆ. ಗುಣಗಳು ಹೆಚ್ಚಾದಂತೆ ಆ ವಸ್ತುವು ಸ್ಥೂಲವಾಗುತ್ತದೆ. ಪಂಚಗುಣಗಳನ್ನುಳ್ಳ ಪೃಥಿವಿಯು ಅತ್ಯಂತ ಸ್ಥೂಲವಾಗಿದೆ; ನಾಲ್ಕುಗುಣಗಳ ಜಲವು ಅದಕ್ಕಿಂತ ಸೂಕ್ಷ್ಮ; ಮೂರುಗುಣಗಳ ತೇಜಸ್ಸು ಸೂಕ್ಷ್ಮತರ; ಎರಡೇಗುಣಗಳಿರುವ ವಾಯು ಸೂಕ್ಷ್ಮತಮ; ಶಬ್ದಮಾತ್ರಗುಣದ ಆಕಾಶವು ಅತಿಸೂಕ್ಷ್ಮ—ಪ್ರತ್ಯಕ್ಷವೇ ಅಲ್ಲ; ಹೀಗಿರುವಾಗ ಯಾವ ಗುಣವೂ ಇಲ್ಲದ ನಿರ್ಗುಣಪರಮಾತ್ಮನು ನಿರತಿಶಯಸೂಕ್ಷ್ಮನು—ಎಂಬ ಅಭಿಪ್ರಾಯದಿಂದ ಅವನನ್ನು ಅಣುವೆಂದು ಹೇಳಿರುತ್ತದೆ. ಮತ್ತು, ಅತ್ಯಂತಸೂಕ್ಷ್ಮವಾದ ಏಕಾಗ್ರವಾದ ಬುದ್ಧಿಯಿಂದಲೇ ಬ್ರಹ್ಮತತ್ತ್ವವು ಗ್ರಹಿಸಲ್ಪಡುತ್ತದೆಂದೂ ಇದರ ಅಭಿಪ್ರಾಯವಾಗಿದೆ.

ಜೀವನು ಪಾದಾಂಗುಷ್ಠದಿಂದ ಶಿರಸ್ಸಿನವರೆಗಿನ ಸರ್ವಶರೀರವನ್ನೂ ವ್ಯಾಪಿಸಿಕೊಂಡಿರುವುದು ಎಲ್ಲರ ಅನುಭವಸಿದ್ಧವೇ ಆಗಿರುವುದರಿಂದ 'ಅಂಗುಷ್ಠಮಾತ್ರನೆಂದು ಅವನನ್ನು ಶ್ರುತಿಯು ಹೇಳಿರುವುದನ್ನು ಯಥಾಶ್ರುತವಾಗಿ ತಿಳಿಯಬಾರದು. ಮತ್ತೇನೆಂದರೆ—ಅಂತಃಕರಣದಲ್ಲಿ ಪ್ರತಿಬಿಂಬಿಸಿರುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಆತ್ಮಚೈತನ್ಯವೇ ಜೀವನಾದ್ದರಿಂದ, ಜೀವನಿಗೆ ಅಂತಃಕರಣವು ಉಪಾಧಿಯಾಗಿದೆ; ಈ ಅಂತಃಕರಣವು ಹೃದಯಪ್ರದೇಶದಲ್ಲಿ ಇರುವಂಥದ್ದು; ಹೃದಯವು ಅಂಗುಷ್ಠದ ಪರಿಮಾಣದ್ದು. ಅಂಗುಷ್ಠಪರಿಮಾಣದ ಹೃದಯದಲ್ಲಿರುವ ಅಂತಃಕರಣದ ಉಪಾಧಿಯುಳ್ಳವನಾಗಿರುವುದರಿಂದ, ಈ ಉಪಾಧಿಯ ದೃಷ್ಟಿಯಿಂದ, ಜೀವನನ್ನು ಅಂಗುಷ್ಠಮಾತ್ರನೆಂದು ಹೇಳಿರುತ್ತದೆಂದು ತಿಳಿಯತಕ್ಕದ್ದು.

ಪರಮಾತ್ಮನಿಗೆ ಬ್ರಹ್ಮಶಬ್ದವೂ, ಆತ್ಮನಿಗೆ ಆತ್ಮಶಬ್ದವೂ ಅನ್ವರ್ಥವಾದದ್ದು. "ಬೃಹ ಬೃಹಿ ವೃದ್ಧೌ"—ಎಂಬ ಧಾತುವಿನಿಂದ ಬ್ರಹ್ಮಶಬ್ದವು ಆಗಿರುವುದರಿಂದ ಬ್ರಹ್ಮಶಬ್ದಕ್ಕೆ ದೊಡ್ಡವಸ್ತುವೆಂದು ಅರ್ಥವು. 'ಇಷ್ಟು ದೊಡ್ಡದು'—ಎಂದು ಹೇಳದಿರುವುದರಿಂದಲೂ, ಅರ್ಥವನ್ನು ಸಂಕೋಚ ಮಾಡುವುದಕ್ಕೆ ಕಾರಣವಿಲ್ಲದಿರುವುದರಿಂದಲೂ, ಬ್ರಹ್ಮವು ನಿರತಿಶಯ ಮಹತ್ತಾದುದೆಂದು ಶಬ್ದದಿಂದಲೇ ತಿಳಿದುಬರುತ್ತದೆ.

ಬ್ರಹ್ಮವು ಸಕಲಪ್ರಪಂಚಕ್ಕೂ ಉಪಾದಾನಕಾರಣವು. ಕಾರ್ಯಗಳು ಒಂದಕ್ಕೊಂದು ಬೇರೆಬೇರೆಯಾಗಿರುತ್ತದೆಯಾದರೂ, ಯಾವಕಾರ್ಯವೂ ತನ್ನ ಉಪಾದಾನಕಾರಣಕ್ಕೆ ಬೇರೆಯಾಗಿರುವುದಿಲ್ಲ. ಮಣ್ಣಿನಿಂದ ಆಗಿರುವ ಗಡಿಗೆ, ಕುಡಿಕೆ, ಹರವಿ ಮುಂತಾದವುಗಳು ಬೇರೆಬೇರೆ ವಸ್ತುಗಳು—ಗಡಿಗೆ ಕುಡಿಕೆಯಲ್ಲ, ಹರವಿಯಲ್ಲ,—ಆದರೆ, ಗಡಿಗೆಯಾಗಲಿ, ಕುಡಿಕೆಯಾಗಲಿ, ಹರವಿಯಾಗಲಿ, ಮಣ್ಣಲ್ಲವೆಂದಾಗುವುದಿಲ್ಲ. ಮಣ್ಣಿನಿಂದ ಬೇರೆಮಾಡಿದರೆ, ಇವು ಶೂನ್ಯವೇ ಆಗುತ್ತವೆ; ಇವೆಲ್ಲವೂ ಮಣ್ಣೇ ಹೊರತು, ಬೇರೆ ಸ್ವತಂತ್ರವಸ್ತುಗಳಲ್ಲ. ಇದರಂತೆ ಬ್ರಹ್ಮಕ್ಕೆ ಬೇರೆಯಾಗಿ ಏನೊಂದೂ ಇರುವುದಿಲ್ಲವಾಗಿ, ಬ್ರಹ್ಮವು ಅಪರಿಚ್ಛಿನ್ನಸ್ವರೂಪವಾಗಿದೆ. ಸತ್ಯಂ ಜ್ಞಾನಮನಂತಂ ಬ್ರಹ್ಮ—ಎಂದು ಶ್ರುತಿಯು ಬ್ರಹ್ಮವನ್ನು ಅನಂತವೆಂದು ಹೇಳುತ್ತದೆ. ಅನಂತವೆಂದರೆ ಅಂತವಿಲ್ಲದ್ದು ಎಂದರ್ಥ. ಅಂತವೆಂದರೆ ಪರಿಚ್ಛೇದ. ದೇಶತಃ ಕಾಲತಃ ವಸ್ತುತಃ—ಎಂದು ಪರಿಚ್ಛೇದವು ಮೂರುವಿಧವಾಗಿದೆ. ಒಂದು ದೇಶ (ಸ್ಥಳ)ದಲ್ಲಿದ್ದು ಮತ್ತೊಂದು ದೇಶದಲ್ಲಿ ಇಲ್ಲದ ವಸ್ತುವು ದೇಶಪರಿಚ್ಛಿನ್ನ—

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗುವುದು. ಹಾಗೆಯೇ ಒಂದು ಕಾಲದಲ್ಲಿದ್ದು ಕಾಲಾಂತರದಲ್ಲಿ ಇಲ್ಲವಾಗುವುದು ಕಾಲಪರಿಚ್ಛಿನ್ನವು; ಒಂದು ವಸ್ತುವಾಗಿದ್ದು ಮತ್ತೊಂದಾಗದುದು ವಸ್ತುಪರಿಚ್ಛಿನ್ನವಾಗುವುದು. ಬ್ರಹ್ಮವು ಮೂಲಕಾರಣವಾಗಿರುವುದರಿಂದ ನಿತ್ಯವೂ, ಸರ್ವಕಾರ್ಯವ್ಯಾಪಕವೂ, ಸರ್ವಕಾರ್ಯರೂಪವಾಗಿ ಸರ್ವಾತ್ಮಕವೂ ಆಗಿರುವುದರಿಂದ, ದೇಶಕಾಲವಸ್ತುಪರಿಚ್ಛೇದರಹಿತವಾದ ಅಖಂಡವಸ್ತುವಾಗಿರುತ್ತದೆ. ಬ್ರಹ್ಮಕ್ಕೆ ಬೇರೆಯಾಗಿ ಏನೊಂದನ್ನು ಇದೆಯೆಂದು ಒಪ್ಪಿದರೂ, ಅದರಿಂದ ಬ್ರಹ್ಮಕ್ಕೆ ಪರಿಚ್ಛೇದವು ಉಂಟಾಗಿ, ಅದರ ಬ್ರಹ್ಮತ್ವಕ್ಕೇ ಹಾನಿಯಾಗುವುದು. ಆದ್ದರಿಂದ ಬ್ರಹ್ಮವು ಅದ್ವಿತೀಯಸ್ವರೂಪವೆಂದು ನಿಶ್ಚಿತವಾಗುವುದು.

ಕಾರ್ಯಪ್ರಪಂಚವು ಕಾರಣವಾದ ಬ್ರಹ್ಮಕ್ಕೆ ಬೇರೆಯಲ್ಲವಾಗಿ ಮಿಥ್ಯಾಭೂತವಾದ್ದರಿಂದ, ಬ್ರಹ್ಮದ ಪಾರಮಾರ್ಥಿಕವಾದ ಅದ್ವೈತರೂಪಕ್ಕೆ ಬಾಧಕವೇನೂ ಇರುವುದಿಲ್ಲ. ಜೀವನು ಬ್ರಹ್ಮದ ಕಾರ್ಯವಲ್ಲ; ಆವನು ಬ್ರಹ್ಮಕ್ಕೆ ಬೇರೆಯೆಂದಾದರೆ, ಬ್ರಹ್ಮನ ಅದ್ವಿತೀಯತ್ವಕ್ಕೆ ಭಂಗವುಂಟಾಗುವುದು. ಆದ್ದರಿಂದ ಜೀವನು ಪರಮಾರ್ಥವಾಗಿ ಬ್ರಹ್ಮಸ್ವರೂಪನೇ ಎಂದು ಆವಶ್ಯ ಒಪ್ಪಬೇಕು.

ಇದಲ್ಲದೆ, ಆತ್ಮಶಬ್ದಕ್ಕೂ ವ್ಯಾಪಕಚೈತನ್ಯವೆಂದೇ ಅರ್ಥವು. 'ಅತತೀತ್ಯಾತ್ಮಾ'—ಎಂದು ಆತ್ಮಶಬ್ದದ ವ್ಯುತ್ಪತ್ತಿಯನ್ನು ಹೇಳುತ್ತಾರೆ. ಪರಿಚ್ಛಿನ್ನವಾದುದೆಲ್ಲ ಜಡವೂ, ಅನಾತ್ಮವೂ, ವಿಕಾರಿಯೂ, ನಶ್ವರವೂ ಆಗಿರುತ್ತದೆ. ಆತ್ಮನು ಪರಿಚ್ಛಿನ್ನನೆಂದಾದರೆ, ಆವನು ಆತ್ಮವಾಗದೆ ಅನಾತ್ಮವೇ ಆಗುವನು. ಆದಕಾರಣ ಆತ್ಮನು ಆತ್ಮನಾಗಬೇಕಾದರೆ ಅಪರಿಚ್ಛಿನ್ನನೇ ಆಗಿರಬೇಕು. ಆತ್ಮನಿಗೆ ಬೇರೆಯಾಗಿ ಏನನ್ನು ಒಪ್ಪಿದರೂ, ಆತ್ಮನ ಆತ್ಮತ್ವಕ್ಕೇ ವಿರೋಧವುಂಟಾಗುವುದು. ಆದ್ದರಿಂದ ಆತ್ಮನಿಗೆ ಬೇರೆಯಾಗಿ ಪರಮಾತ್ಮನನ್ನೂ ಒಪ್ಪಲಾಗುವುದಿಲ್ಲ. ಸರ್ವವ್ಯಾಪಕವಾಗಿ ಎರಡು ವಸ್ತುಗಳು ಇರುವುದು ಸಾಧ್ಯವೇ ಇಲ್ಲ. ಆದ್ದರಿಂದ ಆತ್ಮನು ಅಖಂಡಚಿನ್ಮಾತ್ರಬ್ರಹ್ಮಸ್ವರೂಪನೆಂದು ಸ್ಪಷ್ಟವಾಗಿ ಸಿದ್ಧಿಸುವುದು—ಶೆ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಬ್ರಹ್ಮವು ಜಗತ್ತಿಗೆಲ್ಲಕ್ಕೂ ಉಪಾದಾನಕಾರಣವಾಗಿದೆ. ಆದ್ದರಿಂದ ಅದರ ಕಾರ್ಯವಾದ ಜಗತ್ತಿಗೆ ಬ್ರಹ್ಮವು ಅಭಿನ್ನವಾಗಿದೆ, ದುಃಖರೂಪವಾಗಿರುವ ಜಗತ್ತಿಗೆ ಅಭಿನ್ನವಾದ ಬ್ರಹ್ಮವೂ ದುಃಖರೂಪವಾಗುತ್ತದೆ. ಹೀಗಾದರೆ, ಬ್ರಹ್ಮದ ಪ್ರಾಪ್ತಿಯಿಂದ ಜೀವನಿಗೆ ಅಧಿಕವಾದ ದುಃಖವೇ ಆಗುವುದಾಗಿ, ಈಗಿರುವ ಸಂಸಾರವೇ ಲೇಸೆನಿಸುವುದಲ್ಲವೆ ?" — ಎಂದು ಆಶಂಕಿಸಿದರೆ, ಬ್ರಹ್ಮವು ಸರ್ವಧರ್ಮವರ್ಜಿತವಾದ ನಿತ್ಯಮುಕ್ತಾಖಂಡಚಿನ್ಮಾತ್ರಸ್ವರೂಪದ್ದೆಂದು ಸಮಾಧಾನವನ್ನು ಹೇಳುತ್ತಾರೆ—

ನ ಶುಕ್ಲಂ ನ ಕೃಷ್ಣಂ ನ ರಕ್ತಂ ನ ಪೀತಂ
ನ ಕುಬ್ಜಂ ನ ಪೀನಂ ನ ಹ್ರಸ್ವಂ ನ ದೀರ್ಘಂ ।
ಅರೂಪಂ ತಥಾ ಜ್ಯೋತಿರಾಕಾರಕತ್ವಾತ್
ತದೇಕೋऽವಶಿಷ್ಟಃ ಶಿವಃ ಕೇವಲೋऽಹಂ ॥ ೫೬॥

ಶುಕ್ಲಂ ನ – ಆತ್ಮವು ಶುಕ್ಲವರ್ಣದ್ದು ಅಲ್ಲ; ಕೃಷ್ಣಂ ನ– ಕಪ್ಪು ಅಲ್ಲ; ರಕ್ತಂ ನ – ಕೆಂಪು ಅಲ್ಲ; ಪೀತಂ ನ – ಹಳದಿಬಣ್ಣದ್ದೂ ಅಲ್ಲ; ಕುಬ್ಜಂ ನ– ಅಲ್ಪ ಆಕಾರದ್ದೂ ಅಲ್ಲ; ಪೀನಂ ನ—ದಪ್ಪವಾದದ್ದೂ ಅಲ್ಲ; ಹ್ರಸ್ವಂ ನ— ಚಿಕ್ಕದೂ ಅಲ್ಲ; ದೀರ್ಘಂ ನ—ಉದ್ದವಾದದ್ದೂ ಅಲ್ಲ; ಅರೂಪಂ – ರೂಪವಿಲ್ಲದ್ದು ಅದು; ತಥಾ – ಹಾಗೆಯೇ; ಜ್ಯೋತಿರಾಕಾರಕತ್ವಾತ್ – ಶುದ್ಧ ಚೈತನ್ಯಮಾತ್ರಸ್ವರೂಪದ್ದಾಗಿರುವುದರಿಂದ; ತದೇಕೋऽವಶಿಷ್ಟಃ ಶಿವಃ ಕೇವಲೋऽಹಂ—ಸರ್ವೋಪಾಧಿಗಳೂ ಕಳೆದ, ಅದ್ವಿತೀಯನಿರ್ವಿಶೇಷಾಖಂಡಾನಂದಸ್ವರೂಪನೇ ನಾನು.

ಬಿಳುಪು – ಕಪ್ಪು – ಕೆಂಪು – ಮುಂತಾದ ಬಣ್ಣವಾಗಲಿ; ಮಹತ್ತು – ಚಿಕ್ಕದು – ದೊಡ್ಡದು – ಉದ್ದ – ಮೊದಲಾದ ಆಕಾರವಾಗಲಿ ಆತ್ಮನಿಗೆ ಇರುವುದಿಲ್ಲ. ಅದು 'ಅರೂಪ'ವಾದುದು—ಎಂದರೆ. 'ರೂಪ್ಯತೇ ಇತಿ ರೂಪಂ'—ಎಂಬ ವ್ಯುತ್ಪತ್ತಿಯಂತೆ, ರೂಪವೆಂದರೆ ಪ್ರಮಾಣಗೋಚರವಾದುದೆಂದು ಅರ್ಥವು. ಆತ್ಮನು ಅರೂಪನು—ಎಂದರೆ ಪ್ರಮಾಣಾಗೋಚರನು;

Sri Vidyabharathi Book Centre, Sringeri

CC-O. In Public Domain. Digitized by eGangotri

ರೂಪವಾಗಲಿ, ಆಕಾರವಾಗಲಿ ಇದ್ದಿದ್ದರೆ, ಆತ್ಮನು ಪ್ರತ್ಯಕ್ಷಾದಿಪ್ರಮಾಣಕ್ಕೆ ವಿಷಯವಾಗಬೇಕಾಗಿತ್ತು. ಏತದಪ್ರಮೇಯಂ—ಇವನು ಅಪ್ರಮೇಯ—ಪ್ರಮಾಣ ವಿಷಯನಾಗದವನು' —ಎಂದು ಶ್ರುತಿಯು ಹೇಳುತ್ತಿದೆ. ಆದುದರಿಂದ ಆತ್ಮನು ಸರ್ವಧರ್ಮವರ್ಜಿತನೆಂದು ತಿಳಿದುಬರುವುದು. ಸಗುಣವಾಗಿಯೂ ಸಾಕಾರವಾಗಿಯೂ ಪರತತ್ತ್ವವನ್ನು ಹೇಳುವ ಇತರಮತಗಳನ್ನೆಲ್ಲ ಇದರಿಂದ ನಿರಾಕರಿಸಿದಂತಾಗುವುದು.

ಜ್ಯೋತಿರಾಕಾರಕತ್ವಾತ್—ಎಂದು ಇದಕ್ಕೆ ಕಾರಣವನ್ನು ಹೇಳಿದ್ದಾರೆ, ಪ್ರಜ್ಞಾನಘನ ಏವ – ಎಂದು ಶ್ರುತಿಯು ಆತ್ಮನನ್ನು ಅಖಂಡಜ್ಞಾನಸ್ವರೂಪನೆಂದು ತಿಳಿಸುತ್ತದೆ. ಲವಣಘನವಾದ ಉಪ್ಪಿನಹರಳಿನಲ್ಲಿ ಉಪ್ಪಿನರಸವಲ್ಲದ ಬೇರೆ ಯಾವರಸವೂ ಇರುವುದಿಲ್ಲ; ಕಲ್ಲುಸಕ್ಕರೆಯಲ್ಲಿ ಸಿಹಿರಸವಲ್ಲದ ಬೇರೆ ರಸವಿರುವುದಿಲ್ಲ; ಕರ್ಪೂರದ ಗಟ್ಟಿಯಲ್ಲಿ ಮಧುರಗಂಧವಲ್ಲದೆ ಬೇರೆ ಏನೂ ಇರುವುದಿಲ್ಲ; ಇದರಂತೆ ಪ್ರಜ್ಞಾನಘನವಾದ ಆತ್ಮನಲ್ಲಿ, ಪ್ರಕೃಷ್ಟವಾದ (ಉತ್ತಮವಾದ) ಜ್ಞಾನವಲ್ಲದೆ. ಬೇರೆ ಏನೂ ಇಲ್ಲವೆಂದೇ ತಾತ್ಪರ್ಯವು.

ಎಲ್ಲವನ್ನೂ ಬೆಳಗಿಸುವ ಸೂರ್ಯನನ್ನು ಬೆಳಗಿಸುವವರು ಯಾರು ? ಎಲ್ಲವನ್ನೂ ದಹಿಸುವ ಬೆಂಕಿಯನ್ನು ಸುಡುವುದು ಹೇಗೆ ? ಎಲ್ಲವನ್ನೂ ನೆನೆಯಿಸುವ ನೀರನ್ನು ಒದ್ದೆಮಾಡುವುದೆಂತು ? ಇದರಂತೆ. ವಿಜ್ಞಾತಾರಮರೇ ಕೇನ ವಿಜಾನೀಯಾತ್ ? —'ಎಲ್ಲವನ್ನೂ ತಿಳಿಯುವ ಆತ್ಮನನ್ನು ತಿಳಿಯಲಾಗದು' ಎಂದು ಶ್ರುತಿಯು ತಿಳಿಸುತ್ತದೆ. ಇದು ನ್ಯಾಯವೂ ಆಗಿದೆ. ಆತ್ಮನಿಗೆ ಬೇರೆಯಾದುದೆಲ್ಲ ಜಡವಾದ್ದರಿಂದ, ಜಡವಾದ ಅನಾತ್ಮಕ್ಕೆ ಆತ್ಮವನ್ನು ತಿಳಿಯುವ ಸಾಮರ್ಥ್ಯವಿಲ್ಲ. ಆತ್ಮನು ತನ್ನನ್ನು ವಿಷಯೀಕರಿಸಿಕೊಂಡು ತಿಳಿಯಲಾಗುವುದಿಲ್ಲ. "ಇನ್ನೊಬ್ಬ ಆತ್ಮನಿಗೆ ಒಬ್ಬ ಆತ್ಮನು ವಿಷಯವಾಗಲಿ"—ಎಂಬುದೂ ಸಮಂಜಸವಾಗುವುದಿಲ್ಲ; ಇಬ್ಬರೂ ಜ್ಞಾನರೂಪರಾದ್ದರಿಂದ. ಒಂದು ದೀಪವು ಮತ್ತೊಂದು ದೀಪವನ್ನು ಪ್ರಕಾಶಮಾಡಲಾರದಂತೆ, ಒಬ್ಬ ಆತ್ಮನು ಇನ್ನೊಬ್ಬನನ್ನು ವಿಷಯೀಕರಿಸುವುದು ಸಾಧ್ಯವಾಗುವು

Sri Vidyabharathi Book Centre, Sringeri

CC-O. In Public Domain. Digitized by eGangotri

ದಿಲ್ಲ; ಮತ್ತು ವಿಷಯವಾದುದು ಜಡವಾದ ಅನಾತ್ಮವೇ ಆಗುವುದು, ಆತ್ಮವೇ ಆಗುವುದಿಲ್ಲ.

ನ ದೃಷ್ಟೇರ್ದ್ರಷ್ಟಾರಂ ಪಶ್ಯೇಃ 'ನ ಶ್ರುತೇಃ ಶ್ರೋತಾರಂ ಶ್ರುಣುಯಾಃ, ನ ಮತೇರ್ಮಂತಾರಂ ಮನ್ವೀಥಾಃ, ನ ವಿಜ್ಞಾತೇ ವಿಜ್ಞಾತಾರಂ ವಿಜಾನೀಯಾಃ।' — 'ಸಕಲರೂಪವನ್ನೂ ನೋಡುವ ಕಣ್ಣನ್ನು ನೋಡುವ ಆತ್ಮನನ್ನು ನೀನು ನೋಡಲಾರೆ; ಎಲ್ಲ ಶಬ್ದವನ್ನೂ ಕೇಳುವ ಶ್ರೋತ್ರವನ್ನು ಕೇಳುವ ಆತ್ಮನನ್ನು ಕೇಳಲಾರೆ; ಎಲ್ಲವುದನ್ನೂ ಚಿಂತಿಸುವ ಚಿತ್ತವನ್ನು ಚಿಂತಿಸುವ ಆತ್ಮನನ್ನು ಚಿಂತಿಸಲಾರೆ; ಎಲ್ಲವುದನ್ನೂ ತಿಳಿಯುವ ಬುದ್ಧಿಯನ್ನು ತಿಳಿಯುವ ಆತ್ಮನನ್ನು ತಿಳಿಯಲಾರೆ' – ಎಂದು ಶ್ರುತಿಯು ಆತ್ಮನು ವಿಷಯನೇ ಅಲ್ಲವೆಂದು ಘಂಟಾಘೋಷವಾಗಿ ಹೇಳುತ್ತಿದೆ.

"ಹೀಗೆ ವಿಷಯನೇ ಅಲ್ಲದ ಆತ್ಮನನ್ನು ವೇದಾಂತವೇದ್ಯನೆಂದು ಹೇಳುವುದು ಹೇಗೆ ?" — ಎಂದರೆ, ವೇದಾಂತಗಳು ಆತ್ಮನನ್ನು ವಿಷಯೀಕರಿಸಿಯೇನೂ ಉಪದೇಶ ಮಾಡುತ್ತಿಲ್ಲ; ಮತ್ತೇನೆಂದರೆ, ಸ್ವಪ್ರಕಾಶಾನಂದಘನ ಸ್ವರೂಪನೆಂದು ಆತ್ಮತತ್ತ್ವ ಸ್ವರೂಪವನ್ನು ತಿಳಿಸುತ್ತ, ಅನಾತ್ಮಪ್ರಪಂಚಕ್ಕೆಲ್ಲ ಬೇರೆಯಾದವನೆಂಬುದನ್ನು ಬೋಧಿಸುತ್ತದೆ; ವಿಷಯವಾದುದು ಬ್ರಹ್ಮವಲ್ಲವೆಂದು ಹೇಳಿ, ಅವಿಷಯನಾದ ಆತ್ಮನೇ ಬ್ರಹ್ಮವೆಂಬುದನ್ನು ಜ್ಞಾಪಿಸುತ್ತದೆ. ಆತ್ಮನು ಯಾರಿಗೂ ಎಂದೂ ಹೇಗೂ ಅಪ್ರಸಿದ್ಧನಲ್ಲ; ಅವನಲ್ಲಿ ದೇಹಾದ್ಯುಪಾಧಿಗಳ ಅಧ್ಯಾಸದಿಂದ ತಪ್ಪು ತಿಳಿವು ಉಂಟಾಗಿರುವುದನ್ನು ಮಾತ್ರವನ್ನೇ, ಆತ್ಮನ ತತ್ತ್ವರೂಪವನ್ನೂ ಜ್ಞಾಪಿಸಿ, ವೇದವು ಕಳೆಯತ್ತದೆ ಅಷ್ಟೇ !

ಇದನ್ನೇ ಶ್ರುತಿಯು ಸ್ಪಷ್ಟಪಡಿಸಿದೆ — **ಯಸ್ಯಾಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ। ಅವಿಜ್ಞಾತಂ ವಿಜಾನತಾಂ ವಿಜ್ಞಾನಮವಿಜಾನತಾಂ।** – "ಆತ್ಮನು ಯಾರಿಗೆ ವಿಷಯವಾಗದುದೆಂದು ತಿಳಿದಿಲ್ಲವೋ ವಿಷಯವಾದುದಲ್ಲವೆಂದೇ ತಿಳಿದಿದೆಯೋ, ಅವನಿಗೆ ಆತ್ಮನು ತಿಳಿದಿದೆ; ಯಾರಿಗೆ ಆತ್ಮನು ತಿಳಿದಿದ್ದಾನೆಂದಾಗುತ್ತದೆಯೋ ಅವನು ಆತ್ಮನನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ತಿಳಿದವನಲ್ಲ; ಆತ್ಮನನ್ನು ಬಲ್ಲವರಿಗೆ ಆತ್ಮನು ವಿಷಯನಾಗದವನೆಂದೇ ತಿಳಿದಿರುತ್ತದೆ; ಆತ್ಮನು ವಿಷಯನಾಗುವನೆಂದು ತಿಳಿಯುವವರಿಗೆ, ಆತ್ಮನ ತಿಳಿವೇ ಇಲ್ಲ"—ಎಂದು, ಆದ್ದರಿಂದ ಆತ್ಮವು ಬ್ರಹ್ಮವೆಂಬುದು ಸಮಂಜಸವಾಗಿ, ಇತರ ಮತಗಳೆಲ್ಲ ಅಸಮಂಜಸಗಳೆಂದು ನಿರಾಕೃತವಾಗುತ್ತವೆ.

ಇದಲ್ಲದೆ "ಅಸ್ಥೂಲಮನಣು ಅಹ್ರಸ್ವಮದೀರ್ಘಂ; ಅಶಬ್ದಮಸ್ಪರ್ಶಮರೂಪಮವ್ಯಯಂ"—ಎಂದು ವಿಸ್ಪಷ್ಟವಾಗಿಯೇ ಆತ್ಮನು ಸರ್ವಧರ್ಮವರ್ಜಿತನೆಂದು ಶ್ರುತಿಯು ಹೇಳುತ್ತಿದೆ.

"ಸರ್ವಜಗತ್ತಿಗೂ ಉಪಾದಾನಕಾರಣವಾಗಿ, ಸರ್ವಜಗತ್ತಿಗೂ ಅಭಿನ್ನವಾಗಿ, ಸರ್ವಾತ್ಮಕವಾಗಿರುವಬ್ರಹ್ಮಕ್ಕೆ ಸರ್ವಜಗತ್ತಿನ ದೋಷವೂ ಸಂಭವಿಸುವುದೆಲ್ಲವೆ ?"—ಎಂದರೆ, ಹಾಗಲ್ಲ, ಆಭರಣಾದಿಗಳ ಗುಣದೋಷಗಳು ಚಿನ್ನಕ್ಕೆ ಸಂಭವಿಸುವುದಿಲ್ಲ.

ವಸ್ತುತಸ್ತು—ಕೂಟಸ್ಥನಿತ್ಯವಾಗಿ ನಿರ್ವಿಕಾರವಾಗಿರುವ ಬ್ರಹ್ಮವು, ಮಣ್ಣಿನಂತೆ ಪರಿಣಾಮಿಯಾಗಲಿ, ಪರಮಾಣುಗಳಂತೆ ಆರಂಭಕವಾಗಲಿ ಆಗುವಂತಿಲ್ಲ. ಮತ್ತೆ ? ನಿರ್ವಿಕಾರವಾದಹಗ್ಗವು ಹಗ್ಗದಹಾವಿಗೆ ಹೇಗೋ ಹಾಗೆ, ಬ್ರಹ್ಮವನ್ನು ಜಗತ್ತಿನ ವಿವರ್ತೋಪಾದಾನಕಾರಣವೆಂದು ತಿಳಿಯತಕ್ಕದ್ದು—ಎಂದರೆ, ಹಗ್ಗದಹಾವಿನಭ್ರಾಂತಿಗೆ (ಅಧ್ಯಾಸಕ್ಕೆ) ಹಗ್ಗವು ಅಧಿಷ್ಠಾನವಾಗಿರುವಂತೆ, ಜಗದ್ಭ್ರಾಂತಿಗೆ ಬ್ರಹ್ಮವು ಅಧಿಷ್ಠಾನವಾಗಿರುತ್ತದೆ. ಅಧಿಷ್ಠಾನಕ್ಕೆ ಅಧ್ಯಸ್ತದ ಗುಣದೋಷಗಳ ಸಂಬಂಧವು ಲೇಶಮಾತ್ರವೂ ಆಗುವುದಿಲ್ಲ; ಹಗ್ಗದಲ್ಲಿ ಅಧ್ಯಸ್ತವಾಗುವ ಹಾವಿನ ವಿಷವಾಗಲಿ, ಹೂಮಾಲೆಯ ಸುಗಂಧವಾಗಲಿ ಹಗ್ಗಕ್ಕೆ ಉಂಟಾಗುವುದಿಲ್ಲ. ಜಗದಧ್ಯಾಸಕ್ಕೆ ಅಧಿಷ್ಠಾನವಾಗಿರುವಿಕೆಯೇ ಬ್ರಹ್ಮದ ಜಗತ್ಕಾರಣತ್ವವಾಗಿರುವುದರಿಂದ, ವೇದಾಂತಸಿದ್ಧಾಂತದಲ್ಲಿ ಯಾವ ದೋಷಕ್ಕೂ ಅವಕಾಶವಿಲ್ಲದೆ, ಸರ್ವಸಮಂಜಸವಾಗಿದೆ—೬.

Sri Vidyabharathi Book Centre, Sringeri

CC-O. In Public Domain. Digitized by eGangotri

"'ತತ್ತ್ವಮಸಿ'—'ನೀನು ಅದು ಆಗಿದ್ದಿ'—ಎಂಬ ಈ ಬ್ರಹ್ಮೋಪದೇಶವು ಯಾರಿಗೆ ?—ಬ್ರಹ್ಮಕ್ಕೋ ಜೀವನಿಗೋ ? ಬ್ರಹ್ಮಕ್ಕೆ ಈ ಉಪದೇಶವು ವ್ಯರ್ಥವು. ಜೀವನಿಗೆ ಎಂದರೆ, ಜೀವನು ಬ್ರಹ್ಮವೇಯೋ, ಬೇರೆಯಾದವನೋ ? ಬ್ರಹ್ಮವೆಂದಾದರೆ, ಮತ್ತೆ ಉಪದೇಶಾನರ್ಥಕ್ಯವೇ ಪ್ರಾಪ್ತವಾಗುವುದು. ಜೀವನು ಬ್ರಹ್ಮಕ್ಕೆ ಬೇರೆಯವನೆಂದರೆ, 'ಜೀವನು ಬ್ರಹ್ಮವೇ ಎಂಬ ಅದ್ವೈತಸಿದ್ಧಾಂತಕ್ಕೆ ವಿರುದ್ಧವಾಗುವುದು. "ಜೀವನು ಸ್ವತಃ ಬ್ರಹ್ಮರೂಪನೇ ಆಗಿದ್ದರೂ, ಅವಿದ್ಯೆಯಿಂದ ಬೇರೆಯಾದಂತಾಗಿದ್ದಾನೆ; ಈ ಅವಿದ್ಯೆಯ ನಿವೃತ್ತಿಗಾಗಿ (ಭ್ರಾಂತಿಯನ್ನು ಕಳೆಯುವುದಕ್ಕಾಗಿ) ಈ ಉಪದೇಶವು ಸಾರ್ಥಕವಾಗುತ್ತದೆ"—ಎಂದು ಹೇಳುವುದಾದರೆ; ಈ ಅವಿದ್ಯಾನಿವೃತ್ತಿಯು ಬ್ರಹ್ಮಕ್ಕೆ ಬೇರೆಯಾದುದೋ, ಅಭಿನ್ನವಾದುದೋ ? ಅವಿದ್ಯಾನಿವೃತ್ತಿಯನ್ನು ಬ್ರಹ್ಮಕ್ಕೆ ಬೇರೆಯಾದುದೆಂದು ಹೇಳಿದರೆ, ಅವಿದ್ಯಾನಿವೃತ್ತಿಯು ನಿತ್ಯವಾಗಬೇಕಾದ್ದರಿಂದ, ಬ್ರಹ್ಮಕ್ಕೆ ಇದರಿಂದ ಸದ್ವಿತೀಯತ್ವವು ಉಂಟಾಗಿ, ಮತ್ತೆ ಅದ್ವೈತಸಿದ್ಧಾಂತವು ವಿರುದ್ಧವಾಗುವುದು. ಅಭಿನ್ನವೆಂದು ಹೇಳಿದರೆ, ಬ್ರಹ್ಮಕ್ಕೆ ಅವಿದ್ಯಾನಿವೃತ್ತಿಯು ಆಗಿಯೇ ಇರುವುದರಿಂದ, ಉಪದೇಶವು ವ್ಯರ್ಥವೇ ಆಗುವುದು. ಹೀಗೆ ಯಾವ ರೀತಿಯಲ್ಲಿ ವಿಚಾರಮಾಡಿದರೂ ಅದ್ವೈತಸಿದ್ಧಾಂತವು ಸಂಗತವಾಗುವುದಿಲ್ಲವಲ್ಲ ?"—ಎಂದು ಆಕ್ಷೇಪಿಸಿದರೆ ಇದಕ್ಕೆ ಸಮಾಧಾನವನ್ನು ಹೇಳುತ್ತಾರೆ—

ನ ಶಾಸ್ತಾ ನ ಶಾಸ್ತ್ರಂ ನ ಶಿಷ್ಯೋ ನ ಶಿಕ್ಷಾ
ನ ಚ ತ್ವಂ ನ ಚಾಹಂ ನ ಚಾಯಂ ಪ್ರಪಂಚಃ ।
ಸ್ವರೂಪಾವಬೋಧೋ ವಿಕಲ್ಪಾಸಹಿಷ್ಣುಃ
ತದೇಕೋಽವಶಿಷ್ಟಃ ಶಿವಃ ಕೇವಲೋಽಹಂ ॥ ॥ ೭ ॥

ಶಾಸ್ತಾ=ಶಾಸಕನು; ಉಪದೇಶಕನು; **ನ**–ಇಲ್ಲ, **ಶಾಸ್ತ್ರಂ**=ಶಾಸ್ತ್ರವೂ; **ನ**=ಇಲ್ಲ; **ಶಿಷ್ಯಃ**=ಶಿಷ್ಯನೂ, **ನ** – ಇಲ್ಲ; **ಶಿಕ್ಷಾ**=ಶಿಕ್ಷಣವೂ; **ನ**–ಇಲ್ಲ; **ತ್ವಂ ಚ**=ನೀನೂ; **ನ**- ಇಲ್ಲ; **ಅಹಂ ಚ**=ನಾನೂ; **ನ** –ಇಲ್ಲ; **ಅಯಂ**=ಈ; **ಪ್ರಪಂಚಃ ಚ**=ಪ್ರಪಂಚವೂ **ನ**–ಇಲ್ಲ; **ಸ್ವರೂಪಾವಬೋಧಃ**=ಸ್ವರೂಪವಾದ

Sri Vidyabharathi Book Centre, Sringeri

 CC-O. In Public Domain. Digitized by eGangotri

ಜ್ಞಾನವು; ವಿಕಲ್ಪಾಸಹಿಷ್ಣುಃ=ಯಾವ ವಿಕಲ್ಪಭೇದವನ್ನೂ ಸಹಿಸುವಂಥ ದ್ದಲ್ಲ; ತದೇಕೋऽವಶಿಷ್ಟಃ ಶಿವಃ ಕೇವಲೋऽಹಂ–ಸರ್ವೋಪಾಧಿಯೂ ಕಳೆದು ಉಳಿದ ಅದ್ವಿತೀಯಾಖಂಡಾನಂದಸ್ವರೂಪನೇ ನಾನು.

ಶಾಸ್ತಾ=ಉಪದೇಶಮಾಡುವ ಗುರುವು. ಶಾಸ್ತ್ರಂ=ಉಪದೇಶಕ್ಕೆ ಕರಣ – ಸಾಧನವಾದುದು. ಶಿಷ್ಯಃ — ಉಪದೇಶಕ್ಕೆ ವಿಷಯನಾದವನು. ಶಿಕ್ಷಾ=ಉಪದೇಶಮಾಡುವ ಕ್ರಿಯೆ. ತ್ವಂ–ಶ್ರೋತೃಃ, ಅಹಂ–ಹೇಳುವ ವನು. ಅಯಂ ಪ್ರಪಂಚಃ=ಎಲ್ಲ ಪ್ರಮಾಣಗಳಿಂದಲೂ ತಿಳಿದುಬರುವ ದೇಹ, ಇಂದ್ರಿಯ, ವಿಷಯಗಳು. ಇವು ಯಾವುವೂ ಪರಮಾರ್ಥವಾಗಿ ಇರುವುದಿಲ್ಲ. ವ್ಯವಹಾರವೆಲ್ಲ ಅವಿದ್ಯಕವೆಂಬುದನ್ನು ಮೊದಲೇ ತಿಳಿಸಿರು ತ್ತದೆ. ಬೇರೊಂದರ ಅಪೇಕ್ಷೆಯಿಂದ ಆಗುವ ರೂಪವು, ಸ್ಫಟಿಕದ ರಕ್ತವರ್ಣ ದಂತೆ, ಪಾರಮಾರ್ಥಿಕವಾಗುವುದಿಲ್ಲ. ಶಿಷ್ಯನಿಲ್ಲದೆ ಗುರುವಿಲ್ಲ, ಗುರುವಿಲ್ಲದೆ ಶಿಷ್ಯನಿಲ್ಲ, ಗುರುಶಿಷ್ಯರಿಲ್ಲದೆ ಉಪದೇಶವಿಲ್ಲ—ಹೀಗೆ ಇವೆಲ್ಲ ಪರಸ್ಪರಾಪೇಕ್ಷೆ ಯಿಂದ ಆಗುವ ರೂಪಗಳಾದ್ದರಿಂದ, ಇವು ವಾಸ್ತವಗಳಲ್ಲ. ಅದ್ವಿತೀಯ ಬ್ರಹ್ಮಒಂದೇ ಪಾರಮಾರ್ಥಿಕವಾದ್ದರಿಂದ, ಅವಿದ್ಯೆ, ಜೀವ, ಉಪದೇಶ– ಇವಾವುವೂ ಪರಮಾರ್ಥವಾಗಿಲ್ಲವಾಗಿ, ಮೇಲಿನ ಆಕ್ಷೇಪಕ್ಕೆ ಮೂಲವೇ ಇಲ್ಲ ವಾಗಿದೆ. ವ್ಯವಹಾರವು ತೋರಿಬರುವ ವ್ಯವಹಾರಾವಸ್ಥೆಯಲ್ಲಿ, ಈ ಭೇದ ಗಳು ಸತ್ಯವೆಂದೇ ತೋರಿಬರುವುದರಿಂದ, ಔಪಾಧಿಕರೂಪದಿಂದ ಬೇರೆಯಾಗಿ ರುವ ಶಿಷ್ಯನಿಗೆ ಗುರುವು ಶಾಸ್ತ್ರತತ್ತ್ವವನ್ನು ಉಪದೇಶಿಸಿ, ಅವನ ಅವಿದ್ಯೆ ಯನ್ನು ಕಳೆದಿರುತ್ತಾನೆಂದು ಸರ್ವವೂ ಯುಕ್ತವಾಗುತ್ತದೆ. ಅವಿದ್ಯಾನಿವೃತ್ತಿ ಯೆಂದರೆ ಅವಿದ್ಯೆಯ ಅಭಾವ; ಅಭಾವವು ಅಧಿಕರಣಸ್ವರೂಪವೇ ಹೊರತು ಬೇರೆಯಲ್ಲ; ಭೂತಲದಲ್ಲಿನ ಘಟಾಭಾವವು ಭೂತಲವೇ. ಆತ್ಮನು ವಸ್ತುತಃ ಬ್ರಹ್ಮವೇ ಆಗಿರುವುದರಿಂದ, ಬ್ರಹ್ಮಕ್ಕೆ ಅವಿದ್ಯೆಯಿರುವುದರಿಂದ, ಈ ಅವಿದ್ಯೆಯನಿವೃತ್ತಿ (ಅಭಾವ)ಯು ಬ್ರಹ್ಮವೇ ಆಗಿರುತ್ತದೆಯಾಗಿ, ಅವಿದ್ಯಾನಿವೃತ್ತಿಯು ನಿತ್ಯವಾದರೂ, ಅದ್ವಿತೀಯತ್ವಕ್ಕೆ ಚ್ಯುತಿಯಿರುವುದಿಲ್ಲ.

ಬ್ರಹ್ಮ ವಾ ಇದಮಗ್ರೇ ಆಸೀತ್, ತದಾತ್ಮಾನಮೇವಾವೇದಹಂ ಬ್ರಹ್ಮಾಸ್ಮೀತಿ, ತಸ್ಮಾತ್ತತ್ಸರ್ವಮಭವತ್ — 'ಇದು ಮೊದಲು ಬ್ರಹ್ಮವೇ

Sri Vidyabharathi Book Centre, Sringeri

 CC-O. In Public Domain. Digitized by eGangotri

ಆಗಿತ್ತು; ಬ್ರಹ್ಮವು ತನ್ನನ್ನೇ – 'ನಾನು ಬ್ರಹ್ಮವಾಗಿದ್ದೇನೆ—ಎಂದು ಅರಿಯಿತು; ಈ ಅರಿವಿನಿಂದ ಅದು ಸರ್ವವಾಯಿತು—ಮುಕ್ತವಾಯಿತು; 'ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ' –'ಬ್ರಹ್ಮವಾಗಿದ್ದುದೇ ಬ್ರಹ್ಮವಾಗುತ್ತದೆ'; ಬ್ರಹ್ಮ ವೇದ ಬ್ರಹ್ಮೈವ ಭವತಿ—ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುತ್ತಾನೆ"—ಮುಂತಾದ ಶ್ರುತಿಗಳು ಬ್ರಹ್ಮವೇ ವಿದ್ಯೆಯಿಂದ ಬ್ರಹ್ಮವಾಗುವುದೆಂದು ತಿಳಿಸುತ್ತವೆ. ಜ್ಞಾನಮಾತ್ರದಿಂದ ಆಬ್ರಹ್ಮವು ಬ್ರಹ್ಮವಾಗುವುದೆಂಬುದು ಅಸಂಭಾವಿತವೇಸರಿ.

"ಜ್ಞಾನಸ್ವರೂಪವಾಗಿರುವ ಬ್ರಹ್ಮಕ್ಕೆ ಅಜ್ಞಾನವು ಹೇಗೆ ಬಂತು?"—ಎಂದು ಕೇಳಬಹುದು. "ಪಾರಮಾರ್ಥಿಕವಾಗಿ ಇಲ್ಲವೆಂದೇ" ಅದಕ್ಕೆ ಉತ್ತರವು. ಶ್ರುತಿಯು ಹೀಗೆಯೇ ಹೇಳುತ್ತದೆ – **ನ ನಿರೋಧೋ ನ ಚೋತ್ಪತ್ತಿಃ ನ ಬದ್ಧೋ ನ ಚ ಸಾಧಕಃ। ನ ಮುಮುಕ್ಷುರ್ನ ವೈ ಮುಕ್ತಃ ಇತ್ಯೇಷಾ ಪರಮಾರ್ಥತಾ ॥**—"ನಿರೋಧ–ಎಂದರೆ ಪ್ರಳಯವು ಇಲ್ಲ, ಉತ್ಪತ್ತಿಯೂ ಇಲ್ಲ; ಸಂಸಾರದಿಂದ ಬದ್ಧನಾದವನೂ ಇಲ್ಲ, ಅದನ್ನು ಬಿಡಿಸಿಕೊಳ್ಳಬೇಕೆಂಬ ಸಾಧಕನೂ ಇಲ್ಲ; ಮುಮುಕ್ಷುವೂ ಇಲ್ಲ; ಮುಕ್ತಿಯೂ ಇಲ್ಲ—ಇದೇ ಪರಮಾರ್ಥವು"—ಎಂದು.

ಮುಕ್ತಿಯೂ ಪರಮಾರ್ಥವಲ್ಲವೆ?—ಎಂದರೆ, ಹೌದು; ಮುಕ್ತಿಯು ಪರಮಾರ್ಥವಾಗಬೇಕಾದರೆ, ಬಂಧವು ಪರಮಾರ್ಥವಾಗಬೇಕಾಗುವುದು ಮಿಥ್ಯಾಭೂತವಾದ ಬಂಧದ ನಿವೃತ್ತಿಯಾದ ಮೋಕ್ಷವೂ ಮಿಥ್ಯಾಭೂತವೇ–ಎಂಬುದು ಯುಕ್ತವಾಗಿದೆ.

"ಇದೆಲ್ಲ ಮಿಥ್ಯಾ—ಎಂದಾದರೆ, ಇದನ್ನು ಪ್ರತಿಪಾದಿಸುವುದೇತಕ್ಕೆ?" ಎಂದರೆ, "ಪರಮಾರ್ಥವಾಗಿ ಇಲ್ಲವೆಂದು"–ಉತ್ತರವನ್ನು ಹೇಳಿದ್ದಾಗಿದೆ. ಹಗ್ಗದಲ್ಲಿ ಹಾವನ್ನು ಕಾಣದೆ ಇದ್ದಿದ್ದರೆ,—'ಅದು ಹಾವಲ್ಲ, ಹಗ್ಗ'—ಎಂದು ಉಪದೇಶಮಾಡಬೇಕಾಗಿರಲಿಲ್ಲ; ಹಗ್ಗವನ್ನು ಹಾವೆಂದು ತಿಳಿದು ಕೇರಿ ಭಯಪಟ್ಟು ಮುಗ್ಗರಿಸಿ ಓಡುವವನಿಗೆ ಈ ಉಪದೇಶವು ಅವಶ್ಯವು. ಇದರಂತೆ ದ್ವೈತಪ್ರಪಂಚವನ್ನು ಕಾಣುತ್ತ, ಅದರಲ್ಲಿ ರಾಗದ್ವೇಷಗಳನ್ನು ಹೊಂದಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ಪ್ರವರ್ತಿಸಿ, ಧರ್ಮಾಧರ್ಮಗಳಿಗೆ ಗುರಿಯಾಗಿ ಕ್ಲೇಶಪಡುತ್ತಿದ್ದು, ಅದರಿಂದ ಬಿಡುಗಡೆಯನ್ನು ಅಪೇಕ್ಷಿಸುವವನಿಗೆ—'ಇದೆಲ್ಲ ಸತ್ಯವಲ್ಲ; ನೀನು ಸಂಸಾರಿಯಲ್ಲ, ನಿತ್ಯಮುಕ್ತಾದ್ವಿತೀಯಬ್ರಹ್ಮವೇ ನೀನು'—ಎಂಬ ಉಪದೇಶವು ಅವಶ್ಯವಾಗಿದೆ; ಈ ಅನುಭವವು ಬಂದ ಅನಂತರ, ಎಚ್ಚರವಾದಮೇಲಿನ ಸ್ವಪ್ನಪ್ರಪಂಚದಂತೆ, ಇದೆಲ್ಲ ನಿಃಶೇಷವಾಗಿ ಬಾಧಿತವಾಗಿ, ಸರ್ವವ್ಯವಹಾರವೂ ಪರಿಸಮಾಪ್ತವಾಗುತ್ತದೆ—೭.

ಈಗ ಅನುಭವಸಿದ್ಧವಾಗಿರುವ ಜಾಗ್ರದಾದಿಗಳೂ ಪರಮಾರ್ಥವಲ್ಲವೆಂದು ಹೇಳುತ್ತಾರೆ—

ನ ಜಾಗ್ರನ್ನ ಮೇ ಸ್ವಪ್ನಕೋ ವಾ ಸುಷುಪ್ತಿಃ
ನ ವಿಶ್ವೋ ನ ವಾ ತೈಜಸಃ ಪ್ರಾಜ್ಞಕೋ ವಾ ।
ಅವಿದ್ಯಾತ್ಮಕತ್ವಾತ್ತ್ರಯಾಣಾಂ ತುರೀಯಃ
ತದೇಕೋऽವಶಿಷ್ಟಃ ಶಿವಃ ಕೇವಲೋऽಹಂ ॥ ೮ ॥

ಮೇ=ನನಗೆ; ಜಾಗ್ರತ್ ನ=ಜಾಗ್ರದವಸ್ಥೆಯಿಲ್ಲ; ಸ್ವಪ್ನಕಃ ವಾ ನ=ಸ್ವಪ್ನವೂ ಇಲ್ಲ; ಸುಷುಪ್ತಿಃ=ಸುಷುಪ್ತಿಯಾಗಲಿ; ನ ಇಲ್ಲ; ವಿಶ್ವಃ ನ =ನಾನು ವಿಶ್ವನಲ್ಲ; ತೈಜಸಃ ವಾ ನ=ತೈಜಸನೂ ಅಲ್ಲ; ಪ್ರಾಜ್ಞ ಕೋ ವಾ ನ – ಪ್ರಾಜ್ಞನೂ ಅಲ್ಲ; ಅವಿದ್ಯಾತ್ಮಕತ್ವಾತ್ ತ್ರಯಾಣಾಂ—ಈ ಮೂರೂ ಅವಿದ್ಯಾರೂಪಗಳಾಗಿರುವುದರಿಂದ; ತುರೀಯಃ=ಈ ಮೂರಕ್ಕೂ ಬೇರೆಯಾಗಿ, ನಾಲ್ಕನೆಯವನಾಗಿ; ತದೇಕೋऽವಶಿಷ್ಟಃ ಶಿವಃ ಕೇವಲೋऽಹಂ =ಉಳಿದಿರುವ ಅಖಂಡಾದ್ವಿತೀಯಾನಂದಸ್ವರೂಪನೇ ನಾನು.

ಆಕಾಶವು ಒಂದೇ ಆದರೂ, ಘಟ, ಮಠ, ಗಿರಿಗುಹೆ—ಮುಂತಾದ ಉಪಾಧಿಗಳಿಂದ ಔಪಾಧಿಕ (ಅವಾಸ್ತವ) ಭೇದವಾಗಿ ಕಂಡುಬರುತ್ತದೆ. ಇದರಂತೆ, ಒಂದೇ ಅಖಂಡಪರಬ್ರಹ್ಮಚೈತನ್ಯವು ಮಾಯೋಪಾಧಿಯಿಂದ ಈಶ್ವರ, ಜೀವ—ಎಂದು ಭಿನ್ನವಾಗಿದೆ. 'ಜೀವೇಶಾವಭಾಸೇನ ಕರೋತಿ ಮಾಯಾಚಾವಿದ್ಯಾ ಚ ಸ್ವಯಮೇವ ಭವತಿ।—"ಒಂದೇ ಪ್ರಕೃತಿಯು ತಾನೇ ಮಾಯೆ,

Sri Vidyabharathi Book Centre, Sringeri

 CC-O. In Public Domain. Digitized by eGangotri

ಅವಿದ್ಯೆ—ಎಂದು ಎರಡಾಗಿ, ಮಾಯೋಪಾಧಿಕಚೈತನ್ಯವನ್ನು ಈಶ್ವರನೆಂದೂ, ಅವಿದ್ಯೋಪಾಧಿಕ ಚೈತನ್ಯವನ್ನು ಜೀವನೆಂದೂ ವಿಭಾಗಮಾಡಿದೆ"—ಎಂದು ಶ್ರುತಿಯು ಸ್ಪಷ್ಟವಾಗಿ ತಿಳಿಸುತ್ತದೆ. ಸತ್ವರಜಸ್ತಮೋಗುಣವಾದ ಮಾಯೆಯ ಸತ್ವಗುಣದ ಉಪಾಧಿಯಿಂದ ಈಶ್ವರನು ವಿಷ್ಣುವೆನಿಸಿ ಜಗತ್ಪಾಲನೆಮಾಡುತ್ತಾನೆ; ರಜೋಗುಣದ ಉಪಾಧಿಯಿಂದ ಬ್ರಹ್ಮನೆನಿಸಿ ಜಗತ್ತಿನ ಸೃಷ್ಟಿಮಾಡುತ್ತಾನೆ; ತಮೋಗುಣದ ಉಪಾಧಿಯಿಂದ ಹರನೆನಿಸಿ ಜಗತ್ಸಂಹಾರಮಾಡುತ್ತಾನೆ. ಹೀಗೆಯೇ, ಅಗ್ನಿ – ಇಂದ್ರ – ಆದಿತ್ಯ ಮುಂತಾದದೇವತೆಗಳೂ ಈ ಮಾಯೆಯ ಗುಣಗಳ ತಾರತಮ್ಯದಿಂದ ಆಗಿರುತ್ತ ಆಯಾಕಾರ್ಯಗಳಲ್ಲಿ ಈಶ್ವರಾಜ್ಞೆಯಿಂದ ನಿಯಮಿತರಾಗಿರುವರು.

ಜೀವರೂ ಸಹ ಅವಿದ್ಯೋಪಾಧಿಯ ತಾರತಮ್ಯದಿಂದ ವಿಶ್ವ–ತೈಜಸ–ಪ್ರಾಜ್ಞ – ಎಂದು ಮೂರುವಿಧವಾಗಿದ್ದಾರೆ. ಮತ್ತು, ಅವರು ಮಾಡಿದ ಧರ್ಮಾಧರ್ಮಗಳಿಗನುಸಾರವಾಗಿ, ದೇವ, ತಿರ್ಯಕ್, ಮನುಷ್ಯ—ಎಂದು ಮತ್ತೆ ಮೂರುವಿಧವಾಗಿದ್ದಾರೆ.

ಜೀವರಿಗೆ ಸ್ಥೂಲ, ಸೂಕ್ಷ್ಮ, ಕಾರಣ—ಎಂದು ಮೂರು ಶರೀರಗಳಿವೆ. ಎಲ್ಲರಿಗೂ ಕಂಡುಬರುವ ಅನ್ನಮಯದೇಹವು ಸ್ಥೂಲಶರೀರವು. ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ—ಇವು ಸೇರಿ ಸೂಕ್ಷ್ಮಶರೀರವು. ಇದಕ್ಕೆಲ್ಲ ಕಾರಣವಾಗಿರುವ ಅವಿದ್ಯೆಯು ಕಾರಣಶರೀರವು. ಅವಿದ್ಯೆ, ಅಂತಃಕರಣ ಮತ್ತು ಸ್ಥೂಲಶರೀರ—ಇವುಗಳ ಉಪಾಧಿಯಿಂದ ಜಾಗ್ರದವಸ್ಥೆಯಲ್ಲಿ ಅಭಿಮಾನಿಯಾದ ಜೀವನು ವಿಶ್ವನೆನಿಸುವನು. ಇಂದ್ರಿಯಗಳ ಮೂಲಕವಾಗಿ ವ್ಯವಹಾರವಾಗುವ ಅವಸ್ಥೆಯು ಜಾಗ್ರದವಸ್ಥೆಯು. ಸ್ಥೂಲಶರೀರದ ಅಭಿಮಾನವು ತಪ್ಪಿಹೋಗಿ, ಅವಿದ್ಯೆ ಮತ್ತು ಸೂಕ್ಷ್ಮಶರೀರಗಳಿರಡರ ಉಪಾಧಿಯುಳ್ಳವನಾಗಿ, ಸ್ವಪ್ನಾವಸ್ಥೆಯಲ್ಲಿ ಅಭಿಮಾನವುಳ್ಳ ಜೀವನು ತೈಜಸನು. ಇಂದ್ರಿಯಗಳ ವ್ಯಾಪಾರವಿಲ್ಲದೆ, ಜಾಗ್ರತ್ತಿನಂತೆ ವಿಷಯವ್ಯವಹಾರವು ಕಂಡುಬರುವ ಅವಸ್ಥೆಯು ಸ್ವಪ್ನಾವಸ್ಥೆಯು. ಸ್ವಪ್ನದಲ್ಲಿ ಮನಸ್ಸೇ, ಜಾಗ್ರತ್ತಿನ ಅನುಭವದ ವಾಸನೆಯಿಂದ, ಕರ್ಮಪ್ರಯುಕ್ತವಾಗಿ, ಆಯಾವಿಷಯರೂಪವಾಗಿ ತೋರಿಬರುತ್ತದೆ. ಸ್ಥೂಲ ಮತ್ತು ಸೂಕ್ಷ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಶರೀರಗಳಿರಡರ ಅಭಿಮಾನವೂ ಕಳೆದು, ಅಂತಃಕರಣವು ಸಂಸ್ಕಾರಮಾತ್ರ ರೂಪದಿಂದ ಲೀನವಾಗಿರುವ ಅವಿದ್ಯೋಪಾಧಿಕವಾದ ಸುಷುಪ್ತ್ಯವಸ್ಥೆಯಲ್ಲಿ ಅಭಿಮಾನಿಯಾಗಿರುವ ಜೀವನು ಪ್ರಾಜ್ಞನು.

ಈ ಪ್ರಕಾರವಾಗಿ ಜಾಗ್ರದಾದಿಅವಸ್ಥಾತ್ರಯವೂ, ವಿಶ್ವತೈಜಸಪ್ರಾಜ್ಞ ವೆಂಬ ಜೀವತ್ರಯವೂ ಸ್ಥೂಲಸೂಕ್ಷ್ಮಕಾರಣಶರೀರತ್ರಯದ ಉಪಾಧಿಯಿಂದ ಆಗಿರುವ ಚೈತನ್ಯದ ಭೇದವೇ ಹೊರತು; ಚೈತನ್ಯಕ್ಕೆ ಸ್ವತಃ ಈ ಭೇದವು ಯಾವುದೂ ಇರುವುದಿಲ್ಲ. ಆದ್ದರಿಂದ ಈ ಭೇದವೆಲ್ಲ ಔಪಾಧಿಕ, ಕಾಲ್ಪನಿಕ, ಅವಾಸ್ತವ, ಮಿಥ್ಯಾಭೂತವೇ ಆಗಿರುವುದೆಂದು ಸ್ಪಷ್ಟವು.

ಮಿಥ್ಯಾ—ಎಂಬುದು ಎರಡು ವಿಧ. ರಜ್ಜುಸರ್ಪದಂತೆ ಕಲ್ಪಿತವಾದ ವಸ್ತುವು ಒಂದು; ಸ್ಫಟಿಕದ ರಕ್ತತೆಯಂತೆ ಸ್ವರೂಪವಾಗುವುದು ಮತ್ತೊಂದು. ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಇವುಗಳ ವಿಷಯಗಳು—ಈ ರೂಪವಾದ ಸಮಸ್ತಪ್ರಪಂಚವೂ ಬ್ರಹ್ಮಚೈತನ್ಯದಲ್ಲಿ ರಜ್ಜುಸರ್ಪದಂತೆ ಕಲ್ಪಿತಗಳಾಗಿರುವ ಪಂಚಭೂತಗಳ ಕಾರ್ಯವಾಗಿ ಮಿಥ್ಯಾಭೂತವಾಗಿದೆ, ಇವುಗಳ ಮೂಲಕವಾಗಿ ಚೈತನ್ಯಕ್ಕೆ ಆಗಿರುವ ಸಂಸಾರಾನುಭವವು ಚೈತನ್ಯದಸ್ವರೂಪವಾಗದೆಯೇ ಮಿಥ್ಯಾಭೂತವಾಗಿದೆ. ಹೀಗೆ ಎಲ್ಲವಿಧದಿಂದಲೂ ಈ ದ್ವೈತಸಂಸಾರವು ಅವಾಸ್ತವವೇ ಆಗಿರುತ್ತದೆ. ಇದನ್ನೇ ತ್ರಯಾಣಾಂ ಅವಿದ್ಯಾತ್ಮಕತ್ವಾತ್ -- ಎಂದು ಹೇಳಿದ್ದಾರೆ, ಆದ ಕಾರಣ ತುರೀಯಃ—ಇವೆಲ್ಲಕ್ಕೂ ಬೇರೆಯಾಗಿ, ನಾಲ್ಕನೆಯದಾಗಿ, ಇವುಗಳ ಸಾಕ್ಷಿಯಾಗಿ, ಸಂಬಂಧಲೇಶವೂ ಇಲ್ಲದ, ತದೇಕೋऽವಶಿಷ್ಟಃ ಶಿವಃ ಕೇವಲೋऽಹಂ—ಅವಾಸ್ತವರೂಪಗಳನ್ನೆಲ್ಲ ಕಳೆದು ಉಳಿದ ವಾಸ್ತವವಾದ ಅಖಂಡಾದ್ವಿತೀಯನಿರತಿಶಯಾನಂದಬ್ರಹ್ಮನೇ ನಾನು—ಎಂದು ಸರ್ವ ಸಿದ್ಧವು—ಓ.

"ಜಾಗ್ರದಾದ್ಯನುಭವಗಳೆಲ್ಲ ಮಿಥ್ಯಾ—ಎಂದಾದರೆ, ಇವುಗಳ ಸಾಕ್ಷಿಯೂ ಮಿಥ್ಯವೇ ಆಗಬೇಕಾಗುವುದಲ್ಲವೆ ?" – ಎಂದರೆ; ಹೌದು; 'ಸಾಕ್ಷಿತಾಪಿ ನ

Sri Vidyabharathi Book Centre, Sringeri

CC-O. In Public Domain. Digitized by eGangotri

ತಾತ್ತ್ವಿಕೀ' ಇವುಗಳ ಸಾಕ್ಷಿತ್ವವೂ ವಿಘ್ನವೇ ಆಗಿದೆ; ಆದರೆ ಸಾಕ್ಷಿಯಾಗಿರುವ ಚೈತನ್ಯವು ಕೂಟಸ್ಥ ನಿತ್ಯವೇ ಆಗಿ ಸತ್ಯವಾಗಿರುತ್ತದೆಂದು ಸಮಾಧಾನ ಹೇಳುತ್ತಾರೆ—

ಅಪಿ ವ್ಯಾಪಕತ್ವಾದ್ಧಿ ತತ್ತ್ವಪ್ರಯೋಗಾತ್
ಸ್ವತಃ ಸಿದ್ಧಭಾವಾದನನ್ಯಾಶ್ರಯತ್ವಾತ್ ।
ಜಗತ್ತುಚ್ಛಮೇತತ್ಸಮಸ್ತಂ ತದನ್ಯತ್
ತದೇಕೋऽವಶಿಷ್ಟಃ ಶಿವಃ ಕೇವಲೋऽಹಂ ॥ ॥೯॥

ವ್ಯಾಪಕತ್ವಾತ್ —ಸರ್ವವ್ಯಾಪಕಸ್ವರೂಪವಾದ್ದರಿಂದ; **ಹಿತತ್ತ್ವಪ್ರಯೋಗಾತ್** – ನಿರತಿಶಯಾನಂದರೂಪವೆಂದು ಉಪದೇಶಮಾಡಲ್ಪಟ್ಟಿರುವುದರಿಂದ; **ಸಿದ್ಧಭಾವಾತ್**—ಯಾವಅಪೇಕ್ಷೆಯೂ ಇಲ್ಲದೆ ಸಿದ್ಧವಾಗಿರುವುದರಿಂದ; **ಅನನ್ಯಾಶ್ರಯತ್ವಾತ್ ಅಪಿ**—ಇತರ ಯಾವ ಆಶ್ರಯವೂ ಇಲ್ಲದಿರುವುದರಿಂದಲೂ ಸಹ; **ತದನ್ಯತ್**–ಆತ್ಮನಿಗೆ ಬೇರೆಯಾದ; **ಸಮಸ್ತಂ ಜಗತ್**—ದ್ವೈತ ಪ್ರಪಂಚವೆಲ್ಲವೂ **ತುಚ್ಛಂ**—ಮೂರುಕಾಲದಲ್ಲಿಯೂ ವಾಸ್ತವವಾಗಿ ಇರುವಂಥದ್ದಲ್ಲ; **ತದೇಕೋऽವಶಿಷ್ಟಃ ಶಿವಃ ಕೇವಲೋऽಹಂ**—ದ್ವೈತವೆಲ್ಲ ಕಳೆದು ಉಳಿದಿರುವ, ಅಖಂಡಾದ್ವಿತೀಯಸಚ್ಚಿದಾನಂದಪರಬ್ರಹ್ಮ ಸ್ವರೂಪನೇ ನಾನು.

ಸತ್ಯಂ ಜ್ಞಾನಮನಂತಂ ಬ್ರಹ್ಮ —"'ಸತ್ಯರೂಪವೂ, ಸ್ವಪ್ರಕಾಶವೂ, ದೇಶಕಾಲವಸ್ತುಪರಿಚ್ಛೇದರಹಿತವೂ ಆದುದು ಬ್ರಹ್ಮ;" **ಸರ್ವಂ ಖಲ್ವಿದಂ ಬ್ರಹ್ಮ** "ಇವೆಲ್ಲವೂ ಬ್ರಹ್ಮವೇ'—ಎಂದುಮುಂತಾದ ಶ್ರುತಿಗಳು ಬ್ರಹ್ಮವನ್ನು ಸರ್ವವ್ಯಾಪಕವೆಂದೂ, ಪ್ರಪಂಚವೆಲ್ಲ ಅದರಲ್ಲಿ ಕಲ್ಪಿತವೆಂದೂ ತಿಳಿಸುತ್ತವೆ. **'ನಿರಧಿಷ್ಠಾನಭ್ರಮಾದನುಪಪತ್ತೇಃ'**—"ಸತ್ಯವಾದ ಅಧಿಷ್ಠಾನದಲ್ಲಿಯೇ ಭ್ರಾಂತಿಯಾಗುವುದೇ ಹೊರತು, ಅಧಿಷ್ಠಾನವಿಲ್ಲದ ಶೂನ್ಯದಲ್ಲಿ ಭ್ರಾಂತಿಯಾಗುವುದಿಲ್ಲ;" ಆದ್ದರಿಂದ, ಭ್ರಾಂತಿಯಾಗಿರುವ ಸಮಸ್ತ ಜಗತ್ತೂ ತುಚ್ಛವೇ ಆಗಿದೆ; ಇದಕ್ಕೆ ಅಧಿಷ್ಠಾನವಾಗಿರುವ ಚೈತನ್ಯವು ಪರಮಾರ್ಥಸತ್ಯವೇ ಆಗಿರುತ್ತದೆ, **ಶಶವಿಷಾಣ**–(ಮೊಲದ ಕೊಂಬು); **ವಂಧ್ಯಾಪುತ್ರ** (ಬಂಜೆಯ ಮಗ) **ಆಕಾಶಕುಸುಮ**— ಇವುಗಳು ಯಾವಾಗಲೂ ಎಲ್ಲಿಯೂ ಇರುವಂಥವುಗಳಲ್ಲವಾಗಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ತುಚ್ಛವಾಗಿವೆ. ಸ್ವಪ್ನಪ್ರಪಂಚ, ರಜ್ಜುಸರ್ಪ, ಶುಕ್ತಿರಜತ–ಮುಂತಾದುವು ಮಿಥ್ಯಾಭೂತಗಳಾಗಿದ್ದರೂ, ತೋರಿಬರುವುದರಿಂದ–, ಸರ್ವಥಾಇಲ್ಲದ ತುಚ್ಛವಸ್ತುವು ತೋರಿಬರುವುದಿಲ್ಲವಾದ್ದರಿಂದ–, ಇವು ತುಚ್ಛವಾದವುಗಳಲ್ಲ; ವ್ಯವಹಾರದಲ್ಲಿ ಪ್ರಯೋಜನಕ್ಕೆ ಬರತಕ್ಕವುಗಳೇ ಆಗಿರುತ್ತವೆ. ಆದರೂ, ಈ ಭ್ರಾಂತಿಗಳಿಗೆ ಅಧಿಷ್ಠಾನವಾಗಿರುವ ರಜ್ಜು, ಶುಕ್ತಿ–ಮುಂತಾದವುಗಳ ಸಾಕ್ಷಾತ್ಕಾರವಾದಮೇಲೆ,–"ಇವು ಮೂರುಕಾಲದಲ್ಲಿಯೂ ಇರುವುವು ಅಲ್ಲವೇ ಅಲ್ಲವೆಂದು", ದೃಢನಿಶ್ಚಯವಾಗುವುವು; ಇದರಂತೆ ಆತ್ಮತತ್ತ್ವವು ಅನುಭವಕ್ಕೆ ಬರಲಾಗಿ, "ಸಮಸ್ತದ್ವೈತಪ್ರಪಂಚವೂ ಎಂದೂ ವಾಸ್ತವವಾಗಿ ಇರುವಂಥದ್ದಲ್ಲವೆಂದು" ನಿಶ್ಚಿತವಾಗಿ ತುಚ್ಛವೇ ಆಗುವುದೆಂದು ಭಾವವು, ಆದಕಾರಣ ಆತ್ಮನು ಪರಮಾರ್ಥಸತ್ಯವಾಗಿದ್ದಾನೆ. ಆತ್ಮನನ್ನು ಸಾಕ್ಷಿಯೆಂದು ಹೇಳಿದುದು. ಅವನು ದೃಶ್ಯವಾಗಿ ಅನಾತ್ಮವಾಗಿರುವ ದ್ವೈತಪ್ರಪಂಚಕ್ಕೆ ಬೇರೆಯಾಗಿ ಸ್ವತಂತ್ರನಾಗಿ ಅವುಗಳಲ್ಲಿಲ್ಲ ಅನುಗತನಾಗಿ, ಅಸಂಗನಾಗಿದ್ದಾನೆಂಬುದನು, ಮನಗಾಣಿಸುವುದಕ್ಕಾಗಿ ಅಷ್ಟೇ ! ಅಸಂಗನೂ ಕೂಟಸ್ಥನಿರ್ವಿಕಾರಚಿದ್ರೂಪನೂ ಆಗಿರುವ ಆತ್ಮನಿಗೆ **'ಸಾಕ್ಷಾದೀಕ್ಷತೇ ಇತಿ ಸಾಕ್ಷೀ'**—"ಎಲ್ಲವುದನ್ನೂ ಸ್ವತಂತ್ರವಾಗಿ ನೋಡುವವನು ಸಾಕ್ಷಿ'"—ಎಂಬ ಅರ್ಥವು ಸಂಭವಿಸುವುದಿಲ್ಲ —ಅವನಿಗೆ ನೋಡುವಿಕೆಯೆಂಬ ವಿಕಾರವು ಇರುವುದಿಲ್ಲ. ಸೂರ್ಯನು ಸರ್ವವನ್ನೂ ಪ್ರಕಾಶಪಡಿಸುತ್ತಾನೆಂದರೆ, ಸೂರ್ಯನ ಬೆಳಕಿನ ಸಂಬಂಧದಿಂದ ಎಲ್ಲವೂ ಪ್ರಕಾಶವಾಗುತ್ತವೆಂದು ಅರ್ಥವೇ ಹೊರತು, ಸೂರ್ಯನಲ್ಲಿ ಎಲ್ಲವನ್ನೂ ಪ್ರಕಾಶಮಾಡುವ ಕ್ರಿಯೆಯು ಉಂಟಾಗುವುದೆಂದು ಅರ್ಥವಲ್ಲ; ಇದು "ಸೂರ್ಯನು ಪ್ರಕಾಶಸ್ವರೂಪನು"—ಎಂಬುದನ್ನು ತಿಳಿಸುತ್ತದೆ. ಇದರಂತೆ 'ಆತ್ಮನು ಸಾಕ್ಷೀ'— ಎಂದರೆ, ಅವನು ನೋಡುತ್ತಾನೆಂದು ಅರ್ಥವಲ್ಲ; ಅವನ ಸಾನ್ನಿಧ್ಯಮಾತ್ರದಿಂದ ಸರ್ವವೂ ಬೆಳಗುತ್ತದೆಯಾಗಿ, ಆತ್ಮನು ಸ್ವಪ್ರಕಾಶ ಜ್ಞಾನಸ್ವರೂಪನೆಂಬುದನ್ನು ಇದು ತಿಳಿಸುತ್ತದೆ. ಆತ್ಮನು ಚೈತನ್ಯರೂಪನೆಂದರೆ, ಅನೇಕರು ಅವನು ಶಕ್ತಿರೂಪನೆಂದು ತಿಳಿಯುವರು, ಚೈತನ್ಯವೆಂದರೆ ಜ್ಞಾನವೆಂದರ್ಥವು. ಆತ್ಮನು ಜ್ಞಾನಸ್ವರೂಪನು. ಜ್ಞಾನವು ಯಾವಾಗಲೂ ಸ್ವಪ್ರಕಾಶವಾದುದು. ಪ್ರಕಾಶವೆಂದರೆ, ಸೂರ್ಯದೀಪಾದಿಗಳಂತೆ ಜಡ ಪ್ರಕಾಶನೆಂದರ್ಥವಲ್ಲ; ತನ್ನ ಇರುವಿಕೆಯಲ್ಲಿ ಯಾವ ಇತರವಸ್ತುವಿನ

CC-O. In Public Domain. Digitized by eGangotri

ಅಪೇಕ್ಷೆಯೂ ಇಲ್ಲದೆ, ಯಾವಸಂಶಯಾದಿಗಳೂ ಇಲ್ಲದೆ ನಿಶ್ಚಯವಿರುವಿಕೆಯು ಸ್ವಪ್ರಕಾಶವು, ಲೋಕಪ್ರಸಿದ್ಧನಾಗಿ ಸ್ವಪ್ರಕಾಶನಾದ ಸೂರ್ಯನಿಗೂ ತಿಳಿಯದಿರುವ ವಸ್ತುವೊಂದು ಉಂಟು – ಕತ್ತಲೆ. ಸೂರ್ಯನಿಗೆ ಕತ್ತಲೆಯ ಅನುಭವವು ಬರುವಂತಿಲ್ಲ—ಅವನು ಬಂದಲ್ಲಿ ಕತ್ತಲೆಯೇ ಇರುವುದಿಲ್ಲ; ಆದರೆ, ಅಂಧಕಾರವೂ ಆತ್ಮನಿಗೆ ಗೋಚರಿಸುತ್ತದೆ; ಸರ್ವವೂ ಜ್ಞಾನಕ್ಕೆ ವಿಷಯವಾಗುತ್ತದೆ, ಜ್ಞಾನವು ನಿರ್ವಿಕಾರವಾದುದು; ಘಟ–ಪಟ–ಮುಂತಾದವಿಷಯಗಳ ಉಪಾಧಿಯಿಂದ ಘಟಜ್ಞಾನ–ಪಟಜ್ಞಾನ–ಎಂದು ಜ್ಞಾನದಲ್ಲಿ ಭೇದವು ಉಂಟಾಗಿದೆಯೇ ಹೊರತು, ಜ್ಞಾನವು ಸ್ವತಃ ಭೇದರಹಿತವಾಗಿದೆ. "ಜ್ಞಾನವು ಹುಟ್ಟಿತು, ನಷ್ಟವಾಯಿತು"–ಎಂಬ ವ್ಯವಹಾರವೂ ಕೂಡ, ಅಂತಃಕರಣದ ವೃತ್ತಿಯ ಹುಟ್ಟುನಾಶಗಳ ಉಪಾಧಿಯಿಂದ ಆಗಿರುವುದೇ ಹೊರತು, ಜ್ಞಾನಕ್ಕೆ ಸ್ವತಃ ಯಾವವಿಕಾರವೂ ಇರುವುದಿಲ್ಲ. ಆತ್ಮನು ಇಂಥ ನಿರ್ವಿಕಾರಾಖಂಡನಿತ್ಯಜ್ಞಾನಸ್ವರೂಪವೇ ಆದ್ದರಿಂದ, ಪರಮಾರ್ಥಸತ್ಯಸ್ವರೂಪನಾಗಿದ್ದಾನೆ.

'ಹಿತತ್ವಪ್ರಯೋಗಾತ್' ಪುರುಷಾರ್ಥವೇ ಹಿತವು—ಆನಂದವೇ ಪುರುಷಾರ್ಥವು. **'ಏಷ ಏವ ಪರಮ ಆನಂದಃ; ವಿಜ್ಞಾನಮಾನಂದಂ ಬ್ರಹ್ಮ'**—ಎಂದು ಶ್ರುತಿಗಳು ಬ್ರಹ್ಮವನ್ನು ನಿರತಿಶಯಾನಂದಸ್ವರೂಪವೆಂದು ಉಪದೇಶಿಸುತ್ತಿವೆ. **'ಭೂಮೈವ ಸುಖಂ, ನಾಲ್ಪೇ ಸುಖಮಸ್ತಿ; ಯದಲ್ಪಂ ತನ್ಮರ್ತ್ಯಂ'**—ಎಂದು "ಅಪರಿಚ್ಛಿನ್ನವಾದುದೇ ಸುಖವೆಂದೂ, ಪರಿಚ್ಛಿನ್ನವಾದುದು ನಶ್ವರವಾಗಿದ್ದು ಆದರಲ್ಲಿ ಸುಖವಿಲ್ಲವೆಂದೂ" ಶ್ರುತಿಗಳು ಹೇಳುತ್ತಿವೆ. **'ಏತಸ್ಯೈವಾನಂದಸ್ಯ ಅನ್ಯಾನಿ ಭೂತಾನಿ ಮಾತ್ರಾಮುಪಜೀವಂತಿ, ಏಷ ಹ್ಯೇವಾನಂದಯಾತಿ'**–'ನಿರತಿಶಯವಾದ ಬ್ರಹ್ಮಾನಂದದ ಲೇಶವನ್ನೇ ಎಲ್ಲ ಪ್ರಾಣಿಗಳೂ ಪಡೆದು ಜೀವಿಸುತ್ತವೆ'—ಎಂದು ಶ್ರುತಿಯಿದೆ. "ಲೋಕದಲ್ಲಿ ಅನುಭವಸಿದ್ಧವಾಗಿರುವ ಸುಖವು ಅಪರವರ ಧರ್ಮಕ್ಕೆ ಅಧೀನವಾಗಿ ಉಂಟಾಗುವ ಅಂತಃಕರಣದ ಉಪಾಧಿಯಲ್ಲಿ ಪ್ರತಿಬಿಂಬಿಸಿರುವ ಆತ್ಮಸ್ವರೂಪಸುಖವೇ ಆಗಿರುತ್ತದೆ, ಬೇರೆಯಲ್ಲ," ಇಂಥ ಆನಂದರೂಪನಾದ ಆತ್ಮನು ಪರಮಾರ್ಥಸತ್ಯವೇ ಆಗಿದ್ದಾನೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

"ಸ್ವತಃಸಿದ್ಧ ಭಾವಾತ್" — ಆತ್ಮನು ಸ್ವತಃಸಿದ್ಧಸ್ವರೂಪನಾಗಿದ್ದಾನೆ. ಅನಾತ್ಮ ವಸ್ತುವು ತಿಳಿದುಬರಬೇಕಾದರೆ, ಬೆಳಕು, ಅಡ್ಡಿಯಿಲ್ಲದಿರುವಿಕೆ, ಇಂದ್ರಿಯ, ಮನಸ್ಸಿನ ಏಕಾಗ್ರತೆ—ಇವುಗಳಿಲ್ಲವೂ ಬೇಕಾಗುತ್ತವೆ. ಇವೆಲ್ಲವುಗಳನ್ನೂ ತಿಳಿಯುವ ಆತ್ಮನು ಯಾವಾಗಲೂ ಸಿದ್ಧನೇ ಆಗಿದ್ದಾನೆ; ಆತ್ಮನಲ್ಲಿ "ನಾನು ಇದ್ದೇನೋ ಇಲ್ಲವೋ" ಎಂದು ಯಾರಿಗೂ ಎಂದೂ ಸಂಶಯದ ಅನುಭವವಿರುವುದಿಲ್ಲ. ತಾನು ಇದ್ದೇನೆಂಬುದನ್ನು ಸ್ವತಃಸಿದ್ಧವಾಗಿಟ್ಟುಕೊಂಡೇ ಎಲ್ಲರೂ ಇತರ ವ್ಯವಹಾರಗಳನ್ನು ಮಾಡುವರು. ಇಂಥ ಆತ್ಮನು ಪರಮಾರ್ಥಸತ್ಯನೇಸರಿ. "ಯತ್ಸಾಕ್ಷಾದಪರೋಕ್ಷಾದ್ಬ್ರಹ್ಮ"—'ಏನೊಂದರ ಅಪೇಕ್ಷೆಯಿಲ್ಲದೆ ಸ್ವತಃ ಏವ ಅಪರೋಕ್ಷವಾಗಿರುವುದು ಬ್ರಹ್ಮವು'—ಎಂದು ಶ್ರುತಿಯು ಹೇಳುತ್ತಿದೆ. ಇಂಥ ವಸ್ತುವು ಆತ್ಮನಾಗಿರುವುದರಿಂದ, ಆತ್ಮನು ಬ್ರಹ್ಮವೇ ಎಂಬುದು ಉಪನಿಷತ್ತಿನ ಸಿದ್ಧಾಂತವಾಗಿದೆ.

ಅನನ್ಯಾಶ್ರಯತ್ವಾತ್–ಆತ್ಮನು ಅನ್ಯಾಶ್ರಯನಲ್ಲ. ಆತ್ಮನೇ ಸರ್ವಕ್ಕೂ ಆಶ್ರಯನಾಗಿದ್ದಾನೆ; ಆತ್ಮನಿಗೆ ಯಾವ ಆಶ್ರಯವೂ ಇರುವುದಿಲ್ಲ. "ಸ ಭಗವಃ ಕಸ್ಮಿನ್ ಪ್ರತಿಷ್ಠಿತ ಇತಿ, ಸ್ವೇ ಮಹಿಮ್ನಿ"—'ಆ ಪರಮಾತ್ಮನು ಎಲ್ಲಿ ಇದ್ದಾನೆ ? —ಎಂದರೆ, ತನ್ನ ಮಹಿಮೆಯಲ್ಲಿಯೇ" —ಎಂದು ಶ್ರುತಿಯು ಪರಮಾತ್ಮನಿಗೆ ಬೇರೆ ಆಶ್ರಯವು ಯಾವುದೂ ಇಲ್ಲವೆಂದು ಸ್ಪಷ್ಟವಾಗಿ ತಿಳಿಸುತ್ತಿದೆ.

ಈ ರೀತಿಯಲ್ಲಿ ಸರ್ವವ್ಯಾಪಕನೂ, ಪರಮಾನಂದರೂಪನೂ, ಸ್ವತಃಸಿದ್ಧಸ್ವಪ್ರಕಾಶಸ್ವರೂಪನೂ, ಸರ್ವಾಶ್ರಯನೂ ಆಗಿರುವ ಆತ್ಮನು ಪರಮಾರ್ಥಸತ್ಯನೆಂಬಲ್ಲಿ ಸಂದೇಹವೇ ಇಲ್ಲ—೯.

ನ ಚೈಕಂ ತದನ್ಯದ್ದ್ವಿತೀಯಂ ಕುತಃ ಸ್ಯಾತ್
ನ ವಾ ಕೇವಲತ್ವಂ ನ ಚಾಕೇವಲತ್ವಂ ।
ನ ಶೂನ್ಯಂ ನ ಚಾಶೂನ್ಯಮದ್ವೈತಕತ್ವಾತ್
ಕಥಂ ಸರ್ವವೇದಾಂತಸಿದ್ಧಂ ಬ್ರವೀಮಿ ॥ ॥ ೧೦ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಗೋವಿಂದಭಗವತ್ಪೂಜ್ಯ ಪಾದಶಿಷ್ಯಶ್ರೀಮಚ್ಛಂಕರಭಗವತ್ಪೂಜ್ಯಪಾದವಿರಚಿತಂ ದಶಶ್ಲೋಕೀಪ್ರಕರಣಂ ಸಮಾಪ್ತಂ ।

ಏಕಂ ಚ ನ=ಒಂದು ಎಂಬುದೇ ಅಲ್ಲ; ತದನ್ಯತ್=ಅದಕ್ಕೆ ಬೇರೆ ಯಾದ; ದ್ವಿತೀಯಂ=ಎರಡನೆಯದೆಂಬುದು; ಕುತಃ ಸ್ಯಾತ್=ಯಾವ ಕಾರಣದಿಂದ ಆದೀತು? ಕೇವಲತ್ವಂ ವಾ ನ=ಏಕತ್ವವೂ ಅಲ್ಲ; ಅಕೇವಲತ್ವಂ ಚ ನ=ಅನೇಕತ್ವವೂ ಅಲ್ಲ; ನ ಶೂನ್ಯಂ=ಶೂನ್ಯವೂ ಅಲ್ಲ; ಅಶೂನ್ಯಂ ಚ ನ=ಶೂನ್ಯವಲ್ಲವೆಂದೂ ಅಲ್ಲ: ಯಾವ ವಿಕಲ್ಪದಿಂದಲೂ ಹೇಳಲು ಸಾಧ್ಯವಿಲ್ಲದ್ದು: ಏಕೆ? ಅದ್ವೈತಕತ್ವಾತ್=ಪರಮಾದ್ವಿತೀಯರೂಪವಾದ್ದರಿಂದ; ಕಥಂ ಬ್ರವೀಮಿ?=ಅದನ್ನು ಇಂಥದ್ದೆಂದು ಹೇಳುವುದು ಹೇಗೆ? ಆದರೂ ಇದು ಸರ್ವವೇದಾಂತ ಸಿದ್ಧಂ=ಪರಮಪ್ರಮಾಣವಾದ ಎಲ್ಲವೇದಾಂತಗಳ ತಾತ್ಪರ್ಯಸಿದ್ಧವಾದ ತತ್ತ್ವವಾಗಿದೆ,

"ಏಕಮೇವಾದ್ವಿತೀಯಂ; ಸಲಿಲ ಏಕೋ ದ್ರಷ್ಟಾಽದ್ವೈತಃ; ಮಾಯಾಮಾತ್ರಮಿದಂ ದ್ವೈತಂ ಅದ್ವೈತಂ ಪರಮಾರ್ಥತಃ"—ಎಂದು ಮುಂತಾಗಿ ಪ್ರಮಾಣವಚನಗಳು ಪಾರಮಾರ್ಥಿಕ ತತ್ತ್ವವನ್ನು ಅದ್ವಿತೀಯವೆಂದು ಪ್ರತಿಪಾದಿಸುತ್ತಿವೆ; ಅದ್ವಿತೀಯವೆಂದರೆ ಸಜಾತೀಯವಿಜಾತೀಯಸ್ವಗತದ್ವೈತ (ಭೇದ) ರಹಿತವಾದುದೆಂದು ಅರ್ಥವು. ಇದನ್ನು—"ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ;" "ಏತದಪ್ರಮೇಯಂ;" "ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನಃ"—ಎಂದು ಮುಂತಾಗಿ ಯಾವ ಪ್ರಮಾಣಕ್ಕೂ ಗೋಚರಿಸುವಂಥದ್ದಲ್ಲವೆಂದು ಶ್ರುತಿಗಳು ಸಾರುತ್ತಿವೆ. ಇಂಥ ತತ್ತ್ವವನ್ನು ಒಂದೆಂದಾಗಲಿ, ಎರಡೆಂದಾಗಲಿ, ಶೂನ್ಯವೆಂದಾಗಲಿ; ಶೂನ್ಯವಲ್ಲವೆಂದಾಗಲಿ, ಯಾವರೀತಿಯಿಂದಾಗಲಿ ಹೇಳುವುದು ಸಾಧ್ಯವೇ ಇಲ್ಲ. ಪ್ರಮಾಣದಿಂದ ತಿಳಿದುಬರುವುದನ್ನು—ಇದೆಯೆಂದೋ ಇಲ್ಲವೆಂದೋ, ಅಂಥದ್ದೆಂದೋ, ಇಂಥದ್ದೆಂದೋ, ದ್ವೈತವೆಂದೋ, ಅದ್ವೈತವೆಂದೋ ಹೇಳಬಹುದಾಗುವುದು; ಪ್ರಮಾಣಗಳನ್ನು ಮೀರಿರುವ ತತ್ತ್ವವನ್ನು ಹೇಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಳಲಾದೀತು ? ತತ್ತ್ವವು ಪ್ರಮಾಣಗೋಚರವಾಗಿದ್ದಿದ್ದರೆ, ಆದರ ವಿಷಯದಲ್ಲಿ ವಿಚಾರಕುಶಲರಾದ ವಾದಿಗಳಿಗೆ ವಿವಾದಮಾಡುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ.

"ಪ್ರಮಾಣಗೋಚರವಲ್ಲದ ಈ ತತ್ತ್ವವು ಹಾಗಾದರೆ ಅಪ್ರಮಾಣಿಕ ವಾಗುವುದಲ್ಲವೆ ?"—ಎಂದರೆ, ಹಾಗಲ್ಲ; 'ಸರ್ವವೇದಾಂತಸಿದ್ಧಂ' "ಯಾವ ಪ್ರಮಾಣಕ್ಕೂ ಗೋಚರವಲ್ಲವೆಂದು ಹೇಳಿ, ವೇದಾಂತಪ್ರಮಾಣಸಿದ್ಧವೆಂದು ಹೇಳುವುದು ವಿರುದ್ಧವಾದ ಮಾತಾಗುವುದಿಲ್ಲವೆ ?"—ಎಂದರೆ, ಹಾಗಲ್ಲ; ವೇದಾಂತಪ್ರಮಾಣವು ಬ್ರಹ್ಮವನ್ನು ವಿಷಯವನ್ನಾಗಿಮಾಡಿ ತಿಳಿಸುತ್ತಿಲ್ಲ; ಮತ್ತೇನೆಂದರೆ, ನೇತಿ ನೇತಿ—ಎಂದು ವಿಷಯಭೂತವಾದದ್ದನ್ನೆಲ್ಲ ಅಸತ್ತೆಂದು ತಿಳಿಸುತ್ತದೆ—ಅಷ್ಟೆ. ಇದರಿಂದ ಅವಿಷಯನಾದ ಆತ್ಮನೇ ಬ್ರಹ್ಮವೆಂದು ಅರ್ಥಾತ್ ಸಿದ್ಧಿಸುತ್ತದೆ; 'ಅಯಮಾತ್ಮಾ ಬ್ರಹ್ಮ'—ಮುಂತಾದವಾಕ್ಯಗಳು ಈ ಅರ್ಥವನ್ನು ಹೇಳುತ್ತವೆಯೇ ಹೊರತು; ಆತ್ಮನನ್ನಾಗಲಿ ಬ್ರಹ್ಮವನ್ನಾಗಲಿ ವಿಷಯೀಕರಿಸಿ ಹೇಳುವುದಿಲ್ಲ. 'ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ' —"ಅದು ವಿದಿತವಾದುದಕ್ಕೂ ಹಾಗೆಯೇ ಅವಿದಿತವಾದುದಕ್ಕೂ ಬೇರೆ ಯಾದುದು"—ಎಂದು ಇದನ್ನು ವಿಶದೀಕರಿಸಿದೆ. ದೃಶ್ಯವಾದುದನ್ನು ವಿದಿತ—ಎಂದರೆ ತಿಳಿದದ್ದೆಂದಾಗಲಿ, ಅವಿದಿತ ಎಂದರೆ ತಿಳಿಯದದ್ದೆಂದಾಗಲಿ ಹೇಳ ಬಹುದು; ವಿದಿತಾವಿದಿತಗಳಿಗೆ ಬೇರೆಯಾದುದೆಂದರೆ, ದೃಶ್ಯಹಲ್ಲದ್ದು; ಅದು ಬ್ರಹ್ಮ'—ಎಂದರೆ ದೃಶ್ಯಸಾಕ್ಷಿಯಾಗಿರುವ ಪ್ರತ್ಯಗಾತ್ಮನೇ ಬ್ರಹ್ಮವೆಂದು ಅರ್ಥಾತ್ ತಿಳಿದುಬರುತ್ತದೆ. "ಚಕಿತತಮಭಿಧತ್ತೇ ಶ್ರುತಿರಪಿ"—ಬ್ರಹ್ಮವನ್ನು ಪ್ರತಿಪಾದಿಸುವುದಕ್ಕಾಗಿಯೇ ಪ್ರವೃತ್ತವಾಗಿರುವ ಶ್ರುತಿಯು—"ಹೇಗೆ ಹೇಳಿದರೂ ಬ್ರಹ್ಮವನ್ನು ವಿಷಯಭೂತವಾಗಿ ತಿಳಿದಾರು"—ಎಂದು ಭಯಪಟ್ಟು, ಈ ರೀತಿಯಾಗಿ ಉಪದೇಶಮಾಡುತ್ತಿದೆ.

ವೇದಾಂತಗಳ ಪರಮತಾತ್ಪರ್ಯಾರ್ಥವನ್ನು ನ್ಯಾಯಪೂರ್ವಕವಾಗಿ ಪ್ರತಿಪಾದಿಸುವ ಮುಖ್ಯೋದ್ದೇಶದಿಂದ ಸರ್ವಜ್ಞರಾದ ಶ್ರೀಬಾದರಾಯಣಾ ಚಾರ್ಯರು ಬ್ರಹ್ಮಸೂತ್ರಗಳನ್ನು ರಚಿಸಿದ್ದಾರೆ. ಆದರಲ್ಲಿ — 'ಅಥಾತೋ

CC-O. Jangamwadi Math Collection. Digitized by eGangotri Sharada Peeth Research Centre, Varanasi

CC-O. In Public Domain. Digitized by eGangotri

ಬ್ರಹ್ಮಜಿಜ್ಞಾಸಾ' ಎಂಬ ಮೊದಲನೆಯ ಸೂತ್ರದಿಂದ ಬ್ರಹ್ಮವಿಚಾರವನ್ನು ಪ್ರತಿಜ್ಞೆಮಾಡಿ, "ವಿಚಾರವಿಷಯವಾಗಿರುವ ಆ ಬ್ರಹ್ಮವು ಯಾವುದು ?"—ಎಂಬ ಪ್ರಶ್ನೆಗೆ 'ಜನ್ಮಾದ್ಯಸ್ಯ ಯತಃ' – ಎಂಬ ಈ ಎರಡನೆಯ ಸೂತ್ರದಿಂದ ಬ್ರಹ್ಮದ ಲಕ್ಷಣವನ್ನು ಹೇಳಿದ್ದಾರೆ. "ಸಮಸ್ತ ಜಗತ್ತಿನ ಉತ್ಪತ್ತಿಸ್ಥಿತಿಲಯಗಳು ಯಾವುದರಿಂದ ಆಗುವುದೋ, ಅದು ಬ್ರಹ್ಮ" ಎಂದು ಈ ಸೂತ್ರದ ಅರ್ಥವು. ಬ್ರಹ್ಮವು ಸವಿಶೇಷವಾಗಿ ವಿಷಯಭೂತವಾಗಿದ್ದಿದ್ದರೆ, 'ಇಂಥ ವಿಶೇಷವುಳ್ಳದ್ದು'–ಎಂದು ಅದನ್ನು ಸ್ಪಷ್ಟವಾಗಿಯೇ ಹೇಳಬೇಕಾಗಿತ್ತು; ಅಥವಾ ಸೂತ್ರಕಾರರಿಗೆ ಸರಿಯಾಗಿ ಹೇಳುವುದಕ್ಕೆ ಬರುವುದಿಲ್ಲವೆಂದಾಗುವುದು. ಪ್ರಾಮಾಣಿಕರಾದ ಸೂತ್ರಕಾರರು ಬ್ರಹ್ಮವನ್ನು ಹೀಗೆಹೇಳಿರುವುದರಿಂದ ಬ್ರಹ್ಮವು ನಿರ್ವಿಶೇಷಸ್ವರೂಪವೆಂದೂ, ವಿಷಯವಲ್ಲದ ಪ್ರತ್ಯಗಾತ್ಮರೂಪವೆಂದೂ ಸಿದ್ಧಿಸುತ್ತದೆ.

ಜ್ಞೇಯಂ ಯತ್ತತ್ಪ್ರವಕ್ಷ್ಯಾಮಿ ಯಜ್ಜ್ಞಾತ್ವಾಮೃತಮಶ್ನುತೇ ।
ಅನಾದಿಮತ್ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ ॥

"ಅಮೃತತ್ವಕ್ಕೆ ಸಾಧನವಾದ ತತ್ತ್ವದ ಜ್ಞಾನವನ್ನು ತಿಳಿಸುತ್ತೇನೆ",–ಎಂದು ಶ್ರೀಭಗವಂತನು ಆರಂಭಿಸಿ – 'ಅದು ಅನಾದಿಯಾದದ್ದು' ಎಂದು ಹೇಳಿದ್ದಾನೆ. ಆದಿ–ಎಂದರೆ ಕಾರಣ; ಕಾರಣವುಳ್ಳದ್ದು ಕಾರ್ಯ, ವಿಕಾರ, ಜಡ, ಪರಿಚ್ಛಿನ್ನ, ನಶ್ವರ; ತತ್ತ್ವವು ಅನಾದಿಯಾದುದು, ಅದು ಯಾವುದು ?'"–ಎಂದರೆ, 'ತತ್ ಸತ್ ನೋಚ್ಯತೇ ಅಸತ್ ನೋಚ್ಯತೇ'–"ಅದು ಸತ್ತೆಂದಾಗಲಿ ಅಸತ್ತೆಂದಾಗಲಿ ಏನೆಂದೇ ಆಗಲಿ ಹೇಳಲು ಬರುವುದಿಲ್ಲ" ಎಂದು ತಿಳಿಸಿದ್ದಾನೆ. ಹೇಳುವುದಕ್ಕೆ ಬರುವಂಥ ವಿಶೇಷವುಳ್ಳವಸ್ತುವಾಗಿದ್ದಿದ್ದರೆ, ಅವಶ್ಯವಾಗಿ ತಿಳಿಯಬೇಕಾಗಿರುವುದೆಂದು ಹೇಳಿ, ಅದನ್ನು ಸರ್ವಜ್ಞನಾದ ಭಗವಂತನಿಗೆ ಸರಿಯಾಗಿ ಹೇಳಲು ಬರುತ್ತಿರಲಿಲ್ಲವೇ ? ಆದ್ದರಿಂದ ವಿಷಯಭೂತವಾಗದ ನಿರ್ವಿಶೇಷಾದ್ವಿತೀಯಾಖಂಡಸ್ವಪ್ರಕಾಶನಿರತಿಶಯಾನಂದಪ್ರತ್ಯಗಾತ್ಮರೂಪವೇ ಪರಬ್ರಹ್ಮತತ್ತ್ವವೆಂದು ನಿಶ್ಚಿತವಾಗುವುದು.

Sri Vidyabharathi Book Centre, Sringeri
ಇಲ್ಲಿ ಕೆಲವರು–"ಅಕಾರೋ ವಿಷ್ಣುವಾಚಕಃ" ಎಂಬ ಕೋಶಾನುಸಾರ

CC-O. In Public Domain. Digitized by eGangotri

ವಾಗಿ ಅಕಾರಕ್ಕೆ ವಿಷ್ಣುವೆಂದು ಅರ್ಥವಾದ್ದರಿಂದ ಅದ್ವೈತವೆಂದರೆ ವಿಷ್ಣು ರೂಪಾದ್ವೈತವೆಂದರ್ಥವು, ''ಅಸಿದ್ವಿತೀಯೋಽನುಸಸಾರಪಾಂಡವಂ' ಎಂದು ಮಹಾಭಾರತದಲ್ಲಿ ಪ್ರಯೋಗವಿರುವುದು, 'ಅಸಿದ್ವಿತೀಯಃ' ಎಂದರೆ 'ಅಸಿ' (ಕತ್ತಿಯ) ಸಹಾಯನೆಂದು ಅರ್ಥವು, ಹೀಗೆ 'ದ್ವಿತೀಯ'–ಶಬ್ದಕ್ಕೆ ಸಹಾಯವೆಂದು ಅರ್ಥವಾದ್ದರಿಂದ, 'ಅದ್ವಿತೀಯ'ವೆಂದರೆ ಅಸಹಾಯನೆಂದು ಅರ್ಥವು ಪರಮಾತ್ಮನು ಸ್ವತಃ ಸರ್ವಶಕ್ತನಾದ್ದರಿಂದ, ಅವನಿಗೆ ಯಾವುದೊಂದರ ಸಹಾಯದ ಅಪೇಕ್ಷೆಯೂ ಇರುವುದಿಲ್ಲವಾಗಿ, 'ಅದ್ವಿತೀಯ'ನೆಂದು ಹೇಳಲ್ಪಡುತ್ತಾನೆ" ಎಂದು ವರ್ಣಿಸುವರು. ಹೀಗೆಯೇ, ಇತರರು ಅನೇಕರು ನಾನಾಪ್ರಕಾರವಾಗಿ ತಮ್ಮ ಪಾಂಡಿತ್ಯವನ್ನು ಪ್ರದರ್ಶನಮಾಡುತ್ತಾರೆ; ಶ್ರುತಿವಾಕ್ಯದ ಹಿಂದುಮುಂದಿನ ಸಂದರ್ಭಗಳನ್ನು ಪರಾಮರ್ಶಿಸದೆ ವರ್ಣಿಸುವ ಅವರ ಪಾಂಡಿತ್ಯಪ್ರಕರ್ಷವು, ಅವರಿಗೇ ಶೋಭಿಸತಕ್ಕವು !

'ಸದೇವ ಸೋಮ್ಯೇದಮಗ್ರೇ ಆಸೀದೇಕಮೇವಾದ್ವಿತೀಯಂ'— ಈ ವಾಕ್ಯವು ಸಾಮವೇದದ ಛಾಂದೋಗ್ಯೋಪನಿಷತ್ತಿನ ಆರನೆಯ ಅಧ್ಯಾಯದ್ದು. ತತ್ತ್ವವು ದುರೂಹವಾದ್ದರಿಂದ, ಸುಲಭವಾಗಿ ತಿಳಿಯುವಂತೆ ಶ್ರುತಿಯು ಕಥೆಯ ಮೂಲಕವಾಗಿ ತತ್ತ್ವವನ್ನು ಉಪದೇಶಿಸುತ್ತದೆ. ಈ ಸಂದರ್ಭದಲ್ಲಿನ ಕಥೆಯು ಸಂಗ್ರಹವಾಗಿ ಹೀಗಿದೆ—

ಶ್ವೇತಕೇತುವೆಂಬ ಉದ್ದಾಲಕರ ಮಗನು ಹನ್ನೆರಡುವರುಷಗಳ ಕಾಲ ನಿಯಮದಿಂದ ಗುರುಕುಲವಾಸಮಾಡಿ, ಸರ್ವವಿದ್ಯೆಗಳಲ್ಲಿಯೂ ಪರಮ ಪಾಂಡಿತ್ಯವನ್ನು ಸಂಪಾದಿಸಿಕೊಂಡು, ಗುರುಗಳ ಅನುಜ್ಞೆ ಪಡೆದು, ಮನೆಗೆ ಹಿಂತಿರುಗಿಬಂದನು. ಅತಿಬುದ್ಧಿಶಾಲಿಯಾದ ಶ್ವೇತಕೇತುವಿಗೆ ತನಗೆ ಸಮಾನರಾದ ವಿದ್ಯಾವಂತರು ಬೇರೆ ಯಾರೂ ಇಲ್ಲವೆಂಬ ಅಹಂಕಾರವು ಬಲವಾಗಿತ್ತು. ಮಗನ ಶ್ರೇಯಸ್ಸನ್ನು ಕೋರಿ ಉದ್ದಾಲಕರು, ಅವನನ್ನು ಕುರಿತು, "ಅಪ್ಪ ಇದೇನು ಇಷ್ಟು ಅಹಂಕಾರಪಡುತ್ತಿದ್ದೀಯೆ" ಅಂಥ ಯಾವ ವಿದ್ಯೆಯನ್ನು ನೀನು ಕಲಿತಿದ್ದು ? 'ಯಾವ ಒಂದನ್ನು ತಿಳಿದರೆ ಸಕಲವೂ ತಿಳಿದುಬರುವುದೋ ಅಂಥದ್ದನ್ನು ತಿಳಿದಿದ್ದೀಯಾ ?"–ಎಂದು ಪ್ರಶ್ನೆ ಮಾಡಿದರು. ಶ್ವೇತಕೇತುವಿಗೆ ಇದು ಆತ್ಯಾಶ್ಚರ್ಯವನ್ನು ಉಂಟುಮಾಡಿತು; ಅಹಂಕಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ಬಿಟ್ಟು, ವಿನಯಶಾಲಿಯಾಗಿ, ತಂದೆಗೆ ನಮಸ್ಕರಿಸಿ,—"ಅದು ಹೇಗೆ? ಒಂದನ್ನು ತಿಳಿದರೆ ಇತರ ಎಲ್ಲವೂ ತಿಳಿದುಬರುವುದು ಹೇಗೆ ಸಾಧ್ಯ ?"—ಎಂದು ಬೇಡಿಕೊಂಡನು. ಆದಕ್ಕೆ ಉದ್ದಾಲಕರು–"ನೋಡು, ಒಂದು ಮಣ್ಣಿನ ವಸ್ತುವನ್ನು ನೋಡಿ ಮಣ್ಣಿನ ಸ್ವರೂಪವು ತಿಳಿದುಬರಲಾಗಿ ಮಣ್ಣಿನ ಪದಾರ್ಥಗಳೆಲ್ಲ ತಿಳಿದುಬರುತ್ತವೆ. ಏಕೆಂದರೆ, ಕಾರ್ಯವು ಸ್ವತಂತ್ರವಾದ ವಸ್ತುವಲ್ಲ; ಆದರಲ್ಲಿ ಕಾರಣಾಂಶವೇ ಸತ್ಯವಾದುದು ; ಕಾರ್ಯವೆಂದು ಹೇಳುವುದು ಬರೀ ಶಬ್ದವೇ ಹೊರತು, ಅಲ್ಲಿರುವುದು ಕಾರಣವಸ್ತುವೊಂದೇ, ಮಣ್ಣಿನಘಟದಲ್ಲಿ ಘಟವೆಂಬುದು ಶಬ್ದಮಾತ್ರವೇ ಹೊರತು, ಅಲ್ಲಿ ಮಣ್ಣಲ್ಲದೆ ಬೇರೆ ಏನಿದೆ "? ಹೀಗೆಯೇ, ಮಣ್ಣಿನ ಕಾರ್ಯಗಳೆಲ್ಲೆಲ್ಲ ಮಣ್ಣೇ ಇರುವ ವಸ್ತುವಾಗಿರುವುದರಿಂದ, ಕಾರ್ಯವೆಲ್ಲ ಅಸತ್ಯ. ಅಸತ್ಯವನ್ನು ತಿಳಿಯುವುದು ಪಾಂಡಿತ್ಯವೇ? ಆದಕಾರಣ, ಕಾರಣದ ತಿಳಿವಿನಿಂದ, ಅದರ ಎಲ್ಲ ಕಾರ್ಯಗಳ ವಾಸ್ತವಸ್ವರೂಪವು ಅದೇ ಆದ್ದರಿಂದ, ಅವುಗಳ ತತ್ತ್ವವು ತಿಳಿದುಬರುವುದು —ಎಂದು ಹೇಳಿದರು.

"ಕಾರಣದ ತಿಳಿವಿನಿಂದ ಅದರ ಕಾರ್ಯಗಳ ತತ್ತ್ವವು ತಿಳಿದುಬರುತ್ತದೆಂದು" ಈಗ ನನಗೆ ಅರ್ಥವಾಯಿತು. "ಒಂದರ ತಿಳಿವಿನಿಂದ ಸಮಸ್ತ ಜಗತ್ತೂ ತಿಳಿದುಬರಬೇಕಾದರೆ, ಅದು ಸಮಸ್ತಜಗತ್ತಿಗೂ ಕಾರಣವಾಗಿರಬೇಕಲ್ಲವೇ ? ಸಮಸ್ತಜಗತ್ತಿಗೂ ಅಂಥ ಒಂದು ಕಾರಣವಸ್ತುವು ಇದೆಯೇ ?" ಅದು ಯಾವುದು ? ದಯಮಾಡಿ ಉಪದೇಶಮಾಡಬೇಕು" ಎಂದು ಶ್ವೇತಕೇತುವು ತಂದೆಯನ್ನು ಬೇಡಿದನು. ಅದನ್ನು ತಿಳಿಸುವುದಕ್ಕಾಗಿ ಉದ್ದಾಲಕರು —**ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ**–ಎಂದು ಆರಂಭಿಸಿದ್ದಾರೆ".—ದ್ವೈತಪ್ರಪಂಚರೂಪವಾದ ಕಾರ್ಯವು ಹುಟ್ಟುವುದಕ್ಕೆ ಮುಂಚೆ ಪರಮಾತ್ಮನೆಂಬ ಸದ್ವಸ್ತುವು ಒಂದೇ ಅದ್ವಿತೀಯವಾಗಿತ್ತು". ಎಂದು. ಪ್ರಪಂಚವೆಲ್ಲ ಸದ್ವಸ್ತುವಿನ ಕಾರ್ಯ; ಆದ್ದರಿಂದ ಪ್ರಪಂಚವು ಬರೀ ಶಬ್ದಮಾತ್ರ—ವಸ್ತುವಲ್ಲ; ಸದ್ವಸ್ತುವೊಂದೇ ಆದರಲ್ಲಿರುವ ಸತ್ಯವಸ್ತು; ಅದನ್ನು ತಿಳಿದರೆ ಪ್ರಪಂಚವೆಲ್ಲ ತತ್ತ್ವತಃ ತಿಳಿದುಬರುವುದು, ಈ ತತ್ತ್ವಜ್ಞಾನವು ಸಂಸಾರಮೋಚಕವು" ಎಂಬ ಶ್ರುತಿಯ ತಾತ್ಪರ್ಯವು ಇಲ್ಲಿ ಅತ್ಯಂತಸ್ಫುಟವಾಗಿರುತ್ತದೆ. ಈ ಗ್ರಂಥವಲ್ಲಿ ಆಕರ್ತನಿಗೆಗೆ ಅವಕಾಶವೆಲ್ಲಿದೆ ?

CC-O. Mumukshu Bhawan Varanasi Collection. Digitized by eGangotri

CC-O. In Public Domain. Digitized by eGangotri

ಪ್ರಪಂಚಮಿಥ್ಯಾತ್ವ – ಬ್ರಹ್ಮಸತ್ಯತ್ವ – ಜೀವಬ್ರಹ್ಮೈಕ್ಯ–ಮುಂತಾದವಿಷಯಗಳನ್ನು ಶ್ರುತಿಯು ಮುಂದೆ ವಿಸ್ತಾರವಾಗಿಯೂ. ವಿಶದವಾಗಿಯೂ ಪ್ರತಿಪಾದಿಸಿದೆ. ಆದನ್ನೆಲ್ಲ ಉಪನಿಷತ್ತುಗಳನ್ನು ಅಧ್ಯಯನಮಾಡಿ ತಿಳಿಯತಕ್ಕದ್ದು; ಇಲ್ಲಿ ಪ್ರಕೃಶ ತತ್ತ್ವವನ್ನು ದೃಢಪಡಿಸುವುದಕ್ಕಾಗಿ ಕೆಲವು ವಿಷಯಗಳನ್ನು ಮಾತ್ರ ತಿಳಿಸಿರುತ್ತೆ.

ಈ ರೀತಿಯಾಗಿ ಪಾರಮಾರ್ಥಿಕಾದ್ವಿತೀಯತತ್ತ್ವವನ್ನು ಪರೋಕ್ಷವಾಗಿ ತಿಳಿದ ಮಾತ್ರದಿಂದ ಯಾವ ಪ್ರಯೋಜನವೂ ಸಿದ್ಧಿಸಿದಂತಾಗುವುದಿಲ್ಲ. ಇದು ಅನುಭವಸಿದ್ಧವಾಗಬೇಕು. ಇದಕ್ಕೆ ಅವಶ್ಯವಾದ ಸಾಧನೆಗಳನ್ನು ವೇದಾಂತದಲ್ಲಿ ತಿಳಿಸಿದೆ. ಅವುಗಳನ್ನು ಶ್ರದ್ಧೆಯಿಂದ ಅನುಷ್ಠಿಸಬೇಕು. ಈ ಎಲ್ಲ ಸಾಧನೆಗಳಿಗೂ ಮೂಲವಾದ ಸಾಧನೆಯೆಂದರೆ, ಚಿತ್ತಶುದ್ಧಿ. ಇದು ಸಿದ್ಧಿಸದೆ ಯಾವ ಸಾಧನೆಯೂ ಕೈಗೂಡುವುದಿಲ್ಲ. ಅನಾದಿಕಾಲದಿಂದಲೂ ಅಸಂಖ್ಯಾತ ಜನ್ಮಗಳಲ್ಲಿ ಕೂಡಿಹಾಕಿಕೊಂಡುಬಂದಿರುವ ದುರಿತವಾಸನೆಗಳಿಂದ ಚಿತ್ತವು ಅತ್ಯಂತಮಲಿನವಾಗಿರುತ್ತದೆ. 'ಚಿತ್ತಸ್ಯ ಶುದ್ಧಯೇ ಕರ್ಮ'; 'ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮಶುದ್ಧಯೇ;' 'ಸ್ವಕರ್ಮಣಾತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ' – ಮುಂತಾದ ವಚನಗಳಿಂದ, ನಿಷ್ಕಾಮನೆಯಿಂದ, ಈಶ್ವರಾರಾಧನೆಯೆಂಬ ಬುದ್ಧಿಯಿಂದ ಮಾಡುವ ಕರ್ಮವು ಚಿತ್ತದ ದೋಷಗಳನ್ನೆಲ್ಲ ಕಳೆದು, ಅದನ್ನು ನಿರ್ಮಲಗೊಳಿಸುತ್ತದೆ. "ಕರ್ಮ ಬ್ರಹ್ಮೋದ್ಭವಂ ವಿದ್ಧಿ; ಭೂತಭಾವೋದ್ಭವಕರೋ ವಿಸರ್ಗಃ ಕರ್ಮ ಸಂಜ್ಞಿತಃ" — ಎಂಬಂತೆ ವೇದಶಾಸ್ತ್ರವಿಹಿತಗಳಾಗಿರುವ ಧರ್ಮಾಧರ್ಮಗಳೇ ಕರ್ಮವು; ಆದುದರಿಂದ ಸ್ವಧರ್ಮೇ ನಿಧನಂ ಶ್ರೇಯಃ — ಎಂಬಂತೆ ಪ್ರತಿಯೊಬ್ಬರೂ ತಮ್ಮ ತಮ್ಮ ವರ್ಣಾಶ್ರಮಸ್ವಧರ್ಮವನ್ನು ಆಚಾರಾದಿನಿಯಮಪೂರ್ವಕವಾಗಿ ಶ್ರದ್ಧೆಯಿಂದ ನಿಷ್ಕಾಮನೆಯಿಂದ ಆಚರಿಸುತ್ತ, ಇಹಪರಶ್ರೇಯೋಭ್ಯುದಯಗಳಿಗೆ ಪಾತ್ರರಾಗಬೇಕೆಂದು ಶಾಸ್ತ್ರಸಮ್ಮತವಾದ ಶ್ರೀಭಗವತ್ಪಾದರ ಪರಮಹಿತೋಪದೇಶವು.

ಧರ್ಮಕರ್ಮಗಳ ನಿಯಮಗಳ ಅವಶ್ಯಕತೆಯಿಲ್ಲದೆಯೇ ಕೇವಲಭಕ್ತಿಯಿಂದಲೇ ಕೈವಲ್ಯವು ಕೈಗೂಡುವುದೆಂಬ ಅಭಿಪ್ರಾಯವು ಬಹುವಾಗಿ ಹರಡು

Sri Vidyabharathi Book Centre, Sringeri

 CC-O. In Public Domain. Digitized by eGangotri

ತ್ತಿದೆ, ಶಾಸ್ತ್ರದಿಂದ ಪರಮಾತ್ಮನ ಮಹತ್ವವು ತಿಳಿದುಬರುವುದು; ಇದರಿಂದ ಭಗವಂತನಲ್ಲಿ ಭಕ್ತಿಯು ಹುಟ್ಟುವುದು; ಪರಮಾತ್ಮನನ್ನೇ ಯಾವಾಗಲೂ ಸ್ಮರಿಸುವುದರಿಂದ ಮೋಕ್ಷವು ಲಭಿಸುವುದು"—ಎಂದು ಇವರ ವಾದವು. ಭಕ್ತಿಯೆಂದರೇನೆಂಬುದನ್ನು ತಿಳಿಯದ ಆಲಸರ ಮಾತು ಇದು. 'ನ ಚಲತಿ ನಿಜವರ್ಣ ಧರ್ಮತೋ ಯಃ ಸಿತಮನಸಂ ತಮೇವಹಿ ವಿಷ್ಣು ಭಕ್ತಂ' – "ಶಾಸ್ತ್ರೀಯ ವರ್ಣಾಶ್ರಮಧರ್ಮದಿಂದ ಲೇಶಮಾತ್ರವೂ ತಪ್ಪದವನೇ ಪರಮಾತ್ಮಭಕ್ತನು." ಎಂಬ ವಚನಗಳಿಂದ ವರ್ಣಾಶ್ರಮಸ್ವಧರ್ಮಾನುಷ್ಠಾನವೇ ಭಕ್ತಿಯು; ಇವನಿಗೇ ಚಿತ್ತಶುದ್ಧಿ ಜ್ಞಾನಪ್ರಾಪ್ತಿಯಮೂಲಕ ಶ್ರೇಯೋಲಾಭವಾಗುವುದು. ಧರ್ಮಾದ್ವಿರುದ್ಧೋ ಭೂತೇಷು–ಎಂದು ಮುಂತಾಗಿ ಶ್ರೀಗೀತೆಯಲ್ಲಿ ಈ ವಿಷಯವನ್ನು ವಿಶೇಷವಾಗಿ ಹೇಳಿರುತ್ತೆ. ವರ್ಣಾಶ್ರಮಧರ್ಮವೇ ಧರ್ಮ; ಅದನ್ನು ಬಿಟ್ಟವನು ಭ್ರಷ್ಟನು. ಶ್ರೇಯಸ್ಕಾಮಿಗಳು ಸ್ವಧರ್ಮನಿರತರಾಗತಕ್ಕದ್ದು—ಇತಿ ಮಂಗಳಂ॥

ಸರ್ವವೇದಾಂತಸಿದ್ಧಾಂತಸಾರಭೂತಂ ಪ್ರಕರಣಂ ।
ದಶಶ್ಲೋಕೀ ನೃಸಿಂಹೇನ ಕವಿನೇತ್ಥಂ ಸುವರ್ಣಿತಂ ॥ ೧ ॥

ಸರ್ವಸ್ಯ ಬ್ರಹ್ಮಜನ್ಯತ್ವಾನ್ನಾಬ್ರಹ್ಮಾಸ್ತೀಹ ಕಿಂಚನ ।
ದ್ರಷ್ಟುರನ್ಯಸ್ಯ ಚಾಭಾವಾದ್ ಪ್ರಾಪ್ತಂ ಬ್ರಹ್ಮ ಕೇವಲಂ ॥ ೨ ॥

'ಯತೋ ವೇ' ತ್ಯಾದಿವಚನೈರ್ನಾನ್ಯೋಽತೋಽಸ್ತೀತಿವಾಕ್ಯತಃ ।
ತತ್ತ್ವಮಸ್ಯಾದಿವಾಕ್ಯೈಶ್ಚ ಸೋಽಯಮಿರ್ಫೋಽವಸೀಯತೇ ॥ ೩ ॥

ದೇಹೇಂದ್ರಿಯಪ್ರಾಣಮನೋಬುದ್ಧಿಸಾಕ್ಷೀ ಚಿದವ್ಯಯಃ ।
ಅಕರ್ತಾಹಮಭೋಕ್ತಾಹಮಸಂಗೋಽಹಮಹಂ ಶಿವಃ ॥ ೪ ॥

ಮಯ್ಯೇವ ಸಕಲಂ ಜಾತಂ ಮಯಿ ಸರ್ವಂ ಪ್ರತಿಷ್ಠಿತಂ ।
ಮಯಿ ಸರ್ವಂ ಲಯಂ ಯಾತಿ ತದ್ಬ್ರಹ್ಮಾದ್ವಯಮಸ್ಮ್ಯಹಂ ॥ ೫ ॥

॥ ಹರಿಃ ಓಂ ತತ್ಸತ್ ॥

॥ ಶ್ರೀಕೃಷ್ಣಾರ್ಪಣಮಸ್ತು ॥

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri